ಮಂಗಳೂರು
ಮಂಗಳವಾರ, 30 ಜೂನ್ 2026
ಸಂಪುಟ 48, ಸಂಚಿಕೆ 103 ಪುಟಗಳು 14+6
■ ಬೆಂಗಳೂರು ■ ಮಂಗಳೂರು ■ ಶಿವಮೊಗ್ಗ ■ ಹುಬ್ಬಳ್ಳಿ
₹5
REG.No.MNG /121/2024-26 Posted at kodialbail P.O / RNI:29813/78/ Daily
hosadigantha.com
epaper.hosadigantha.com
Hosadigantha Digital

ರಾಷ್ಟ್ರ ಜಾಗೃತಿಯ ದೈನಿಕ

ಹೊಸ ದಿಗಂತ

ಲೋಕಹಿತಂ ಮಮ ಕರಣೀಯಂ



ಜರ್ಮನಿ: ಗುಂಡಿನ ದಾಳಿಗೆ 6 ಸಾವು | ೦೨
ಬಂಗಾಳ: ಏನಾಸಂ ಅನುಷ್ಠಾನಕ್ಕೆ ಚಾಲನೆ | ೦೨
ಸೇನಾ ಬಲಕ್ಕೆ ಸಿಂದೂರ ಸಾಕ್ಷಿ | ೦೨

ಶುಭ ದಿನ

ಕಲಿಯುಗಾಬ್ದ 5128, ಪರಾಭವ ಸಂವತ್ಸರ, ಉತ್ತರಾಯಣ, ಗ್ರೀಷ್ಮ ಋತು, ನಿಜ ಜ್ಯೇಷ್ಠ ಮಾಸ, ಕೃಷ್ಣ ಪಕ್ಷ, ತಿಥಿ: ಪಾಡ್ಯ, ನಕ್ಷತ್ರ: ಪೂರ್ವಾಷಾಢ

ದಿನದ ಮಾತು

ನಮ್ಮ ಮನೋದ್ರಿಕ್ತ ಮನಸ್ಸನ್ನು ಜಯಿಸುವ ಗುರುವಿನ ಶಕ್ತಿಯ ಮುಂದೆ ಸಾವಿರ ಆನೆಗಳನ್ನು ಜಯಿಸುವುದು ಏನೂ ಅಲ್ಲ.

▲ ಶ್ರೀ ರಮಣ ಮಹರ್ಷಿ

ಹೆಸರಲ್ಲೇನಿದೆ..!? ಆದರೆ ಹೆಸರಲ್ಲೇ ಎಲ್ಲಾ ಇದೆ!

ರಾಘವಾಂಕಣ

• ರಾಘವೇಂದ್ರ ಸುಬ್ರಹ್ಮಣ್ಯ

• ಪುಟ ೬

ಕಿರುಸುದ್ದಿ

ಪ್ರತಿಪಕ್ಷ ನಾಯಕರಾಗಿ ಖರ್ಗೆ ಮರು ನೇಮಕ

• **ಹೊಸದಿಲ್ಲಿ:** ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಸೇರಿ ರಾಜ್ಯಸಭೆಗೆ ಹೊಸದಾಗಿ ಆಯ್ಕೆಯಾದ ಹಾಗೂ ಮರು ಆಯ್ಕೆಯಾದ ಎಂಟು ಸದಸ್ಯರು ಸೋಮವಾರ ಪ್ರಮಾಣವಚನ ಸ್ವೀಕರಿಸಿದರು. ರಾಜ್ಯಸಭೆ ಸಭಾಪತಿ ಪಿ.ರಾಧಾಕೃಷ್ಣನ್ ಅವರು ಹೊಸ ಸದಸ್ಯರಿಗೆ ಪ್ರಮಾಣವಚನ ಬೋಧಿಸಿದರು. ರಾಜ್ಯಸಭೆಯಲ್ಲಿ ವಿಪಕ್ಷ ನಾಯಕರಾಗಿ ಖರ್ಗೆ ಅವರು ಮರು ನೇಮಕವಾಗಿದ್ದಾರೆ.

• ಪುಟ ೨

ಅಪರಾಧ ನಡೆದ ಎರಡೇ ತಿಂಗಳಲ್ಲಿ ಗಲ್ಲು ಶಿಕ್ಷೆ

• **ಪುಣೆ:** ಮಹಾರಾಷ್ಟ್ರದಾದ್ಯಂತ ಸಾರ್ವಜನಿಕರ ಆಕ್ರೋಶ ಮತ್ತು ಪ್ರತಿಭಟನೆಗಳಿಗೆ ಕಾರಣವಾಗಿದ್ದ ನಸ್ರಾಪುರ ಗ್ರಾಮದ ಮೂರು ವರ್ಷದ ಹೆಣ್ಣು ಮಗುವಿನ ಅಪಹರಣ, ಅತ್ಯಾಚಾರ ಮತ್ತು ಕೊಲೆ ಪ್ರಕರಣದ ಅಪರಾಧಿಗೆ ಸೋಮವಾರ ಗಲ್ಲು ಶಿಕ್ಷೆ ವಿಧಿಸಿ ವಿಶೇಷ ನ್ಯಾಯಾಲಯದ ನ್ಯಾಯಾಧೀಶ ಎಸ್.ಆರ್. ಸಾಳುಂಕೆ ತೀರ್ಪು ನೀಡಿದ್ದಾರೆ.

• ಪುಟ ೨

ಸರಳಾ ಹತ್ಯೆ ಕೇಸ್: ಯಾಸಿನ್ ವಿರುದ್ಧ ಚಾರ್ಜ್‌ಶೀಟ್

• ಪುಟ ೨

ಖಮೇನಿ ಅಂತ್ಯಕ್ರಿಯೆಯಲ್ಲಿ ಭಾರತದಿಂದ ಇಬ್ಬರು ಭಾಗಿ

• ಪುಟ ೨

ವಿದ್ಯುತ್ ಖಾಸಗೀಕರಣ: ಕ್ಯಾಬಿನೆಟ್ ಅಭಿಪ್ರಾಯ ಪರಿಗಣನೆ- ಡಿಕೆಶಿ

• ಪುಟ ೫

ಸಾಗರ ಬಂದ್ ಉತ್ತಮ

• ಪುಟ ೫



ಸ್ಕ್ಯಾನ್ ಅಸ್ತ್ರ

ನಕಲಿ ಔಷಧಗಳ ವಿರುದ್ಧ ಭಾರತದ ಡಿಜಿಟಲ್ ಕವಚ

• ಪುಟ ೨


ಸುದ್ದಿ ಸಮಗ್ರ

ಮನೆ ಮನೆಗೆ ಬಿಎಲ್‌ಒ ಭೇಟಿ | ಸಿಇಒ ಅನ್ಬುಕುಮಾರ್ ಮಾಹಿತಿ

ಇಂದಿನಿಂದ ಎಸ್‌ಐಆರ್

ಎಸ್‌ಐಆರ್ ಪ್ರಕ್ರಿಯೆ-2026ರ ವೇಳಾಪಟ್ಟಿ

ಪ್ರಕ್ರಿಯೆಯ ವಿವರ	ನಿಗದಿಪಡಿಸಿದ ದಿನಾಂಕ
ಅರ್ಹತಾ ದಿನಾಂಕ	ಅಕ್ಟೋಬರ್ 1, 2026
ಬಿಎಲ್‌ಒಗಳಿಂದ ಮನೆಮನೆಗೆ ಭೇಟಿ, ಪರಿಶೀಲನೆ	ಜೂನ್ 30 ರಿಂದ ಜುಲೈ 29
ಮತಗಟ್ಟೆಗಳ ತಾರ್ಕಿಕ ಮರುಹೊಂದಾಣಿಕೆ-ವಿಂಗಡಣೆ	ಜುಲೈ 29 ರೊಳಗೆ
ಕರಡು ಮತದಾರರ ಪಟ್ಟಿ ಪ್ರಕಟಣೆ	ಆಗಸ್ಟ್ 5
ಹಕ್ಕು, ಆಕ್ಷೇಪಣೆ ಸಲ್ಲಿಸುವ ಅವಧಿ	ಆ.5 ರಿಂದ ಸೆ.4
ಆಕ್ಷೇಪಣೆಗಳ ಪರಿಶೀಲನೆ, ವಿಲೇವಾರಿ ಪ್ರಕ್ರಿಯೆ	ಆ.5 ರಿಂದ ಅ.3
ಅಂತಿಮ ಮತದಾರರ ಪಟ್ಟಿ ಪ್ರಕಟಣೆ	ಅಕ್ಟೋಬರ್ 7



• **ಬೆಂಗಳೂರು:** ಯಾವುದೇ ಅರ್ಹ ವ್ಯಕ್ತಿ ಮತದಾರರ ಪಟ್ಟಿಯಿಂದ ಹೊರಗುಳಿಯಬಾರದು ಎಂಬ ಉದ್ದೇಶದಿಂದ ನಡೆಸಲಾಗುತ್ತಿರುವ ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ (ಎಸ್‌ಐಆರ್) ಪ್ರಕ್ರಿಯೆ ಮಂಗಳವಾರದಿಂದ (ಜೂ.30) ಆರಂಭವಾಗಲಿದೆ. ಮತಗಟ್ಟೆ ಮಟ್ಟದ ಅಧಿಕಾರಿಗಳು (ಬಿಎಲ್‌ಒ) ಮನೆ ಮನೆಗೆ ಭೇಟಿ ನೀಡಲಿದ್ದು, ಜು.29ಕ್ಕೆ ಮುಕ್ತಾಯವಾಗಲಿದೆ. ಕರ್ನಾಟಕದಲ್ಲಿ ಎಸ್‌ಐಆರ್ ಪ್ರಕ್ರಿಯೆಗೆ ಸಂಬಂಧಿಸಿದಂತೆ ರಾಜ್ಯ ಮುಖ್ಯ ಚುನಾವಣಾ ಅಧಿಕಾರಿ ವಿ.ಅನ್ಬುಕುಮಾರ್ ಸೋಮವಾರ ವಿವರ ನೀಡಿದರು.

ರಾಜ್ಯದಾದ್ಯಂತ ಒಟ್ಟು 59,050 ಬಿಎಲ್‌ಒಗಳಿಗೆ ತರಬೇತಿ ನೀಡಿ ನಿಯೋಜಿಸಲಾಗಿದೆ. ಎಲ್ಲಾ 31 ಜಿಲ್ಲಾ ಚುನಾವಣಾಧಿಕಾರಿಗಳು, 4 ಅಪರ ಜಿಲ್ಲಾ ಚುನಾವಣಾಧಿಕಾರಿಗಳು, 224 ಮತದಾರರ ನೋಂದಣಾಧಿಕಾರಿಗಳು, 336 ಸಹಾಯಕ ಮತದಾರರ ನೋಂದಣಾಧಿಕಾರಿಗಳು ಮತ್ತು 7,556 ಬಿಎಲ್‌ಒ ಮೇಲ್ವಿಚಾರಕರು ಸೇರಿ ಒಟ್ಟೂ 68,123 ಸಿಬ್ಬಂದಿ ಪರಿಷ್ಕರಣಾ ಪ್ರಕ್ರಿಯೆಯಲ್ಲಿ ತೊಡಗಿಕೊಳ್ಳಲಿದ್ದಾರೆ. ಅಲ್ಲದೆ, ರಾಜಕೀಯ ಪಕ್ಷಗಳಿಂದ 1,15,112 ಬೂತ್ ಮಟ್ಟದ ಏಜೆಂಟರನ್ನು (ಬಿಎಲ್‌ಎ) ನೇಮಿಸಲಾಗಿದೆ ಎಂದು ತಿಳಿಸಿದರು.

5.54 ಕೋಟಿ ಮತದಾರರ ಮನೆ ಬಾಗಿಲಿಗೆ ನಮೂನೆ: ಗಣತಿ ನಮೂನೆಗಳನ್ನು (ಎಮ್ಯುನರೇಷನ್ ಫಾರಂ) ಮುದ್ರಿಸಲಾಗಿದ್ದು, ಜಿಲ್ಲಾ ಚುನಾವಣಾಧಿಕಾರಿಗಳ ಮೂಲಕ ಬೂತ್ ಮಟ್ಟದ ಅಧಿಕಾರಿಗಳಿಗೆ ವಿತರಣೆ ಮಾಡಲಾಗಿದೆ. ಕರ್ನಾಟಕದಲ್ಲಿ ಜೂ.16ಕ್ಕೆ ಮತದಾರರಪಟ್ಟಿ ಫ್ರೀಜ್ ಮಾಡಲಾಗಿದೆ. ಪ್ರಸಕ್ತ 5,54,32,314 ಮತದಾರರಿದ್ದು, ಇವರು ಈ ವಿಶೇಷ ಸಮಗ್ರ ಪರಿಷ್ಕರಣೆಯ ವ್ಯಾಪ್ತಿಗೆ ಒಳಪಡಲಿದ್ದಾರೆ.

➡ಪುಟ ೪



» ಬಿಎಲ್‌ಒಗಳಿಗೆ ನೆಟ್‌ವರ್ಕ್ ಸಮಸ್ಯೆ ಅಥವಾ ತಾಂತ್ರಿಕ ತೊಂದರೆ ನಿವಾರಿಸಿ ಫಾರ್ಮ್‌ಗಳನ್ನು ಡಿಜಿಟಲೈಸ್ ಮಾಡಲು ಪ್ರತಿ ತಾಲೂಕಿನಲ್ಲಿ ಕನಿಷ್ಠ 2 ರಿಂದ 3 ಬಿಎಲ್‌ಒ ಫೆಸಿಲಿಟೇಷನ್ ಸೆಂಟರ್ ಸ್ಥಾಪನೆ

» ಸಾರ್ವಜನಿಕರ ದೂರು ಹಾಗೂ ಮಾಹಿತಿ ಹಂಚಿಕೆಗಾಗಿ ಪ್ರತಿ ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿ ಕನಿಷ್ಠ ಒಂದು ಮತದಾರರ ನೆರವು ಕೇಂದ್ರ ಸ್ಥಾಪನೆ

ಎಸ್‌ಐಆರ್ ಪ್ರಕ್ರಿಯೆ ಸಂಪೂರ್ಣ ಪಾರದರ್ಶಕ

ನಿಗದಿತ ಅವಧಿಯೊಳಗೆ ಭರ್ತಿ ಮಾಡಿದ ಗಣತಿ ನಮೂನೆಯನ್ನು ಸಲ್ಲಿಸುವ ಎಲ್ಲಾ ಮತದಾರರನ್ನು ಕರಡು ಮತದಾರರ ಪಟ್ಟಿಯಲ್ಲಿ ಸೇರಿಸಲಾಗುವುದು. ಗಣತಿ ನಮೂನೆಯು ಸ್ವೀಕೃತವಾಗದ ಸಂದರ್ಭಗಳಲ್ಲಿ ಮತದಾರರ ಹೆಸರನ್ನು ಕರಡು ಮತದಾರರ ಪಟ್ಟಿಯಲ್ಲಿ ಸೇರಿಸಲಾಗುವುದಿಲ್ಲ. ಅಲ್ಲದೆ ಮನೆ ಮನೆ ಭೇಟಿ ಹಂತದಲ್ಲಿ ಯಾವುದೇ ದಾಖಲೆ ಸಂಗ್ರಹಿಸುವುದಿಲ್ಲ.

➡ಪುಟ ೪

“ಮತದಾನದ ಹಕ್ಕು ಕಳೆದುಕೊಂಡರೆ ಸರ್ಕಾರದ ಸವಲತ್ತುಗಳನ್ನು ಕಳೆದುಕೊಳ್ಳುತ್ತೀರಿ. ನಿಮ್ಮ ಮತದ ಹಕ್ಕು ನಿಮ್ಮ ಬದುಕಿನ ಹಕ್ಕನ್ನು ಉಳಿಸಿಕೊಳ್ಳಬೇಕು. ಈ ನಿಟ್ಟಿನಲ್ಲಿ ರಾಜ್ಯದ ಜನತೆಗೆ ಸರ್ಕಾರ ಎಲ್ಲ ರೀತಿಯ ಸಹಾಯ ಮಾಡಲು ಬದ್ಧತೆ ಇಟ್ಟುಕೊಂಡಿದೆ.

■ **ಡಿ.ಕೆ.ಶಿವಕುಮಾರ್,** ಮುಖ್ಯಮಂತ್ರಿ

ಪ್ರಗತಿ ಪರಿಶೀಲನಾ ಸಭೆಯಲ್ಲಿ ಸಿಎಂ

ಮಂಜೂರಾದ ಜಾಗ ಖಾಲಿ ಬಿಟ್ಟರೆ ಕ್ರಮ



• **ಬೆಂಗಳೂರು:** ಗಣಿಗಾರಿಕೆ ಸೇರಿ ನಾನಾ ಚಟುವಟಿಕೆಗಳಿಗೆ ಸರ್ಕಾರಿ ಜಾಗ ಪಡೆದು ವರ್ಷಗಳ ಕಾಲ ಚಟುವಟಿಕೆ ಆರಂಭಿಸದಿದ್ದರೆ ಕ್ರಮ ಕೈಗೊಳ್ಳಿ ಎಂದು ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಅಧಿಕಾರಿಗಳಿಗೆ ಸೂಚನೆ ನೀಡಿದರು.

ವಿಧಾನಸೌಧದಲ್ಲಿ ಸೋಮವಾರ ಅರಣ್ಯ ಇಲಾಖೆ ಪ್ರಗತಿ ಪರಿಶೀಲನೆ ಸಭೆ ನಡೆಸಿದ ಅವರು, ಕೈಗಾರಿಕೆ ಹಾಗೂ ಗಣಿಗಾರಿಕೆ ಯೋಜನೆಗಳಿಗೆ ಅಗತ್ಯವಿರುವ ಎಲ್ಲಾ ಅನುಮತಿಗಳನ್ನು ನಿಗದಿತ ಕಾಲಮಿತಿಯೊಳಗೆ ನೀಡುವ ವ್ಯವಸ್ಥೆ ಮಾಡಬೇಕು ಎಂದರು. ಸರ್ಕಾರದ ಜಾಗವನ್ನು ಪಡೆದು ಐದಾರು ವರ್ಷ ಕಾಲ ಖಾಲಿ ಬಿಟ್ಟರೆ ಸರ್ಕಾರಕ್ಕೆ ಯಾವುದೇ ಆದಾಯ ದೊರೆಯುವುದಿಲ್ಲ. ಅಲ್ಲದೆ, ಈ ಅವಧಿಯಲ್ಲಿ ಉತ್ಪಾದನಾ ವೆಚ್ಚ, ಸರಕುಗಳ ಬೆಲೆ ಹಾಗೂ ಯೋಜನೆಯ ಒಟ್ಟು ಮೌಲ್ಯವೂ ಹೆಚ್ಚಾಗುತ್ತದೆ. ಇಂತಹ ವಿಳಂಬವನ್ನು ಸಹಿಸುವುದಿಲ್ಲ ಎಂದು ಹೇಳಿದರು.

ಸಿಎಂ ಸೂಚನೆಗೆ ಪ್ರತಿಕ್ರಿಯಿಸಿದ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ ತುಷಾರ ಗಿರಿನಾಥ್ ಅವರು, ಬಾಕಿ ಇರುವ ಎಲ್ಲಾ ಹಳೆಯ ಅರಣ್ಯ ಅನುಮತಿ ಪ್ರಕರಣಗಳನ್ನು ಜು.15ರೊಳಗೆ ಇತ್ಯರ್ಥಪಡಿಸಲು ಕ್ರಮ ಕೈಗೊಳ್ಳಲಾಗಿದೆ ಎಂದು ಮಾಹಿತಿ ನೀಡಿದರು. ಇಲಾಖೆಯ ಆಡಳಿತ ವ್ಯವಸ್ಥೆ, ಪ್ರಮುಖ ಯೋಜನೆಗಳು ಹಾಗೂ ವಿವಿಧ ಹಂತಗಳಲ್ಲಿ ಖಾಲಿ ಇರುವ ಹುದ್ದೆಗಳ ಕುರಿತು ಸಮಗ್ರ ಮಾಹಿತಿ ಪಡೆದ ಮುಖ್ಯಮಂತ್ರಿಗಳು, ನಮ್ಮ ಅರಣ್ಯ ಪ್ರಾಣಿ ಸಂಪತ್ತು ಅಮೂಲ್ಯವಾದದ್ದು. ಸಂರಕ್ಷಣೆ ಪರಿಣಾಮಕಾರಿಯಾಗಿ ಆಗಬೇಕು ಎಂದು ನಿರ್ದೇಶಿಸಿದರು.

➡ಪುಟ ೪

ಅರಣ್ಯವಾಸಿಗಳನ್ನು ಕಡೆಗಣಿಸಬೇಡಿ

ಅರಣ್ಯ ಭೂಮಿ ಒತ್ತುವರಿ ತೆರವು, ಮಾನವ ವನ್ಯಜೀವಿ ಸಂಘರ್ಷ ತಡೆ ಹಾಗೂ ಅರಣ್ಯ ಸಂರಕ್ಷಣೆಗೆ ಸಂಬಂಧಿಸಿದ ಕ್ರಮಗಳ ಕುರಿತು ಅಧಿಕಾರಿಗಳಿಂದ ಮಾಹಿತಿ ಪಡೆದು ಪರಿಶೀಲನೆ ನಡೆಸಿದ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು, ಅರಣ್ಯವಾಸಿಗಳ ಅರಣ್ಯ ಹಕ್ಕುಗಳನ್ನು ಯಾವುದೇ ಕಾರಣಕ್ಕೂ ಕಡೆಗಣಿಸಬಾರದು. ಸಣ್ಣಪುಟ್ಟ ನೆಪಗಳನ್ನು ಮುಂದಿಟ್ಟು ಅವರಿಗೆ ತೊಂದರೆ ನೀಡಬಾರದು. ನಿಯಮಾನುಸಾರ ಕುಡಿಯುವ ನೀರು, ರಸ್ತೆ, ವಿದ್ಯುತ್ ಸೇರಿದಂತೆ ಅಗತ್ಯ ಮೂಲ ಸೌಲಭ್ಯಗಳನ್ನು ಒದಗಿಸಲು ಆದ್ಯತೆ ನೀಡಬೇಕು ಎಂದು ಸೂಚಿಸಿದರು.

ಮುಖ್ಯ ಚುನಾವಣಾ ಆಯುಕ್ತ ಜ್ಞಾನೇಶ್ ಕುಮಾರ್ ಹೇಳಿಕೆ

ಮಾದರಿ ಚುನಾವಣೆ: ಭಾರತ ನಂ.1

• **ಶ್ರೀನಗರ:** ವಿಶ್ವದ ಪ್ರಮುಖ ಪ್ರಜಾಪ್ರಭುತ್ವ ರಾಷ್ಟ್ರಗಳಲ್ಲಿ ಭಾರತವು ಅತ್ಯಂತ ಪಾರದರ್ಶಕ ಚುನಾವಣಾ ವ್ಯವಸ್ಥೆಯನ್ನು ಹೊಂದಿದ್ದು, ಚುನಾವಣೆಯ ಪ್ರತಿ ಹಂತವೂ ರಾಜಕೀಯ ಪಕ್ಷಗಳು ಮತ್ತು ಅಭ್ಯರ್ಥಿಗಳಿಂದಲೇ ಪರಿಶೀಲನೆಗೆ ಒಳಪಡುತ್ತದೆ ಎಂದು ಮುಖ್ಯ ಚುನಾವಣಾ ಆಯುಕ್ತ (ಸಿಇಸಿ) ಜ್ಞಾನೇಶ್ ಕುಮಾರ್ ಸೋಮವಾರ ಹೇಳಿದ್ದಾರೆ.



3 ದಿನಗಳ ಕಾಶ್ಮೀರ ಪ್ರವಾಸದಲ್ಲಿರುವ ಅವರು ಶ್ರೀನಗರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿ, ಮತದಾರರ ಪಟ್ಟಿ ಸಿದ್ಧಪಡಿಸುವುದರಿಂದ ಹಿಡಿದು ಮತದಾನ, ಮತ ಎಣಿಕೆವರೆಗೆ ಪ್ರತಿ ಹಂತವೂ ಸಂಪೂರ್ಣ ಪಾರದರ್ಶಕವಾಗಿರುತ್ತದೆ ಎಂದರು. ಮತದಾರರ ಪಟ್ಟಿ ತಯಾರಿ, ಮತದಾನ, ಮತ ಎಣಿಕೆ ಸೇರಿ ಎಲ್ಲ ಹಂತಗಳನ್ನು ರಾಜಕೀಯ ಪಕ್ಷಗಳು, ಅಭ್ಯರ್ಥಿಗಳು ಪರಿಶೀಲಿಸುತ್ತಾರೆ.

➡ಪುಟ ೪

ಅಂತಾರಾಷ್ಟ್ರೀಯ ಮಟ್ಟದಲ್ಲಿ ಭಾರತದ ನಾಯಕತ್ವ

ಭಾರತವು ಪ್ರಸ್ತುತ ಇಂಟರ್‌ನ್ಯಾಷನಲ್ ಇನ್‌ಸ್ಟಿಟ್ಯೂಟ್ ಫಾರ್ ಡೆಮಾಕ್ರಸಿ ಆ್ಯಂಡ್ ಎಲೆಕ್ಟೋರಲ್ ಅಸಿಸ್ಟೆನ್ಸ್ ಸಂಸ್ಥೆಯ ಅಧ್ಯಕ್ಷ ಸ್ಥಾನ ವಹಿಸಿಕೊಂಡಿದೆ ಎಂದು ಜ್ಞಾನೇಶ್ ಕುಮಾರ್ ತಿಳಿಸಿದರು. ಭಾರತದ ನಾಯಕತ್ವವು ದೇಶದ ಚುನಾವಣಾ ವ್ಯವಸ್ಥೆಗೆ ಜಾಗತಿಕ ಮಟ್ಟದಲ್ಲಿ ದೊರೆತಿರುವ ಮಾನ್ಯತೆಯ ಪ್ರತೀಕವಾಗಿದೆ ಎಂದು ಅವರು ಹೇಳಿದರು. ಭಾರತೀಯ ಚುನಾವಣಾ ಪ್ರಕ್ರಿಯೆ ಗಮನಿಸಿ, 2026ರಲ್ಲಿ ವಿಶ್ವದ ದೊಡ್ಡ ಪ್ರಜಾಪ್ರಭುತ್ವ ರಾಷ್ಟ್ರಗಳಲ್ಲಿ ಭಾರತ ಮುಂಚೂಣಿಯಲ್ಲಿದ್ದು, ಅಂತಾರಾಷ್ಟ್ರೀಯ ಐಡಿಇಎ ಸಂಸ್ಥೆಯ ಅಧ್ಯಕ್ಷ ಸ್ಥಾನವನ್ನೂ ಹೊಂದಿದೆ ಎಂದು ಜ್ಞಾನೇಶ್ ಕುಮಾರ್ ಹೇಳಿದರು.

ದೇಣಿಗೆ ದುರ್ಬಳಕೆ ಆರೋಪಿಗಳ ಪರ ವಾದಿಸಿದರೆ ದಂಡ

ವಕಾಲತ್ತು ವಹಿಸದಿರಲು ನಿರ್ಧಾರ

• **ಹೊಸದಿಲ್ಲಿ/ಅಯೋಧ್ಯೆ:** ಶ್ರೀರಾಮ ಮಂದಿರಕ್ಕೆ ಬಂದ ದೇಣಿಗೆ ಹಣದ ದುರ್ಬಳಕೆ ಆರೋಪದ ಪ್ರಕರಣ ದಿನದಿಂದ ದಿನಕ್ಕೆ ಹೊಸ ತಿರುವು ಪಡೆಯುತ್ತಿದ್ದು, ಆರೋಪಿಗಳ ವಿರುದ್ಧ ಸಾರ್ವಜನಿಕ ಆಕ್ರೋಶ ಹೆಚ್ಚುತ್ತಿರುವ ನಡುವೆ ಫೈಜಾಬಾದ್ ಬಾರ್ ಅಸೋಸಿಯೇಷನ್ ಮಹತ್ವದ ನಿರ್ಧಾರ ಕೈಗೊಂಡಿದೆ. ಬಂಧಿತ ಎಂಟು ಆರೋಪಿಗಳ ಪರವಾಗಿ ಯಾವುದೇ ವಕೀಲರು ವಕಾಲತ್ತು ವಹಿಸಬಾರದು ಎಂದು ಅಸೋಸಿಯೇಷನ್ ತೀರ್ಮಾನಿಸಿದ್ದು, ಸಿಬಿಐ ತನಿಖೆಗೆ ಆಗ್ರಹಿಸಿ ಕೋರ್ಟ್ ಮೊರೆ ಹೋಗುವುದಾಗಿ ಘೋಷಿಸಿದೆ. ಬಾರ್ ಅಸೋಸಿಯೇಷನ್ ಅಧ್ಯಕ್ಷ ಕಲಿಕಾ ಪ್ರಸಾದ್ ಮಾತನಾಡಿ, ಅಸೋಸಿಯೇಷನ್ ನಿರ್ಧಾರ ಉಲ್ಲಂಘಿಸಿ ಯಾರಾದರೂ ಆರೋಪಿಗಳ ಪರ ವಾದಿಸಿದರೆ 5 ಲಕ್ಷ ರೂ. ದಂಡ ವಿಧಿಸಲಾಗುವುದು ಎಂದು ಎಚ್ಚರಿಕೆ ನೀಡಿದರು. ಜತೆಗೆ ಮಂದಿರ ಟ್ರಸ್ಟ್ ನಿರ್ವಹಣೆಗೆ ಸಂಬಂಧಿಸಿದ ಚಂಪತ್ ರಾಯ್, ಅನಿಲ್ ಮಿಶ್ರಾ, ಗೋಪಾಲ್ ವಿರುದ್ಧವೂ ತನಿಖೆ ನಡೆಸಬೇಕೆಂದು ಒತ್ತಾಯಿಸಿದರು.

➡ಪುಟ ೪

ತುರ್ತು ವಿಚಾರಣೆಗೆ ನಿರಾಕರಣೆ

ದೇಣಿಗೆ ಹಣದ ಅವ್ಯವಹಾರದ ಆರೋಪಗಳ ಕುರಿತು ಸಿಬಿಐ ನೇತೃತ್ವದ ವಿಶೇಷ ತನಿಖಾ ತಂಡದ(ಎಸ್‌ಐಟಿ) ಮೂಲಕ ಕಾಲಮಿತಿಯ ತನಿಖೆ ನಡೆಸುವಂತೆ ಕೋರಿ ಸಲ್ಲಿಸಲಾದ ಅರ್ಜಿ ಸೋಮವಾರ ಸುಪ್ರೀಂ ಕೋರ್ಟ್ ಮುಂದೆ ವಿಚಾರಣೆಗೆ ಬಂದಿತು. ಆದರೆ, ನ್ಯಾಯಮೂರ್ತಿಗಳಾದ ಎಂ.ಎಂ. ಸುಂದರೇಶ್, ಶೀಲ ನಾಗು ಅವರಿದ್ದ ರಜೆ ಪೀಠ ತುರ್ತು ವಿಚಾರಣೆಯ ಅಗತ್ಯವೇನು ಎಂದು ಪ್ರಶ್ನಿಸಿ, ಬೇಸಿಗೆ ರಜೆ ಬಳಿಕ ಪ್ರಕರಣವನ್ನು ಪಟ್ಟಿ ಮಾಡುವುದಾಗಿ ತಿಳಿಸಿತು. ‘ಆಕಾಶವೇನೂ ಕುಸಿದು ಬೀಳುವುದಿಲ್ಲ, ಇಷ್ಟು ತುರ್ತು ಏನು?’ ಎಂದು ಪೀಠ ಮೌಖಿಕವಾಗಿ ಅಭಿಪ್ರಾಯಪಟ್ಟಿತು. ಸುಪ್ರೀಂ ಕೋರ್ಟ್ ಜುಲೈ 13ರಂದು ಪುನರಾರಂಭವಾಗಲಿದೆ.



ಪಾಕಿಸ್ತಾನದ ವಾಯುದಾಳಿಗೆ ಅಫ್ಘಾನ್‌ನ 36 ಮಂದಿ ಸಾವು

• **ಕರಾಚಿ:** ಪಾಕಿಸ್ತಾನ ಅಫ್ಘಾನಿಸ್ತಾನದ ಮೇಲೆ ಗಡಿಯಾಚೆಗಿನ ವಾಯುದಾಳಿಗಳನ್ನು ನಡೆಸಿದ್ದು, ಈ ದಾಳಿಯಲ್ಲಿ ಕನಿಷ್ಠ 36 ನಾಗರಿಕರು ಮೃತಪಟ್ಟಿದ್ದು, ಮೂರು ಪೂರ್ವ ಪ್ರಾಂತ್ಯಗಳಲ್ಲಿ 163 ಜನರು ಗಾಯಗೊಂಡಿದ್ದಾರೆ ಎಂದು ಅಫ್ಘಾನಿಸ್ತಾನದ ತಾಲಿಬಾನ್ ನೇತೃತ್ವದ ಸರ್ಕಾರ ಸ್ಪಷ್ಟನೆ ನೀಡಿದೆ. ಅಫ್ಘಾನ್ ಅಧಿಕಾರಿಗಳ ಪ್ರಕಾರ, ಪಾಕಿಸ್ತಾನದ ಯುದ್ಧ ವಿಮಾನಗಳು ರಾತ್ರಿ ವೇಳೆ ಪಕ್ತಿಯಾ, ಪಕ್ತಿಕಾ ಮತ್ತು ಕುನಾರ್ ಪ್ರಾಂತ್ಯಗಳಲ್ಲಿನ ವಸತಿ ಪ್ರದೇಶಗಳ ಮೇಲೆ ವೈಮಾನಿಕ ದಾಳಿ ನಡೆಸಿವೆ. ಈ ಬಗ್ಗೆ ತಾಲಿಬಾನ್ ಮುಖ್ಯ ವಕ್ತಾರ ಜಬೀಹುಲ್ಲಾ ಮುಜಾಹಿದ್ ಅವರು ಹೇಡಿತನದ ಆಕ್ರಮಣ ಮತ್ತು ಅಮಾನವೀಯ ಕೃತ್ಯ ಎಂದು ಎಕ್ಸ್ ಪೋಸ್ಟ್‌ನಲ್ಲಿ ಖಂಡಿಸಿದ್ದಾರೆ.

➡ಪುಟ ೪

ಪ್ರಿಯಕರ ಆಸ್ಪತ್ರೆಗೆ ದಾಖಲು | ಸುರಭಿ ತಾಯಿ ಕಿಡಿ

ಲವ್ ಜಿಹಾದ್: ಯುವತಿ ಸಾವು

• **ಚಿಕ್ಕಬಳ್ಳಾಪುರ:** ಜಿಲ್ಲೆಯ ನಂದಿಗಿರಿಧಾಮ ಸಮೀಪ ಹೋಮ್ ಸ್ಟೇ ಒಂದರಲ್ಲಿ ಯುವತಿಯೊಬ್ಬಳು ಅನುಮಾನಾಸ್ಪದ ವಾಗಿ ಮೃತಪಟ್ಟಿರುವ ಘಟನೆ ಬೆಳಕಿಗೆ ಬಂದಿದ್ದು, ಇದು ಲವ್ ಜಿಹಾದ್ ಕೊಲೆ ಎಂದು ಮೃತ ಯುವತಿಯ ತಾಯಿ ಆರೋಪಿಸಿದ್ದಾರೆ. ಮೃತ ಯುವತಿಯನ್ನು ಬೆಂಗಳೂರು ಮೂಲದ ಸಾಯಿ ಸುರಭಿ (26) ಎಂದು ಗುರುತಿಸಲಾಗಿದ್ದು, ಇತ್ತೀಚೆಗೆ ಮುದ್ದೇನಹಳ್ಳಿ ಆಸ್ಪತ್ರೆಯಲ್ಲಿ ಫಿಸಿಯೋಥೆರಪಿಸ್ಟ್ ಆಗಿ ಕೆಲಸಕ್ಕೆ ಸೇರಿದ್ದಳು ಎನ್ನಲಾಗಿದೆ.

ಬೆಂಗಳೂರು ಮೂಲದ ಸಾಯಿ ಸುರಭಿ ಹಾಗೂ ಕೇರಳದ ಕೋಝಿಕ್ಕೋಡ್ ನಿವಾಸಿ, ಕ್ಯಾಬ್ ಡ್ರೈವರ್ ಸಂಜೀತ್ ಅಲಿ ಕಳೆದ ಶನಿವಾರ ನಂದಿ ಗಿರಿಧಾಮ ಸಮೀಪ ಇರುವ ಮುದ್ದೇನಹಳ್ಳಿ ಬಳಿಯ ಹೋಂ ಸ್ಟೇಗೆ ಬಂದು ತಂಗಿದ್ದರು ಎನ್ನಲಾಗಿದೆ. ಸೋಮವಾರ ರೂಮ್ ಚೆಕ್-ಔಟ್ ಸಮಯ ಮುಗಿದರೂ ರೂಮ್ ತೆರೆಯದಿದ್ದಾಗ ಹೋಂ ಸ್ಟೇ ಕೇರ್‌ಟೇಕರ್ ಬಂದು ಪರಿಶೀಲಿಸಿದಾಗ ಪ್ರಕರಣ ಬೆಳಕಿಗೆ ಬಂದಿದೆ. ಮೃತ ಸುರಭಿ ನೇಣು ಬಿಗಿದ ಸ್ಥಿತಿಯಲ್ಲಿ ಪತ್ತೆಯಾಗಿದ್ದು, ಈಕೆಯ ಪ್ರಿಯಕರ ಕೇರಳ ಮೂಲದ ಸಂಜೀತ್ ಅಲಿ ಪ್ರಜ್ಞಾಹೀನ ಸ್ಥಿತಿಯಲ್ಲಿ ಇರುವುದು ಕಂಡುಬಂದಿದೆ. ಆತನನ್ನು ಆಸ್ಪತ್ರೆಗೆ ದಾಖಲಿಸಲಾಗಿದೆ.

➡ಪುಟ ೪



ಮಗಳಿಗೆ ನಿರಂತರ ಕಾಟ ಕೊಡುತ್ತಿದ್ದ: ತಾಯಿ ಕಣ್ಣೀರು

ಸಾಯಿ ಸುರಭಿ ಬೆಂಗಳೂರಿನ ದಯಾನಂದ ಸಾಗರ್ ಕಾಲೇಜಿನಲ್ಲಿ ವಿದ್ಯಾಭ್ಯಾಸ ಮಾಡುತ್ತಿದ್ದಾಗಲೇ ಸ್ನೇಹಿತರ ಮೂಲಕ ಕೇರಳ ಮೂಲದ ಕ್ಯಾಬ್ ಡ್ರೈವರ್ ಸಂಜೀತ್ ಅಲಿ ಪರಿಚಯವಾಗಿದ್ದ. ನಂತರ ಆಕೆಯನ್ನು ಪ್ರೀತಿಸುವುದಾಗಿ ಹೇಳಿ ಸಂಜೀತ್ ಕಿರುಕುಳ ನೀಡಲಾರಂಭಿಸಿದ್ದ.

➡ಪುಟ ೪

ಹತ್ತನೇ ತರಗತಿ ಮಕ್ಕಳಿಗಿಲ್ಲ ತ್ರಿಭಾಷಾ ನೀತಿ: ಸಿಬಿಎಸ್‌ಇ

• **ಹೊಸದಿಲ್ಲಿ:** ಕೇಂದ್ರೀಯ ಪ್ರೌಢ ಶಿಕ್ಷಣ ಮಂಡಳಿ (ಸಿಬಿಎಸ್‌ಇ) ಮೂರು ಭಾಷಾ ನೀತಿ ಕುರಿತು ಮಾರ್ಗಸೂಚಿಗಳನ್ನು ಪ್ರಕಟಿಸಿದ್ದು, ಪ್ರಸ್ತುತ 10ನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳು ಹೊಸ ತ್ರಿಭಾಷಾ ನೀತಿಯನ್ನು ಅನುಸರಿಸುವ ಅಗತ್ಯವಿಲ್ಲ ಎಂದು ಸ್ಪಷ್ಟಪಡಿಸಿದೆ. ಪ್ರಸ್ತುತ 7, 8 ಮತ್ತು 9ನೇ ತರಗತಿಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳು 10ನೇ ತರಗತಿಯ ಬೋರ್ಡ್ ಪರೀಕ್ಷೆಯಲ್ಲಿ ಮೂರನೇ ಭಾಷೆಯ ಪರೀಕ್ಷೆ ಬರೆಯುವ ಅಗತ್ಯವಿಲ್ಲ ಎಂದು ಸಿಬಿಎಸ್‌ಇ ಸ್ಪಷ್ಟನೆ ನೀಡಿದೆ. 9ನೇ ತರಗತಿಯ ವಿದ್ಯಾರ್ಥಿಗಳಿಗೆ ಕನಿಷ್ಠ ಎರಡು ಸ್ಥಳೀಯ ಭಾರತೀಯ ಭಾಷೆಗಳನ್ನು ಒಳಗೊಂಡಂತೆ ಮೂರು ಭಾಷೆಗಳನ್ನು ಅಧ್ಯಯನ ಮಾಡುವುದನ್ನು ಕಡ್ಡಾಯಗೊಳಿಸಲಾಗಿದೆ ಎಂದು ಸಿಬಿಎಸ್‌ಇ ಘೋಷಿಸಿದ ಬೆನ್ನಲ್ಲೇ ಈ ಬೆಳವಣಿಗೆಗಳು ನಡೆದಿವೆ.



➡ಪುಟ ೪

ಬೆಳ್ಳಿ ಬಂಗಾರ (ಬೆಂಗಳೂರು) ಬೆಳ್ಳಿ: 2,31,500(2,28,200) ಅಪರಂಜಿ ಚಿನ್ನ: 14,250(14,110) ಆಭರಣ ಚಿನ್ನ: 13,110(13,980) ಚಿನ್ನ 1 ಗ್ರಾಂ.ಗೆ, ಬೆಳ್ಳಿ 1 ಕೆ.ಜಿಗೆ, ರೂ.ಗಳಲ್ಲಿ (ಆವರಣದಲ್ಲಿ ಹಿಂದಿನ ದಿನದ ದರ)

ಷೇರು ಸೂಚ್ಯಂಕ ಬಿಎಸ್‌ಇ 76,728(372↓) ಎನ್‌ಎಸ್‌ಇ 23,946(109↓)

$1 = ₹94.41

ಜು.2ಕ್ಕೆ ಸಚಿವ ಸಂಪುಟದಲ್ಲಿ ಮಸೂದೆ ಬಗ್ಗೆ ಚರ್ಚೆ

ಬಂಗಾಳದಲ್ಲಿ ಏನಾಸಂ ಅನುಷ್ಠಾನಕ್ಕೆ ಚಾಲನೆ

- ಸುಪ್ರೀಂ ಕೋರ್ಟ್ ನಿವೃತ್ತ ನ್ಯಾ. ರಂಜನಾ ಪ್ರಕಾಶ್ ದೇಸಾಯಿ ನೇತೃತ್ವದಲ್ಲಿ ಉನ್ನತ ಮಟ್ಟದ ಸಮಿತಿ ರಚನೆ; ನಾಲ್ಕು ವಾರಗಳಲ್ಲಿ ವರದಿ ಸಲ್ಲಿಕೆ
- ವಿವಾಹ, ವಿಚ್ಛೇದನ, ಆಸ್ತಿ ಹಕ್ಕು, ದತ್ತು ಸೇರಿದಂತೆ ಕುಟುಂಬ ಕಾನೂನುಗಳಿಗೆ ಏಕರೂಪ ಚೌಕಟ್ಟು

ಕೋಲ್ಕತ್ತಾ: ಪಶ್ಚಿಮ ಬಂಗಾಳ ಸರ್ಕಾರವು ರಾಜ್ಯದಲ್ಲಿ ಏಕರೂಪ ನಾಗರಿಕ ಸಂಹಿತೆ (ಏನಾಸಂ) ಜಾರಿ ಪ್ರಕ್ರಿಯೆಗೆ ಸೋಮವಾರ ಅಧಿಕೃತ ಚಾಲನೆ ನೀಡಿದೆ. ಮುಖ್ಯಮಂತ್ರಿ ಸುವೇಂದು ಅಧಿಕಾರಿ ಅವರು ಸುಪ್ರೀಂ ಕೋರ್ಟ್ ನಿವೃತ್ತ ನ್ಯಾಯಮೂರ್ತಿ ರಂಜನಾ ಪ್ರಕಾಶ್ ದೇಸಾಯಿ ಅವರ ನೇತೃತ್ವದಲ್ಲಿ ಉನ್ನತ ಮಟ್ಟದ ಸಮಿತಿಯನ್ನು ರಚಿಸಿರುವುದಾಗಿ ವಿಧಾನಸಭೆಯಲ್ಲಿ ಘೋಷಿಸಿದರು.

ಪ್ರಸ್ತಾವಿತ ಏನಾಸಂ ಮಸೂದೆಗೆ ಅಗತ್ಯವಾದ ಕಾನೂನು ಚೌಕಟ್ಟು ಸಿದ್ಧಪಡಿಸುವ ಜವಾಬ್ದಾರಿಯನ್ನು ಈ ಸಮಿತಿಗೆ ನೀಡಲಾಗಿದೆ. ನಾಲ್ಕು ವಾರಗಳೊಳಗೆ ವರದಿ ಸಲ್ಲಿಸುವಂತೆ ಸೂಚಿಸಲಾಗಿದ್ದು, ಆಗಸ್ಟ್‌ನಲ್ಲಿ ನಡೆಯಲಿರುವ ವಿಸ್ತೃತ ಬಜೆಟ್ ಅಧಿವೇಶನದಲ್ಲಿ ಏನಾಸಂ ಮಸೂದೆ ಮಂಡಿಸುವ ಸಾಧ್ಯತೆ ಇದೆ.

ಪ್ರಸ್ತುತ ಅಧಿವೇಶನದ ಕೊನೆಯ ದಿನ ಮಾತನಾಡಿದ ಮುಖ್ಯಮಂತ್ರಿ, ಜು.2ರಂದು ನಡೆಯಲಿರುವ ಸಚಿವ ಸಂಪುಟ ಸಭೆಯಲ್ಲಿ ಮಸೂದೆ ಕರಡಿನ ಕುರಿತು ಚರ್ಚೆ ನಡೆಸಿ ಅಂತಿಮ ರೂಪ ನೀಡಲಾಗುವುದು. ಇದು ಬಿಜೆಪಿ ಸರ್ಕಾರದ ಪ್ರಮುಖ ಚುನಾವಣಾ ಭರವಸೆಗಳಲ್ಲಿ ಒಂದಾಗಿದ್ದು, ಅದನ್ನು ಈಡೇರಿಸುವ ನಿಟ್ಟಿನಲ್ಲಿ ಸರ್ಕಾರ ಬದ್ಧವಾಗಿದೆ ಎಂದು ಹೇಳಿದರು.

ನಮ್ಮ ಚುನಾವಣಾ ಪ್ರಣಾಳಿಕೆಯಲ್ಲಿ ನೀಡಿರುವ ಪ್ರತಿಯೊಂದು ಭರವಸೆಯನ್ನೂ ಜಾರಿಗೊಳಿಸುತ್ತೇವೆ. ಏನಾಸಂ ಪಶ್ಚಿಮ ಬಂಗಾಳದಲ್ಲಿ ಖಂಡಿತವಾಗಿ ಜಾರಿಗೆ ಬರಲಿದೆ ಎಂದು ಅಧಿಕಾರಿ ಹೇಳಿದರು.

9 ಪ್ರಮುಖ ಕ್ಷೇತ್ರಗಳಿಗೆ ಸಾಮಾನ್ಯ ಕಾನೂನು: ಗುಜರಾತ್ ಏನಾಸಂ ಮಸೂದೆ–2026, ಅಸ್ಸಾಂ ಏನಾಸಂ ಕಾನೂನು ಹಾಗೂ ಉತ್ತರಾಖಂಡದ ಏನಾಸಂ ಕಾಯ್ದೆಯನ್ನು ಮಾದರಿಯಾಗಿ ತೆಗೆದುಕೊಂಡು ಈ ಮಸೂದೆ ರೂಪಿಸಲಾಗುತ್ತಿದೆ ಎಂದು ಅವರು ತಿಳಿಸಿದರು. ವಿವಾಹ, ವಿಚ್ಛೇದನ, ಜೀವನಾಂಶ, ಆಸ್ತಿ ಹಂಚಿಕೆ, ಉತ್ತರಾಧಿಕಾರ, ದತ್ತು ಸ್ವೀಕಾರ, ಲಿವ್–ಇನ್ ಸಂಬಂಧಗಳು ಸೇರಿದಂತೆ ಕುಟುಂಬ ಕಾನೂನಿನ ಒಂಬತ್ತು ಪ್ರಮುಖ ಕ್ಷೇತ್ರಗಳನ್ನು ಒಂದೇ ಕಾನೂನು ಚೌಕಟ್ಟಿನಲ್ಲಿ ತರಲು ಸರ್ಕಾರ ಉದ್ದೇಶಿಸಿದೆ.

ಆದಿವಾಸಿ ಸಮುದಾಯಗಳಿಗೆ ವಿನಾಯಿತಿ: ರಾಜ್ಯದ ಆದಿವಾಸಿ, ಮೂಲನಿವಾಸಿ, ಕುಡ್ಮಿ ಹಾಗೂ ಸರ್ಕಾರ ಮಾನ್ಯತೆ ನೀಡಿರುವ ಕೆಲವು ಪ್ರಾಚೀನ ಸಮುದಾಯಗಳಿಗೆ ಏನಾಸಂನಿಂದ ವಿನಾಯಿತಿ ನೀಡಲಾಗುವುದು ಎಂದು ಮುಖ್ಯಮಂತ್ರಿ ಸ್ಪಷ್ಟಪಡಿಸಿದರು. ಇದು ಉತ್ತರಾಖಂಡ ಮತ್ತು ಗುಜರಾತ್ ಮಾದರಿಯಲ್ಲಿರುವ ವಿನಾಯಿತಿಗಳಿಗೆ ಅನುಗುಣವಾಗಿರಲಿದೆ ಎಂದು ಹೇಳಿದರು.

ವಿಧಾನಸಭೆಯಲ್ಲಿ ಗದ್ದಲ: ಘೋಷಣೆಯ ನಂತರ ವಿರೋಧ ಪಕ್ಷವಾದ ತೃಣಮೂಲ ಕಾಂಗ್ರೆಸ್ ಸದಸ್ಯರು ತೀವ್ರ ವಿರೋಧ ವ್ಯಕ್ತಪಡಿಸಿದರು. ಪ್ರತಿಪಕ್ಷ ನಾಯಕ ರಿತಬ್ರತ ಬಂಡೋಪಾಧ್ಯಾಯ ನೇತೃತ್ವದಲ್ಲಿ ಸದಸ್ಯರು ಘೋಷಣೆ ಕೂಗಿ ಪ್ರತಿಭಟನೆ ನಡೆಸಿದರು. ಇದಕ್ಕೆ ಪ್ರತಿಕ್ರಿಯಿಸಿದ ಮುಖ್ಯಮಂತ್ರಿ, ಏನಾಸಂ ಕುರಿತು ಯಾರಿಗಾದರೂ ಆಕ್ಷೇಪಣೆ ಅಥವಾ ಸಲಹೆಗಳಿದ್ದರೆ ಸಮಿತಿಗೆ ಸಲ್ಲಿಸಬಹುದು ಎಂದು ತಿಳಿಸಿದರು. ಎಲ್ಲ ಅಭಿಪ್ರಾಯಗಳನ್ನು ಪರಿಗಣಿಸಿದ ಬಳಿಕವೇ ಸಮಿತಿ ತನ್ನ ಅಂತಿಮ ಶಿಫಾರಸುಗಳನ್ನು ಸಲ್ಲಿಸಲಿದೆ ಎಂದು ಭರವಸೆ ನೀಡಿದರು.

ಅತ್ಯಾಚಾರ–ಹತ್ಯೆ ಪ್ರಕರಣ: ಕೋರ್ಟ್ ತೀರ್ಪು

ಎರಡೇ ತಿಂಗಳಲ್ಲಿ ಗಲ್ಲು ಶಿಕ್ಷೆ

ಪುಣೆ: ಮಹಾರಾಷ್ಟ್ರದಾದ್ಯಂತ ಸಾರ್ವಜನಿಕರ ಆಕ್ರೋಶ ಮತ್ತು ಪ್ರತಿಭಟನೆಗಳಿಗೆ ಕಾರಣವಾಗಿದ್ದ ನಸ್ರಾಪುರ ಗ್ರಾಮದ ಮೂರು ವರ್ಷದ ಹೆಣ್ಣು ಮಗುವಿನ ಅಪಹರಣ, ಅತ್ಯಾಚಾರ ಮತ್ತು ಕೊಲೆ ಪ್ರಕರಣದ ಆರೋಪಿಗೆ ಸೋಮವಾರ ಗಲ್ಲು ಶಿಕ್ಷೆ ವಿಧಿಸಿ ವಿಶೇಷ ನ್ಯಾಯಾಲಯದ ನ್ಯಾಯಾಧೀಶ ಎಸ್.ಆರ್. ಸಾಳುಂಕೆ ತೀರ್ಪು ನೀಡಿದ್ದಾರೆ. ಇದು ಅಪರೂಪದಲ್ಲೇ ಅಪರೂಪದ ಪ್ರಕರಣ ಎಂದು ಬಣ್ಣಿಸಿರುವ ನ್ಯಾಯಾಲಯ, ಆರೋಪಿಯ ಕ್ರೂರ ಕೃತ್ಯ ಸಮಾಜದ ಆತ್ಮಸಾಕ್ಷಿಯನ್ನೇ ಬೆಚ್ಚಿಬೀಳಿಸಿದೆ ಎಂದು ಹೇಳಿದೆ.

ಅಪರಾಧದ ಹಿನ್ನೆಲೆ: ಮೇ 1ರಂದು ನಡೆದಿದ್ದ ಈ ಘಟನೆಗೆ ಸಂಬಂಧಿಸಿದಂತೆ ನ್ಯಾಯಾಲಯ ಜೂ.25ರಂದು ಆರೋಪಿ ಭೀಮರಾವ್ ಕಾಂಬ್ಳೆಯನ್ನು ಅಪರಾಧಿ ಎಂದು ಘೋಷಿಸಿತ್ತು. ಆರೋಪಿ, ಮಗುವಿಗೆ ತಿಂಡಿ ಕೊಡುವುದಾಗಿ ಮತ್ತು ಹಸುವಿನ ಕರುವನ್ನು ತೋರಿಸುವುದಾಗಿ ನಂಬಿಸಿ ಕೊಟ್ಟಿಗೆಯ ಶೆಡ್‌ಗೆ ಕರೆದೊಯ್ದಿದ್ದನು. ಅಲ್ಲಿ ಮಗುವಿನ ಮೇಲೆ ಲೈಂಗಿಕ ದೌರ್ಜನ್ಯ ಎಸಗಿ, ಬಾಯಿ ಮುಚ್ಚಿ ಮತ್ತು ಎದೆಗೆ ತೀವ್ರ ಗಾಯಮಾಡಿ ಅಮಾನುಷವಾಗಿ ಕೊಲೆ ಮಾಡಿದ್ದ.

ಅಪರಾಧದ ಇತಿಹಾಸ: ಆರೋಪಿಯ ವಯಸ್ಸನ್ನು ಪರಿಗಣಿಸಿ ಕರುಣೆ ತೋರಲು ನಿರಾಕರಿಸಿದ ನ್ಯಾಯಾಧೀಶ ಸಾಳುಂಕೆ, ಕಾಂಬ್ಳೆಯ ಕ್ರಿಮಿನಲ್ ಹಿನ್ನೆಲೆಯನ್ನು ಎತ್ತಿ ತೋರಿಸಿದ್ದಾರೆ. ಈ ಹಿಂದೆ 62 ವರ್ಷದ ವೃದ್ಧೆ, 17 ವರ್ಷದ ಯುವತಿ ಹಾಗೂ ಪ್ರಾಣಿಯ ಮೇಲಿನ ದೌರ್ಜನ್ಯ ಪ್ರಕರಣಗಳಲ್ಲಿ ಭಾಗಿಯಾಗಿದ್ದ ಆರೋಪಿ ಸುಧಾರಣೆಗೆ ಅರ್ಹನಲ್ಲ ಎಂದು ಪ್ರಾಸಿಕ್ಯೂಷನ್ ವಾದಿಸಿತ್ತು. ಆರೋಪಿಯ ಇತಿಹಾಸದ ಹಿನ್ನೆಲೆಯಲ್ಲಿ ಕೋರ್ಟ್ ಗಲ್ಲು ಶಿಕ್ಷೆಯನ್ನು ಖಾಯಂಗೊಳಿಸಿದೆ.

ನಕಲಿ ಔಷಧಗಳನ್ನು ಸಂಪೂರ್ಣವಾಗಿ ನಿರ್ಮೂಲನೆ ಮಾಡುವ ಉದ್ದೇಶದಿಂದ ಕೇಂದ್ರ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯ, ಔಷಧ ನಿಯಮಗಳು, 1945ಕ್ಕೆ ಪ್ರಮುಖ ತಿದ್ದುಪಡಿ ತಂದಿದೆ. ನಿರ್ಣಾಯಕ ಹಾಗೂ ಜೀವ ರಕ್ಷಕ ಔಷಧಗಳ ವಿಭಾಗಗಳಿಗೆ ಟ್ರ್ಯಾಕ್ ಮತ್ತು ಟ್ರೇಸ್ (ಪತ್ತೆ ಹಚ್ಚುವ) ತಂತ್ರಜ್ಞಾನವನ್ನು ಕಡ್ಡಾಯಗೊಳಿಸುವ ಮೂಲಕ, ಔಷಧ ಪೂರೈಕೆ ಸರಪಳಿಯನ್ನು ಸುರಕ್ಷಿತಗೊಳಿಸಲು ಸರ್ಕಾರ ಮುಂದಾಗಿದೆ. ಈ ಹೊಸ ನಿಯಮ ಸಾಮಾನ್ಯ ಗ್ರಾಹಕರು ಮತ್ತು ನಿಯಂತ್ರಕರು ಔಷಧಗಳನ್ನು ಬಳಸುವ ಮುನ್ನವೇ ಅವುಗಳ ಸ್ಥಿತಿಯನ್ನು ಸುಲಭವಾಗಿ ಪರಿಶೀಲಿಸಲು ಅನುವು ಮಾಡಿಕೊಡುತ್ತದೆ. ಆ ಕುರಿತ ವಿವರ ಇಲ್ಲಿದೆ.

ನಕಲಿ ಔಷಧಗಳ ವಿರುದ್ಧ ಭಾರತದ ಡಿಜಿಟಲ್ ಕವಚ

ಸ್ಕ್ಯಾನ್ ಅಸ್ತ್ರ!



ಬೆರಳ ತುದಿಯಲ್ಲಿ ಮಾಹಿತಿ

ಗ್ರಾಹಕರು ಅಥವಾ ವಿತರಕರು ಸಾಫ್ಟ್‌ವೇರ್ ಅಪ್ಲಿಕೇಶನ್‌ಗಳನ್ನು ಬಳಸಿ ಕ್ಯೂಆರ್ ಕೋಡ್ ಅನ್ನು ಸ್ಕ್ಯಾನ್ ಮಾಡಿದಾಗ, ಅದು ವ್ಯವಸ್ಥೆಯಲ್ಲಿ ದಾಖಲಾಗಿರುವ ಪ್ರಮುಖ ಮಾಹಿತಿಯನ್ನು ತೋರಿಸುತ್ತದೆ. ಈ ಕೋಡ್ ಒಟ್ಟು ಒಂಬತ್ತು ನಿರ್ದಿಷ್ಟ ಅಂಶಗಳನ್ನು ಒಳಗೊಂಡಿರಬೇಕು ಎಂದು ಸರ್ಕಾರ ಕಡ್ಡಾಯಗೊಳಿಸಿದೆ. ಇವುಗಳಲ್ಲಿ ಉತ್ಪನ್ನದ ವಿಶಿಷ್ಟ ಗುರುತಿನ ಕೋಡ್, ಔಷಧದ ನಿಖರ ಮತ್ತು ಜೆನೆರಿಕ್ ಹೆಸರು, ಬ್ರ್ಯಾಂಡ್ ಹೆಸರು ಹಾಗೂ ತಯಾರಕರ ಹೆಸರು ಮತ್ತು ವಿಳಾಸ ಸೇರಿವೆ. ಜತೆಗೆ, ಬ್ಯಾಚ್ ಸಂಖ್ಯೆ, ತಯಾರಿಸಿದ ದಿನಾಂಕ, ಅವಧಿ ಮುಗಿಯುವ ದಿನಾಂಕ, ಉತ್ಪಾದನಾ ಪರವಾನಗಿ ಸಂಖ್ಯೆ ಮತ್ತು ಬಳಸಲಾದ ಔಷಧ ಸಾಮಾಗ್ರಿಗಳ ವಿವರವಾದ ಮಾಹಿತಿ ಇರಬೇಕು.

ಸುದ್ದಿ ಸಮಗ್ರ

ಗ್ರಾಹಕರ ಸಬಲೀಕರಣ

ಗ್ರಾಹಕರು ಮುದ್ರಿತ ಕ್ಯೂಆರ್ ಕೋಡ್ ಅನ್ನು ಡಿಜಿಟಲ್ ದೃಢೀಕರಣ ಪರಿಕರಗಳ ಮೂಲಕ ಸ್ಕ್ಯಾನ್ ಮಾಡುವ ಮೂಲಕ ಔಷಧದ ನೈಜತೆಯನ್ನು ಪರಿಶೀಲಿಸಬಹುದು. ಈ ಒಂಬತ್ತು ಪ್ರಮುಖ ದತ್ತಾಂಶಗಳನ್ನು ಪ್ರವೇಶಿಸುವುದರಿಂದ, ಬಳಕೆದಾರರು ಬಾಕ್ಸ್ ಮೇಲಿರುವ ಭೌತಿಕ ವಿವರಗಳನ್ನು ಡಿಜಿಟಲ್ ದಾಖಲೆಗಳೊಂದಿಗೆ ತಕ್ಷಣವೇ ಹೋಲಿಸಿ ನೋಡಬಹುದು. ಈ ಡಿಜಿಟಲ್ ದೃಢೀಕರಣ ಸಾಧನ, ತಡೆರಹಿತ ಪರಿಶೀಲನೆಯನ್ನು ಸಾಧ್ಯವಾಗಿಸುತ್ತದೆ. ಇದರಿಂದ ಯಾರು ಬೇಕಾದರೂ ಔಷಧದ ಪ್ರಯಾಣವನ್ನು ಪತ್ತೆಹಚ್ಚಬಹುದು ಮತ್ತು ಅದರ ಮೂಲವನ್ನು ಖಚಿತಪಡಿಸಿಕೊಳ್ಳಬಹುದು.

ಒಳಪಡುವ ಔಷಧಗಳ ವ್ಯಾಪ್ತಿ

ಈ ನಿಯಮ ಆರಂಭದಲ್ಲಿ ದೇಶದ ಕೇವಲ ಅಗ್ರ 300 ಫಾರ್ಮಾಸ್ಯುಟಿಕಲ್ ಬ್ರ್ಯಾಂಡ್‌ಗಳಿಗೆ ಮಾತ್ರ ಅನ್ವಯಿಸುತ್ತಿತ್ತು. ಹೊಸ ತಿದ್ದುಪಡಿಯಲ್ಲಿ, ತೀವ್ರ ನಿಯಂತ್ರಣಕ್ಕೆ ಒಳಪಡುವ ನಾಲ್ಕು ನಿರ್ಣಾಯಕ ವಿಭಾಗಗಳ ಔಷಧಗಳನ್ನೂ ಒಳಗೊಳ್ಳುವಂತೆ ಶೆಡ್ಯೂಲ್ ಎಚ್2ನ ವ್ಯಾಪ್ತಿಯನ್ನು ವಿಸ್ತರಿಸಲಾಗಿದೆ. ಈ ಟ್ರ್ಯಾಕ್ ಮತ್ತು ಟ್ರೇಸ್ ಚೌಕಟ್ಟು ಇನ್ನು ಮುಂದೆ ಎಲ್ಲಾ ಲಸಿಕೆಗಳು, ಕ್ಯಾನ್ಸರ್ ವಿರೋಧಿ ಔಷಧಗಳು ಮತ್ತು ಆಂಟಿಮೈಕ್ರೋಬಿಯಲ್‌ಗಳನ್ನು ಒಳಗೊಳ್ಳಲಿದೆ. ಇದರೊಂದಿಗೆ, ನಾರ್ಕೋಟಿಕ್ ಡ್ರಗ್ಸ್ ಮತ್ತು ಸೈಕೋಟ್ರೋಪಿಕ್ ಸಬ್‌ಸ್ಟೆನ್ಸ್ (ಎನ್‌ಡಿಪಿಎಸ್) ಕಾಯ್ದೆ, 1985ರ ಅನ್ವಯ ಬರುವ ಎಲ್ಲಾ ಮಾದಕ ದ್ರವ್ಯಗಳು ಮತ್ತು ಸೈಕೋಟ್ರೋಪಿಕ್ ಔಷಧಗಳನ್ನು ಈ ಕಡ್ಡಾಯ ಕ್ಯೂಆರ್ ಕೋಡ್ ವ್ಯಾಪ್ತಿಗೆ ತರಲಾಗಿದೆ.

ಪ್ಯಾಕೇಜಿಂಗ್‌ನ ಹೊಸ ನಿಯಮ

ಹೊಸದಾಗಿ ತಿದ್ದುಪಡಿ ಮಾಡಲಾದ ನಿಬಂಧನೆಗಳಲ್ಲಿ, ಔಷಧ ತಯಾರಕರು ತಮ್ಮ ಉತ್ಪನ್ನಗಳ ಮೇಲೆ ಬಾರ್ ಕೋಡ್ ಅಥವಾ ಕ್ವಿಕ್ ರೆಸ್ಪಾನ್ಸ್(ಕ್ಯೂಆರ್) ಕೋಡ್ ಅನ್ನು ಮುದ್ರಿಸುವುದು ಅಥವಾ ಅಂಟಿಸುವುದು ಇನ್ನು ಮುಂದೆ ಕಾನೂನುಬದ್ಧವಾಗಿ ಕಡ್ಡಾಯ. ಈ ಡಿಜಿಟಲ್ ಟ್ಯಾಗ್ ಅನ್ನು ಔಷಧದ ಪ್ರಾಥಮಿಕ ಪ್ಯಾಕೇಜಿಂಗ್ ಲೇಬಲ್ ಮೇಲೆ ನೇರವಾಗಿ ಅಳವಡಿಸಬೇಕು. ಒಂದು ವೇಳೆ ಮೊದಲ ಪ್ಯಾಕೇಜಿಂಗ್ ತುಂಬಾ ಚಿಕ್ಕದಾಗಿದ್ದರೆ ಅಥವಾ ಸ್ಥಳಾವಕಾಶದ ಕೊರತೆ ಇದ್ದರೆ, ತಯಾರಕರು ದ್ವಿತೀಯ ಪ್ಯಾಕೇಜಿಂಗ್ ಲೇಬಲ್ ಮೇಲೆ ಕ್ಯೂಆರ್ ಕೋಡ್ ಮುದ್ರಿಸಲು ಅವಕಾಶವಿದೆ. ಈ ವ್ಯವಸ್ಥೆ, ಪೂರೈಕೆ ಸರಪಳಿಯ ಪ್ರತಿಯೊಂದು ಹಂತದಲ್ಲೂ ಔಷಧವನ್ನು ಪತ್ತೆಹಚ್ಚಲು ಮತ್ತು ದೃಢೀಕರಿಸಲು ಸಹಾಯ ಮಾಡುತ್ತದೆ.

- ಹೊಸ ಕ್ಯೂಆರ್ ನಿಯಮ 9 ನಿರ್ದಿಷ್ಟ ದತ್ತಾಂಶ ಅಂಶಗಳನ್ನು ಒಳಗೊಂಡಿದೆ.
- ಈ ವ್ಯವಸ್ಥೆ ಮೊದಲು ಕೇವಲ ಅಗ್ರ 300 ಫಾರ್ಮಾ ಬ್ರ್ಯಾಂಡ್‌ಗಳನ್ನು ಒಳಗೊಂಡಿತ್ತು.
- ಪ್ರಸ್ತುತ ನಿಯಂತ್ರಣ ಚೌಕಟ್ಟನ್ನು 4 ನಿರ್ಣಾಯಕ ಔಷಧ ವಿಭಾಗಗಳಿಗೆ ವಿಸ್ತರಿಸಲಾಗಿದೆ.
- ಲಸಿಕೆಗಳು, ಕ್ಯಾನ್ಸರ್ ವಿರೋಧಿ ಮತ್ತು ಎನ್‌ಡಿಪಿಎಸ್ ಔಷಧಗಳ ಅನುಷ್ಠಾನ 1 ಜುಲೈ 2027.
- ಆಂಟಿಮೈಕ್ರೋಬಿಯಲ್ ಔಷಧಗಳ ನಿಯಮ 1 ಜುಲೈ 2028ರಿಂದ ಕಡ್ಡಾಯ

ನಕಲಿ, ಮಾದಕವಸ್ತುಗಳ ವಿರುದ್ಧ ಹೋರಾಟ





ಯಾವುದೇ ಒಂದೇ ಕ್ರಮ ಅಕ್ರಮ ವ್ಯಾಪಾರವನ್ನು ಸಂಪೂರ್ಣವಾಗಿ ತೊಡೆದುಹಾಕಲು ಸಾಧ್ಯವಿಲ್ಲದಿದ್ದರೂ, ಈ ಸುಧಾರಿತ ಪತ್ತೆಹಚ್ಚುವಿಕೆ ಕಾರ್ಯವಿಧಾನ ಪ್ರಬಲ ತಡೆಗೋಡೆಯಾಗಿ ಕಾರ್ಯನಿರ್ವಹಿಸುತ್ತದೆ. ಅಧಿಕೃತ ಪಿಐಬಿ ವರದಿ ಪ್ರಕಾರ, ಈ ವ್ಯವಸ್ಥೆ, ನಿಯಂತ್ರಕ ಮೇಲ್ವಿಚಾರಣೆಯನ್ನು ಬಲಪಡಿಸುತ್ತದೆ. ಅಷ್ಟೇ ಅಲ್ಲದೆ, ಕಳಪೆ ಗುಣಮಟ್ಟದ ಅಥವಾ ನಕಲಿ ಆಂಟಿಮೈಕ್ರೋಬಿಯಲ್‌ಗಳನ್ನು ಸುಲಭವಾಗಿ ಗುರುತಿಸುವ ಮೂಲಕ ಆಂಟಿ–ಮೈಕ್ರೋಬಿಯಲ್ ರೆಸಿಸ್ಟೆನ್ಸ್ (ಎಎಂಆರ್) ವಿರುದ್ಧದ ರಾಷ್ಟ್ರ ಮಟ್ಟದ ಹೋರಾಟಕ್ಕೆ ಉತ್ತೇಜನ ನೀಡುತ್ತದೆ. ಇನ್ನು, ಮಾದಕ ಮತ್ತು ಸೈಕೋಟ್ರೋಪಿಕ್ ಪದಾರ್ಥಗಳ ಮೇಲಿನ ನಿಯಂತ್ರಣವನ್ನು ಬಿಗಿಗೊಳಿಸುವ ಮೂಲಕ ಸರ್ಕಾರದ ವ್ಯಾಪಕ ನಶಾ ಮುಕ್ತ ಭಾರತ ಅಭಿಯಾನಕ್ಕೂ ಈ ಯೋಜನೆ ನೆರವಾಗುತ್ತದೆ. ಔಷಧ ಉದ್ಯಮ ಈ ಬದಲಾವಣೆಗೆ ಹೊಂದಿಕೊಳ್ಳಲು ಸಚಿವಾಲಯ ಹಂತ–ಹಂತದ ಕಾಲಾವಕಾಶವನ್ನು ಪರಿಚಯಿಸಿದೆ. ಲಸಿಕೆಗಳು, ಕ್ಯಾನ್ಸರ್ ವಿರೋಧಿ ಔಷಧಗಳು ಮತ್ತು ಎನ್‌ಡಿಪಿಎಸ್ ಔಷಧಗಳ ನಿಯಮಗಳು 1 ಜುಲೈ 2027ರಿಂದ ಜಾರಿಗೆ ಬರಲಿದ್ದು, ಆಂಟಿಮೈಕ್ರೋಬಿಯಲ್ ಔಷಧಗಳ ನಿಯಮಗಳು 1 ಜುಲೈ 2028ರಿಂದ ಜಾರಿಗೆ ಬರಲಿವೆ. ಈ ದಿನಾಂಕಗಳ ನಂತರ ಯಾವುದೇ ಔಷಧದ ಮೇಲೆ ಪರಿಶೀಲಿಸಬಹುದಾದ ಕ್ಯೂಆರ್ ಕೋಡ್ ಇಲ್ಲದಿದ್ದರೆ ಅಥವಾ ಸ್ಕ್ಯಾನ್ ಮಾಡಿದ ದತ್ತಾಂಶ ಭೌತಿಕ ಪ್ಯಾಕೇಜಿಂಗ್‌ಗೆ ಹೊಂದಿಕೆಯಾಗದಿದ್ದರೆ ತಕ್ಷಣವೇ ನಿಯಂತ್ರಕ ಅಧಿಕಾರಿಗಳಿಗೆ ದೂರು ನೀಡಬೇಕು. ಸರ್ಕಾರದ ಈ ಕ್ರಮ ಹೆಚ್ಚಿನ ಪಾರದರ್ಶಕತೆಗೆ ಅವಕಾಶ ಮಾಡಿಕೊಡಲಿದೆ.

ಕಿರುಸುದ್ದಿ

ಅಮೆರಿಕ–ಇರಾನ್ ಶಾಂತಿ ಮಾತುಕತೆ ಬಗ್ಗೆ ಗೊಂದಲ

ದುಬೈ: ಅಮೆರಿಕ ಮತ್ತು ಇರಾನ್ ನಡುವಿನ ದಾಳಿಗಳು ತಾತ್ಕಾಲಿಕವಾಗಿ ನಿಂತಿದ್ದರೂ, ಮುಂದಿನ ಹಂತದ ಮಾತುಕತೆಗಳ ಕುರಿತು ಎರಡೂ ದೇಶಗಳ ನಡುವೆ ಭಿನ್ನಾಭಿಪ್ರಾಯ ಮುಂದುವರಿದಿದೆ. ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಮಂಗಳವಾರ ಕತಾರ್‌ನ ದೋಹಾದಲ್ಲಿ ಉಭಯ ದೇಶಗಳ ಪ್ರತಿನಿಧಿಗಳ ಸಭೆ ನಡೆಯಲಿದೆ ಎಂದು ಘೋಷಿಸಿದ್ದಾರೆ. ಆದರೆ, ಇರಾನ್‌ನ ಹಿರಿಯ ಅಧಿಕಾರಿ ಕಾಜೆಂ ಘರೀಬಾಬಾದಿ ಯಾವುದೇ ಸಭೆ ನಿಗದಿಯಾಗಿಲ್ಲ ಎಂದು ತಿಳಿಸಿದ್ದಾರೆ. ಈ ನಡುವೆ, ಜಾಗತಿಕ ತೈಲ ಸಾಗಣೆಗೆ ಪ್ರಮುಖವಾಗಿರುವ ಹಾರ್ಮುಜ್ ಜಲಸಂಧಿ ಪ್ರದೇಶದಲ್ಲಿ ಉದ್ವಿಗ್ನತೆ ಮುಂದುವರಿದಿದೆ. ಇತ್ತೀಚಿನ ದಾಳಿಗಳಿಂದ ತೈಲ ಮಾರುಕಟ್ಟೆಯಲ್ಲಿ ಆತಂಕ ಉಂಟಾಗಿದ್ದರೂ, ಮಧ್ಯಂತರ ಒಪ್ಪಂದದ ನಂತರ ತೈಲ ಬೆಲೆಗಳಲ್ಲಿ ಇಳಿಕೆ ಕಂಡುಬಂದಿದೆ. ಇರಾನ್ ಅಧ್ಯಕ್ಷ, ಕತಾರ್‌ನಲ್ಲಿ ಸ್ಥಗಿತಗೊಂಡಿರುವ 6 ಬಿಲಿಯನ್ ಡಾಲರ್ ಮೊತ್ತದ ಇರಾನ್ ಆಸ್ತಿಗಳು ಬಿಡುಗಡೆ ಆಗಲಿವೆ ಎಂದಿದ್ದಾರೆ. ಆದರೆ ಅಮೆರಿಕ ಮತ್ತು ಕತಾರ್ ಇದನ್ನು ಇನ್ನೂ ಅಧಿಕೃತವಾಗಿ ದೃಢಪಡಿಸಿಲ್ಲ.

ಖಮೇನಿ ಅಂತ್ಯಕ್ರಿಯೆಯಲ್ಲಿ ಭಾರತದಿಂದ ಇಬ್ಬರು ಭಾಗಿ

ಹೊಸದಿಲ್ಲಿ: ಬಿಹಾರದ ಗವರ್ನರ್ ಲೆಫ್ಟಿನೆಂಟ್ ಜನರಲ್ ಸೈಯದ್ ಅತಾ ಹಸ್ನೈನ್ ಮತ್ತು ಕೇಂದ್ರ ವಿದೇಶಾಂಗ ವ್ಯವಹಾರಗಳ ರಾಜ್ಯ ಸಚಿವ ಪವಿತ್ರ ಮಾರ್ಗರಿಟಾ ಅವರು ಭಾರತ ಸರ್ಕಾರದ ಪರವಾಗಿ ಇರಾನ್‌ನ ಸರ್ವೋಚ್ಚ ನಾಯಕ ಆಯತೊಲ್ಲಾ ಸೈಯದ್ ಅಲಿ ಖಮೇನಿ ಅವರ ಅಂತ್ಯಕ್ರಿಯೆಯಲ್ಲಿ ಭಾಗವಹಿಸಲಿದ್ದಾರೆ ಎಂದು ಮೂಲಗಳು ತಿಳಿಸಿವೆ. ಖಮೇನಿ ಅವರ ಅಂತ್ಯಕ್ರಿಯೆಗೆ ಹಾಜರಾಗಲು ಇರಾನ್ ಪ್ರಧಾನಿ ನರೇಂದ್ರ ಮೋದಿಯವರನ್ನು ಆಹ್ವಾನಿಸಿತ್ತು. ಅನೇಕ ಇರಾನಿನ ನಗರಗಳಲ್ಲಿ ಜು.4–9ರವರೆಗೆ ನಿಗದಿಯಾಗಿರುವ ಅಂತ್ಯಕ್ರಿಯೆಯ ಕಾರ್ಯಕ್ರಮದಲ್ಲಿ ಲಕ್ಷಾಂತರ ಶೋಕತಪ್ತರು ಮತ್ತು ಹಲವಾರು ವಿದೇಶಿ ಗಣ್ಯರು ಭಾಗವಹಿಸುವ ನಿರೀಕ್ಷೆಯಿದೆ.

ಶಬರಿಮಲೆ ಚಿನ್ನ ಕಳವು: ಹೊಸ ಪ್ರಕರಣಕ್ಕೆ ಸಮ್ಮತಿ

ಕೊಚ್ಚಿ: ಶಬರಿಮಲೆ ದೇವಾಲಯದ ದ್ವಾರಪಾಲಕ ಮೂರ್ತಿಗಳ ಚಿನ್ನ ನಾಪತ್ತೆ ಪ್ರಕರಣದಲ್ಲಿ ಮಾಜಿ ಟಿಡಿಬಿ ಅಧ್ಯಕ್ಷ ಪಿ.ಎಸ್.ಪ್ರಶಾಂತ್ ವಿರುದ್ಧ ಸಾಕ್ಷ್ಯ ಲಭ್ಯವಾಗಿರುವ ಹಿನ್ನೆಲೆಯಲ್ಲಿ ಹೊಸ ಕ್ರಿಮಿನಲ್ ಪ್ರಕರಣ ದಾಖಲಿಸಲು ವಿಶೇಷ ತನಿಖಾ ತಂಡಕ್ಕೆ(ಎಸ್‌ಐಟಿ) ಕೇರಳ ಹೈಕೋರ್ಟ್ ಅನುಮತಿ ನೀಡಿದೆ.

ಪ್ರತಿಪಕ್ಷ ನಾಯಕರಾಗಿ ಖರ್ಗೆ ಪುನರ್ ನೇಮಕ

ಹೊಸದಿಲ್ಲಿ: ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಸೇರಿದಂತೆ ರಾಜ್ಯಸಭೆಗೆ ಹೊಸದಾಗಿ ಆಯ್ಕೆಯಾದ ಹಾಗೂ ಮರು ಆಯ್ಕೆಯಾದ ಎಂಟು ಸದಸ್ಯರು ಸೋಮವಾರ ಪ್ರಮಾಣವಚನ ಸ್ವೀಕರಿಸಿದರು. ರಾಜ್ಯಸಭೆ ಸಭಾಪತಿ ಸಿ.ಪಿ.ರಾಧಾಕೃಷ್ಣನ್ ಅವರು ಹೊಸ ಸದಸ್ಯರಿಗೆ ಪ್ರಮಾಣವಚನ ಬೋಧಿಸಿದರು. ರಾಜ್ಯಸಭೆಯಲ್ಲಿ ವಿಪಕ್ಷ ನಾಯಕರಾಗಿ ಖರ್ಗೆ ಅವರು ಮರು ನೇಮಕವಾಗಿದ್ದಾರೆ.

ಸಂವಿಧಾನದ ಪ್ರತಿಯನ್ನು ಕೈಯಲ್ಲಿ ಹಿಡಿದು ಖರ್ಗೆ ಅವರು ಸಭಾಪತಿಯವರ ಕಚೇರಿಯಲ್ಲಿ ಪ್ರತ್ಯೇಕವಾಗಿ ಪ್ರಮಾಣವಚನ ಸ್ವೀಕರಿಸಿದರು. ಬಳಿಕ ಪ್ರತಿಕ್ರಿಯಿಸಿದ ಅವರು, ಜನರ ಆಶಯಗಳು, ಸಮಸ್ಯೆಗಳು ಮತ್ತು ಧ್ವನಿಯನ್ನು ಸದನದಲ್ಲಿ ಪ್ರಾಮಾಣಿಕವಾಗಿ ಪ್ರತಿನಿಧಿಸುವುದರ ಜತೆಗೆ ಸರ್ಕಾರವನ್ನು ಉತ್ತರದಾಯಿತ್ವಕ್ಕೆ ಒಳಪಡಿಸುವ ಕಾರ್ಯವನ್ನು ಮುಂದುವರಿಸುವುದಾಗಿ ಹೇಳಿದರು.

ಖರ್ಗೆ ಅವರ ರಾಜ್ಯಸಭಾ ಸದಸ್ಯತ್ವದ ಅವಧಿ ಜೂ.25ರಂದು ಮುಕ್ತಾಯಗೊಂಡ ಹಿನ್ನೆಲೆಯಲ್ಲಿ ಅವರು ಜೂ.26ರಿಂದ ಪ್ರತಿಪಕ್ಷ ನಾಯಕ ಸ್ಥಾನದಿಂದ ಹೊರಗುಳಿದಿದ್ದರು. ಆದರೆ, ಮರು ಆಯ್ಕೆಯಾದ ನಂತರ ರಾಜ್ಯಸಭೆ ಸಭಾಪತಿ ಜೂ.26ರಿಂದಲೇ ಅವರಿಗೆ ಮತ್ತೆ ರಾಜ್ಯಸಭೆ ಪ್ರತಿಪಕ್ಷ ನಾಯಕ ಸ್ಥಾನದ ಮಾನ್ಯತೆ ನೀಡಿದ್ದಾರೆ.

ಇದೇ ವೇಳೆ ಇತರ 7 ಸದಸ್ಯರಾದ ಮಾನ್‌ಸಿಂಗ್ ಮೆರಾಮನ್ ಪರ್ಮಾರ್, ತರುಣ್ ಚುಗ್, ಅಲ್ಕಾ ಸಿಂಗ್, ಜಿತೇಂದ್ರ ಕಾಂಜರಿಯಾ, ರಾಜೇಂದ್ರ ಜೈನ್, ಎಂ. ನಾಗರಾಜ ಹಾಗೂ ಅಧಿಕರಿಮಯುಂ ಶಾರದಾ ದೇವಿ ಅವರು ಪ್ರಮಾಣವಚನ ಸ್ವೀಕರಿಸಿದರು. ನಾಲ್ವರು ಹಿಂದಿಯಲ್ಲಿ, ಒಬ್ಬರು ಕನ್ನಡದಲ್ಲಿ, ಒಬ್ಬರು ಪಂಜಾಬಿಯಲ್ಲಿ ಹಾಗೂ ಒಬ್ಬರು ಮಣಿಪುರಿ ಭಾಷೆಯಲ್ಲಿ ಪ್ರಮಾಣವಚನ ಸ್ವೀಕರಿಸಿದರು.

ಭಾರತದ ಸೇನಾ ಬಲಕ್ಕೆ ಸಿಂದೂರ ಸಾಕ್ಷಿ: ದ್ವಿವೇದಿ

ಹೊಸದಿಲ್ಲಿ: ಆಪರೇಷನ್ ಸಿಂದೂರ್ ಸಶಸ್ತ್ರ ಸಂಘರ್ಷಗಳು ಅಲ್ಪಾವಧಿಯವಾಗಿದ್ದು, ತಂತ್ರಾತ್ಮಕವಾಗಿ ನಡೆಸಬಹುದೆಂಬುದನ್ನು ಸ್ಪಷ್ಟಪಡಿಸಿದೆ. ಅಲ್ಲದೆ, ಭಯೋತ್ಪಾದನೆಗೆ ಭಾರತದ ಪ್ರತಿಕ್ರಿಯೆಯಲ್ಲಿ ಹೊಸ ಕ್ರಮಕ್ಕೆ ಇದು ನಿದರ್ಶನವಾಗಿದೆ ಎಂದು ಭಾರತೀಯ ಸೇನಾ ಮುಖ್ಯಸ್ಥ ಜನರಲ್ ಉಪೇಂದ್ರ ದ್ವಿವೇದಿ ಹೇಳಿದ್ದಾರೆ.



ಭಾರತವು ಪಾಕಿಸ್ತಾನ ಮತ್ತು ಪಾಕಿಸ್ತಾನ ಆಕ್ರಮಿತ ಕಾಶ್ಮೀರದಲ್ಲಿ ಲಷ್ಕರ್–ಎ–ತೈಬಾ ಮತ್ತು ಜೈಶ್–ಎ–ಮೊಹಮ್ಮದ್ ನಡೆಸುತ್ತಿರುವ ಭಯೋತ್ಪಾದಕ ಉಡಾವಣಾ ಕೇಂದ್ರಗಳ ಮೇಲೆ ನಿಖರವಾದ ದಾಳಿಗಳನ್ನು ನಡೆಸಿತು. ಈ ದಾಳಿಗಳು ನಾಗರಿಕ ಮತ್ತು ಮಿಲಿಟರಿ ಕೇಂದ್ರಗಳನ್ನು ದಾಟಿ ಬಹಾವಲ್ಪುರ್ ಸೇರಿದಂತೆ ಒಂಬತ್ತು ಭಯೋತ್ಪಾದಕ ನೆಲೆಗಳನ್ನು ನಾಶಪಡಿಸಿದ್ದವು.

ಪ್ರಸ್ತುತ ನಡೆಯುತ್ತಿರುವ ಸಂಘರ್ಷಗಳು ದೀರ್ಘಕಾಲದಿಂದ ನಡೆಯುತ್ತಿರುವ ಜಗತ್ತಿನಲ್ಲಿ, ಆಪರೇಷನ್ ಸಿಂದೂರ್ ಸಂಘರ್ಷಗಳು ಸಣ್ಣ, ತೀವ್ರವಾದ, ತಂತ್ರಜ್ಞಾನ–ಚಾಲಿತ ಮತ್ತು ನಿರಂತರ ಮಾಹಿತಿ ಪರಿಶೀಲನೆಯಲ್ಲಿ ಹೋರಾಡುವ ಹೆಚ್ಚಿನ ಸಾಧ್ಯತೆಯೂ ಇದೆ ಎಂದು ತೋರಿಸಿಕೊಟ್ಟಿದೆ ಎಂದರು.

ಭಯೋತ್ಪಾದಕರು ಮತ್ತು ಭಯೋತ್ಪಾದಕರನ್ನು ಪ್ರಾಯೋಜಿಸುವ ಅಥವಾ ಸಕ್ರಿಯಗೊಳಿಸುವವರ ನಡುವೆ ಯಾವುದೇ ವ್ಯತ್ಯಾಸವಿರುವುದಿಲ್ಲ ಎಂಬುದು ನಿಸ್ಸಂದಿಗ್ಧವಾದ ಸಂದೇಶವಾಗಿದೆ ಎಂದು ಹೇಳಿದರು.

ಜರ್ಮನಿಯಲ್ಲಿ ಗುಂಡಿನ ದಾಳಿಗೆ 6 ಮಂದಿ ಸಾವು

ಬರ್ಲಿನ್: ಜರ್ಮನಿಯ ಉತ್ತರ ಭಾಗದಲ್ಲಿರುವ ಸ್ಟಾಡೆ ನಗರದ ಯೂತ್ ವೆಲ್‌ಫೇರ್ ಸೆಂಟರ್‌ನಲ್ಲಿ ನಡೆದ ಗುಂಡಿನ ದಾಳಿಯಲ್ಲಿ ಆರು ಮಂದಿ ಮೃತಪಟ್ಟಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಇಬ್ಬರನ್ನು ಬಂಧಿಸಲಾಗಿದ್ದು, ಈ ಪೈಕಿ ಓರ್ವ ಪ್ರಮುಖ ಶಂಕಿತರಾಗಿದ್ದಾನೆ ಎಂದು ಪೊಲೀಸ್ ತಿಳಿಸಿದ್ದಾರೆ. ದಾಳಿಕೋರನ ಕೃತ್ಯದ ಹಿಂದಿನ ಉದ್ದೇಶ ಏನು ಎಂಬುದರ ಬಗ್ಗೆ ಪೊಲೀಸರು ಇನ್ನೂ ಯಾವುದೇ ಮಾಹಿತಿ ನೀಡಿಲ್ಲ. ಮುಖ್ಯ ಶಂಕಿತನನ್ನು ಬಂಧಿಸಲಾಗಿದೆ. ಮತ್ತಿಬ್ಬರನ್ನು ಭಾಗಿಯಾಗಿರುವ ಶಂಕೆಯ ಮೇಲೆ ಪೊಲೀಸ್ ಕ್ರಮಗಳಿಗೆ ಒಳಪಡಿಸಲಾಗಿದೆ ಎಂದು ಪೊಲೀಸರು ಹೇಳಿಕೆಯಲ್ಲಿ ತಿಳಿಸಿದ್ದಾರೆ. ಘಟನೆಯು ಹ್ಯಾಂಬರ್ಗ್ ಪಶ್ಚಿಮಕ್ಕೆ ಸುಮಾರು 50,000 ಜನರು ಇದ್ದ ಪ್ರದೇಶದಲ್ಲಿ ಘಟನೆ ಸಂಭವಿಸಿದೆ. ಈ ಸೆಂಟರ್‌ನಲ್ಲಿ ಗರ್ಭಿಣಿಯರಿಗೆ ಅಥವಾ ನವಜಾತ ಶಿಶುಗಳಿಗೆ ಮತ್ತು ತಾಯಂದಿರಿಗೆ ತಾತ್ಕಾಲಿಕ ವಸತಿ ಸೌಕರ್ಯವನ್ನು ಒಳಗೊಂಡಿದೆ. 6 ಮಂದಿ ಮೃತಪಟ್ಟಿದ್ದು, ಹಲವರು ಗಾಯಗೊಂಡಿದ್ದಾರೆ ಎಂದು ಪೊಲೀಸರು ಹೇಳಿದ್ದಾರೆ. ಈ ಪೈಕಿ ಕೆಲವರು ಗಂಭೀರವಾಗಿ ಗಾಯಗೊಂಡಿದ್ದಾರೆ ಎಂದು ಜರ್ಮನ್ ಸುದ್ದಿ ಸಂಸ್ಥೆ ಡಿಪಿಎ ವರದಿ ಮಾಡಿದೆ. ಸದ್ಯ ಪರಿಸ್ಥಿತಿ ನಿಯಂತ್ರಣದಲ್ಲಿದ್ದು, ಮಾರಣಾಂತಿಕ ಗುಂಡಿನ ದಾಳಿಯ ನಂತರ ಸಾರ್ವಜನಿಕರಿಗೆ ಯಾವುದೇ ಅಪಾಯವಿಲ್ಲ ಆತಂಕಪಡುವುದು ಬೇಡ ಎಂದು ಪೊಲೀಸರು ಹೇಳಿದ್ದಾರೆ.

ಜರ್ಮನಿಯ ಬಂದೂಕು ಕಾನೂನುಗಳು ಅಮೆರಿಕದಲ್ಲಿರುವುದಕ್ಕಿಂತ ಹೆಚ್ಚು ನಿರ್ಬಂಧಿತವಾಗಿವೆ, ಮತ್ತು ಸಾಮೂಹಿಕ ಗುಂಡಿನ ದಾಳಿಗಳು ಅಪರೂಪದ್ದಾಗಿವೆ.

ಸರಳಾ ಹತ್ಯೆ ಕೇಸ್: ಯಾಸಿನ್ ವಿರುದ್ಧ ಚಾರ್ಜ್‌ಶೀಟ್

ಶ್ರೀನಗರ: 36 ವರ್ಷಗಳ ನಂತರ ಜಮ್ಮು–ಕಾಶ್ಮೀರ ಪೊಲೀಸ್ ರಾಜ್ಯ ತನಿಖಾ ಸಂಸ್ಥೆ(ಎಸ್‌ಐಎ) ಕಾಶ್ಮೀರಿ ಪಂಡಿತ್ ನರ್ಸ್(ಶುಶ್ರೂಷಕಿ) ಸರಳಾ ಭಟ್ ಅವರ ಹತ್ಯೆ ಮತ್ತು ಅಪಹರಣ ಪ್ರಕರಣ ಸಂಬಂಧ ಚಾರ್ಜ್‌ಶೀಟ್ ಸಲ್ಲಿಸಿದೆ. ಈ ಪ್ರಕರಣದಲ್ಲಿ ಜಮ್ಮು–ಕಾಶ್ಮೀರ ಲಿಬರೇಶನ್ ಫ್ರಂಟ್ ಮುಖ್ಯಸ್ಥ ಯಾಸಿನ್ ಮಲಿಕ್ ಮತ್ತು ಅವನ ನಾಲ್ವರು ಸಹಚರರನ್ನು ಹೆಸರಿಸಿದೆ.

ಭಯೋತ್ಪಾದನಾ ದಾಳಿ ಸಂತ್ರಸ್ತರಿಗೆ ನ್ಯಾಯ ಒದಗಿಸುವ ಪ್ರಯತ್ನದಲ್ಲಿ ಇದು ಐತಿಹಾಸಿಕ ಮೈಲಿಗಲ್ಲು ಎಂದು ಕರೆದ ಎಸ್‌ಐಎ, 2024ರಲ್ಲಿ ಪ್ರಕರಣವನ್ನು ಪುನಃ ತೆರೆದ ನಂತರ ಜಮ್ಮುವಿನ ವಿಶೇಷ ನ್ಯಾಯಾಲಯದ ಮುಂದೆ 737 ಪುಟಗಳ ಚಾರ್ಜ್‌ಶೀಟ್ ಅನ್ನು ಸಲ್ಲಿಸಿದೆ. ಎಸ್‌ಐಎ ಪ್ರಕಾರ, ಆರೋಪಿಗಳು ಅಪಹರಣ ಮತ್ತು ಕ್ರೂರ ಹತ್ಯೆಯನ್ನು ಯೋಜಿಸಿ ಕಾರ್ಯಗತಗೊಳಿಸಿದ್ದಾರೆ.

ಮುಂಗಾರು ಮಳೆ ಅಬ್ಬರ: ಅರುಣಾಚಲ, ಸಿಕ್ಕಿಂನಲ್ಲಿ ಜನಜೀವನ ಅಸ್ತವ್ಯಸ್ತ

ಮುಂಬೈನ ಉಪನಗರಗಳು ಜಲಾವೃತ

ಮುಂಬೈ: ದೇಶದಲ್ಲಿ ಕೆಲವೆಡೆ ಮುಂಗಾರು ಬಿರುಸು ಪಡೆದಿದ್ದು, ಈಶಾನ್ಯ ರಾಜ್ಯಗಳು ಮಳೆಯ ಅರ್ಭಟಕ್ಕೆ ಕಂಗಾಲಾಗಿವೆ. ಅರುಣಾಚಲ ಪ್ರದೇಶ, ಅಸ್ಸಾಂ ಮತ್ತು ಸಿಕ್ಕಿಂನಲ್ಲಿ ಸುರಿದ ಭಾರಿ ಮಳೆ ಜನಜೀವನವನ್ನು ಅಸ್ತವ್ಯಸ್ತಗೊಳಿಸಿದೆ. ಬಿಡದೆ ಸುರಿದ ಭಾರೀ ಮಳೆಯಿಂದಾಗಿ ದಿಢೀರ್ ಪ್ರವಾಹ, ಭೂಕುಸಿತ ಹಾಗೂ ಭಾರಿ ಜಲಾವೃತಕ್ಕೆ ಕಾರಣವಾಗಿದ್ದು, ರಕ್ಷಣಾ ಕಾರ್ಯಾಚರಣೆಗಳನ್ನು ಚುರುಕುಗೊಳಿಸಲಾಗಿದೆ.

ಭಾನುವಾರ ತಡರಾತ್ರಿಯಿಂದ ಸೋಮವಾರ ಮುಂಜಾನೆ 4:00 ಗಂಟೆಯ ಅವಧಿಯಲ್ಲಿ ಮುಂಬೈನ ಉಪನಗರಗಳಲ್ಲಿ ಭಾರಿ ಮಳೆಯಾಗಿದ್ದು, ಮುಲುಂಡ್‌ನ ವೀಣಾ ನಗರದಲ್ಲಿ 160.4 ಮಿಮೀ ಹಾಗೂ ವರ್ಸೋವಾದಲ್ಲಿ 156.8 ಮಿಮೀ ಮಳೆ ದಾಖಲಾಗಿದೆ. ಈ ಭಾರಿ ಮಳೆಯಿಂದಾಗಿ ಎಲ್‌ಬಿಎಸ್ ರಸ್ತೆ ಜಲಾವೃತಗೊಂಡಿದ್ದು, ಅಂಧೇರಿ ಸಬ್‌ವೇ ಸಂಪೂರ್ಣವಾಗಿ ಮುಳುಗಡೆಯಾಗಿ ವಾಹನ ಸವಾರರು ತೀವ್ರ ಸಂಕಷ್ಟ ಎದುರಿಸಿದರು.

ಈಶಾನ್ಯ ರಾಜ್ಯಗಳಲ್ಲಿ ಭೂಕುಸಿತ: ಅರುಣಾಚಲ ಪ್ರದೇಶದ 12 ಜಿಲ್ಲೆಗಳಲ್ಲಿ ಸುರಿದ ಧಾರಾಕಾರ ಮಳೆ, ರಸ್ತೆ ಮತ್ತು ಸೇತುವೆಗಳನ್ನು ಹಾನಿಗೊಳಿಸಿದ್ದು, ಮೂವರು ಪ್ರಾಣ ಕಳೆದುಕೊಂಡಿದ್ದಾರೆ. ದಂಬುಕ್‌ನ ಸಿಸಿರಿ ನದಿಯ ದ್ವೀಪದಲ್ಲಿ ಸಿಲುಕಿದ್ದ ನಾಲ್ವರನ್ನು ಭಾರತೀಯ ವಾಯುಪಡೆ ಹೆಲಿಕಾಪ್ಟರ್ ಬಳಸಿ ಯಶಸ್ವಿಯಾಗಿ ರಕ್ಷಿಸಿದೆ. ಇದರೊಂದಿಗೆ, ಸಿಕ್ಕಿಂನಲ್ಲಿ ಸುರಿದ ಭಾರಿ ಮಳೆ ವಿವಿಧೆಡೆ ಭೂಕುಸಿತವನ್ನು ಉಂಟುಮಾಡಿದ್ದು, ಗ್ರಾಮೀಣ ಭಾಗಗಳು ರಸ್ತೆ ಸಂಪರ್ಕ ಕಳೆದುಕೊಂಡಿವೆ.



ಅಸ್ಸಾಂನ ಧೇಮಾಜಿ ಜಿಲ್ಲೆಯ ಅರ್ಚಿಪಥರ್ ಮತ್ತು ಸಿಮೆನ್ ಚಾಪರಿ ನಿಲ್ದಾಣಗಳ ನಡುವೆ ಭಾರೀ ಮಳೆಯಿಂದ ಮುರಿದು ಬಿದ್ದ ರೈಲ್ವೆ ಸೇತುವೆ.

ಐಎಂಡಿ ಎಚ್ಚರಿಕೆ: ಭಾರತೀಯ ಹವಾಮಾನ ಇಲಾಖೆ (ಐಎಂಡಿ), ಸಿಕ್ಕಿಂನ ಮಂಗನ್, ನಾಮ್ಚಿ, ಪಾಕ್ಯಾಂಗ್ ಮತ್ತು ಸೊರೆಂಗ್ ಜಿಲ್ಲೆಗಳಿಗೆ ಆರೆಂಜ್ ಅಲರ್ಟ್ ಘೋಷಿಸಿದೆ. ಮುಂದಿನ 24 ರಿಂದ 48 ಗಂಟೆಗಳ ಕಾಲ (ಸೋಮವಾರದಿಂದ) ಮುಂಬೈ ಹಾಗೂ ಈಶಾನ್ಯ ಭಾರತದಲ್ಲಿ ಗುಡುಗು ಸಹಿತ ಭಾರಿ ಮಳೆಯಾಗುವ ಮುನ್ಸೂಚನೆ ನೀಡಲಾಗಿದೆ.

ಸೀಶೆಲ್ಸ್‌ನಲ್ಲಿ ಮಹಾತ್ಮರ ಪ್ರತಿಮೆಗೆ ಪ್ರಧಾನಿ ಮೋದಿ ಗೌರವ

ಗಾಂಧೀಜಿ ಚಿಂತನೆ ಪ್ರೇರಣಾದಾಯಿ

ವಿಕ್ಟೋರಿಯಾ(ಸೀಶೆಲ್ಸ್): ಮಹಾತ್ಮ ಗಾಂಧೀಜಿ ದಂತಕಥೆ ಸೀಶೆಲ್ಸ್‌ನಲ್ಲಿ ತುಂಬು ಗೌರವಿಸಲ್ಪಟ್ಟಿತ್ತು ಮತ್ತು ಇದರ ಪ್ರತೀಕವೆಂಬಂತೆ ಇಲ್ಲಿನ ಪೀಸ್ ಪಾರ್ಕ್‌ನಲ್ಲಿ ಅಳವಡಿಸಲಾಗಿರುವ ಗಾಂಧೀಜಿ ಪ್ರತಿಮೆಗೆ ಪ್ರಧಾನಿ ನರೇಂದ್ರ ಮೋದಿ ಸೋಮವಾರ ನಮನಗಳನ್ನು ಸಲ್ಲಿಸಿದರು. ಅಲ್ಲಿ ನೆರೆದಿದ್ದ ಭಾರತೀಯ ಸಂಜಾತರನ್ನು ಭೇಟಿಯಾದರು ಮತ್ತು ಪುಟ್ಟ ಮಕ್ಕಳೊಂದಿಗೆ ಖುಷಿಖುಷಿಯಾಗಿ ಸಂವಾದ ನಡೆಸಿದರು.

ಶಾಂತಿಸ್ಥಾಪನೆ, ನ್ಯಾಯದಾನ ಮತ್ತು ಘನತೆಗಳ ಸಾಕಾರಕ್ಕಾಗಿ ಜನರನ್ನು ಒಗ್ಗಟ್ಟಾಗಿಸಿದ್ದ ಗಾಂಧೀಜಿಯವರ ಆದರ್ಶಗಳು ತಲೆಮಾರುಗಳಿಂದ ಜನರಿಗೆ ಮಾದರಿಯಾಗಿವೆ. ಶ್ರೇಷ್ಠ ಜಗತ್ತಿನ ಸಾಕಾರ ನಿಟ್ಟಿನಲ್ಲಿ ನಮ್ಮ ಸಾಮೂಹಿಕ ಪ್ರಯತ್ನಗಳಿಗೆ ಅವರ ಚಿಂತನೆಗಳು ನಿರಂತರ ಪ್ರೇರಣಾದಾಯಿಯಾಗಿವೆ ಎಂದು ಪ್ರಧಾನಿ ಮೋದಿ ಸಾಮಾಜಿಕ ಮಾಧ್ಯಮಗಳಿಗೆ ಪೋಸ್ಟ್ ಹಾಕಿದ್ದಾರೆ.

ಪೀಸ್ ಪಾರ್ಕ್‌ಗೆ ಭೇಟಿ ನೀಡುವ ಮುನ್ನ ಪ್ರಧಾನಿ ಮೋದಿ ಅವರು ಅರುಳ್‌ಮಿಗು ನವಶಕ್ತಿ ವಿನಯಾಗರ್ ಕ್ಷೇತ್ರಕ್ಕೆ ತೆರಳಿ ಪ್ರಾರ್ಥನೆ ಸಲ್ಲಿಸಿದರು.

ಇದಕ್ಕೂ ಮುನ್ನ ವಿಕ್ಟೋರಿಯಾದಲ್ಲಿ ಭಾರತೀಯ ಸಮುದಾಯದ ತಂಡದೊಂದಿಗೆ ಚರ್ಚಿಸಿದ ಪ್ರಧಾನಿ ಮೋದಿ ಅವರೊಂದಿಗೆ ಫೋಟೋ ತೆಗೆಸಿಕೊಂಡರು. ಸೀಶೆಲ್ಸ್‌ನ ಭಾರತೀಯ ಸಂಜಾತರೊಂದಿಗೆ ಅದ್ಭುತ ಸಂವಾದ ನಡೆಯಿತು.



ಕಿರುಸುದ್ದಿ

ಬಂಟ್ಸ್ ಹಾಸ್ಟೆಲ್ ಗಣೇಶೋತ್ಸವ ಸಮಿತಿ: ಸಂಚಾಲಕರಾಗಿ ಜಯಶೀಲ ಅಡ್ಯಂತಾಯ ಅಡ್ಯಾರ್‌ಗುತ್ತು

ಮಂಗಳೂರು: ಬಂಟರ ಯಾನೆ ನಾಡವರ ಮಾತೃ ಸಂಘ, ಶ್ರೀ ಸಿದ್ಧಿ ವಿನಾಯಕ ಪ್ರತಿಷ್ಠಾನ ಹಾಗೂ ಸಾರ್ವಜನಿಕ ಶ್ರೀ ಗಣೇಶೋತ್ಸವ ಸಮಿತಿಯ ಆಶ್ರಯದಲ್ಲಿ ನಗರದ ಬಂಟ್ಸ್ ಹಾಸ್ಟೆಲ್‌ನಲ್ಲಿ ಸೆಪ್ಟೆಂಬರ್ 14 ರಿಂದ 16ರವರೆಗೆ ನಡೆಯಲಿರುವ 20ನೇ ವರ್ಷದ ಸಾರ್ವಜನಿಕ ಗಣೇಶೋತ್ಸವ ಸಮಿತಿಯ ಸಂಚಾಲಕರಾಗಿ ಉದ್ಯಮಿ, ಸಮಾಜಸೇವಕ ಜಯಶೀಲ ಅಡ್ಯಂತಾಯ ಅಡ್ಯಾರ್‌ಗುತ್ತು ಆಯ್ಕೆಯಾಗಿದ್ದಾರೆ.



ಟ್ರಸ್ಟ್‌ನ ಅಧ್ಯಕ್ಷ ಅಜಿತ್ ಕುಮಾರ್ ರೈ ಮಾಲಾಡಿ ಅವರ ಅಧ್ಯಕ್ಷತೆಯಲ್ಲಿ ಬಂಟ್ಸ್ ಹಾಸ್ಟೆಲ್‌ನ ಅಮೃತೋತ್ಸವ ಕಟ್ಟಡದಲ್ಲಿ ನಡೆದ ಶ್ರೀ ಗಣೇಶೋತ್ಸವದ ಪೂರ್ವಭಾವಿ ಸಭೆಯಲ್ಲಿ ಸಂಚಾಲಕರ ಆಯ್ಕೆ ಪ್ರಕ್ರಿಯೆ ನಡೆಯಿತು.

ಬಂಟರ ಯಾನೆ ನಾಡವರ ಮಾತೃ ಸಂಘದ ಪ್ರಧಾನ ಕಾರ್ಯದರ್ಶಿ ಎಂ.ಕರುಣಾಕರ ಶೆಟ್ಟಿ, ಕೋಶಾಧಿಕಾರಿ ಸಿಎ ರಾಮ್ ಮೋಹನ್ ರೈ, ಸಿದ್ಧಿವಿನಾಯಕ ಪ್ರತಿಷ್ಠಾನದ ಟ್ರಸ್ಟಿ ಕೃಷ್ಣಪ್ರಸಾದ್ ರೈ, ಕಾರ್ಯಕಾರಿ ಸಮಿತಿ ಸದಸ್ಯರಾದ ಎಂ. ಸುಂದರ ಶೆಟ್ಟಿ, ವಸಂತ ಶೆಟ್ಟಿ ಜೆಪ್ಪು, ಪದವು ಮೇಗಿನಮನೆ ಉಮೇಶ್ ರೈ, ಉಲ್ಲಾಸ್ ಶೆಟ್ಟಿ ಪೆರ್ಮುದೆ, ರತ್ನಾಕರ ಶೆಟ್ಟಿ ಎಕ್ಕಾರ್, ಮನೀಶ್ ರೈ ಅಡ್ಯಾರ್, ಜಗದೀಶ್ ಶೆಟ್ಟಿ ಬಿಜೈ, ಮಂಗಳೂರು ತಾಲೂಕು ಸಮಿತಿಯ ಸಂಚಾಲಕ ದಿವಾಕರ ಸಾಮಾನಿ ಚೇಳ್ಯಾರು ಗುತ್ತು ಉಪಸ್ಥಿತರಿದ್ದರು.

ಜಯಶೀಲ ಅಡ್ಯಂತಾಯ ಅವರು ಯಕ್ಷಧ್ರುವ ಪಟ್ಲ ಫೌಂಡೇಶನ್ ಟ್ರಸ್ಟ್‌ನ ಟ್ರಸ್ಟಿಯಾಗಿ, ಬಸ್ಸು ಮಾಲಕರ ಸಂಘದ ಅಧ್ಯಕ್ಷರಾಗಿ, ಎಪಿಎಂಸಿಯ ಸದಸ್ಯರಾಗಿ, ದ.ಕ. ಜಿಲ್ಲಾ ಕಾಂಗ್ರೆಸ್‌ನ ಉಪಾಧ್ಯಕ್ಷರಾಗಿ, ಅಡ್ಯಾರ್ ಪಕ್ಷಿಕೃಷ್ಣ ಮಹಾವಿಷ್ಣು ದೇವಸ್ಥಾನದ ಕೋಶಾಧಿಕಾರಿಯಾಗಿ, ಬಂಟರ ಮಾತೃ ಸಂಘದ ಮಂಗಳೂರು ತಾಲೂಕು ಸಮಿತಿ ಸದಸ್ಯರಾಗಿ, ಅಡ್ಯಾರ್ ಗ್ರಾಮ ಪಂಚಾಯತ್ ಸದಸ್ಯರಾಗಿ ದುಡಿದವರು. ಅಡ್ಯಾರ್ ಫ್ಯಾಮಿಲಿ ಟ್ರಸ್ಟ್ ನ ಉಪಾಧ್ಯಕ್ಷರಾಗಿಯೂ ಕರ್ತವ್ಯ ನಿರ್ವಹಿಸುತ್ತಿದ್ದಾರೆ.

ಸರಕಾರಿ ವೈದ್ಯರ ಕರ್ತವ್ಯಕ್ಕೆ ಅಡ್ಡಿ: ದೂರು

ಪುತ್ತೂರು: ಸರಕಾರಿ ಆಸ್ಪತ್ರೆಯಲ್ಲಿ ವೈದ್ಯರ ಕರ್ತವ್ಯಕ್ಕೆ ಅಡ್ಡಿಪಡಿಸಿದ ಹಿನ್ನಲೆಯಲ್ಲಿ ರೋಗಿಯ ಪುತ್ರನ ವಿರುದ್ಧ ಪುತ್ತೂರು ನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಕೋಡಿಂಬಾಳದ ಕೇವಳ ನಿವಾಸಿ ಗೋವರ್ಧನ ಗೌಡ ಕರ್ತವ್ಯಕ್ಕೆ ಅಡ್ಡಿಪಡಿಸಿದ ಆರೋಪಿ. ಗೋವರ್ಧನ ಅವರ ತಂದೆ ಶಾಂತರಾಮ ಗೌಡ ಅವರು ಪುತ್ತೂರು ಸರಕಾರಿ ಆಸ್ಪತ್ರೆಯಲ್ಲಿ ಒಳರೋಗಿಯಾಗಿ ಚಿಕಿತ್ಸೆ ಪಡೆಯುತ್ತಿದ್ದು, ಜೂ.25ರಂದು ಶಾಂತರಾಮ ಗೌಡ ಅವರ ಆರೋಗ್ಯ ಸ್ಥಿತಿ ಗಂಭೀರವಾಗಿದೆ. ಹೆಚ್ಚಿನ ಚಿಕಿತ್ಸೆಗಾಗಿ ಮಂಗಳೂರಿನ ವೆನ್‌ಲಾಕ್ ಆಸ್ಪತ್ರೆಗೆ ಕರೆದು ಕೊಂಡು ಹೋಗಬೇಕೆಂದು ಕರ್ತವ್ಯದ ಲ್ಲಿದ್ದ ಡಾ. ಯೋಗೀಶ್ ಕೆ. ಅವರು ರೋಗಿಯ ಪುತ್ರ ಗೋವರ್ಧನ ಗೌಡ ಅವರಿಗೆ ಸೂಚಿಸಿದಾಗ ಗೋವರ್ಧನ ಗೌಡ ಅವರು ಸುಮಾರು ಒಂದೂವರೆ ಗಂಟೆಗೂ ಹೆಚ್ಚಿನ ಕಾಲ ವೈದ್ಯರೊಂದಿಗೆ ಗಲಾಟೆ ಮಾಡಿ ಅವಾಚ್ಯ ಶಬ್ದಗಳಿಂದ ಬೈದು ಕರ್ತವ್ಯಕ್ಕೆ ಅಡ್ಡಿಪಡಿಸಿದ್ದಾರೆ. ಈ ಕುರಿತು ಡಾ. ಯೋಗೀಶ್ ಅವರು ನೀಡಿದ ದೂರಿನಂತೆ ಪೊಲೀಸರು ಗೋವರ್ಧನ ಗೌಡ ಅವರ ವಿರುದ್ಧ ಪ್ರಕರಣ ದಾಖಲಿಸಿದ್ದಾರೆ.

ನಾಪತ್ತೆಯಾದ ಯುವತಿ ವಿವಾಹಿತೆಯಾಗಿ ಪತ್ತೆ

ಕಾಸರಗೋಡು: ನಾಪತ್ತೆಯಾಗಿದ್ದ ಇಪ್ಪತ್ತೊಂದರ ಹರೆಯದ ಯುವತಿ ತಾನು ಪ್ರೀತಿಸಿದ ಯುವಕನನ್ನು ವಿವಾಹವಾಗಿ ಪತ್ತೆಯಾಗಿದ್ದಾಳೆ. ನೆಲ್ಲಿಕುಂಜೆ ಲೈಟ್‌ಹೌಸ್ ನಿವಾಸಿ, ಪ್ರಸ್ತುತ ಜೆ.ಪಿ.ನಗರದಲ್ಲಿ ವಾಸಿಸುತ್ತಿರುವ ಡಿ.ಜೀನಿಶಾ ಮೋಳ್ (21) ನಾಪತ್ತೆಯಾಗಿದ್ದು, ಈ ಬಗ್ಗೆ ಆಕೆಯ ತಾಯಿ ಕಾಸರಗೋಡು ಪೊಲೀಸರಿಗೆ ದೂರು ನೀಡಿದ್ದರು. ಈ ಮಧ್ಯೆ ಆಕೆ ನೀಲೇಶ್ವರ ನಿವಾಸಿಯಾದ ವ್ಯಕ್ತಿಯನ್ನು ವಿವಾಹವಾಗಿ ಪೊಲೀಸ್ ಠಾಣೆಯಲ್ಲಿ ಹಾಜರಾಗಿದ್ದಾರೆ.

ಜ್ವರ ಬಾಧಿಸಿ ಮಹಿಳೆ ಮೃತ್ಯು

ಬದಿಯಡ್ಕ: ನ್ಯುಮೋನಿಯಾ ಜ್ವರ ಬಾಧಿಸಿ ಚಿಕಿತ್ಸೆಯಲ್ಲಿದ್ದ ಕುಂಬ್ಡಾಜೆ ಮಲ್ಲಮೂಲೆ ನಿವಾಸಿ, ಬದಿಯಡ್ಕ ಚೆನ್ನಾರಕಟ್ಟೆಯ ಕ್ವಾರ್ಟ್ರಸ್‌ನಲ್ಲಿ ವಾಸಿಸುತ್ತಿದ್ದ ರೋಹಿಣಿ (35) ಸಾವಿಗೀಡಾದ ಘಟನೆ ನಡೆದಿದೆ. ತೀವ್ರ ಜ್ವರ ಹಾಗೂ ಕೆಮ್ಮು ಸಹಿತ ಅನಾರೋಗ್ಯಕ್ಕೀಡಾಗಿದ್ದ ಅವರು ಒಂದು ವಾರದ ಹಿಂದೆ ಕಾಸರಗೋಡು ಜನರಲ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿದ್ದರು. ಭಾನುವಾರ ಬೆಳಗ್ಗೆ ಜ್ವರ ಮತ್ತೆ ಉಲ್ಬಣಗೊಂಡ ಹಿನ್ನೆಲೆಯಲ್ಲಿ ವಿವಿಧ ಆಸ್ಪತ್ರೆಗಳಿಗೆ ಸಾಗಿಸಿದರೂ ಜೀವ ರಕ್ಷಿಸಲಾಗಲಿಲ್ಲ. ಕಾಸರಗೋಡು ಜನರಲ್ ಆಸ್ಪತ್ರೆಯಲ್ಲಿ ಮರಣೋತ್ತರ ಪರೀಕ್ಷೆ ನಡೆಸಲಾಯಿತು. ಮೃತರು ಪತಿ ಪೆರ್ಲ ನಿವಾಸಿ, ಕೂಲಿ ಕಾರ್ಮಿಕ ಜಗದೀಶ್, ಮಕ್ಕಳಾದ ಅಶ್ವಿನಿ, ಅಶ್ವಿತ್, ಜುವನೇಶ್, ಭೂಮಿಕಾ ಅವರನ್ನು ಅಗಲಿದ್ದಾರೆ.



ಕರಾವಳಿಯಾದ್ಯಂತ ಮುಂಗಾರು ಮತ್ತೆ ಚುರುಕಾಗಿದ್ದು, ಶನಿವಾರದಿಂದ ಎಲ್ಲೆಡೆ ಉತ್ತಮ ಮಳೆಯಾಗುತ್ತಿದೆ. ಸೋಮವಾರ ಮಂಗಳೂರು ನಗರದಲ್ಲಿ ಸುರಿದ ಮಳೆಗೆ ಕೆಲಕಾಲ ವಾಹನ ಸಂಚಾರದಲ್ಲಿ ವ್ಯತ್ಯಯ ಉಂಟಾಯಿತು.

ಅಡಿಕೆ ಸಾಗಾಟಕ್ಕೆ ತಡೆ ಬಗ್ಗೆ 'ಮಹಾ' ಸಿಎಂ ಜತೆ ಚರ್ಚಿಸಿ ಕ್ರಮ: ಅಶೋಕ್

ಪುತ್ತೂರು: ಕರ್ನಾಟಕದ ಅಡಿಕೆ ಲಾರಿಗಳನ್ನು ಮಹಾರಾಷ್ಟ್ರದಲ್ಲಿ ತಡೆಯುತ್ತಿರುವ ವಿಚಾರ ಗಮನಕ್ಕೆ ಬಂದಿದ್ದು, ತೊಂದರೆಗೊಳಗಾದವರು ನಮ್ಮ ಬಳಿ ಬಂದರೆ ಅವರನ್ನು ರಾಜ್ಯದ ಸಿಎಂ ಬಳಿ ಕರೆದುಕೊಂಡು ಹೋಗಿ ಮಹಾರಾಷ್ಟ್ರ ಸರಕಾರದ ಜತೆ ಮಾತನಾಡಿಸಿ ಸಮಸ್ಯೆ ಪರಿಹರಿಸುವ ಪ್ರಯತ್ನ ಮಾಡಲಾಗುವುದು ಎಂದು ಪುತ್ತೂರು ಶಾಸಕ ಅಶೋಕ್ ಕುಮಾರ್ ರೈ ಹೇಳಿದರು.

ಅವರು ಪುತ್ತೂರಿನಲ್ಲಿ ಪತ್ರಕರ್ತರ ಜತೆ ಮಾತನಾಡಿ, ಅಡಿಕೆಯಲ್ಲಿ ಟೊಬೆಕೋ ಅಂಶ ಇದೆ, ಹೀಗಾಗಿ ಬೆಂಕಿ ಹಾಕಿ ಸುಡುತ್ತಾರೆ ಎಂದೆಲ್ಲಾ ಹೇಳಲಾಗುತ್ತಿದ್ದು, ಅದರಲ್ಲಿ ಯಾವುದೇ ಟೊಬೆಕೋ ಅಂಶ ಇಲ್ಲ ಎಂಬುದನ್ನು ಸ್ಪಷ್ಟಪಡಿಸಬೇಕಿದೆ. ಅಧಿಕಾರಿಗಳಲ್ಲಿ ಲಂಚಕ್ಕಾಗಿ ಈ ರೀತಿ ಹೆದರಿಸುವ ಕುತಂತ್ರ ಮಾಡಲೂಬಹುದು ಅಥವಾ ಸರಿಯಾದ ಮಾಹಿತಿ ಇಲ್ಲದೆಯೂ ಹಾಗೆ ಮಾಡಿರಬಹುದು. ಆದರೆ, ಅಡಿಕೆಗೆ ತೊಂದರೆ ಆಗಲು ಬಿಡುವುದಿಲ್ಲ. ತೆರಿಗೆಯ ಕಾರಣಕ್ಕೆ ತಡೆದಿದ್ದರೆ ಅದನ್ನು ಕಾನೂನು ಪ್ರಕಾರವೇ ಪರಿಹರಿಸಿಕೊಳ್ಳಬೇಕಾಗುತ್ತದೆ ಎಂದರು.

ಮೈಸೂರಿನಲ್ಲಿ ಕಂಬಳ ನಡೆಸುವುದಕ್ಕೆ ವಾಟಾಳ್ ನಾಗರಾಜ್ ಅವರು ವಿರೋಧ ವ್ಯಕ್ತಪಡಿಸಿರುವುದಕ್ಕೆ ಶಾಸಕರು ಪ್ರತಿಕ್ರಿಯಿಸಿ, ಅವರಿಗೆ ನಮ್ಮ ಜಿಲ್ಲೆಯ ಸಂಬಂಧ ಇದೆ. ಆದರೆ, ಕಂಬಳದ ಕುರಿತು ಹೆಚ್ಚಿನ ಮಾಹಿತಿ ಇಲ್ಲದ ಹಾಗೆ ವಿರೋಧ ವ್ಯಕ್ತಪಡಿಸಿರಬಹುದು. ಅವರು ಯಾವ ಕಾರಣಕ್ಕೆ ವಿರೋಧಿಸಿದ್ದಾರೆ ಎಂಬುದರ ಕುರಿತು ಅವರ ಬಳಿ ಮಾತನಾಡುವ ಪ್ರಯತ್ನ ಮಾಡುತ್ತೇನೆ ಎಂದು ಅಶೋಕ್ ರೈ ಹೇಳಿದರು.

ಬೀಡಿ ವಿಚಾರ

ಪಶ್ಚಿಮ ಬಂಗಾಲದಿಂದ ಬೀಡಿ ಬರುತ್ತಿದ್ದು, ಹೀಗಾಗಿ ಸ್ಥಳೀಯ ಬೀಡಿ ಕಾರ್ಮಿಕರಿಗೆ ತೊಂದರೆಯಾಗುತ್ತಿದೆ ಎಂಬ ಕುರಿತು ಉದ್ದಿಮೆದಾರರು, ಗುತ್ತಿಗೆದಾರರು ನಮ್ಮ ಗಮನಕ್ಕೆ ತಂದಿದ್ದು, ಅದರ ಕುರಿತು ನಿಖರ ಮಾಹಿತಿ ಇಲ್ಲ. ಈ ವಿಚಾರವನ್ನು ಕಾರ್ಮಿಕ ಇಲಾಖೆ ಅಧಿಕಾರಿಗಳಿಗೆ ತಿಳಿಸಲಾಗಿದ್ದು, ಅವರು ಪರಿಶೀಲನೆ ಮಾಡಿ ವರದಿ ನೀಡಿದ ಕ್ರಮ ತೆಗೆದುಕೊಳ್ಳಲಾಗುವುದು ಎಂದರು.

ವಿಶೇಷ ಸಹಕಾರ ಸಪ್ತಾಹ ಉದ್ಘಾಟನೆ | ಸಹಕಾರ ಧ್ವಜಾರೋಹಣಗೈದ ಕಾಮತ್

ಸಹಕಾರದಿಂದ ನೆಮ್ಮದಿಯ ಬದುಕು

ಮಂಗಳೂರು: ಸಹಕಾರ ಕ್ಷೇತ್ರದಿಂದ ದೇಶದ ಅಭಿವೃದ್ಧಿ ಸಾಧ್ಯ ಎಂದು ಪ್ರಧಾನಮಂತ್ರಿ ಹೇಳಿದ್ದಾರೆ. ಬಡವರಿಗೆ, ಮಹಿಳೆಯರಿಗೆ ಆರ್ಥಿಕ ನೆರವು ಒದಗಿಸುತ್ತಿರುವ ಸಹಕಾರ ಕ್ಷೇತ್ರದಿಂದ ನೆಮ್ಮದಿಯ ಬದುಕು ಸಾಧ್ಯ. ಕೇಂದ್ರ ಸರಕಾರದ ಸೂಚನೆಯಂತೆ ಮಂಗಳೂರಿನಲ್ಲಿ ಮೊದಲ ಬಾರಿಗೆ ವಿಶೇಷ ಸಹಕಾರ ಸಪ್ತಾಹ ಆಯೋಜಿಸಲಾಗಿದೆ ಎಂದು ಕರ್ನಾಟಕ ರಾಜ್ಯ ಸಹಕಾರ ಮಾರಾಟ ಮಹಾಮಂಡಳ ಹಾಗೂ ದಕ್ಷಿಣ ಕನ್ನಡ ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕ್ ಅಧ್ಯಕ್ಷ ಡಾ. ಎಂ.ಎನ್. ರಾಜೇಂದ್ರ ಕುಮಾರ್ ಹೇಳಿದರು.

ಕೇಂದ್ರ ಸಹಕಾರ ಸಚಿವಾಲಯ ಸ್ಥಾಪನೆಯಾಗಿ 5 ವರ್ಷಗಳನ್ನು ಪೂರ್ಣಗೊಳಿಸುತ್ತಿರುವ ಹಿನ್ನೆಲೆಯಲ್ಲಿ ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳ ಬೆಂಗಳೂರು, ಕರ್ನಾಟಕ ರಾಜ್ಯ ಸಹಕಾರ ಮಾರಾಟ ಮಹಾಮಂಡಳ ಬೆಂಗಳೂರು, ದಕ್ಷಿಣ ಕನ್ನಡ ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕ್ ಮಂಗಳೂರು, ದಕ್ಷಿಣ ಕನ್ನಡ ಜಿಲ್ಲಾ ಸಹಕಾರಿ ಯೂನಿಯನ್ ಮಂಗಳೂರು, ಸಹಕಾರ ಇಲಾಖೆ ದಕ್ಷಿಣ ಕನ್ನಡ ಸಂಯುಕ್ತ ಆಶ್ರಯದಲ್ಲಿ ನಗರದ ಎಸ್‌ಸಿಡಿಸಿಸಿ ಬ್ಯಾಂಕ್ ಸಭಾಂಗಣದಲ್ಲಿ ಸೋಮವಾರ ವಿಶೇಷ ಸಹಕಾರ ಸಪ್ತಾಹ ಉದ್ಘಾಟಿಸಿ, ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಸಹಕಾರ ಧ್ವಜಾರೋಹಣ ನೆರವೇರಿಸಿ ಮಾತನಾಡಿದ ಶಾಸಕ ಡಿ. ವೇದವ್ಯಾಸ ಕಾಮತ್, ಪ್ರಧಾನಿ ನರೇಂದ್ರ ಮೋದಿ ಅವರ 2047ರ ವಿಕಸಿತ ಭಾರತ ಕನಸಿಗೆ ಪೂರಕವಾಗಿ ಕೇಂದ್ರ ಸರಕಾರದಲ್ಲಿ ಪ್ರತ್ಯೇಕ ಸಹಕಾರ ಸಚಿವಾಲಯ ಆರಂಭಗೊಂಡು ಐದು ವರ್ಷ ಸಂದಿದೆ. ಸಮೃದ್ಧ, ಶಕ್ತಿಶಾಲಿ ಭಾರತ ಆಗಬೇಕು ಎಂಬುದು ಪ್ರಧಾನಿಯವರ ಕನಸು. ಅದಕ್ಕೆ ಪೂರಕವಾಗಿ ಸಹಕಾರ ಸಚಿವಾಲಯ ಕಾರ್ಯನಿರ್ವಹಿಸುತ್ತಿದೆ. ಇನ್ನಷ್ಟು ಗ್ರಾಮಗಳಲ್ಲಿ ಸಹಕಾರ ಸಂಘಗಳು ಆರಂಭಗೊಳ್ಳಬೇಕಿದೆ. ಸಮರ್ಪಕ ಸಾಲ ವಿತರಣೆ, ಮರುಪಾವತಿ, ಎನ್‌ಪಿಎ ಪ್ರಮಾಣ ಇಳಿಕೆ ಮೂಲಕ ಸಹಕಾರ ರಂಗವನ್ನು ಯಶಸ್ವಿಗೊಳಿಸಬೇಕು ಎಂದರು.



ಡಿಜಿಟಲೀಕರಣಕ್ಕೆ ಒತ್ತು

ದ.ಕ. ಜಿಲ್ಲಾ ಸಹಕಾರ ಸಂಘಗಳ ಉಪನಿಬಂಧಕ ಎಚ್.ಎನ್. ರಮೇಶ್ ಮಾತನಾಡಿ, ಕೇಂದ್ರದಲ್ಲಿ ಸಹಕಾರ ಸಚಿವಾಲಯ ಸ್ಥಾಪನೆಗೊಂಡ ಬಳಿಕ ಸಹಕಾರ ಕ್ಷೇತ್ರದ ಬಲವರ್ಧನೆಗೆ ಹಲವಾರು ಕ್ರಮ ಕೈಗೊಳ್ಳಲಾಗಿದೆ. ಪ್ರಾಥಮಿಕ ಕೃಷಿ ಸಹಕಾರ ಸಂಘಗಳಲ್ಲಿ ಕಾಮನ್ ಸರ್ವಿಸ್ ಸೆಂಟರ್ ಸ್ಥಾಪಿಸಿ ವಿವಿಧ ಸೇವೆಗಳನ್ನು ಒದಗಿಸಲು ಅವಕಾಶ ನೀಡಲಾಗಿದೆ. ಪೆಟ್ರೋಲ್ ಬಂಕ್, ಗ್ಯಾಸ್ ಏಜೆನ್ಸಿ, ಜನೌಷಧಿ ಮಳಿಗೆ ತೆರೆಯಲು ಅವಕಾಶ ಮಾಡಿಕೊಡಲಾಗಿದೆ. ಏಕರೂಪತೆಯ ತಂತ್ರಾಂಶ ಅಳವಡಿಸಿ ಡಿಜಿಟಲೀಕರಣಕ್ಕೆ ಒತ್ತು ನೀಡಲಾಗಿದೆ ಎಂದು ವಿವರಿಸಿದರು.

ದ.ಕ. ಸಹಕಾರಿ ಹಾಲು ಉತ್ಪಾದಕರ ಒಕ್ಕೂಟ ಅಧ್ಯಕ್ಷ ರವಿರಾಜ್ ಹೆಗ್ಡೆ, ರಾಜ್ಯ ಸಹಕಾರ ಮಹಾಮಂಡಳ ನಿರ್ದೇಶಕ ಜಯಕರ ಶೆಟ್ಟಿ ಇಂದ್ರಾಳಿ, ಎಸ್‌ಸಿಡಿಸಿಸಿ ಬ್ಯಾಂಕ್ ನಿರ್ದೇಶಕ ಐಕಳಬಾವ ದೇವಿ ಪ್ರಸಾದ್ ಶೆಟ್ಟಿ ಬೆಳಪು, ವಿಶ್ವಕರ್ಮ ಸಹಕಾರ ಬ್ಯಾಂಕ್ ಅಧ್ಯಕ್ಷ ಹರೀಶ್ ಆಚಾರ್ಯ ಮಾತನಾಡಿದರು.


ದಕ್ಷಿಣ ಕನ್ನಡ ಜಿಲ್ಲಾ ಸಹಕಾರಿ ಯೂನಿಯನ್ ಅಧ್ಯಕ್ಷ ಶಶಿಕುಮಾರ್ ರೈ ಬಾಲ್ಯೊಟ್ಟು ಪ್ರಾಸ್ತಾವಿಕವಾಗಿ ಮಾತನಾಡಿ, ಸ್ವಾಗತಿಸಿದರು.

> **'ಸಹಕಾರದಿಂದ ಸಮೃದ್ಧಿ' ಎಂಬ ಧ್ಯೇಯವಾಕ್ಯ**
>
> 'ಸಹಕಾರದಿಂದ ಸಮೃದ್ಧಿ' ಎಂಬ ಧ್ಯೇಯವಾಕ್ಯದೊಂದಿಗೆ ವಿಶೇಷ ಸಹಕಾರಿ ಸಪ್ತಾಹ ನಡೆಯುತ್ತಿದೆ. ದೇಶದಲ್ಲಿ 30 ಕೋಟಿಗೂ ಹೆಚ್ಚು ಜನರು ಸಹಕಾರಿ ಸಂಘಗಳಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ. ಸಹಕಾರಿಗಳಿಗೆ ಯಾವುದೇ ಪಕ್ಷವಿಲ್ಲ. ಸಹಕಾರ ತತ್ವದ ಅಡಿಯಲ್ಲಿ ನಾವೆಲ್ಲರೂ ಒಟ್ಟಾಗಿ ಕಾರ್ಯನಿರ್ವಹಿಸುತ್ತಿದ್ದೇವೆ.
>
> ■ ಡಾ. ಎಂ.ಎನ್. ರಾಜೇಂದ್ರಕುಮಾರ್

ಎಸ್‌ಸಿಡಿಸಿಸಿ ಬ್ಯಾಂಕ್ ಉಪಾಧ್ಯಕ್ಷ ವಿನಯ್ ಕುಮಾರ್ ಸೂರಿಂಜೆ, ನಿರ್ದೇಶಕರಾದ ಎಂ. ವಾದಿರಾಜ ಶೆಟ್ಟಿ, ಭಾಸ್ಕರ್ ಎಸ್.ಕೋಟ್ಯಾನ್, ಎಸ್.ಬಿ.ಜಯರಾಮ ರೈ, ಅಶೋಕ್ ಕುಮಾರ್ ಶೆಟ್ಟಿ, ಮೋನಪ್ಪ ಶೆಟ್ಟಿ ಎಕ್ಕಾರು, ಜೈರಾಜ್ ಬಿ.ರೈ, ಸದಾಶಿವ ಉಳ್ಳಾಲ್, ಕುಶಾಲಪ್ಪ ಗೌಡ, ಮುಖ್ಯ ಕಾರ್ಯನಿರ್ವಹಣಾಧಿಕಾರಿ ಗೋಪಾಲಕೃಷ್ಣ ಭಟ್ ಕೆ., ಸ್ಕ್ಯಾಡ್ಸ್ ಅಧ್ಯಕ್ಷ ರವೀಂದ್ರ ಕಂಬಳಿ, ಸಹಕಾರಿ ಯೂನಿಯನ್ ಹಾಗೂ ಹಾಲು ಉತ್ಪಾದಕರ ಒಕ್ಕೂಟದ ನಿರ್ದೇಶಕರು ಉಪಸ್ಥಿತರಿದ್ದರು. ಯೂನಿಯನ್ ಮುಖ್ಯಕಾರ್ಯನಿರ್ವಹಣಾಧಿಕಾರಿ ಎಸ್.ಎ. ಹಿರೇಮಠ ವಂದಿಸಿದರು. ಬ್ಯಾಂಕ್ ಸಿಬ್ಬಂದಿ ರಾಜೀವ್ ಕಾರ್ಯಕ್ರಮ ನಿರೂಪಿಸಿದರು.

ಜೆಇಇ: ಅಕ್ಷಿತ್‌ರಾಮ್‌ಗೆ ರಾಷ್ಟ್ರೀಯ ಮಟ್ಟದಲ್ಲಿ ರ್‍ಯಾಂಕ್

ಮಂಜೇಶ್ವರ: ಮುಳ್ಳೇರಿಯ ಮಂಡಲಾಂತರ್ಗತ ಗುಂಪೆ ವಲಯದ ನೆಕ್ಕಿಗುಳಿಯ ಆಶಾ ಎನ್.ಆರ್. ಮತ್ತು ತಿರುಮಲೇಶ್ವರ ಕೆ. ದಂಪತಿಯ ಪುತ್ರ ಅಕ್ಷಿತ್‌ರಾಮ್ ಕೆ. ಅವರು ಇದೇ ಸಾಲಿನ ಜೆಇಇ ಮೈನ್ ಪರೀಕ್ಷೆಯಲ್ಲಿ ಶೇಕಡಾ 99.6 ಅಂಕ ಪಡೆದಿದ್ದಾರೆ. ಅಲ್ಲದೆ ಜೆಇಇ ಅಡ್ವಾನ್ಸ್ಡ್ ಪರೀಕ್ಷೆಯಲ್ಲಿ ರಾಷ್ಟ್ರೀಯ ಮಟ್ಟದಲ್ಲಿ 4533ನೇ ರ್‍ಯಾಂಕ್ ಗಳಿಸಿದ್ದಾರೆ. ಕರ್ನಾಟಕ ರಾಜ್ಯದ ಸಿಇಟಿ ಪ್ರವೇಶ ಪರೀಕ್ಷೆಯಲ್ಲಿ 206ನೇ ರ್‍ಯಾಂಕ್ ಪಡೆದಿದ್ದಾರೆ. ಅಲ್ಲದೆ ಪಿಯುಸಿ ಪರೀಕ್ಷೆಯಲ್ಲಿ 567 (ಶೇಕಡಾ 94.5) ಅಂಕಗಳನ್ನು ಗಳಿಸಿದ್ದಾರೆ. ಅವರ ಈ ಸಾಧನೆಗೆ ಗುಂಪೆ ಹವ್ಯಕ ವಲಯದ ಎಲ್ಲಾ ಪದಾಧಿಕಾರಿಗಳು ಅಭಿನಂದನೆ ಸಲ್ಲಿಸಿದ್ದಾರೆ.



ಕ್ಷಮೇತ್ ಜೈನ್ ರಾಜ್ಯ ಮಟ್ಟಕ್ಕೆ

ಪುತ್ತೂರು: ರಾಜ್ಯ ಸ್ತರೀಯ ಬಾಲ ವೈಜ್ಞಾನಿಕ ಪ್ರದರ್ಶನ 2025-26 ಸ್ಪರ್ಧೆಯಲ್ಲಿ 'ವಿಕಸಿತ ಮತ್ತು ಆತ್ಮನಿರ್ಭರ ಭಾರತಕ್ಕಾಗಿ ಎಸ್‌ಟಿಇಎಂ' ಎಂಬ ಪರಿಕಲ್ಪನೆಯಡಿಯಲ್ಲಿ ಆರೋಗ್ಯ ಮತ್ತು ನೈರ್ಮಲ್ಯ ವಿಜ್ಞಾನ ಮಾದರಿಯನ್ನು ಪ್ರಸ್ತುತಪಡಿಸಿರುವ ನಗರದ ತೆಂಕಿಲದ ವಿವೇಕಾನಂದ ಆಂಗ್ಲ ಮಾಧ್ಯಮ ಶಾಲೆಯ 10ನೇ ತರಗತಿಯ ವಿದ್ಯಾರ್ಥಿ ಕ್ಷಮೇತ್ ಜೈನ್ ದ.ಕ. ಜಿಲ್ಲಾ ಮಟ್ಟದ ಸ್ಪರ್ಧೆಯಲ್ಲಿ ಪ್ರಥಮ ಸ್ಥಾನಿಯಾಗಿ ರಾಜ್ಯ ಮಟ್ಟದ ಸ್ಪರ್ಧೆಯಲ್ಲಿ ಭಾಗವಹಿಸಲಿದ್ದಾರೆ ಎಂದು ಶಾಲಾ ಮುಖ್ಯ ಶಿಕ್ಷಕ ಸತೀಶ್ ಕುಮಾರ್ ರೈ ತಿಳಿಸಿದ್ದಾರೆ. ಕ್ಷಮೇತ್ ಜೈನ್ ಶ್ರುತಿ ಕುಮಾರಿ ಮತ್ತು ಹರೀಶ್ ಕುಮಾರ್ ದಂಪತಿ ಪುತ್ರ.



ಜು. 29ರಿಂದ ಸೆ. 26ರ ತನಕ ಎಡನೀರು ಶ್ರೀಗಳ ಚಾತುರ್ಮಾಸ್ಯ ವ್ರತಾಚರಣೆ: ಪೂರ್ವಭಾವಿ ಸಭೆ

ಕಾಸರಗೋಡು: ಜಗದ್ಗುರು ಶಂಕರಾಚಾರ್ಯ ಸಂಸ್ಥಾನಂ ಶ್ರೀಮದ್ ಎಡನೀರು ಮಠಾಧೀಶ ಶ್ರೀ ಸಚ್ಚಿದಾನಂದ ಭಾರತೀ ಮಹಾಸ್ವಾಮಿಗಳವರ ಆರನೇ ಚಾತುರ್ಮಾಸ್ಯ ವ್ರತಾಚರಣೆಯು ಜುಲೈ 29ರಿಂದ ಸೆಪ್ಟೆಂಬರ್ 26ರ ತನಕ 60 ದಿನಗಳ ಧಾರ್ಮಿಕ ಮಹೋತ್ಸವ ಸ್ವರೂಪದಲ್ಲಿ ವಿವಿಧ ಕಾರ್ಯಕ್ರಮಗಳೊಂದಿಗೆ ಜರಗಲಿದೆ.

ವೈದಿಕ, ಧಾರ್ಮಿಕ, ಕಲೆ, ಸಾಂಸ್ಕೃತಿಕ ಸಮ್ಮಿಲನದೊಂದಿಗೆ ನಡೆಯುವ ಚಾತುರ್ಮಾಸ್ಯ ವ್ರತಾಚರಣೆಯ ಯಶಸ್ಸಿಗೆ ಶ್ರೀ ಮಠದಲ್ಲಿ ಭಾನುವಾರ ಸ್ವಾಗತ ಸಮಿತಿ ಸಭೆಯು ನೆರವೇರಿತು.

ಪೂರ್ವಭಾವಿ ಸಮಾಲೋಚನೆ ಹಾಗೂ ಸಿದ್ಧತಾ ಸಭೆಯಲ್ಲಿ ಆಶೀರ್ವಚನ ನೀಡಿದ ಎಡನೀರು ಶ್ರೀಗಳು ಶ್ರೀ ಮಠದ ಪರಂಪರೆಯಂತೆ ಹೋಮ, ಹವನಾದಿ ವೈದಿಕ, ಧಾರ್ಮಿಕ, ಸಾಂಸ್ಕೃತಿಕ ಆರಾಧನೆಯೊಂದಿಗೆ ಕಲಾರಾಧನೆಯ ಮೂಲಕ ಈ ಬಾರಿಯ ಚಾತುರ್ಮಾಸ್ಯ ವಿಜೃಂಭಣೆಯಿಂದ ನಡೆಯಲಿದೆ ಎಂದರು. ಶ್ರೀ ಮಠದಲ್ಲಿ ಜರಗುವ ಈ ಕಾರ್ಯಕ್ರಮವು ಕಾಸರಗೋಡಿನಲ್ಲಿ ಎರಡು ತಿಂಗಳ ಧಾರ್ಮಿಕ ಕಲೋತ್ಸವವನ್ನು ಸೃಷ್ಟಿಸಲಿದೆ.



ಎಲ್ಲೆಡೆಯ ಭಕ್ತರನ್ನು ಶ್ರೀ ಮಠದ ಕಡೆಗೆ ಆಕರ್ಷಿಸಲು ಈ ಮೂಲಕ ಸಾಧ್ಯವಾಗಲಿದೆ. ಈ ಪರಂಪರೆ ಸುಭದ್ರವಾಗಿ ಮುಂದುವರಿಯಬೇಕಿದೆ ಎಂದು ಎಡನೀರು ಶ್ರೀಗಳು ನುಡಿದರು.

ಚಾತುರ್ಮಾಸ್ಯ ಸಮಿತಿಯ ಪ್ರಮುಖರಾದ ಪುತ್ತೂರಿನ ಸ್ವರ್ಣೋದ್ಯಮಿ ಜಿ.ಎಲ್.ಬಲರಾಮ್ ಆಚಾರ್ಯ ಅಧ್ಯಕ್ಷತೆ ವಹಿಸಿದ್ದರು. ಪ್ರಧಾನ ಅಭ್ಯಾಗತರಾಗಿ ಕರ್ನಾಟಕ ಲೋಕಸೇವಾ ಆಯೋಗದ ಹಂಗಾಮಿ ಅಧ್ಯಕ್ಷ ಡಾ.ಟಿ.ಶ್ಯಾಮ ಭಟ್ ಪಾಲ್ಗೊಂಡಿದ್ದರು. ಉದ್ಯಮಿ ಕೆ.ಕೆ.ಶೆಟ್ಟಿ ಪುಣೆ, ಮಧುಸೂದನ ಆಯರ್ ಮಂಗಳೂರು, ಹಿರಿಯ ವಕೀಲ ಎಂ.ನಾರಾಯಣ ಭಟ್ ಕಾಸರಗೋಡು, ಚೆಂಗಳ ಗ್ರಾಮ ಪಂಚಾಯತ್ ಅಧ್ಯಕ್ಷ ವಸಂತ ಅಜಕ್ಕೋಡು, ಗಂಗಾಧರನ್ ನಾಯರ್ ಮುಂತಾದವರು ಉಪಸ್ಥಿತರಿದ್ದು ಮಾತನಾಡಿದರು.

ಎಡನೀರು ಮಠದ ಪ್ರಬಂಧಕ ರಾಜೇಂದ್ರ ಕಲ್ಲೂರಾಯ ಸ್ವಾಗತಿಸಿ, ಚಾತುರ್ಮಾಸ್ಯ ಸಮಿತಿ ಕಾರ್ಯದರ್ಶಿ ಕೆಯ್ಯೂರು ನಾರಾಯಣ ಭಟ್ ಪ್ರಾಸ್ತಾವಿಕ ಮಾತನಾಡಿದರು. ಕೆ.ಸೂರ್ಯನಾರಾಯಣ ಭಟ್ ಕಾರ್ಯಕ್ರಮ ನಿರೂಪಿಸಿ, ವೇಣುಗೋಪಾಲ ಎಡನೀರು ವಂದಿಸಿದರು. ಸರೋಜಾ ಭಟ್ ಪ್ರಾರ್ಥನೆ ಹಾಡಿದರು.

ಬೆಳಪು ಗ್ರಾಮ ಪಂಚಾಯತ್ ವಿನೂತನ ಯೋಜನೆ ಪಂಚಾಯತ್ ವತಿಯಿಂದ ಪೆಟ್ರೋಲ್ ಪಂಪ್

ಕಾಪು: ಉಡುಪಿ ಜಿಲ್ಲೆಯ ಬೆಳಪು ಗ್ರಾಮ ಪಂಚಾಯತ್ ದೇಶಕ್ಕೆ ಪ್ರಥಮ ವೆಂಬಂತೆ ಸ್ಥಳೀಯ ಸಂಪನ್ಮೂಲ ಅಭಿವೃದ್ಧಿಗಾಗಿ, ಗ್ರಾಮದ ಅಭಿವೃದ್ಧಿಗೆ ಪೂರಕ ಯೋಜನೆಯೆಂಬಂತೆ ಗ್ರಾಮ ಪಂಚಾಯತ್ ಅಧಿಕಾರದಲ್ಲಿದ್ದಾಗ ನೀಡಿರುವ ಪ್ರಸ್ತಾವನೆಗೆ ಭಾರತ ಸರಕಾರ ಪೆಟ್ರೋಲಿಯಂ ಇಲಾಖೆ ಮಂಜೂರಾತಿ ನೀಡಿದ್ದು, ಸದ್ಯದಲ್ಲಿಯೇ ಗ್ರಾಮೀಣಾಭಿವೃದ್ಧಿಗೆ ಶಕ್ತಿ ತುಂಬಲು ಗ್ರಾಮ ಪಂಚಾಯತ್ ಪೆಟ್ರೋಲ್ ಪಂಪು ನಡೆಸುವ ಮೂಲಕ ಮಾದರಿಯಾಗಲಿದೆಂದು ಬೆಳಪು ಗ್ರಾಮ ಪಂಚಾಯತ್ ಮಾಜಿ ಅಧ್ಯಕ್ಷ ಡಾ. ದೇವಿಪ್ರಸಾದ್ ಶೆಟ್ಟಿ ಬೆಳಪು ತಿಳಿಸಿದ್ದಾರೆ.

68 ಎಕ್ರೆ ಪ್ರದೇಶದಲ್ಲಿ ಕೈಗಾರಿಕಾ ಪಾರ್ಕ್, 20 ಎಕ್ರೆಯಲ್ಲಿ ಶಿಕ್ಷಣ ಕೇಂದ್ರ, ಅತ್ಯಾಧುನಿಕ ವಿಜ್ಞಾನ ಸಂಶೋಧನಾ ಕೇಂದ್ರ, ಪಿ.ಜಿ.ಸೆಂಟರ್, 116 ಮೆ.ವ್ಯಾಟ್ ವಿದ್ಯುತ್ ಸಬ್ ಸ್ಟೇಷನ್, ಸರಕಾರಿ ಪಾಲಿಟೆಕ್ನಿಕ್ ಕಾಲೇಜ್, ಮೌಲಾನಾ ಆಜಾದ್ ಮಾದರಿ ಶಾಲೆ, ಬೃಹತ್ ವಸತಿ ಬಡಾವಣೆಗಳ ನಿರ್ಮಾಣದೊಂದಿಗೆ ಗ್ರಾಮ ಪಂಚಾಯತ್‌ನ ಸ್ಥಳೀಯ ಸಂಪನ್ಮೂಲವನ್ನು 3 ಪಟ್ಟು ವೃದ್ಧಿಸಿಕೊಂಡಿದೆಂದು ಶೆಟ್ಟಿ ತಿಳಿಸಿದ್ದಾರೆ.



> **ಶುದ್ಧೀಕರಣ ಘಟಕದಿಂದ ಉಚಿತ ನೀರು**
>
> ಕಳೆದ 20 ವರ್ಷಗಳಿಂದ ಹಿಂದೆ ಖಾಸಗಿ ಸಹಭಾಗಿತ್ವದಲ್ಲಿ ಕುಡಿ ಯುವ ನೀರಿನ ಶುದ್ಧೀಕರಣ ಘಟಕ ಸ್ಥಾಪಿಸಿ, ಗ್ರಾಮದ ಪ್ರತಿಯೊಂದು ಮನೆಗೂ ದಿನವೊಂದಕ್ಕೆ 20 ಲೀ ಶುದ್ಧೀಕರಣ ನೀರನ್ನು ಉಚಿತವಾಗಿ ನಿರಂತರವಾಗಿ ಒಂದು ದಿನವೂ ತಪ್ಪದೇ ನೀಡುತ್ತಾ ಬಂದಿರುವುದರಿಂದ ಜನರ ಆರೋಗ್ಯಕ್ಕೆ ಒತ್ತು ನೀಡಲಾಗಿದೆ. ಖಾಸಗಿ ಸಹಭಾಗಿತ್ವದಲ್ಲಿ ಆಸ್ಪತ್ರೆ ನಿರ್ಮಿಸಿ ಪ್ರತಿದಿನ ಬೇಡಿಕೆಗೆ ಅನುಗುಣವಾಗಿ ಉಚಿತ ತಪಾಸಣೆ ಹಾಗೂ ಔಷಧಿ ನೀಡಲಾಗುವುದು, ಇದು ಗ್ರಾಮದ 'ಬಡವ ಕಲ್ಯಾಣ' ಯೋಜನೆಯಾಗಿದೆ ಎಂದು ಡಾ. ದೇವಿ ಪ್ರಸಾದ್ ಶೆಟ್ಟಿ ಬೆಳಪು ಹೇಳಿದರು.

> **ತ್ಯಾಜ್ಯದಿಂದ ಗ್ಯಾಸ್ ಯೋಜನೆಗೆ ಸಿದ್ಧತೆಗಳು**
>
> ತ್ಯಾಜ್ಯ ವಿಲೇವಾರಿಗಾಗಿ ಸುಮಾರು 4 ಎಕ್ರೆ ಜಾಗ ಮೀಸಲಿರಿಸಿದ್ದು, ಅತ್ಯಾಧುನಿಕ ತಂತ್ರಜ್ಞಾನ ಬಳಸಿ ಹಲವು ಗ್ರಾಮ ಪಂಚಾಯತ್‌ಗಳ ಸಹಕಾರ ಪಡೆದು, ಹಸಿ ತ್ಯಾಜ್ಯದಿಂದ ಖಾಸಗಿ ಸಹಭಾಗಿತ್ವದಲ್ಲಿ ಗ್ಯಾಸ್ ಉತ್ಪಾದಿಸುವ ಘಟಕ ಸ್ಥಾಪನೆಗೆ ರೂಪುರೇಶೆ ಸಿದ್ಧಪಡಿಸಿಕೊಳ್ಳಲಾಗಿದೆ. ಇದು ಯಶಸ್ವಿಯಾದರೆ ಇತರ ಗ್ರಾಮ ಪಂಚಾ ಯತ್‌ಗಳಿಗೂ ಅನುಕೂಲ ವಾಗಬಹುದು. ಸ್ಥಳೀಯವಾಗಿ ಪೈಪ್‌ಲೈನ್ ಗ್ಯಾಸ್ ಸೌಲಭ್ಯ ನೀಡಲು ಸಾಧ್ಯವಾಗುವುದರಿಂದ ಸ್ಥಳೀಯ ಪಂಚಾಯತ್ ಆದಾಯ ವೃದ್ಧಿಯಾಗಲಿದೆಂದರು.

114 ವರ್ಷಗಳ ಯಶಸ್ವಿ ಸೇವೆ ಪೂರೈಸಿದ ಎಂಸಿಸಿ ಬ್ಯಾಂಕ್ ಲಿಮಿಟೆಡ್ | ಗ್ರಾಹಕರ ಅನುಕೂಲಕ್ಕಾಗಿ ದೇರಳಕಟ್ಟೆಯಲ್ಲಿ 22ನೇ ಶಾಖೆ, ಎಟಿಎಂ ಉದ್ಘಾಟನೆ

ಪ್ರತಿ ಶಾಖೆಯಲ್ಲಿ ಮೊದಲ ವರ್ಷವೇ ರೂ.10 ಕೋಟಿ ವ್ಯವಹಾರ: ಲೋಬೋ

ಮಂಗಳೂರು: 1912ರಲ್ಲಿ ಸ್ಥಾಪನೆಯಾಗಿ 114 ವರ್ಷಗಳ ಯಶಸ್ವಿ ಸೇವೆಯನ್ನು ಪೂರೈಸಿರುವ ಎಂಸಿಸಿ ಬ್ಯಾಂಕ್ ಲಿಮಿಟೆಡ್ ತನ್ನ 22ನೇ ಶಾಖೆ ಹಾಗೂ ನೂತನ ಎಟಿಎಂ ಅನ್ನು ಜೂನ್ 28ರಂದು ದೇರಳಕಟ್ಟೆಯ ಫಾ. ಮುಲ್ಲರ್ ಕಾಂಪ್ಲೆಕ್ಸ್‌ನ ನೆಲ ಮಹಡಿಯಲ್ಲಿ ಉದ್ಘಾಟಿಸಿತು.

ನೂತನ ಶಾಖೆಯನ್ನು ಎಂಸಿಸಿ ಬ್ಯಾಂಕ್‌ನ ಅಧ್ಯಕ್ಷ ಸಹಕಾರ ರತ್ನ ಅನಿಲ್ ಲೋಬೊ ಉದ್ಘಾಟಿಸಿ ಮಾತನಾಡಿ, ಆರ್‌ಬಿಐ ಮಾರ್ಗಸೂಚಿಗಳ ಅನುಸಾರ ಕಾರ್ಯನಿರ್ವಹಿಸುತ್ತಿರುವ ಎಂಸಿಸಿ ಬ್ಯಾಂಕ್ ಗ್ರಾಹಕರ ಅಗತ್ಯಗಳಿಗೆ ಆದ್ಯತೆ ನೀಡುವ ಮೂಲಕ ಉತ್ತಮ ಹೆಸರು ಗಳಿಸಿದೆ. ಅರ್ಹ ಠೇವಣಿಗಳೆಲ್ಲವೂ ಡಿಐಸಿಜಿಸಿ ಮೂಲಕ ವಿಮಾ ರಕ್ಷಣೆಯಲ್ಲಿರುವುದರಿಂದ ಗ್ರಾಹಕರು ಆತಂಕವಿಲ್ಲದೆ ಬ್ಯಾಂಕಿನಲ್ಲಿ ವ್ಯವಹರಿಸಬಹುದು. ಪ್ರಸ್ತುತ ಆಡಳಿತದ ಅವಧಿಯಲ್ಲಿ ಐದು ಹೊಸ ಶಾಖೆಗಳನ್ನು ಆರಂಭಿಸಲಾಗಿದ್ದು, ಪ್ರತಿಯೊಂದು ಶಾಖೆಯೂ ಮೊದಲ ವರ್ಷದಲ್ಲೇ ರೂ.10 ಕೋಟಿ ವ್ಯವಹಾರ ಸಾಧಿಸಿರುವುದು ಸಿಬ್ಬಂದಿಯ ಪರಿಶ್ರಮ ಮತ್ತು ಗ್ರಾಹಕರ ವಿಶ್ವಾಸದ ಫಲ. ಮುಂದಿನ ದಿನಗಳಲ್ಲಿ ಇನ್ನಷ್ಟು ಶಾಖೆಗಳನ್ನು ಆರಂಭಿಸುವ ಯೋಜನೆ ಇದೆ. ವಿವೇಕಪೂರ್ಣ ಹಣಕಾಸು ನಿರ್ವಹಣೆ ಹಾಗೂ ಆರ್ಥಿಕ ಸೂಚ್ಯಂಕಗಳ ನಿರಂತರ ಮೇಲ್ವಿಚಾರಣೆಯಿಂದ ಸಾರ್ವಜನಿಕರ ಹಣ ಸುರಕ್ಷಿತವಾಗಿದ್ದು, ಬ್ಯಾಂಕ್‌ನ ಬೆಳವಣಿಗೆಗೆ ಅಗತ್ಯ ಅನುಮತಿಗಳನ್ನು ಪಡೆಯಲು ಸಾಧ್ಯವಾಗಿದೆ ಎಂದು ಅವರು ತಿಳಿಸಿದರು.



ವಂ. ಫಾ. ವಿಕ್ಟರ್ ಡಿ'ಮೆಲ್ಲೊ ಮಾತನಾಡಿ, ಬ್ಯಾಂಕಿನ ಯಶಸ್ಸು ಸಾರ್ವಜನಿಕರ ವಿಶ್ವಾಸದ ಫಲವಾಗಿದೆ. ಬ್ಯಾಂಕ್ ಸಿಬ್ಬಂದಿ ಗ್ರಾಹಕರನ್ನು ಅವರ ಉಡುಪು ಅಥವಾ ಸಾಮಾಜಿಕ ಹಿನ್ನೆಲೆಯ ಆಧಾರದ ಮೇಲೆ ನಿರ್ಣಯಿಸದೆ, ಪ್ರತಿಯೊಬ್ಬರನ್ನೂ ಗೌರವದಿಂದ ಕಾಣಬೇಕು ಎಂದು ಸಲಹೆ ನೀಡಿದರು.

ಉರ್ಸುಲಿನ್ ಫ್ರಾನ್ಸಿಸ್ಕನ್ ಸಿಸ್ಟರ್ಸ್‌ನ ಸುಪೀರಿಯರ್ ಜನರಲ್ ವಂ. ಸಿ. ಮಿಲ್ಲಿ ಫೆರ್ನಾಂಡಿಸ್ ಅವರು ಸೇಫ್ ರೂಂ ಅನ್ನು ಉದ್ಘಾಟಿಸಿ ಮಾತನಾಡಿ, ಠೇವಣಿಗಳನ್ನು ಸಂಗ್ರಹಿಸಿ, ಅಗತ್ಯವಿರುವವರಿಗೆ ಸಾಲ ಸೌಲಭ್ಯ ಒದಗಿಸುವ ಮೂಲಕ ಎಂಸಿಸಿ ಬ್ಯಾಂಕ್ ಜನರ ವಿಶ್ವಾಸ ಗಳಿಸಿದ್ದು, ಸ್ಥಳೀಯ ಆರ್ಥಿಕತೆಯನ್ನು ಬಲಪಡಿಸಿದೆ. ಉಳಿತಾಯ ಯೋಜನೆಗಳ ಮೂಲಕ ಕುಟುಂಬಗಳ ಆರ್ಥಿಕ ಭದ್ರತೆಯನ್ನು ಹೆಚ್ಚಿಸುತ್ತಿರುವ ಬ್ಯಾಂಕ್ ದೇರಳಕಟ್ಟೆ ಜನರಿಗೆ ಇನ್ನಷ್ಟು ಉತ್ತಮ ಸೇವೆ ನೀಡಲಿ ಎಂದು ಹಾರೈಸಿದರು.

> **ಸನ್ಮಾನ**
>
> ಸಮುದಾಯ ಸೇವೆಯ ಅಂಗವಾಗಿ ಎಂಸಿಸಿ ಬ್ಯಾಂಕ್ ದೇರಳಕಟ್ಟೆ ಭಾಗದ ಶೈಕ್ಷಣಿಕ ಹಾಗೂ ವಿವಿಧ ಕ್ಷೇತ್ರಗಳ ಸಾಧಕರಾದ ಫ್ರ್ಯಾಂಕಿ ಫ್ರಾನ್ಸಿಸ್ ಕುಟಿನ್ಹಾ, ಅಲ್ವಿನ್ ಜೆರೋಮ್ ಡಿ'ಸೋಜಾ, ಫಯಾರುಖ್ ಮಡೂರು, ಸಿಎ ಮ್ಯಾಕ್ಸಿಮ್ ಫೆರ್ನಾಂಡಿಸ್, ಉಗ್ಗಪ್ಪ ಪೂಜಾರಿ ಹಾಗೂ ಶಫಿ ಬಬ್ಬುಕಟ್ಟೆ ಅವರನ್ನು ಸನ್ಮಾನಿಸಿತು. ನೂತನ ಶಾಖೆಯ ಒಳಾಂಗಣ ಕಾಮಗಾರಿಗೆ ಕೊಡುಗೆ ನೀಡಿದ ಇಂಜಿನಿಯರ್ ಕಾರ್ತಿಕ್ ಕಿರಣ್ ಅವರನ್ನು ಸನ್ಮಾನಿಸಲಾಯಿತು.

ದೇರಳಕಟ್ಟೆಯ ಫಾ. ಮುಲ್ಲರ್ ಹೋಮಿಯೋಪಥಿ ವೈದ್ಯಕೀಯ ಕಾಲೇಜಿನ ಆಡಳಿತಾಧಿಕಾರಿ ವಂ. ಫಾ. ನಿಲೇಶ್ ಕ್ರಾಸ್ತಾ ಅವರು ಎಟಿಎಂ ಅನ್ನು ಉದ್ಘಾಟಿಸಿ ಮಾತನಾಡಿ, 146 ವರ್ಷಗಳ ಇತಿಹಾಸ ಹೊಂದಿರುವ ಫಾ. ಮುಲ್ಲರ್ ಚಾರಿಟೇಬಲ್ ಸಂಸ್ಥೆಗಳು ಹಾಗೂ 114 ವರ್ಷಗಳ ಪರಂಪರೆ ಹೊಂದಿರುವ ಎಂಸಿಸಿ ಬ್ಯಾಂಕ್ ಎರಡೂ ಸೇವೆ, ವಿಶ್ವಾಸ ಮತ್ತು ಮಾನವೀಯತೆಯ ಮೌಲ್ಯಗಳ ಮೇಲೆ ಸ್ಥಾಪಿತವಾಗಿವೆ. ದೈಹಿಕ, ಮಾನಸಿಕ, ಭಾವನಾತ್ಮಕ, ಸಾಮಾಜಿಕ, ಆರ್ಥಿಕ ಹಾಗೂ ಆಧ್ಯಾತ್ಮಿಕ ಬೆಳವಣಿಗೆಯೇ ಸಮಗ್ರ ಅಭಿವೃದ್ಧಿ ಎಂದು ಹೇಳಿದರು.

ಫಾ. ಮುಲ್ಲರ್ ಹೋಮಿಯೋಪಥಿಕ್ ಫಾರ್ಮಾಸ್ಯುಟಿಕಲ್ ವಿಭಾಗದ ಆಡಳಿತಾಧಿಕಾರಿ ವಂ. ಫಾ. ನೆಲ್ಸನ್ ಧೀರಜ್ ಪಾಯ್ಸ್ ಅವರು ಬ್ಯಾಂಕಿನ ಇ-ಸ್ಟಾಂಪ್ ಸೇವೆಗೆ ಚಾಲನೆ ನೀಡಿದರು.

> **ಧನಸಹಾಯ ವಿತರಣೆ**
>
> ಬ್ಯಾಂಕ್ ವತಿಯಿಂದ ಉರ್ಸುಲಿನ್ ಸಿಸ್ಟರ್ಸ್ ವಿಶೇಷ ಚೇತನ ಮಕ್ಕಳ ಶಾಲೆಗೆ ರೂ. 1,00,000, ಪ್ರಿನ್ಸಿತಾ ಡಿ'ಸೋಜಾ ಅವರ ವಿದ್ಯಾಭ್ಯಾಸಕ್ಕೆ ರೂ. 25,000, ಮರ್ಸಿ ಕೇರ್ ಚಾರಿಟೇಬಲ್ ಟ್ರಸ್ಟ್‌ಗೆ ರೂ. 50,000 ಹಾಗೂ ಒಲವಿನಹಳ್ಳಿ ಆಶ್ರಮಕ್ಕೆ ರೂ. 1,00,000 ಧನಸಹಾಯ ವಿತರಿಸಲಾಯಿತು.


ಪಾನೀರ್‌ನ ಅವರ್ ಲೇಡಿ ಆಫ್ ಮರ್ಸಿ ಚರ್ಚ್‌ನ ಧರ್ಮಗುರು ವಂ. ಫಾ. ವಿಕ್ಟರ್ ಡಿ'ಮೆಲ್ಲೊ ಅವರು ನೂತನ ಶಾಖೆಗೆ ಆಶೀರ್ವಚನ ನೀಡಿದರು.

ರೆವ. ಫಾ. ನಿಲೇಶ್ ಕ್ರಾಸ್ತಾ, ಕೋಟೆಕಾರ್ ಗ್ರಾಮ ಪಂಚಾಯತ್ ಅಧ್ಯಕ್ಷೆ ದಿವ್ಯಾ ಸತೀಶ್ ಶೆಟ್ಟಿ, ಉಪಾಧ್ಯಕ್ಷ ಜೆರಾಲ್ಡ್ ಜೂಡ್ ಡಿ'ಸಿಲ್ವಾ ಹಾಗೂ ಮಹಾಪ್ರಬಂಧಕ ಸುನಿಲ್ ಮೆನೇಜಸ್ ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಈ ಸಂದರ್ಭದಲ್ಲಿ ಉಪಾಧ್ಯಕ್ಷ ಜೆರಾಲ್ಡ್ ಜೂಡ್ ಡಿ'ಸಿಲ್ವಾ, ನಿರ್ದೇಶಕರಾದ ಆಂಡ್ರ್ಯೂ ಡಿ'ಸೋಜಾ, ಡೇವಿಡ್ ಡಿ'ಸೋಜಾ, ಮೆಲ್ವಿನ್ ವಾಸ್, ಜೆ.ಪಿ. ರೊಡ್ರಿಗಸ್, ಅನಿಲ್ ಪತ್ರಾವೊ, ಎಲ್ರಾಯ್ ಕಿರಣ್ ಕ್ರಾಸ್ತಾ, ಐರಿನ್ ರೆಬೆಲ್ಲೋ, ವಿನ್ಸೆಂಟ್ ಲಸ್ರಾದೊ, ಸುಶಾಂತ್ ಸಲ್ಡಾನ್ಹಾ, ಫೆಲಿಕ್ಸ್ ಡಿಕ್ರೂಜ್, ಅಲ್ವಿನ್ ಪಿ. ಮೊಂತೇರೊ ಹಾಗೂ ಮಹಾಪ್ರಬಂಧಕ ಸುನಿಲ್ ಮಿನೇಜಸ್ ಉಪಸ್ಥಿತರಿದ್ದರು.

ನಿರ್ದೇಶಕ ರೋಶನ್ ಡಿ'ಸೋಜಾ ಸ್ವಾಗತಿಸಿದರು. ಶೈನಿ ವಿಭಾ ಡಿ'ಸೋಜಾ ಕಾರ್ಯಕ್ರಮ ನಿರೂಪಿಸಿದರು. ಎಂಸಿಸಿ ಬ್ಯಾಂಕ್‌ನ ಇತಿಹಾಸ ಮತ್ತು ಸಾಧನೆಗಳನ್ನು ಪರಿಚಯಿಸುವ ಸಾಕ್ಷ್ಯಚಿತ್ರ ಪ್ರದರ್ಶಿಸಲಾಯಿತು. ನೂತನ ದೇರಳಕಟ್ಟೆ ಶಾಖೆಯ ವ್ಯವಸ್ಥಾಪಕಿ ಜೂಲಿಯೆಟ್ ಡಿ'ಸೋಜಾ ವಂದನಾರ್ಪಣೆ ಸಲ್ಲಿಸಿದರು.

ಮುಂಬರುವ ಶತಮಾನ ಭಾರತೀಯ ಶತಮಾನ



• **ಬೆಳಗಾವಿ:** ಭಾರತವು ತನ್ನ ಭವ್ಯ ದಾರ್ಶನಿಕ ಪರಂಪರೆ ಮತ್ತು ಸಾಂಸ್ಕೃತಿಕ ಮರು ಜಾಗೃತಿಯ ಮೂಲಕ ಇಡೀ ಜಗತ್ತಿಗೆ ಮಾರ್ಗದರ್ಶನ ನೀಡಲಿದ್ದು, ಮುಂಬರುವ ಶತಮಾನವು 'ಭಾರತೀಯ ಶತಮಾನ'ವಾಗಿ ಮಾನ್ಯತೆ ಪಡೆಯಲಿದೆ ಎಂದು ಕೇಂದ್ರ ಸಾಂಸ್ಕೃತಿಕ ಹಾಗೂ ಪ್ರವಾಸೋದ್ಯಮ ಇಲಾಖೆ ಸಚಿವ ಗಜೇಂದ್ರ ಸಿಂಗ್ ಶೇಖಾವತ್ ಹೇಳಿದರು.

ಸೋಮವಾರ ನಗರದ ಗೋಗಟೆ ಕಾಲೇಜಿನ ಕೆ.ಕೆ. ಗೋಣುಗೋಪಾಲ ಸಭಾಂಗಣದಲ್ಲಿ ಆಯೋಜಿಸಲಾಗಿದ್ದ ಬೆಳಗಾವಿಯ ಗುರುದೇವ ರಾನಡೆ ಮಂದಿರದ ತುಲನಾತ್ಮಕ ತತ್ವಶಾಸ್ತ್ರ, ಧಾರ್ಮಿಕ ಅಕಾಡೆಮಿಯ ಶತಮಾನೋತ್ಸವ ಉದ್ಘಾಟನೆ, ಗುರುದೇವ ರಾನಡೆ ಅವರ ಸಂಪೂರ್ಣ ಬರಹಗಳನ್ನೊಳಗೊಂಡ 28 ಸಂಪುಟಗಳ ಮಹಾಗ್ರಂಥಗಳನ್ನು ಲೋಕಾರ್ಪಣೆಗೊಳಿಸಿ ಅವರು ಮಾತನಾಡಿದರು.

ಸತ್ಯದರ್ಶನದ ಪುನರ್ ಪ್ರತಿಪಾದನೆ: ಜಗತ್ತು ಇಂದು ಭಾರತವನ್ನು ಹೊಸ ದೃಷ್ಟಿಕೋನ, ಆಶಾಭಾವನೆ ಮತ್ತು ಗೌರವದಿಂದ ನೋಡುತ್ತಿದೆ. ಇಂತಹ ಸಂದರ್ಭದಲ್ಲಿ ಗುರುದೇವ ರಾನಡೆ ಅವರ ಕೃತಿಗಳು ಲೋಕಾರ್ಪಣೆಗೊಳ್ಳುತ್ತಿರುವುದು ಕೇವಲ ಗ್ರಂಥಗಳ ಬಿಡುಗಡೆಯಲ್ಲ. ಬದಲಿಗೆ ಇದು ಸತ್ಯದರ್ಶನದ ಅನುಭೂತಿ ಹಾಗೂ ವಿಚಾರ ಪರಂಪರೆಯ ಪುನರ್ ಪ್ರತಿಪಾದನೆಯಾಗಿದೆ ಎಂದು ಅಭಿಪ್ರಾಯಪಟ್ಟರು.

ಆರ್‌ಎಸ್‌ಎಸ್‌ನ ಉತ್ತರ ಪ್ರಾಂತದ ಕಾರ್ಯಕಾರಿಣಿ ಸದಸ್ಯ ಅರವಿಂದರಾವ್ ದೇಶಪಾಂಡೆ ಮಾತನಾಡಿ, ಸಮಾಜದಲ್ಲಿ ಇಂದು ಅಧ್ಯಾತ್ಮ ಹಾಗೂ ನೈತಿಕತೆಗೆ ಬೆಂಬಲ ಸಿಗುವುದು ಅಪರೂಪವಾಗುತ್ತಿರುವ ಕಾಲದಲ್ಲೂ ರಾನಡೆ ಅಕಾಡೆಮಿ ಕಳೆದ ಹಲವಾರು ವರ್ಷಗಳಿಂದ ಶ್ಲಾಘನೀಯ ಕೆಲಸ ಮಾಡುತ್ತಿದೆ. ಆಧ್ಯಾತ್ಮಿಕ ದೃಷ್ಟಿಯಲ್ಲಿ ರಾನಡೆ ಅವರು ಮೇರು ಸದೃಶ್ಯ ವ್ಯಕ್ತಿತ್ವ ಹೊಂದಿದವರು ಎಂದರು. ಮಾಜಿ ರಾಜ್ಯಸಭಾ ಸದಸ್ಯ ಈರಣ್ಣ ಕಡಾಡಿ, ದೀನ್ ದಯಾಳ್ ಉಪಾಧ್ಯಾಯ ಸಂಶೋಧನಾ ಸಂಸ್ಥೆ ನಿರ್ದೇಶಕರು ಅತುಲ್ ಜೈನ್, ನವದೆಹಲಿ ಡಾ.ಸಿ.ಎಂ.ತ್ಯಾಗರಾಜ್, ಡಾ.ವಿಷ್ಣುಕಾಂತ್ ಚಟ್ಟಪಲ್ಲಿ, ಡಾ.ಆನಂದ ದೇಶಪಾಂಡೆ, ವಿವಿಧ ವಿವಿ ಕುಲಪತಿಗಳು, ಸುಧೀಂದ್ರ ಗಣಾಚಾರಿ, ರಾಜೇಂದ್ರ ದೇಸಾಯಿ ಇದ್ದರು.

> ಇಂದಿನ ಡಿಜಿಟಲ್ ಹಾಗೂ ಕೃತಕ ಬುದ್ಧಿಮತ್ತೆಯ ಯುಗದಲ್ಲಿ ಮನುಷ್ಯನ ಆತ್ಮಶೋಧದ ಪ್ರಶ್ನೆ ಅತ್ಯಂತ ಮುಖ್ಯವಾಗಿದೆ. ಇದಕ್ಕೆ ಗುರುದೇವ ರಾನಡೆ ಅವರ ಕೃತಿಗಳು ಮರು ಜಾಗೃತಿ ಮೂಡಿಸಲಿವೆ.
> ■ ಗಜೇಂದ್ರ ಸಿಂಗ್ ಶೇಖಾವತ್, ಕೇಂದ್ರ ಸಚಿವ

- ಗುರುದೇವ ರಾನಡೆ ಅಕಾಡೆಮಿ ಶತಮಾನೋತ್ಸವ
- 28 ಸಂಪುಟಗಳ ಕೃತಿ ಲೋಕಾರ್ಪಣೆ
- ಕೇಂದ್ರ ಸಚಿವ ಗಜೇಂದ್ರ ಸಿಂಗ್ ಶೇಖಾವತ್ ಭಾಗಿ

ವಕಾಲತ್ತು ವಹಿಸದಿರಲು ನಿರ್ಧಾರ

ಪುಟ ೧➔**ಆರೋಪಿಗಳಿಗೆ ಮತ್ತೆರಡು ವಾರ ನ್ಯಾಯಾಂಗ ಬಂಧನ:** ಕಳೆದ ವಾರ ಬಂಧಿತರಾದ ಅವಿನಾಶ್ ಶುಕ್ಲಾ, ಅನುಕಲ್ಪ್ ಮಿಶ್ರಾ, ಲವ್ ಕುಶ್ ಮಿಶ್ರಾ, ಮನೀಶ್ ಕುಮಾರ್ ಯಾದವ್ ಸೇರಿದಂತೆ ಎಂಟು ಮಂದಿಯನ್ನು ವಿಡಿಯೊ ಕಾನ್ಫರೆನ್ಸ್ ಮೂಲಕ ವಿಶೇಷ ಭ್ರಷ್ಟಾಚಾರ ನ್ಯಾಯಾಲಯದ ಮುಂದೆ ಹಾಜರುಪಡಿಸಲಾಯಿತು. ಪೊಲೀಸರು ಹೆಚ್ಚಿನ ಕಸ್ಟಡಿಯನ್ನು ಕೋರದ ಹಿನ್ನೆಲೆಯಲ್ಲಿ ನ್ಯಾಯಾಲಯವು ಅವರನ್ನು ಇನ್ನೂ ಎರಡು ವಾರ ಕಾಲ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದೆ.

> ಇದು ಹಿಂದು ಸಮಾಜದ ಆಕ್ರೋಶಕ್ಕೆ ಸಾಕ್ಷಿ. ಧರ್ಮಕ್ಕೆ ವಿರುದ್ಧವಾಗಿ ನಡೆವವರು, ದ್ರೋಹ ಎಸಗುವವರನ್ನು ಹಿಂದು ಸಮಾಜ ಕ್ಷಮಿಸುವುದಿಲ್ಲ ಎಂಬ ಶಕ್ತಿಶಾಲಿ ಸಂದೇಶವನ್ನು ಹಿಂದು ಸಮಾಜ ಆಪಾದಿತರಿಗೆ ನೀಡಿದೆ.
> ■ ಪ್ರದೀಪ್ ಭಂಡಾರಿ, ಬಿಜೆಪಿ ರಾಷ್ಟ್ರೀಯ ವಕ್ತಾರ

5.50 ಕೋಟಿ ಜನರ ಮನೆಗಳಿಗೆ ಹೋಗಿ ಸಹಾಯ: ಮುಖ್ಯಮಂತ್ರಿ

ರಾಜ್ಯದಲ್ಲಿ ವಿಶೇಷ ಮತದಾರರ ಪಟ್ಟಿ ಪರಿಷ್ಕರಣೆ ಹಿನ್ನೆಲೆ ಮುಖ್ಯಮಂತ್ರಿ ಡಿ.ಕೆ ಶಿವಕುಮಾರ್ ಸುದ್ದಿಗೋಷ್ಠಿ

• **ಬೆಂಗಳೂರು:** ರಾಜ್ಯದಲ್ಲಿ ವಿಶೇಷ ಮತದಾರರ ಪಟ್ಟಿ ಪರಿಷ್ಕರಣೆ ಹಿನ್ನೆಲೆಯಲ್ಲಿ 5.50 ಕೋಟಿ ಜನರಿಗೆ ಮನೆ ಮನೆಗೆ ಹೋಗಿ ಸಹಾಯ ಮಾಡಲು ಸರ್ಕಾರ ತೀರ್ಮಾನಿಸಿದೆ ಎಂದು ಮುಖ್ಯಮಂತ್ರಿ ಡಿ.ಕೆ ಶಿವಕುಮಾರ್ ತಿಳಿಸಿದರು.

ವಿಧಾನಸೌಧದಲ್ಲಿ ಸೋಮವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಸಾರ್ವಜನಿಕರಿಗೆ ಕಂದಾಯ ಇಲಾಖೆ ವತಿಯಿಂದ ಶಾಶ್ವತ ನಿವಾಸ ಪ್ರಮಾಣಪತ್ರ ನೀಡಲು ಉಪ ತಹಸೀಲ್ದಾರ್ ಅವರಿಗೆ ಅಧಿಕಾರ ನೀಡಿ ಆದೇಶ ಹೊರಡಿಸಲಾಗಿದೆ. ಪ್ರತಿ ಗ್ರಾಮ ಪಂಚಾಯತ್ ಹಾಗೂ ವಾರ್ಡ್‌ಗಳಲ್ಲಿ ಸಹಾಯ ಕೇಂದ್ರ ವ್ಯವಸ್ಥೆ ಮಾಡಲಾಗುತ್ತಿದೆ ಎಂದು ಮಾಹಿತಿ ಹಂಚಿಕೊಂಡರು.

ರಾಜ್ಯದಲ್ಲಿ ಒಟ್ಟು 49,320 ಸಹಾಯ ಕೇಂದ್ರಗಳನ್ನು ಸ್ಥಾಪಿಸಲಾಗುವುದು. ಅಗತ್ಯ ದಾಖಲೆ ಡೌನ್ಲೋಡ್ ಮಾಡಿಕೊಳ್ಳಲು ಅವಕಾಶ ಮಾಡಿಕೊಡಲಾಗುತ್ತಿದೆ. ಯಾರೆಲ್ಲಾ ಜಾತಿ ಪ್ರಮಾಣಪತ್ರದಲ್ಲಿ ದೂರವಾಣಿ ಸಂಖ್ಯೆ ಸರಿಯಾಗಿ ನೀಡಿದ್ದೀರಿ ಅವರು ವಾಟ್ಸ್‌ಆ್ಯಪ್ ಮೂಲಕ ಡೌನ್ಲೋಡ್ ಮಾಡಿಕೊಳ್ಳಬಹುದು ಎಂದು ವಿವರಿಸಿದರು.

ರಾಜಕೀಯ ಪಕ್ಷಗಳಿಂದ ನೇಮಕಗೊಂಡಿರುವ ಬಿಎಲ್‌ಎಗಳು ಕೂಡ ನಿಮಗೆ ಈ ಅರ್ಜಿ ಸಲ್ಲಿಕೆಯಲ್ಲಿ ನೆರವು ನೀಡಬಹುದು. ಸರ್ಕಾರ ಈಗಾಗಲೇ 5.50 ಕೋಟಿ ಜನರಿಗೆ ಈಗಾಗಲೇ ಜಾತಿ ಪ್ರಮಾಣಪತ್ರ ಅಧಿಕೃತವಾಗಿ ನೀಡಿರುವ ದಾಖಲೆ ನಮ್ಮ ಬಳಿ ಇದೆ. ಇದರಲ್ಲಿ 2,54,95,767 ಹಿಂದುಳಿದ ವರ್ಗದ ಪ್ರಮಾಣಪತ್ರ, 2,94,51,027 ಎಸ್‌ಸಿ ಹಾಗೂ ಎಸ್‌ಟಿ ಪ್ರಮಾಣಪತ್ರ ವಿತರಿಸಲಾಗಿದೆ. ಇವುಗಳನ್ನು ಡೌನ್ಲೋಡ್ ಮಾಡಿಕೊಳ್ಳಲು ಅವಕಾಶವಿದೆ ಎಂದು ತಿಳಿಸಿದರು.

ಮತದಾನದ ಹಕ್ಕು ಕಳೆದುಕೊಳ್ಳುವವರು ಮುಂದೆ ಸರ್ಕಾರದ ಸೌಲಭ್ಯ ಸಿಗುವುದಿಲ್ಲ. ಪಶ್ಚಿಮ ಬಂಗಾಳದಲ್ಲಿ ಪಡಿತರ ಹಂಚಿಕೆಯಲ್ಲಿ ಮತದಾರರಿಗೆ ಮಾತ್ರ ನೀಡಲಾಗುತ್ತಿದೆ. ಇದೇ ರೀತಿ ಬೇರೆ ರಾಜ್ಯಗಳಲ್ಲೂ ಆದೇಶ ಹೊರಡಿಸಲಾಗಿದೆ. ನೀವು ಮುಂದಿನ ದಿನಗಳಲ್ಲಿ ಮತದಾನದ ಹಕ್ಕು ಉಳಿಸಿಕೊಳ್ಳದಿದ್ದರೆ ಗ್ಯಾರಂಟಿ ಯೋಜನೆಗಳು ಸೇರಿದಂತೆ ಪಿಂಚಣಿ ಹಾಗೂ ರಾಜ್ಯ ಸರ್ಕಾರದ ಇತರೆ ಯೋಜನೆಗಳು ಪಡೆಯಲು ತೊಂದರೆ ಆಗಲಿದೆ ಎಂದರು.

ಕಿಡಿ ನುಡಿ

• ವಾಸುದೇವರಾವ್ ಕಕ್ಕೆನೇಜಿ

◈ ಮತದಾರ ಪಟ್ಟಿ ಪರಿಷ್ಕರಣೆಗೆ ಒಂದು ವರ್ಷ, ಆರು ಕೋಟಿ ಹೆಸರು ಡಿಲೀಟ್
– ಪತ್ರಿಕೆಗಳಲ್ಲಿ ಸುದ್ದಿ ಶೀರ್ಷಿಕೆ
– ಅಂದರೆ ಅಷ್ಟು ಮಂದಿ ಮತದಾರರಲ್ಲದ ಮತದಾರರು ಅಂದಿನಿಂದ ಇಂದಿನವರೆಗೆ ಮತದಾನ ಮಾಡಿದ್ದಾರೆ ಅಂತ ತಾನೆ? ಇದೇ ನಿಜವಾದ ಮತ ಚೋರಿ!

ದಿನ ಭವಿಷ್ಯ

ಮೇಷ
ಕ್ಷುಲ್ಲಕ ವಿಷಯ ಜಟಿಲಗೊಳಿಸಿ ಸಮಸ್ಯೆಗೆ ಸಿಲುಕುವಿರಿ. ಸಂತೋಷ ಪಡಲು ನಿಮ್ಮ ಮನಸ್ಥಿತಿ ಬದಲಿಸುವುದೂ ಅಗತ್ಯ. ಜಗಳಕ್ಕೆ ಹೋಗಬೇಡಿ.

ವೃಷಭ
ನಿಮ್ಮ ಉತ್ತಮ ನಿರ್ವಹಣೆಗೆ ಸೂಕ್ತ ಪ್ರತಿಫಲ ಸಿಗಲಿದೆ. ಸಂತಾನ ಅಪೇಕ್ಷಿತರಿಗೆ ಶುಭಪ್ರದ ಬೆಳವಣಿಗೆ. ಆದಾಯ ಹೆಚ್ಚಳ.

ಮಿಥುನ
ಖರ್ಚು ನಿಮ್ಮ ಮಿತಿಯೊಳಗಿರಲಿ. ವ್ಯವಹಾರದಲ್ಲಿ ಯಶಸ್ಸು. ಪ್ರೇಮಿಯಿಂದ ಪೂರಕ ಸ್ಪಂದನ. ಬಾಂಧವ್ಯ ವೃದ್ಧಿಗೆ ಅವಕಾಶ.

ಕಟಕ
ವೃತ್ತಿಯಲ್ಲಿ ಪ್ರಗತಿ. ಬಾಕಿ ಉಳಿದ ಕಾರ್ಯ ಪೂರ್ಣ. ಹೊಸ ಉದ್ಯೋಗಾವಕಾಶ. ಪ್ರೀತಿಯಲ್ಲೂ ಪೂರಕ ಬೆಳವಣಿಗೆ.

ಸಿಂಹ
ನೀವು ಅಚ್ಚರಿಪಡುವ ಬೆಳವಣಿಗೆ ಉಂಟಾದೀತು. ವೃತ್ತಿಯಲ್ಲಿ ಕಿರುಕುಳ ಎದುರಿಸುವಿರಿ. ಕುಟುಂಬ ಸಂಬಂಧ ಬಲಗೊಳಿಸಿ. ಭಾವುಕತೆ ನಿಯಂತ್ರಿಸಿ.

ಕನ್ಯಾ
ಮನೆಗೆ ಸಂಬಂಧಿಸಿ ಪ್ರಮುಖ ನಿರ್ಧಾರ ತಾಳಬೇಕಾದೀತು. ಆರ್ಥಿಕ ಪ್ರಗತಿ. ಅನಾರೋಗ್ಯ ನಿವಾರಣೆ. ಹಳೆ ಸ್ನೇಹಿತರ ಸಂಪರ್ಕದಿಂದ ಖುಷಿ.

ತುಲಾ
ನಿಮ್ಮ ಧೋರಣೆಗೆ ಕೆಲವರ ಅತೃಪ್ತಿ. ಇದರಿಂದ ಇರಿಸುಮುರಿಸು ಉಂಟಾಗುವ ಪ್ರಸಂಗ. ಆತ್ಮೀಯರ ಸಂಗದಲ್ಲಿ ನಿರಾಳತೆ.

ವೃಶ್ಚಿಕ
ದಿನವಿಡೀ ಉತ್ಸಾಹ. ಹೊಣೆಗಾರಿಕೆ ಮುಗಿದು ನಿರಾಳತೆಯ ಭಾವ. ಬಯಸಿದ ಗುರಿ ಸಾಧಿಸುವಿರಿ. ಆದಾಯದಲ್ಲಿ ಹೆಚ್ಚಳ.

ಧನು
ಚಿಂತೆ ತಂದಿದ್ದ ವಿಷಯ ಇತ್ಯರ್ಥ. ಆತ್ಮವಿಶ್ವಾಸ ಹೆಚ್ಚಿಸುವ ಪ್ರಸಂಗ. ಆರ್ಥಿಕ ವ್ಯವಹಾರದಲ್ಲಿ ಲಾಭ. ಕೌಟುಂಬಿಕ ಸೌಹಾರ್ದ.

ಮಕರ
ಯಾರದೋ ಮಾತು ಮನಸ್ಸು ಕೆಡಿಸಬಹುದು. ಅಂತಹ ಮಾತಿಗೆ ಅಸ್ಪದ ಕೊಡದಂತೆ ವರ್ತಿಸಿರಿ. ದೌರ್ಬಲ್ಯಕ್ಕೆ ಸುಲಭ ಬಲಿಯಾಗಬೇಡಿ.

ಕುಂಭ
ಆದಾಯದಲ್ಲಿ ಹೆಚ್ಚಳ. ಆಪ್ತರ ಜತೆಗಿನ ಭಿನ್ನಮತ ಸುಗಮ ಪರಿಹಾರ. ಕಠಿಣ ಕಾರ್ಯ ಇಂದು ಕೈಗೆತ್ತಿಕೊಳ್ಳಬೇಡಿ. ಕಾದುನೋಡಿರಿ.

ಮೀನ
ವೃತ್ತಿ ಒತ್ತಡ ಅಧಿಕವಿದ್ದರೂ ಕುಟುಂಬದ ಸಂಗಡ ಆತ್ಮೀಯ ಕಾಲ ಕಳೆಯುವ ಅವಕಾಶವೂ ಸಿಗಲಿದೆ. ಆರ್ಥಿಕ ಒತ್ತಡ.

ರಾಹುಕಾಲ: 3.00– 4.30
ಗುಳಿಕಕಾಲ: 12.00–1.30
ಅದೃಷ್ಟ ಸಂಖ್ಯೆ: 4,9,2,6

ಎಲ್‌ನಿನೊ ತಂದ ಆತಂಕ | ಮುಂಗಾರು ಹಂಗಾಮಿನಲ್ಲಿ ಶೇ.30 ಮಾತ್ರ ಬಿತ್ತನೆ

ರಾಜ್ಯದಲ್ಲಿ ಬರದ ಕರಾಳ ಛಾಯೆ

▸ ವೀರಣ್ಣ ಬಳಿಗಾರ

ದಿಗಂತ ವಿಶೇಷ

• **ಬೆಂಗಳೂರು:** ಎಲ್‌ನಿನೊ ಪ್ರಭಾವದಿಂದಾಗಿ ಮುಂಗಾರು ಮಳೆ ಗಣನೀಯವಾಗಿ ಇಳಿಕೆಯಾಗಿದ್ದು, ರಾಜ್ಯದಲ್ಲಿ ಬರಗಾಲದ ಛಾಯೆ ಆವರಿಸಿದೆ. ಬೆಳೆ ನಷ್ಟದ ಆತಂಕ ಹೆಚ್ಚಾಗಿದೆ. ಕೇವಲ ಶೇ.30ರಷ್ಟು ಮಾತ್ರ ಮುಂಗಾರು ಹಂಗಾಮಿನ ಬಿತ್ತನೆಯಾಗಿದೆ.

ಮುಂಗಾರು ಹಂಗಾಮಿಗೆ ನಿಗದಿಪಡಿಸಿರುವ 84.10 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಕೇವಲ ಶೇ.30ರಷ್ಟು ಮಾತ್ರ ಬಿತ್ತನೆಯಾಗಿದೆ. ಕಳೆದ ವರ್ಷದ ಇದೇ ಅವಧಿಯಲ್ಲಿ ಈ ಪ್ರಮಾಣ ಶೇ.42 ರಷ್ಟು ಇತ್ತು. ರಾಜ್ಯದಲ್ಲಿ ಇದುವರೆಗೆ ಸಾಮಾನ್ಯಕ್ಕಿಂತ ಶೇ.43 ರಷ್ಟು ಕಡಿಮೆ ಮಳೆ ದಾಖಲಾಗಿದೆ. ಮಳೆ ಆಧಾರಿತ ಪ್ರದೇಶಗಳಲ್ಲಿ ಬಿತ್ತನೆ ಮಾಡಿದ ಅಲ್ಪಾವಧಿಯ ಮುಂಗಾರು ಬೆಳೆಗಳು ಈಗಾಗಲೇ ಹಾನಿಯ ಅಂಚಿನಲ್ಲಿವೆ.

ಮೇ ಅಂತ್ಯ, ಜೂನ್ ಆರಂಭದಲ್ಲಿ ಸಾಧಾರಣ ಮಳೆ ಆಗಿದ್ದರಿಂದ ರೈತರು ಬಿತ್ತನೆ ಮಾಡಿದ್ದು, ಕೃಷಿ ಇಲಾಖೆಯ ಮಾಹಿತಿ ಪ್ರಕಾರ, ಧಾರವಾಡ, ಗದಗ, ಹಾವೇರಿ, ಬೆಳಗಾವಿ ಮತ್ತು ಬಾಗಲಕೋಟೆ ಜಿಲ್ಲೆಗಳು ಮಾತ್ರ ಬಿತ್ತನೆ ಗುರಿಯನ್ನು ಶೇ.60 ಕ್ಕಿಂತ ಹೆಚ್ಚು ಸಾಧಿಸಿವೆ, ಆದರೂ ಸಮರ್ಪಕ ಮಳೆಯಿಲ್ಲದ ಕಾರಣ ಬೆಳೆಗಳು ಒಣಗುತ್ತಿವೆ. ವಾರದೊಳಗೆ ಮಳೆ ಬಾರದಿದ್ದರೆ ಬೆಳೆ ನಷ್ಟವನ್ನು ಎದುರಿಸುವ ಸಾಧ್ಯತೆ ಇದೆ.

ಕರಾವಳಿ ಮತ್ತು ಮಲೆನಾಡು ಪ್ರದೇಶಗಳಲ್ಲಿ ಕ್ರಮವಾಗಿ ಶೇ.41 ಮತ್ತು ಶೇ.36ರಷ್ಟು ಮಳೆ ಕೊರತೆಯಾಗಿದ್ದು, ಉತ್ತರ ಒಳನಾಡಿನ 13 ಜಿಲ್ಲೆಗಳಲ್ಲಿ ಮಳೆ ಕೊರತೆ ಶೇ.78 ರಿಂದ ಶೇ.99 ರವರೆಗೆ ದಾಖಲಾಗಿದೆ.

ಕಲಬುರಗಿ ಮತ್ತು ರಾಯಚೂರು ಜಿಲ್ಲೆಗಳಲ್ಲಿ ಶೇ.12.86 ರಿಂದ ಶೇ.30 ರಷ್ಟು ಮಾತ್ರ ಬಿತ್ತನೆ ಪೂರ್ಣಗೊಂಡಿದೆ. ಮೈಸೂರು ಜಿಲ್ಲೆಯಲ್ಲಿ ಇದುವರೆಗೆ ಕೇವಲ ಶೇ.41 ರಷ್ಟು ಬಿತ್ತನೆ ಮಾತ್ರ ನಡೆದಿದೆ.

ಮುಂದಿನ ಒಂದು ವಾರದೊಳಗೆ ಉತ್ತಮ ಮಳೆಯಾದರೆ ಕನಿಷ್ಠ ಶೇ.50 ರಷ್ಟು ಬೆಳೆಗಳನ್ನು ಉಳಿಸಬಹುದು. ಇಲ್ಲದಿದ್ದರೆ ರೈತರು ಮರುಬಿತ್ತನೆ ಮಾಡಬೇಕಾದ ಪರಿಸ್ಥಿತಿ ಎದುರಾಗಬಹುದು ಎಂದು ಕೃಷಿ ತಜ್ಞರು ತಿಳಿಸಿದ್ದಾರೆ. ಕಳೆದ ವರ್ಷ ಮುಂಗಾರು ಆರಂಭದ ಮೊದಲ 10 ದಿನಗಳಲ್ಲಿ ಮಳೆ ಕೊರತೆಯಿದ್ದರೂ, ನಂತರ ಉತ್ತಮ ಮಳೆಯಾಗಿ 852 ಮಿ.ಮೀ. ಸಾಮಾನ್ಯ ಮಳೆಗಿಂತ 882 ಮಿ.ಮೀ. ಮಳೆ ದಾಖಲಾಗಿತ್ತು.

ಜಲಾಶಯಗಳಲ್ಲಿ ನೀರಿನ ಪ್ರಮಾಣ ಇಳಿಕೆ: ಮುಂಗಾರು ಮಳೆ ಕೊರತೆಯಿಂದ ರಾಜ್ಯದ 14 ಪ್ರಮುಖ ಜಲಾಶಯಗಳಲ್ಲಿನ ನೀರಿನ ಪ್ರಮಾಣ ವೇಗವಾಗಿ ಕುಸಿಯುತ್ತಿದೆ. ಒಟ್ಟು 896 ಟಿಎಂಸಿ ಅಡಿ ಸಂಗ್ರಹ ಸಾಮರ್ಥ್ಯವಿರುವ ಜಲಾಶಯಗಳಲ್ಲಿ ಸುಮಾರು 206 ಟಿಎಂಸಿ ಅಡಿ ನೀರು ಮಾತ್ರ ಸಂಗ್ರಹವಿದೆ. ಕಳೆದ ವರ್ಷಕ್ಕೆ ಹೋಲಿಸಿದರೆ ಜಲಾಶಯಗಳಿಗೆ ಹರಿದು ಬರುವ ನೀರಿನ ಪ್ರಮಾಣ ಕಡಿಮೆಯಾಗಿದೆ. ರಾಜ್ಯದ ಜಲಾಶಯಗಳಲ್ಲಿ ಒಟ್ಟು ಸಾಮರ್ಥ್ಯದ ಕೇವಲ 23 ರಷ್ಟು ನೀರು ಮಾತ್ರ ಉಳಿದಿದೆ.


ಸರ್ಕಾರದಿಂದ ಮುಂಜಾಗೃತ ಕ್ರಮ: ಮುಂಗಾರು ಮಳೆ ಕ್ಷೀಣಿಸಿದ ಹಿನ್ನೆಲೆಯಲ್ಲಿ ರಾಜ್ಯ ಸರ್ಕಾರ ಮುಂಜಾಗ್ರತೆ ವಹಿಸಿದ್ದು, ಬರ ನಿರ್ವಹಣೆಗೆ ಈಗಾಗಲೇ ಜಿಲ್ಲೆಗಳ ಮೇಲುಸ್ತುವಾರಿಯನ್ನು ಸಚಿವರಿಗೆ ವಹಿಸಲಾಗಿದ್ದು, ಸಿಎಂ ಡಿ.ಕೆ ಶಿವಕುಮಾರ್ ಅಧಿಕಾರಿಗಳ ಜತೆಗೆ ಸಭೆ ನಡೆಸಿದ್ದಾರೆ.

ಬರ ಪರಿಸ್ಥಿತಿ ಎದುರಿಸಲು ತುರ್ತು ಕ್ರಮಗಳ ಪೂರ್ವಸಿದ್ಧತೆಗೆ ಕಟ್ಟಪ್ಪಣೆ ನೀಡಿದ್ದು, ಅತಿವೃಷ್ಟಿ, ಅನಾವೃಷ್ಟಿ ಎದುರಿಸಲು ಸನ್ನದ್ಧರಾಗುವಂತೆ ಕರೆ ನೀಡಿದ್ದಾರೆ.

ಮಳೆ ಆಶ್ರಿತ ಪ್ರದೇಶಗಳಲ್ಲಿ ಬಿತ್ತನೆ

ಬೆಳೆ	2025	2026	ಬಿತ್ತನೆ ಗುರಿ
ಭತ್ತ	0.62	0.67	2.38
ಜೋಳ	0.22	0.16	0.51
ರಾಗಿ	0.02	0.02	7.88
ಮೆಕ್ಕೆಜೋಳ	7.67	4.93	13.09
ತೊಗರಿ	4.60	2.22	14.63
ಉದ್ದು	0.64	0.44	0.74
ಹೆಸರುಕಾಳು	3.43	3.01	4.34
ಅವರೆ	0.53	0.02	0.23
ಇತರೆ	0.58	0.71	2.49
ಒಟ್ಟು	18.31	12.18	46.29

> ಎಲ್‌ನಿನೊ ಪ್ರಭಾವ ದೀರ್ಘಕಾಲ ಇರಲಿದ್ದು, ಜುಲೈ 1 ರಿಂದ ರಾಜ್ಯದಲ್ಲಿ ಮಳೆಯಾಗುವ ಸಾಧ್ಯತೆ ಇದೆ. ಆದರೆ ಕಳೆದ ವರ್ಷಕ್ಕಿಂತ ಮಳೆ ಪ್ರಮಾಣ ಕಡಿಮೆಯಾಗಲಿದೆ.
> ■ ಸಿ.ಎಸ್. ಪಾಟೀಲ, ಹವಮಾನ ಇಲಾಖೆಯ ಹಿರಿಯ ವಿಜ್ಞಾನಿ



ಇಂದಿನಿಂದ ಎಸ್‌ಐಆರ್

ಪುಟ ೧➔ಈಗಾಗಲೇ ಶೇ.91.61 ಮ್ಯಾಪಿಂಗ್ ಮಾಡಲಾಗಿದೆ. ಮನೆ–ಮನೆಗೆ ಭೇಟಿ ನೀಡುವ ಪ್ರಕ್ರಿಯೆಯಲ್ಲಿ ಬಿಎಲ್‌ಒಗಳು ತಮಗೆ ನಿಯೋಜಿಸಲಾದ ಮತಗಟ್ಟೆ ವ್ಯಾಪ್ತಿಯಲ್ಲಿರುವ ಪ್ರತಿ ಮನೆಗೂ ಖುದ್ದಾಗಿ ಭೇಟಿ ನೀಡಿ, ಹೆಸರಿರುವ ಎಲ್ಲಾ ಮತದಾರರಿಗೆ ಗಣತಿ ನಮೂನೆಗಳನ್ನು ವಿತರಿಸುತ್ತಾರೆ. ಗಣತಿ ನಮೂನೆಗಳನ್ನು ಭರ್ತಿ ಮಾಡಿ ಸಹಿ ಮಾಡಿದ ನಂತರ, ಹೆಚ್ಚಿನ ಪ್ರಕ್ರಿಯೆ ಮತ್ತು ಡಿಜಿಟಲೀಕರಣಕ್ಕಾಗಿ ಬೂತ್ ಮಟ್ಟದ ಅಧಿಕಾರಿಗಳು ಅವುಗಳನ್ನು ಸಂಗ್ರಹಿಸುತ್ತಾರೆ. ವಿತರಣಾ ಪ್ರಕ್ರಿಯೆಯ ಸಮಯದಲ್ಲಿ, ಸ್ಟಿಕರ್ ಅಂಟಿಸಲಾಗುತ್ತದೆ. ಭರ್ತಿ ಮಾಡಿದ ಗಣತಿ ನಮೂನೆಗಳನ್ನು ಸಂಗ್ರಹಿಸಲು ಬೂತ್ ಮಟ್ಟದ ಅಧಿಕಾರಿಗಳು ಅಗತ್ಯವಿರುವಲ್ಲಿ ಮನೆಗಳಿಗೆ ಕನಿಷ್ಠ 3 ಬಾರಿ ಭೇಟಿ ನೀಡುತ್ತಾರೆ ಎಂದು ಅನ್ಬುಕುಮಾರ್ ವಿವರಿಸಿದರು.

ಎಸ್‌ಐಆರ್ ಪ್ರಕ್ರಿಯೆ ಸಂಪೂರ್ಣ ಪಾರದರ್ಶಕ

ಪುಟ ೧➔**ಈ ಎಲ್ಲಾ ಪ್ರಕ್ರಿಯೆಯ ಮಾಹಿತಿಯನ್ನು ಎಲ್ಲಾ ರೀತಿಯ ಸಾಮಾಜಿಕ ವೇದಿಕೆಯಲ್ಲಿ, ಮತದಾರರ ಗಮನಕ್ಕೆ ತಂದೇ ಮಾಡಲಾಗುವುದು ಎಂದು ಅನ್ಬುಕುಮಾರ್ ತಿಳಿಸಿದರು. ಕರಡು ಮತದಾರ ಪಟ್ಟಿ ಬಿಡುಗಡೆಯ ನಂತರ ಅನುಮಾನಗಳಿದ್ದರೆ ಮತದಾರನಿಗೆ ನೋಟಿಸ್ ನೀಡಿ, ಗುರುತಿಸಲಾದ 12 ದಾಖಲೆಗಳಲ್ಲಿ ಪಡೆಯಲಾಗುತ್ತದೆ. ಗಣತಿ ನಮೂನೆಗಳನ್ನು ಭರ್ತಿ ಮಾಡಲು ಆನ್‌ಲೈನ್‌ನಲ್ಲೂ ವ್ಯವಸ್ಥೆ ಕಲ್ಪಿಸಲಾಗಿದ್ದು, ಆಯೋಗದ ಅಧಿಕೃತ ವೆಬ್‌ಸೈಟ್ voters.eci.gov.in ಅಥವಾ ECINET ಮೊಬೈಲ್ ಆ್ಯಪ್ ಮೂಲಕ ಭರ್ತಿ ಮಾಡಬಹುದಾಗಿದೆ ಎಂದು ಹೇಳಿದರು.**

ಮಾದರಿ ಚುನಾವಣೆ: ಭಾರತ ನಂ.1

ಪುಟ ೧➔ಈ ವ್ಯವಸ್ಥೆಯೇ ಭಾರತೀಯ ಚುನಾವಣಾ ಪ್ರಕ್ರಿಯೆಯನ್ನು ವಿಶ್ವದಲ್ಲೇ ಅತ್ಯಂತ ವಿಶ್ವಾಸಾರ್ಹ ಹಾಗೂ ಪಾರದರ್ಶಕವಾಗಿಸಿದೆ ಎಂದು ಅವರು ಹೇಳಿದರು.

ಬಿಎಲ್‌ಒಗಳಿಗೆ ಸಿಇಸಿ ಸಂದೇಶ: ಇದಕ್ಕೂ ಮೊದಲು ಶ್ರೀನಗರದಿಂದ ಸುಮಾರು 12 ಕಿ.ಮೀ. ದೂರದಲ್ಲಿರುವ ಬಡ್ಗಮ್ ಜಿಲ್ಲೆಯಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಬೂತ್ ಮಟ್ಟದ ಅಧಿಕಾರಿಗಳನ್ನು (ಬಿಎಲ್‌ಒ) ಉದ್ದೇಶಿಸಿ ಮಾತನಾಡಿದರು. ಚುನಾವಣಾ ವ್ಯವಸ್ಥೆಯ ಯಶಸ್ಸಿನಲ್ಲಿ ಬಿಎಲ್‌ಒಗಳ ಪಾತ್ರ ಅತ್ಯಂತ ಮಹತ್ವದ್ದಾಗಿದೆ ಎಂದು ಅವರು ಶ್ಲಾಘಿಸಿದರು. ಬಿಎಲ್‌ಒಗಳು ಪ್ರಜಾಪ್ರಭುತ್ವದ ಸ್ತಂಭಗಳಾಗಿದ್ದಾರೆ. ಮತದಾರರ ಮಾಹಿತಿಯನ್ನು ನಿಖರವಾಗಿ ನಿರ್ವಹಿಸುವುದರಿಂದ ಹಿಡಿದು ಚುನಾವಣಾ ಪ್ರಕ್ರಿಯೆಯ ಸುಗಮ ನಿರ್ವಹಣೆಯವರೆಗೆ ಅವರು ಪ್ರಮುಖ ಜವಾಬ್ದಾರಿಯನ್ನು ಹೊರುತ್ತಾರೆ ಎಂದು ಹೇಳಿದರು. ಜಮ್ಮು–ಕಾಶ್ಮೀರದ ಎಲ್ಲಾ ಮತದಾರರು, ಬಿಎಲ್‌ಒಗಳು, ಬಿಎಲ್‌ಒ ಮೇಲ್ವಿಚಾರಕರು, ಸಹಾಯಕ ಚುನಾವಣಾ ನೋಂದಣಿ ಅಧಿಕಾರಿಗಳು (ಎಇಆರ್‌ಒ), ಚುನಾವಣಾ ನೋಂದಣಿ ಅಧಿಕಾರಿಗಳು (ಇಆರ್‌ಒ) ಹಾಗೂ ಜಿಲ್ಲಾ ಚುನಾವಣಾಧಿಕಾರಿಗಳಿಗೆ ಶುಭಾಶಯ ತಿಳಿಸಿದರು.

ಹತ್ತನೇ ತರಗತಿ ಮಕ್ಕಳಿಗಿಲ್ಲ ತ್ರಿಭಾಷಾ ನೀತಿ: ಸಿಬಿಎಸ್‌ಇ

ಪುಟ ೧➔ಈಗಾಗಲೇ 2 ವಿದೇಶಿ ಭಾಷೆಗಳನ್ನು ಆಯ್ಕೆ ಮಾಡಿಕೊಂಡವರಿಗೆ ಅದನ್ನು ಮುಂದುವರಿಸಲು ಅವಕಾಶ ನೀಡಲಾಗುವುದು, ಆದರೆ ಒಂದು ಹೆಚ್ಚುವರಿ ಸ್ಥಳೀಯ ಭಾರತೀಯ ಭಾಷೆ ಅಧ್ಯಯನ ಮಾಡಬೇಕಾಗುತ್ತದೆ. ಸಿಬಿಎಸ್‌ಇ ಆದೇಶದ ವಿರುದ್ಧ ಹಲವು ವಿದ್ಯಾರ್ಥಿಗಳು ಮತ್ತು ಪೋಷಕರು ನ್ಯಾಯಾಲಯದ ಮೊರೆಹೋಗಿದ್ದರು ಈ ಬಗ್ಗೆ ಈಗ ಸಿಬಿಎಸ್‌ಇ ಶೈಕ್ಷಣಿಕ ನಿರ್ದೇಶಕ ಪ್ರಾಗ್ಯಾ ಎಂ. ಸಿಂಗ್ ಸ್ಪಷ್ಟನೆ ನೀಡಿದ್ದಾರೆ.

ಮಂಜೂರಾದ ಜಾಗ ಖಾಲಿ ಬಿಟ್ಟರೆ ಕ್ರಮ



ಪುಟ ೧➔**ತ್ವರಿತವಾಗಿ ಕ್ರಮ ವಹಿಸಲು ಸೂಚನೆ:** ಶರಾವತಿ ಪಂಪ್ ಸ್ಟೋರೇಜ್, ಗೋವಾ ತಮ್ನೇರ್, ಕಳಸಾ ಬಂಡೂರಿ ಮತ್ತು ಬಿಡಿಎ ಫೆರಿಫೆರಲ್ ರಿಂಗ್ ರಸ್ತೆ ವಿಚಾರಕ್ಕೆ ಸಂಬಂಧಿಸಿದಂತೆ ರಾಜ್ಯ ಮತ್ತು ಕೇಂದ್ರ ಅರಣ್ಯ ಇಲಾಖೆಗಳ ವಿವಿಧ ಹಂತಗಳಲ್ಲಿ ಬಾಕಿ ಇರುವ ಅರಣ್ಯ ಅನುಮತಿ ವಿಚಾರಗಳಲ್ಲಿ ತ್ವರಿತ ಗತಿಯಲ್ಲಿ ಕ್ರಮ ವಹಿಸುವಂತೆ ಸೂಚನೆ ನೀಡಿದರು.

ಬೆಳೆನಾಶ, ಜಾನುವಾರು ಜೀವಹಾನಿ, ಮಾನವ ಪ್ರಾಣ ಹಾನಿ, ಶಾಶ್ವತ ಅಂಗವಿಕಲತೆ, ಭಾಗಶಃ ಅಂಗವಿಕಲತೆ, ಮಾನವ ಗಾಯ, ಆಸ್ತಿನಾಶ, ಮಾಸಾಶನಗಳಿಗಾಗಿ 2025–26ನೇ ಸಾಲಿನಲ್ಲಿ 63.06 ಕೋಟಿ ರೂ. ಪರಿಹಾರ ವಿತರಿಸಲಾಗಿದೆ ಎಂದು ಮಾನವ ಅರಣ್ಯಜೀವಿ ಸಂಘರ್ಷ ತಪ್ಪಿಸಲು ಕೈಗೊಂಡ ಕಾರ್ಯಗಳ ಬಗ್ಗೆ ಅಧಿಕಾರಿಗಳು ಸಭೆಗೆ ಮಾಹಿತಿ ನೀಡಿದರು.

ಇದಕ್ಕೆ ಪ್ರತಿಕ್ರಿಯಿಸಿದ ಸಿಎಂ ಅವರು, ಪ್ರಾಣಿಗಳು ಸಹ ಈ ಎಲ್ಲಾ ಅಡೆತಡೆ ದಾಟಲು ನಾನಾ ಮಾರ್ಗಗಳನ್ನು ಕಂಡುಕೊಳ್ಳುತ್ತವೆ. ಹೀಗಾಗಿ ಅಧಿಕಾರಿಗಳು ಕೂಡ ಆಗಾಗ ಇತರೆ ಹೊಸ ಮಾರ್ಗೋಪಾಯಗಳ ಬಗ್ಗೆ ಅಧ್ಯಯನ ನಡೆಸಬೇಕು ಎಂದು ಸೂಚನೆ ನೀಡಿದರು. ಸಭೆಯಲ್ಲಿ ಸರ್ಕಾರದ ಮುಖ್ಯ ಕಾರ್ಯದರ್ಶಿ ಡಾ. ಶಾಲಿನಿ ರಜನೀಶ್, ರಿತೇಶ್ ಕುಮಾರ್ ಸಿಂಗ್, ಅಂಜುಮ್ ಪರ್ವೇಜ್, ಕರ್ನಾಟಕ ಅರಣ್ಯ ಪಡೆ ಮುಖ್ಯಸ್ಥೆ ಮೀನಾಕ್ಷಿ ನೇಗಿ, ಸಿಎಂ ಆರ್ಥಿಕ ಸಲಹೆಗಾರ ಎಲ್.ಕೆ. ಅತೀಕ್ ಮತ್ತಿತರ ಹಿರಿಯ ಅಧಿಕಾರಿಗಳು ಉಪಸ್ಥಿತರಿದ್ದರು.

ಬಸ್ ಪಲ್ಟಿ: ಇಬ್ಬರ ಸಾವು, 42 ಮಂದಿಗೆ ಗಾಯ

• **ಕೊಳ್ಳೇಗಾಲ:** ತಾಲೂಕಿನ ಮಧುವನಹಳ್ಳಿ ಕ್ರಾಸ್ ಬಳಿ ಕೆಎಸ್‌ಆರ್‌ಟಿಸಿ ಬಸ್ ನಿಯಂತ್ರಣ ತಪ್ಪಿ ಪಲ್ಟಿಯಾದ ಪರಿಣಾಮ ಇಬ್ಬರು ಸಾವನ್ನಪ್ಪಿದ್ದು, ಹಲವರು ಗಾಯಗೊಂಡಿರುವ ಘಟನೆ ಜರುಗಿದೆ. ಪಟ್ಟಣದ ಭೀಮನಗರ ಜಾನ್ ಹನುಮಂತಪ್ಪ ಬೀದಿಯ ವಾಸಿ ಅಂಗನವಾಡಿ ಶಿಕ್ಷಕಿ ಪುಟ್ಟನಂಜಮ್ಮ(60) ಹಾಗೂ ಕುದೇರು ಗ್ರಾಮದ ಕೂಲಿ ಕಾರ್ಮಿಕ ಮಾದೇಶ್(50) ಮೃತ ದುರ್ದೈವಿಗಳು. ಮ.ಬೆಟ್ಟದಿಂದ ಕೆ.ಎ–57 ಎಫ್–3964 ಕೆಎಸ್‌ಆರ್‌ಟಿಸಿ ಬಸ್‌ನಲ್ಲಿ 67 ಪ್ರಯಾಣಿಕರು ತುಂಬಿದ್ದು, ಬಸ್ ಟೈರ್ ಸಿಡಿದ ಪರಿಣಾಮ ರಸ್ತೆ ಬದಿಯ ಕಿರು ಚಾನಲ್ ಮೇಲೆ ಚಾಲಕ ನಿಯಂತ್ರಣ ತಪ್ಪಿ ಉರುಳಿ ಬಿದ್ದಿದೆ. ಈ ದುರ್ಘಟನೆಯಿಂದಾಗಿ ಸ್ಥಳದಲ್ಲೇ ಇಬ್ಬರು ಸ್ಥಳದಲ್ಲೇ ಸಾವನ್ನಪ್ಪಿದ್ದಾರೆ. ಇನ್ನುಳಿದ 42 ಗಾಯಾಳುಗಳನ್ನು ಸರ್ಕಾರಿ ಆಸ್ಪತ್ರೆಗೆ ಕರೆತಂದು ಚಿಕಿತ್ಸೆ ದಾಖಲಿಸಿದ್ದಾರೆ.

ಪಾಕಿಸ್ತಾನದ ವಾಯುದಾಳಿಗೆ ಅಫ್ಘಾನ್‌ನ 36 ಮಂದಿ ಸಾವು

ಪುಟ ೧➔ಅತ್ಯಂತ ಭೀಕರ ದಾಳಿ ಪಕ್ತಿಯಾ ಪ್ರಾಂತ್ಯದ ಚಮ್ಕಾನಿ ಜಿಲ್ಲೆಯ ಮಂಡೋಖೈಲ್ ಗ್ರಾಮದಲ್ಲಿ ನಡೆದಿದ್ದು, ಮೊದಲ ವೈಮಾನಿಕ ದಾಳಿಯು ಒಂದು ಕುಟುಂಬದ ಮನೆಯ ಮೇಲೆ ನಡೆದಿದ್ದ ಪರಿಣಾಮ, ಓರ್ವ ವೃದ್ಧ ಮತ್ತು ಒಂದು ಮಗು ಮೃತಪಟ್ಟಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಬದುಕುಳಿದವರನ್ನು ರಕ್ಷಿಸಲು ಗ್ರಾಮಸ್ಥರು ಒಟ್ಟುಗೂಡಿದ್ದ ವೇಳೆ, ಪಾಕಿಸ್ತಾನಿ ವಿಮಾನವು ಎರಡನೇ ದಾಳಿಯನ್ನು ನಡೆಸಿತು ಎಂದು ಅಧಿಕಾರಿಗಳು ಆರೋಪಿಸಿದ್ದಾರೆ.

ಇದನ್ನು ಡಬಲ್–ಟ್ಯಾಪ್ ಸ್ಟ್ರೈಕ್ ಎಂದು ವಿವರಿಸಲಾಗಿದೆ. ಇದು ವಿವಾದಾತ್ಮಕ ಯುದ್ಧ ತಂತ್ರವಾಗಿದ್ದು, ಆರಂಭಿಕ ದಾಳಿಯ ಸ್ವಲ್ಪ ಸಮಯದ ನಂತರ ಅದೇ ಸ್ಥಳವನ್ನು ಮತ್ತೆ ಹೊಡೆಯಲಾಗುತ್ತದೆ. ಎರಡನೇ ದಾಳಿ ನಡೆದಾಗ ನಿವಾಸಿಗಳು ಗಾಯಗೊಂಡವರಿಗೆ ಸಹಾಯ ಮಾಡಲು ಧಾವಿಸುತ್ತಿದ್ದರು ಎಂದು ಚಮ್ಕಾನಿ ಜಿಲ್ಲೆಯ ಉಪ ಮುಖ್ಯಸ್ಥ ಖಾಲಿದ್ ಅಹ್ಮದ್ ಸಜಾದ್ ಪತ್ರಿಕಾಗೋಷ್ಠಿಯಲ್ಲಿ ಹೇಳಿದರು.

ಪಾಕ್ ಸಮರ್ಥನೆ: ಕರಾಚಿಯಲ್ಲಿನ ಪಾಕಿಸ್ತಾನ ರೇಂಜರ್ಸ್ ಪ್ರಧಾನ ಕಚೇರಿಯ ಮೇಲೆ ಶನಿವಾರದ ದಾಳಿ ಸೇರಿದಂತೆ ಅನೇಕ ಭಯೋತ್ಪಾದಕ ಘಟನೆಗಳಿಗೆ ಪ್ರತಿಕ್ರಿಯೆಯಾಗಿ, ವಾಯುದಾಳಿಗಳಲ್ಲಿ 29 ಭಯೋತ್ಪಾದಕರನ್ನು ಕೊಂದು, ಭಯೋತ್ಪಾದಕರ ಅಡಗುತಾಣಗಳನ್ನು ಗುರಿಯಾಗಿಸಿಕೊಂಡಿದ್ದೇವೆ ಎಂದು ಪಾಕಿಸ್ತಾನ ಸಮರ್ಥಿಸಿಕೊಂಡಿದೆ.

ಕಾರು ಅಡ್ಡಗಟ್ಟಿ ಚಿನ್ನ ವ್ಯಾಪಾರಿ ದರೋಡೆ

• **ಮಂಗಳೂರು:** ಪತ್ನಿ ಮತ್ತು ಮಗನ ಜತೆ ಮುಂಬಯಿನಿಂದ ಕಾರಿನಲ್ಲಿ ಕೇರಳಕ್ಕೆ ತೆರಳುತ್ತಿದ್ದ ಚಿನ್ನದ ವ್ಯಾಪಾರಿಯನ್ನು ಅಡ್ಡಗಟ್ಟಿ ಲಕ್ಷಾಂತರ ಮೌಲ್ಯದ ಚಿನ್ನ ಮತ್ತು ನಗದು ಅಪಹರಿಸಿದ ಘಟನೆ ಸೋಮವಾರ ಮುಂಜಾನೆ ಬೈಕಂಪಾಡಿಯಲ್ಲಿ ನಡೆದಿದೆ.

ಕೇರಳದ ಪಯ್ಯನ್ನೂರು ನಿವಾಸಿ, ಚಿನ್ನದ ವ್ಯಾಪಾರಿ ವಿಕಾಸ್ ತನ್ನ ಪತ್ನಿ ಹಾಗೂ ಪುತ್ರನೊಂದಿಗೆ ಕಾರಿನಲ್ಲಿ ಕೇರಳಕ್ಕೆ ಹೋಗುತ್ತಿದ್ದಾಗ ಈ ಘಟನೆ ನಡೆದಿದೆ. ಸೋಮವಾರ ಮುಂಜಾನೆ ಸುಮಾರು 3 ಗಂಟೆಗೆ ಬೈಕಂಪಾಡಿ ಬಳಿ ಎರಡು ಇನ್ನೋವಾ ಕಾರುಗಳು ಹಾಗೂ ಒಂದು ಸ್ವಿಫ್ಟ್ ಕಾರಿನಲ್ಲಿ ಬಂದ 7ರಿಂದ 8 ಮಂದಿ ಅಪರಿಚಿತರು ವಿಕಾಸ್ ಅವರ ಕಾರನ್ನು ಅಡ್ಡಗಟ್ಟಿದ್ದಲ್ಲದೆ, ಪತ್ನಿ ಮತ್ತು ಮಗನ ಸಮೇತ ಕಾರನ್ನು ದುಷ್ಕರ್ಮಿಗಳು ಒಯ್ದಿದ್ದಾರೆ. ಬಳಿಕ ಕೂಳೂರು ಬಳಿ ಪತ್ನಿ, ಮಗನನ್ನು ಕಾರಿನಿಂದ ಇಳಿಸಿ ಆರೋಪಿಗಳು ಕಾರಿನೊಂದಿಗೆ ಪರಾರಿಯಾಗಿದ್ದಾರೆ.

ಈ ಸಂದರ್ಭದಲ್ಲಿ ಉದ್ಯಮಿ ಪತ್ನಿಯ ಕೊರಳು, ಕಿವಿಯಲ್ಲಿದ್ದ ಯಾವುದೇ ಚಿನ್ನಾಭರಣವನ್ನು ತೆಗೆದುಕೊಳ್ಳದೆ ಇರುವುದು ವಿಶೇಷವಾಗಿದೆ. 180ಗ್ರಾಂ ಚಿನ್ನ ಮತ್ತು ನಗದು ಸಹಿತ ಸುಮಾರು 20ಲಕ್ಷ ರೂ. ಮೌಲ್ಯದ ಸೊತ್ತು ದೋಚಿದ್ದಾರೆ ಎಂದು ಪಣಂಬೂರು ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದೆ.

ವಿಬಿ ಜಿ ರಾಮ್ ಜಿ ಯೋಜನೆಗೆ ಗಾಂಧಿ ಹೆಸರು ಸೇರಿಸಿ: ಖಂಡ್ರೆ



• **ಬೆಂಗಳೂರು:** ಕೇಂದ್ರ ಸರ್ಕಾರವು ವಿಬಿ ಜಿ ರಾಮ್ ಜಿ ಯೋಜನೆಗೆ ಮಹಾತ್ಮಾ ಗಾಂಧಿ ಹೆಸರು ಸೇರಿಸಬೇಕು ಇಲ್ಲವೇ ದೇಶದಲ್ಲಿರುವ 2.68 ಲಕ್ಷ ಗ್ರಾಮ ಪಂಚಾಯತ್‌ಗಳಿಗೆ ಮಹಾತ್ಮಾ ಗಾಂಧಿ ಹೆಸರಿಡಬೇಕು ಎಂದು ಗ್ರಾಮೀಣಾಭಿವೃದ್ಧಿ ಸಚಿವ ಈಶ್ವರ ಖಂಡ್ರೆ ಒತ್ತಾಯಿಸಿದ್ದಾರೆ.

ಸೋಮವಾರ ದಿಲ್ಲಿಯಲ್ಲಿ ಕೇಂದ್ರ ಗ್ರಾಮೀಣಾಭಿವೃದ್ಧಿ ಸಚಿವ ಶಿವರಾಜ್ ಸಿಂಗ್ ಚವ್ಹಾಣ್ ಅವರ ಅಧ್ಯಕ್ಷತೆಯಲ್ಲಿ ನಡೆದ ಎಲ್ಲ ರಾಜ್ಯಗಳ ಗ್ರಾಮೀಣಾಭಿವೃದ್ಧಿ ಸಚಿವರ ಸಭೆಯಲ್ಲಿ ಮಾತನಾಡಿದ ಅವರು, ಉದ್ಯೋಗ ಖಾತ್ರಿ ಯೋಜನೆಯಲ್ಲಿ ಗ್ರಾಮ ಸ್ವರಾಜ್ಯದ ಪ್ರತಿಪಾದಕರಾಗಿದ್ದ ಮಹಾತ್ಮಾ ಗಾಂಧಿ ಹೆಸರು ಕೈಬಿಟ್ಟಿರುವ ಕೇಂದ್ರ ಸರ್ಕಾರ, ಮಹಾತ್ಮಾ ಗಾಂಧಿ ವಿಬಿ ಜಿ ರಾಮ್ ಜಿ ಎಂದು ಮರುನಾಮಕರಣ ಮಾಡಬೇಕು ಎಂದು ಆಗ್ರಹಿಸಿದ್ದಾರೆ.

ಗಾಂಧೀಜಿ ಅವರು ಭಾರತ ಹಳ್ಳಿಗಳ ದೇಶವಾಗಿದ್ದು, ದೇಶದ ಆತ್ಮ ಇರುವುದೇ ಗ್ರಾಮಗಳಲ್ಲಿ ಎಂದು ಹೇಳಿದ್ದರು. ಗ್ರಾಮಗಳ ಅಭಿವೃದ್ಧಿ ಆಗದೆ ದೇಶದ ಅಭಿವೃದ್ಧಿ ಆಗದು ಎಂದು ಪ್ರತಿಪಾದಿಸಿದ್ದರು. ಇಂತಹ ಮಹಾಪುರುಷರ ಹೆಸರನ್ನು ಕೈಬಿಟ್ಟಿರುವುದು ಸರಿಯಲ್ಲ. ಈ ದೇಶದ ಸ್ವಾತಂತ್ರ್ಯಕ್ಕಾಗಿ ತಮ್ಮ ಬದುಕನ್ನೇ ಮುಡಿಪಾಗಿಟ್ಟು, ಸತ್ಯ, ಶಾಂತಿ, ಅಹಿಂಸೆ ಎಂಬ ಅಸ್ತ್ರದಿಂದ ಭಾರತಾಂಬೆಯನ್ನು ಬಂಧಮುಕ್ತಗೊಳಿಸಿದ ಮಹಾತ್ಮನಿಗೆ ನೈಜ ಶ್ರದ್ಧಾಂಜಲಿ ಸಲ್ಲಿಸಿದಂತಾಗುತ್ತದೆ ಎಂದು ಖಂಡ್ರೆ ತಿಳಿಸಿದ್ದಾರೆ.

ಲವ್ ಜಿಹಾದ್: ಯುವತಿ ಸಾವು

ಪುಟ ೧➔ನೇಣು ಹಾಕಿದ್ದ ಹಗ್ಗ ಕತ್ತರಿಸಿದ ಸ್ಥಿತಿಯಲ್ಲಿ ಕಂಡುಬಂದಿದೆ. ಅಲ್ಲದೆ ಸ್ಥಳದಲ್ಲಿ ಕೆಲವು ಮಾತ್ರೆಗಳು ಪತ್ತೆಯಾಗಿದ್ದು, ವಿಷ ಸೇವಿಸಿರುವ ಸಾಧ್ಯತೆಗಳೂ ದಟ್ಟವಾಗಿವೆ. ರೂಮ್‌ನಲ್ಲಿ ಒಂದು ಡೈರಿ ಸಿಕ್ಕಿದ್ದು, ಅದರಲ್ಲಿ ಹಲವು ವಿಚಾರಗಳನ್ನು ಬರೆಯಲಾಗಿದೆ. ಈ ಬಗ್ಗೆ ಪೊಲೀಸರು ತನಿಖೆ ನಡೆಸುತ್ತಿದ್ದಾರೆ.

ಪೊಲೀಸ್ ವಿರುದ್ಧ ಆರೋಪ: ಸಂಜೀತ್ ಅಲಿ ವಿರುದ್ಧ ನಾವು ಈಗಾಗಲೇ ದೂರು ನೀಡಿದ್ದರೂ ಪೊಲೀಸರು ಯಾವುದೇ ಕ್ರಮ ಕೈಗೊಂಡಿಲ್ಲ. ಪೊಲೀಸರು ಆತನ ವಿರುದ್ಧ ಕ್ರಮ ಕೈಗೊಂಡಿದ್ದರೆ ಸುರಭಿ ಬದುಕಿರುತ್ತಿದ್ದಳು ಎಂದು ಮೃತ ಯುವತಿಯ ಮಾವ ಶಂಕರನಾರಾಯಣ ತಿಳಿಸಿದ್ದಾರೆ. ಕಳೆದ ವರ್ಷ ಸುರಭಿ ಮನೆಗೆ ಬಾರದೇ ನಾಪತ್ತೆಯಾಗಿದ್ದಳು. ಪುತ್ರಿ ನಾಪತ್ತೆಯಾದ ಹಿನ್ನೆಲೆಯಲ್ಲಿ ಬನಶಂಕರಿ ಪೊಲೀಸ್ ಠಾಣೆಯಲ್ಲಿ ನಾಪತ್ತೆ ಕೇಸ್ ದಾಖಲಾಗಿತ್ತು. ಬಳಿಕ ಪೊಲೀಸರು ಸ್ನೇಹಿತರ ಮನೆಯಲ್ಲಿದ್ದ ಸುರಭಿಯನ್ನು ಪತ್ತೆ ಮಾಡಿ ಪೋಷಕರಿಗೆ ಒಪ್ಪಿಸಿದ್ದರು ಎನ್ನಲಾಗಿದೆ. ತೀವ್ರ ಅಸ್ವಸ್ಥಗೊಂಡು ಆಸ್ಪತ್ರೆ ಸೇರಿರುವ ಸಂಜೀತ್ ಅಲಿಗೆ ಪ್ರಜ್ಞೆ ಬಂದ ನಂತರವಷ್ಟೇ ಇದು ಕೊಲೆಯೋ ಅಥವಾ ಇಬ್ಬರೂ ಸೇರಿ ಮಾಡಿಕೊಂಡ ಆತ್ಮಹತ್ಯೆಯೋ ಎಂಬುದು ಸ್ಪಷ್ಟವಾಗಲಿದೆ ಎಂದು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿದ ಎಸ್‌ಪಿ ಕುಶಾಲ್ ಚೌಕ್ಸಿ ತಿಳಿಸಿದ್ದಾರೆ. ಪ್ರಸ್ತುತ ನಂದಿಗಿರಿಧಾಮ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಲವ್ ಜಿಹಾದ್ ಎಂದ ಬಜರಂಗ ದಳ: ಈ ಘಟನೆ ಲವ್ ಜಿಹಾದ್‌ನ ಭಾಗ ಎಂಬುದು ಸ್ಪಷ್ಟವಾಗಿದೆ. ಈಗಾಗಲೇ ಯುವತಿಯ ತಾಯಿ ಸಹ ಅದನ್ನು ಬಹಿರಂಗಪಡಿಸಿದ್ದಾರೆ. ಆಕೆಗೆ ಮಾದಕವಸ್ತು ನೀಡಿ ಮಾದಕವ್ಯಸನಿಯನ್ನಾಗಿಸಿದ್ದ ಎಂದು ತಿಳಿದುಬಂದಿದೆ. ಈ ಘಟನೆ ಹಿಂದೆ ದೊಡ್ಡ ಜಾಲವಿದ್ದು, ಸಮಗ್ರ ತನಿಖೆ ಆಗಬೇಕು. ಅಗತ್ಯವೆನಿಸಿದರೆ ಈ ಪ್ರಕರಣವನ್ನು ರಾಷ್ಟ್ರೀಯ ತನಿಖಾ ದಳಕ್ಕೆ ವರ್ಗಾಯಿಸಬೇಕು ಎಂದು ಬಜರಂಗದಳ ಮುಖಂಡ ಕೃಷ್ಣಮೂರ್ತಿ ಆಗ್ರಹಿಸಿದ್ದಾರೆ.

ಮಗಳಿಗೆ ನಿರಂತರ ಕಾಟ ಕೊಡುತ್ತಿದ್ದ: ತಾಯಿ ಕಣ್ಣೀರು

ಪುಟ ೧➔**ಇದರಿಂದ ಬೇಸತ್ತು ಆಕೆಗೆ ಬೇರೆ ಕಡೆ ವಿದ್ಯಾಭ್ಯಾಸ ಕೊಡಿಸಿದರೂ, ಆತ ಅಲ್ಲಿಗೂ ಹುಡುಕಿಕೊಂಡು ಬಂದು ಕಾಟ ಕೊಡುತ್ತಿದ್ದ. ಅವನು ನನ್ನ ಮಗಳನ್ನು ಸಂಪೂರ್ಣವಾಗಿ ಮರುಳು ಮಾಡಿದ್ದ. ಅಷ್ಟೇ ಅಲ್ಲ, ಆಕೆಯನ್ನು ಡ್ರಗ್ ಅಡಿಕ್ಟ್ ಮಾಡಿದ್ದ. ನಾನು ಕಷ್ಟಪಟ್ಟು ಎರಡು ಮೂರು ಕಡೆ ಚಿಕಿತ್ಸೆ ಕೊಡಿಸಿ ಆಕೆಯನ್ನು ಗುಣಮುಖಳನ್ನಾಗಿ ಮಾಡಿದ್ದೆ. ಇತ್ತೀಚೆಗೆ ಆಕೆ ಆರೋಗ್ಯವಾಗಿದ್ದಳು. ಆದರೆ ಈಗ ಲವ್ ಜಿಹಾದ್‌ಗೆ ಬಲಿಯಾಗಿದ್ದಾಳೆ ಎಂದು ತಾಯಿ ಗೀತಾ ಕಣ್ಣೀರು ಹಾಕಿದ್ದಾರೆ. ಮುದ್ದೇನಹಳ್ಳಿಯಲ್ಲಿ ಶನಿವಾರ ಸತ್ಸಂಗ ಇದೆ, ನಾನು ಅಲ್ಲೇ ಇರುತ್ತೇನೆ ಎಂದು ತಾಯಿಗೆ ಹೇಳಿಹೋಗಿದ್ದಳು. ಆದರೆ ಸಂಜೀತ್ ಅಲಿ ಮತ್ತೊಮ್ಮೆ ಆಕೆಯನ್ನು ಹುಡುಕಿಕೊಂಡು ಬಂದು ಮರುಳು ಮಾಡಿ ಹೋಂ ಸ್ಟೇಗೆ ಕರೆದೊಯ್ದಿದ್ದಾನೆ. ಅವನೇ ಸಂಚು ರೂಪಿಸಿ ನನ್ನ ಮಗಳನ್ನು ಕೊಲೆ ಮಾಡಿದ್ದಾನೆ. ಆರೋಪಿಗೆ ಕಠಿಣ ಶಿಕ್ಷೆಯಾಗಬೇಕೆಂದು ಮೃತಳ ತಾಯಿ ಒತ್ತಾಯಿಸಿದ್ದಾರೆ.**

ಅಧಿಕಾರಿಗಳ ಅಪರಾಧ ಪ್ರಮಾಣ ವಿರಳ



• **ಬೆಂಗಳೂರು:** ಬೇರೆ ರಾಜ್ಯಗಳಿಗೆ ಹೋಲಿಕೆ ಮಾಡಿದರೆ ಕರ್ನಾಟಕದಲ್ಲಿ ಸರ್ಕಾರಿ ಅಧಿಕಾರಿಗಳು ಅಥವಾ ರಾಜಕೀಯ ಮುಖಂಡರು ಹೇಯ ಅಪರಾಧ ಚಟುವಟಿಕೆಗಳಲ್ಲಿ ಭಾಗಿಯಾಗುವುದು ಅತೀ ವಿರಳ ಎಂದು ಹೈಕೋರ್ಟ್ ಸೋಮವಾರ ಮೌಖಿಕವಾಗಿ ಹೇಳಿತು.

ಧಾರವಾಡದ ಬಿಜೆಪಿ ಮುಖಂಡ ಯೋಗೀಶ್ ಗೌಡ ಕೊಲೆ ಪ್ರಕರಣದಲ್ಲಿ ಜೀವಾವಧಿ ಶಿಕ್ಷೆಗೆ ಗುರಿಯಾಗಿರುವ ಕಾಂಗ್ರೆಸ್ ಮುಖಂಡ ವಿನಯ್ ಕುಲಕರ್ಣಿ ಮತ್ತು ಚಂದ್ರಶೇಖರ್ ಇಂಡಿ ತಮಗೆ ವಿಧಿಸಿರುವ ಶಿಕ್ಷೆ ಅಮಾನತುಗೊಳಿಸಿ, ಜಾಮೀನಿನ ಮೇಲೆ ಬಿಡುಗಡೆ ಮಾಡಬೇಕು ಎಂದು ಕೋರಿರುವ ಅರ್ಜಿಯ ವಿಚಾರಣೆ ನಡೆಸಿದ ನ್ಯಾಯಮೂರ್ತಿಗಳಾದ ಮೊಹಮ್ಮದ್ ನವಾಜ್, ಜಿ. ಬಸವರಾಜ ಅವರ ವಿಭಾಗೀಯ ಪೀಠವು ಬೇರೆ ರಾಜ್ಯಗಳಿಗೆ ಹೋಲಿಕೆ ಮಾಡಿದರೆ ಕರ್ನಾಟಕದಲ್ಲಿ ಸರ್ಕಾರಿ ಅಧಿಕಾರಿಗಳು ಅಥವಾ ರಾಜಕೀಯ ಮುಖಂಡರು ಹೇಯ ಅಪರಾಧ ಚಟುವಟಿಕೆಗಳಲ್ಲಿ ಭಾಗಿಯಾಗುವುದು ಅತೀ ವಿರಳ ಎಂದು ಹೇಳಿತು.

ವಿಚಾರಣೆಯ ವೇಳೆ ಸಿಬಿಐ ಪ್ರತಿನಿಧಿಸಿದ್ದ ಹೆಚ್ಚುವರಿ ಸಾಲಿಸಿಟರ್ ಜನರಲ್ ಎಸ್.ವಿ. ರಾಜು ಅವರು ಅತಿ ಜವಾಬ್ದಾರಿ ಸ್ಥಾನದಲ್ಲಿರುವ ಜನಪ್ರತಿನಿಧಿಯು ರಾಜಕೀಯ ವಿರೋಧಿಯ ಕೊಲೆ ಪಿತೂರಿ ನಡೆಸಿದ್ದಾರೆ. ಅಲ್ಲದೇ, ನೈಜ ಆರೋಪಿಗಳನ್ನು ರಕ್ಷಿಸುವ ಕೆಲಸ ಮಾಡಲಾಗಿದೆ.

ತನಿಖೆಯು ಸಿಬಿಐ ಹೆಗಲಿಗೆ ಬಿದ್ದಿದ್ದರಿಂದ ವಿನಯ್ ಕುಲಕರ್ಣಿ ಮತ್ತಿತರರ ಯೋಜನೆ ವಿಫಲವಾಗಿದೆ. ಸಿಬಿಐ ಕೊಲೆ ಪ್ರಕರಣವನ್ನು ಭೇದಿಸಿದ್ದು, 7–14ನೇ ಆರೋಪಿಗಳು ನೈಜ ಅಪರಾಧಿಗಳು ಪಿತೂರಿ ನಡೆಸಿದ್ದಾರೆಂದು ಪತ್ತೆ ಹಚ್ಚಿದೆ. ಇಂಥ ಅತ್ಯುನ್ನತ ಜವಾಬ್ದಾರಿ ಸ್ಥಾನದಲ್ಲಿರುವ ಜನಪ್ರತಿನಿಧಿಗೆ ಜಾಮೀನು ನೀಡುವುದು ಹೇಗೆ ಎಂದರು.

ಈ ಹಂತದಲ್ಲಿ ನ್ಯಾ.ನವಾಜ್ ಅವರು ಸರ್ಕಾರಿ ಅಧಿಕಾರಿಗಳು ಅಥವಾ ರಾಜಕಾರಣಿಗಳು ಹೇಯ ಕೃತ್ಯಗಳಲ್ಲಿ ಭಾಗವಹಿಸುವುದು ಬೇರೆ ರಾಜ್ಯ ಗಳಲ್ಲಿ ಹೆಚ್ಚು. ರಾಜ್ಯದಲ್ಲಿ ವಿರಳ. ರಾಜಕಾರಣಿಗಳು ಮತ್ತು ಸರ್ಕಾರಿ ಅಧಿಕಾರಿ ಗಳು ಹೇಯ ಕೃತ್ಯಗಳಲ್ಲಿ ಭಾಗಿಯಾಗಿರುವ ಉದಾಹರಣೆಗಳಿವೆ ಎಂದರು. ಆಗ ರಾಜು ಅವರು, ಕರ್ನಾಟಕದಲ್ಲಿ ಹೀನ ಕೃತ್ಯಗಳಲ್ಲಿ ರಾಜಕಾರಣಿಗಳು ಮತ್ತು ಸರ್ಕಾರಿ ಅಧಿಕಾರಿಗಳು ಭಾಗಿಯಾಗುವುದು ಕಡಿಮೆ ಎಂದು ಕೇಳಲು ಸಂತೋಷವಾಗುತ್ತದೆ. ಇಂಥ ಟ್ರೆಂಡ್ ಆರಂಭವಾದರೆ ಅದನ್ನು ಎಳೆಯದರಲ್ಲಿ ಮೊಟಕಿ ಹಾಕಬೇಕಿದೆ.

ಜು. 9: ಆಟೋರಿಕ್ಷಾ ದರ ಪರಿಷ್ಕರಣೆ ಸಭೆ

• ಮಂಗಳೂರು: ಆಟೋರಿಕ್ಷಾ ದರ ಪರಿಷ್ಕರಣೆಗೆ ಸಂಬಂಧಿಸಿದ ಪ್ರಾದೇಶಿಕ ಸಾರಿಗೆ ಸಭೆಯನ್ನು ಜುಲೈ 9 ರಂದು ಬೆಳಿಗ್ಗೆ 11 ಗಂಟೆಗೆ ಜಿಲ್ಲಾಧಿಕಾರಿಯವರ ಅಧ್ಯಕ್ಷತೆಯಲ್ಲಿ ಜಿಲ್ಲಾಧಿಕಾರಿಗಳ ನ್ಯಾಯಾಲಯ ಸಭಾಂಗಣದಲ್ಲಿ ಆಯೋಜಿಸಲಾಗಿದೆ. ಸಭೆಗೆ ಹಾಜರಾಗಿ ಸಲಹೆ ಸೂಚನೆಗಳನ್ನು ನೀಡಿ ಸಹಕರಿಸಲು ಉಪ ಸಾರಿಗೆ ಆಯುಕ್ತರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ನಿಧನ ಸುದ್ದಿ

ಚಂದ್ರಹಾಸ್ ಸುವರ್ಣ



ಉಳ್ಳಾಲ: ಜೂನಿಯರ್ ಎಸ್.ಪಿ.ಬಾಲಸುಬ್ರಹ್ಮಣ್ಯಂ ಎಂದೇ ಖ್ಯಾತಿ ಹೊಂದಿದ್ದ ಜಿಲ್ಲೆಯ ಪ್ರಸಿದ್ಧ ಹಿರಿಯ ಗಾಯಕರಾದ ತೊಕ್ಕೊಟ್ಟು ಕಾಪಿಕಾಡು, ಗಾಂಧಿನಗರ ನಿವಾಸಿ ಚಂದ್ರಹಾಸ್ ಸುವರ್ಣ (64) ಅವರು ಅಲ್ಪಕಾಲದ ಅಸೌಖ್ಯದಿಂದ ಭಾನುವಾರ ರಾತ್ರಿ ನಿಧನರಾದರು. ವೃತ್ತಿಪರ ಬಹುಭಾಷಾ ಗಾಯಕರಾಗಿದ್ದ ಅವರು ಕಳೆದ ನಾಲ್ಕು ದಶಕಗಳಿಂದ ವಿವಿಧ ಆರ್ಕೆಸ್ಟ್ರಾ ತಂಡಗಳಲ್ಲಿ ಸಂಗೀತ ಕಾರ್ಯಕ್ರಮ ನೀಡುತ್ತಾ ಬಂದಿದ್ದರು. ಕೊಂಕಣಿ ಭಾಷಾ ಹಾಡುಗಾರಿಕೆಯಲ್ಲೂ ಹಿಡಿತ ಸಾಧಿಸಿದ್ದ ಅವರು ಮಾಂಡ್ ಸೋಭಾಣ್ ಸಂಸ್ಥೆಯು ಏರ್ಪಡಿಸಿದ್ದ ಸಂಗೀತ ಸ್ಪರ್ಧೆಯಲ್ಲಿ ಪ್ರಶಸ್ತಿ ಗಳಿಸಿದ್ದರು. ಜಿಲ್ಲೆಯ ಪ್ರಸಿದ್ಧ ರಂಗಭೂಮಿ ನಿರ್ದೇಶಕರುಗಳಾದ ಕೆ.ಎನ್.ಟೈಲರ್, ವಿಜಯ್ ಕುಮಾರ್ ಕೊಡಿಯಾಲ್‌ಬೈಲ್ ಅವರ ನಾಟಕಗಳಿಗೆ ಹಿನ್ನಲೆ ಗಾಯನ ನೇರಿದಂತೆ, ಹಲವಾರು ಜನಪ್ರಿಯ ಆಲ್ಬಮ್ ಗೀತೆಗಳಿಗೂ ಅವರು ಧ್ವನಿ ನೀಡಿದ್ದಾರೆ. ಮೃತ ಚಂದ್ರಹಾಸ್ ಅವರು ನಗರದಲ್ಲಿ ರಿಕ್ಷಾ ಚಾಲಕರಾಗಿದ್ದು, ಪತ್ನಿ ಹಾಗೂ ಏಕೈಕ ಪುತ್ರನನ್ನು ಅಗಲಿದ್ದಾರೆ.

ಸುರೇಶ್ ಗೋರೆ



ಬೆಳ್ತಂಗಡಿ: ವೇಣೂರಿನ ಪಿಲಿಯೂರು ನಿವಾಸಿ ಸುರೇಶ್ ಗೋರೆ (56) ಜೂ.29ರಂದು ಸ್ವಗೃಹದಲ್ಲಿ ನಿಧನರಾದರು. ಅವರಿಗೆ ಪತ್ನಿ ಹಾಗೂ ಇಬ್ಬರು ಪುತ್ರರು ಇದ್ದಾರೆ. ಕೃಷಿಯ ಜತೆ ಬೆಳ್ಳಿ ಕುಸುರಿ ಕೆಲಸ ನಡೆಸುತ್ತಿದ್ದರು. ಕೆಲ ಕಾಲ ರಾಷ್ಟ್ರೀಯ ಸ್ವಯಂಸೇವಕ ಸಂಘದ ವಿಸ್ತಾರಕರಾಗಿದ್ದರು. ಅವರು ಕೊಳಲು ವಾದಕರು ಆಗಿದ್ದರು.ಹತ್ತು ವರ್ಷಗಳ ಹಿಂದೆ ವಿದ್ಯುತ್ ಆಘಾತದ ಪರಿಣಾಮ ಅನಾರೋಗ್ಯ ಪೀಡಿತರಾಗಿದ್ದರು.

ಸಂಜೀವ ಕೋಟ್ಯಾನ್



ಮಂಗಳೂರು: ನಗರದ ಮಣ್ಣಗುಡ್ಡೆ ಕೊಡಿಯಾಲಗುತ್ತು ಕೋರ್ದಬ್ಬು ದೈವಸ್ಥಾನದ ಬಳಿಯ ನಿವಾಸಿ ಸಂಜೀವ ಕೋಟ್ಯಾನ್ (70) ಅವರು ಜೂ.28 ರಂದು ಅಸೌಖ್ಯದಿಂದ ನಿಧನ ಹೊಂದಿದರು. ಅವರು ಪತ್ನಿ, ಇಬ್ಬರು ಪುತ್ರರು ಹಾಗೂ ಇಬ್ಬರು ಪುತ್ರಿಯರನ್ನು ಅಗಲಿದ್ದಾರೆ.

ಮುಹಮ್ಮದ್



ಕೊಣಾಜೆ: ಕೋಣಾಜೆ ನಿವಾಸಿ ಮುಹಮ್ಮದ್ (60) ಅವರು ಅನಾರೋಗ್ಯದಿಂದ ಮಂಗಳೂರಿನ ಆಸ್ಪತ್ರೆಯಲ್ಲಿ ಸೋಮವಾರ ನಿಧನರಾದರು. ಮೃತರು ಇಬ್ಬರು ಪುತ್ರರು ಹಾಗೂ ಮೂವರು ಪುತ್ರಿಯರನ್ನು ಅಗಲಿದ್ದಾರೆ. ಇವರು ದಿ। ಪುತ್ತಬ್ಬ ಕೋಡಿಜಾಲ್ ಅವರ ಹಿರಿಯ ಪುತ್ರರಾಗಿದ್ದರು. ಅವರ ನಿಧನಕ್ಕೆ ಕುಟುಂಬಸ್ಥರು, ಬಂಧು-ಬಳಗ ತೀವ್ರ ಸಂತಾಪ ವ್ಯಕ್ತಪಡಿಸಿದ್ದಾರೆ.

ಕಾಸರಗೋಡು ಜಿಲ್ಲೆಯಲ್ಲಿ ಧಾರಾಕಾರ ಮಳೆ: ಮನೆ ಕುಸಿತ

• ಕಾಸರಗೋಡು: ಜಿಲ್ಲೆಯಲ್ಲಿ ಭಾನುವಾರ ರಾತ್ರಿಯಿಂದ ಧಾರಾಕಾರ ಮಳೆ ಸುರಿಯುತ್ತಿದ್ದು, ಈ ಹಿನ್ನೆಲೆಯಲ್ಲಿ ಕೆಲವೆಡೆ ನಾಶ ನಷ್ಟಗಳು ಸಂಭವಿಸಿವೆ. ಸೋಮವಾರವು ಬಿರುಸಿನ ಮಳೆಯಾಗಿದೆ.

ಈಮಧ್ಯೆ ಬದಿಯಡ್ಕ ಸಮೀಪದ ಪಳ್ಳತ್ತಡ್ಕ ನಿವಾಸಿ, ಆಟೋರಿಕ್ಷಾ ಚಾಲಕರಾಗಿರುವ ಐತ್ತಪ್ಪ ನಾಯ್ಕ ಎಂಬವರ ಹೆಂಚಿನ ಮನೆಯೊಂದು ಭಾನುವಾರ ರಾತ್ರಿ ಕುಸಿದು ಬಿದ್ದಿದ್ದು, ಅದೃಷ್ಟವಶಾತ್ ಕುಟುಂಬ ಸದಸ್ಯರು ಅಪಾಯದಿಂದ ಪಾರಾಗಿದ್ದಾರೆ.

ಮಳೆ ಸುರಿಯುತ್ತಿದ್ದಂತೆ ಅವರ ಮನೆಯು ಕುಸಿದಿದ್ದು, ಶಬ್ದ ಕೇಳಿ ಐತ್ತಪ್ಪ ನಾಯ್ಕ ಮತ್ತು ಅವರ ಪತ್ನಿ ಹೊರಗೆ ಓಡಿದ್ದಾರೆ. ಹಲವು ವರ್ಷಗಳ ಹಿಂದೆ ನಿರ್ಮಿಸಿದ ಮನೆ ಇದಾಗಿದೆ. ಅವರಿಗೆ ಬದಿಯಡ್ಕ ಗ್ರಾಮ ಪಂಚಾಯತ್‌ನಿಂದ ಹೊಸ ಮನೆ ಮಂಜೂರಾಗಿದ್ದು, ಈ ನಿಟ್ಟಿನಲ್ಲಿ ಮನೆಯ ನಿರ್ಮಾಣ ಕಾರ್ಯ ನಡೆಯುತ್ತಿದೆ. ಇದೀಗ ಅವರ ಮನೆ ಕುಸಿದಿರುವುದರಿಂದ ವಾಸ ಸಮಸ್ಯೆ ಎದುರಾಗಿದೆ.



ಕಾಸರಗೋಡು ಜಿಲ್ಲೆಯಲ್ಲಿ ಜುಲೈ 2ರ ತನಕ ಬಿರುಸಿನ ಮಳೆಯಾಗುವ ಸಾಧ್ಯತೆಯಿದೆ ಎಂದು ತಿರುವನಂತಪುರದ ಕೇಂದ್ರ ಹವಾಮಾನ ಇಲಾಖೆಯು ತಿಳಿಸಿದೆ. ಮಾತ್ರವಲ್ಲದೆ ಗುಡುಗು, ಮಿಂಚು ಸಹಿತ ಮಳೆಯಾಗುವ ಲಕ್ಷಣಗಳಿವೆ. ಸಮುದ್ರ ಕರಾವಳಿಯಲ್ಲಿ ಗಂಟೆಗೆ 40ರಿಂದ 50 ಕಿಲೋ ಮೀಟರ್ ವೇಗದಲ್ಲಿ ಬಲವಾದ ಗಾಳಿ ಬೀಸುವ ಸಾಧ್ಯತೆಯಿದೆ. ಈ ಹಿನ್ನೆಲೆಯಲ್ಲಿ ಸಾರ್ವಜನಿಕರು ಗರಿಷ್ಠ ಎಚ್ಚರಿಕೆ ವಹಿಸುವಂತೆ ಜಿಲ್ಲಾಡಳಿತವು ತಿಳಿಸಿದೆ. ಜೂ.30ರಂದು ಜಿಲ್ಲೆಯಲ್ಲಿ ಆರೆಂಜ್ ಅಲರ್ಟ್ ಜಾರಿಯಲ್ಲಿರಲಿದೆ.

ಸಮುದ್ರ ಮಧ್ಯದಲ್ಲಿ ಸಿಲುಕಿಕೊಂಡ ದೋಣಿ: ಕಾರ್ಮಿಕರ ರಕ್ಷಣೆ

ಮೀನುಗಾರಿಕೆಗೆ ತೆರಳಿ ಹಿಂತಿರುಗುತ್ತಿರುವ ಮಧ್ಯೆ ಇಂಜಿನ್ ಹಾನಿಗೊಂಡು ದೋಣಿಯೊಂದು ಸಮುದ್ರ ಮಧ್ಯೆ ಸಿಲುಕಿಕೊಂಡ ಘಟನೆ ನಡೆದಿದೆ. ಅದರಲ್ಲಿದ್ದ ನಾಲ್ಕು ಮಂದಿ ಮೀನು ಕಾರ್ಮಿಕರನ್ನು ಫಿಶರೀಸ್ ಇಲಾಖೆ, ಕೋಸ್ಟಲ್ ಪೊಲೀಸರು ಸೇರಿ ರಕ್ಷಿಸಿದ್ದಾರೆ. ಉಪ್ಪಳ ಮೂಸೋಡಿಯಿಂದ ಭಾನುವಾರ ಮುಂಜಾನೆ ಮೀನುಗಾರಿಕೆಗಾಗಿ ತೆರಳಿದ್ದ ಕಾರ್ಮಿಕರು ಸಮುದ್ರ ಮಧ್ಯದಲ್ಲಿ ಸಿಲುಕಿಕೊಂಡಿದ್ದರು. ಉಪ್ಪಳ ಕಾರ್ದಾನಗರ ನಿವಾಸಿ ವಿಕ್ರಂ ಎಂ. ಉಬ್ಬಿಲ್ ಎಂಬವರ ಮಾಲಕತ್ವದ ಗುತ್ಯಮ್ಮ ಭಗವತಿ ಎಂಬ ಹೆಸರಿನ ಇಂಜಿನ್ ಅಳವಡಿಸಿದ ದೋಣಿಯು ಮಂಜೇಶ್ವರದಿಂದ ಸುಮಾರು 10 ನೋಟಿಕಲ್ ಮೈಲು ದೂರದಲ್ಲಿ ಹಾನಿಗೀಡಾಗಿತ್ತು. ಕಡಲಬ್ಬರಕ್ಕೆ ಸಿಲುಕಿ ದೋಣಿ ನಿಯಂತ್ರಣ ತಪ್ಪಿತು. ಈ ಹಿನ್ನೆಲೆಯಲ್ಲಿ ಕಾರ್ಮಿಕರು ಕೋಸ್ಟಲ್ ಪೊಲೀಸರನ್ನು ಸಂಪರ್ಕಿಸಿದ್ದರು. ಭಾನುವಾರ ಮಧ್ಯಾಹ್ನದ ವೇಳೆ ಕೋಸ್ಟಲ್ ಪೊಲೀಸರು ಹಾಗೂ ಫಿಶರೀಸ್ ಇಲಾಖೆಯ ರೆಸ್ಕ್ಯೂ ತಂಡದವರು ಘಟನಾ ಸ್ಥಳಕ್ಕೆ ತೆರಳಿ ಕಾರ್ಮಿಕರನ್ನು ಸಂರಕ್ಷಿಸಿದರು. ಮಾತ್ರವಲ್ಲದೆ ಹಗ್ಗ ಕಟ್ಟಿ ದೋಣಿಯನ್ನು ದಡ ಸೇರಿಸಲಾಯಿತು.

ಕುಕ್ಕೆ ಕ್ಷೇತ್ರಕ್ಕೆ ಭೇಟಿ ನೀಡಿದ ಮುಜರಾಯಿ ಆಯುಕ್ತ ಶರತ್ ಬಿ. ಹೇಳಿಕೆ

ಶೀಘ್ರ ಮಾಸ್ಟರ್ ಪ್ಲಾನ್ ಸಮಿತಿ ಸಭೆ

• ಸುಬ್ರಹ್ಮಣ್ಯ: ಮಹತೋಭಾರ ಕುಕ್ಕೆ ಶ್ರೀ ಸುಬ್ರಹ್ಮಣ್ಯ ದೇವಸ್ಥಾನದಲ್ಲಿ ಭಕ್ತರ ಅನುಕೂಲತೆಗಾಗಿ ರೂ.604 ಕೋಟಿ ವೆಚ್ಚದಲ್ಲಿ ಅಭಿವೃದ್ಧಿ ಕಾಮಗಾರಿ ಆರಂಭಿಸುವ ಸಲುವಾಗಿ ಶೀಘ್ರ ಮಾಸ್ಟರ್ ಪ್ಲಾನ್ ಸಮಿತಿ ಸಭೆ ಕರೆಯಲಾಗುವುದು. ಶ್ರೀ ದೇವಳದಲ್ಲಿ ನಡೆಯಲಿರುವ ಸುತ್ತುಪೌಳಿ ನಿರ್ಮಾಣ, ಡಾರ್ಮೆಟರಿ ನಿರ್ಮಾಣ, 1000 ಕೊಠಡಿಗಳ ವಸತಿ ಗೃಹಗಳ ನಿರ್ಮಾಣ ಕಾಮಗಾರಿ ಶೀಘ್ರವಾಗಿ ಆರಂಭಿಸಿ ವೇಗವಾಗಿ ಕಾಮಗಾರಿ ಸಂಪೂರ್ಣಗೊಳಿಸಿ ಭಕ್ತರ ಉಪಯೋಗಕ್ಕೆ ದೊರಕುವಂತೆ ಮಾಡಲು ಕ್ರಮ ಕೈಗೊಳ್ಳಲಾಗುವುದು ಎಂದು ರಾಜ್ಯ ಧಾರ್ಮಿಕ ದತ್ತಿ ಇಲಾಖೆಯ ಆಯುಕ್ತ ರಾಜ್ಯ ಧಾರ್ಮಿಕ ದತ್ತಿ ಆಯುಕ್ತ ಶರತ್ ಬಿ. ಹೇಳಿದರು.

ಮಹತೋಭಾರ ಕುಕ್ಕೆ ಶ್ರೀ ಸುಬ್ರಹ್ಮಣ್ಯ ಕ್ಷೇತ್ರಕ್ಕೆ ಭೇಟಿ ನೀಡಿದ ಅವರು ದೇವಳದ ಆಡಳಿತ ಮಂಡಳಿಯವರೊಂದಿಗೆ ಸಭೆ ನಡೆಸಿ ಮಾತನಾಡಿದರು. ಭಾನುವಾರ ರಾತ್ರಿ ಕ್ಷೇತ್ರಕ್ಕಾಗಮಿಸಿದ ಅವರು ಆದಿಶೇಷ ವಸತಿ ಗೃಹದಲ್ಲಿ ಆಡಳಿತ ಮಂಡಳಿಯೊಂದಿಗೆ ಚರ್ಚಿಸಿದರು.

ಬಳಿಕ ಸೋಮವಾರ ಬೆಳಗ್ಗೆ ಶ್ರೀ ದೇವಳದ ಆಡಳಿತ ಕಚೇರಿ ಸಭಾಂಗಣದಲ್ಲಿ ಆಡಳಿತ ಮಂಡಳಿ ಮತ್ತು ಲೋಕೋಪಯೋಗಿ ಇಲಾಖೆ ಅಧಿಕಾರಿಗಳೊಂದಿಗೆ ಸಭೆ ನಡೆಸಿ ಚರ್ಚಿಸಿದರು. ಈ ಸಂದರ್ಭ ಆಡಳಿತ ಮಂಡಳಿ ವತಿಯಿಂದ ಆಯುಕ್ತರನ್ನು ಸನ್ಮಾನಿಸಿ ಗೌರವಿಸಿದರು.

ಈ ಸಂದರ್ಭ ಶ್ರೀ ದೇವಳದ ವ್ಯವಸ್ಥಾಪನಾ ಸಮಿತಿ ಅಧ್ಯಕ್ಷ ಹರೀಶ್ ಎಸ್. ಇಂಜಾಡಿ, ಕಾರ್ಯನಿರ್ವಹಣಾಧಿಕಾರಿ ಅರವಿಂದ ಅಯ್ಯಪ್ಪ ಸುತಗುಂಡಿ, ಎಇಒ ಎಸ್.ಜೆ. ಯೇಸುರಾಜು, ವ್ಯವಸ್ಥಾಪನಾ ಸಮಿತಿ ಸದಸ್ಯರಾದ ಅಶೋಕ್ ನೆಕ್ರಾಜೆ, ಸೌಮ್ಯಾ ಭರತ್, ಪ್ರವೀಣಾ ರೈ ಮರುವಂಜ, ಲೀಲಾ ಮನಮೋಹನ್, ಮಾಸ್ಟರ್ ಪ್ಲಾನ್ ಸಮಿತಿ ಸದಸ್ಯರಾದ ಸತೀಶ್ ಕೂಜುಗೋಡು, ಲೋಲಾಕ್ಷ ಕೈಕಂಬ, ಅಚ್ಯುತ್ತ ಗೌಡ ಬಳ್ಪ, ದೇವಳದ ಅಧೀಕ್ಷಕ ಕೆ.ಎಂ. ಗೋಪಿನಾಥ್ ನಂಬೀಶ, ಅಭಿಯಂತರ ಉದಯ ಕುಮಾರ್, ಶಿಷ್ಟಾಚಾರ ವಿಭಾಗದ ಪ್ರಮೋದ್ ಕುಮಾರ್ ಎಸ್. ಮತ್ತಿತರರು ಉಪಸ್ಥಿತರಿದ್ದರು.





ಕ್ಷೇತ್ರಾಭಿವೃದ್ಧಿಗೆ ಚರ್ಚೆ

ಕ್ಷೇತ್ರಕ್ಕೆ ಆಗಮಿಸಿದ ಮುಜರಾಯಿ ಆಯುಕ್ತರಲ್ಲಿ ದೇವಳದ ಆಡಳಿತ ಮಂಡಳಿಯು ಭಕ್ತರ ಅನುಕೂಲತೆಗಾಗಿ ತುರ್ತಾಗಿ ಕ್ಷೇತ್ರದಲ್ಲಾಗಬೇಕಾದ ಅಭಿವೃದ್ಧಿ ಕಾಮಗಾರಿಗಳ ಬಗ್ಗೆ ತಿಳಿಸಿದರು. ಆಶ್ಲೇಷಬಲಿ ಮಂಟಪ, ಸುತ್ತು ಪೌಳಿ, ಡಾರ್ಮೆಟರಿ, ವಸತಿಗೃಹ, ನೌಕರರ ವಸತಿ ಗೃಹ ನಿರ್ಮಾಣ, ಸಿಬ್ಬಂದಿಗಳ ವೇತನ, ಹೊಸ ಸಿಬ್ಬಂದಿಗಳ ನೇಮಕ, ಸರ್ಪ ಸಂಸ್ಕಾರ ಪುರೋಹಿತರ ಸಂಭಾವನೆ, ದೇವಳದಲ್ಲಿ ನಡೆಯುವ ಸೇವೆಗಳು ಇತ್ಯಾದಿಗಳ ಬಗ್ಗೆ ಆಯುಕ್ತರಲ್ಲಿ ಆಡಳಿತ ಮಂಡಳಿ ಚರ್ಚಿಸಿದಾಗ ಈ ಬಗ್ಗೆ ಶೀಘ್ರ ಕ್ರಮ ಕೈಗೊಳ್ಳುವ ಭರವಸೆ ನೀಡಿದರು.

ಅಲ್ಲದೆ, ಶೀಘ್ರವೇ ಮಾಸ್ಟರ್ ಪ್ಲಾನ್ ಸಮಿತಿ ಸಭೆ ನಡೆಸಿ ಕಾಮಗಾರಿ ಆರಂಭಿಸುವ ಭರವಸೆ ನೀಡಿದರು. ಶ್ರೀ ದೇವಳದ ವಿದ್ಯಾ ಸಂಸ್ಥೆಗಳ ಅಭಿವೃದ್ಧಿ, ಇಲ್ಲಿನ ಸಿಬ್ಬಂದಿಗಳ ವೇತನ, ವಿದ್ಯಾರ್ಥಿಗಳಿಗೆ ಬೇಕಾದ ಇನ್ನಷ್ಟು ಅನುಕೂಲತೆಗಳ ಬಗ್ಗೆ ಆಯುಕ್ತರು ಸಕಾರಾತ್ಮಕವಾಗಿ ಸ್ಪಂಧಿಸಿದರು.

ಆಡಳಿತ ಮಂಡಳಿಯ ಮುತುವರ್ಜಿ

ಭಕ್ತರಿಗೆ ಬೇಕಾದ ಅಭಿವೃದ್ಧಿ ಕಾರ್ಯ, ದೇವಳದ ಸಿಬ್ಬಂದಿಗಳ ಅಭಿವೃದ್ಧಿ ಮತ್ತು ವಿದ್ಯಾ ಸಂಸ್ಥೆಯಲ್ಲಿನ ಪ್ರಗತಿ ಕಾರ್ಯ, ಇಲ್ಲಿನ ಸಿಬ್ಬಂದಿಗಳ ಅಭಿವೃದ್ಧಿಗೆ ಬಗ್ಗೆ ದೇವಳದ ಆಡಳಿತ ಮಂಡಳಿ ಮುತುವರ್ಜಿ ವಹಿಸಿ ಆಯುಕ್ತರಲ್ಲಿ ಚರ್ಚಿಸಿತು. ಶೀಘ್ರವಾಗಿ ಕ್ಷೇತ್ರದಲ್ಲಿ ಅಭಿವೃದ್ಧಿ ಕಾರ್ಯ ನಡೆಸಲು ಕ್ರಮ ಕೈಗೊಳ್ಳುವಂತೆ ದೇವಳದ ಆಡಳಿತ ವಿನಂತಿಸಿತು. ಆಯುಕ್ತರು ಎಲ್ಲಾ ವಿಚಾರಕ್ಕೂ ಸಕಾರಾತ್ಮಕವಾಗಿ ಸ್ಪಂದಿಸಿದರು.

ಸ್ಥಳ ಪರಿಶೀಲನೆ

ನಂತರ ದೇವಳದ ಹೊರಾಂಗಣದಲ್ಲಿ ಸುತ್ತುಪೌಳಿಯನ್ನು ವೀಕ್ಷಿಸಿ ನೂತನ ಸುತ್ತುಪೌಳಿಯ ನೀಲನಕಾಶೆಯನ್ನು ಪರಿಶೀಲಿಸಿದರು. ತದನಂತರ ಇಂಜಾಡಿಯಲ್ಲಿ 1000 ಕೊಠಡಿಗಳ ವಸತಿಗೃಹ ನಿರ್ಮಾಣವಾಗುವ ಸ್ಥಳ ಮತ್ತು ಸಿಬ್ಬಂದಿಗಳ ವಸತಿ ಗೃಹ ಸ್ಥಳಕ್ಕೆ ತೆರಳಿ ಸ್ಥಳಪರಿಶೀಲನೆ ಮಾಡಿದರು. ವಿಮಾನದ ಮೂಲಕ 4 ಗಂಟೆಗೆ ಬೆಂಗಳೂರಿಗೆ ತೆರಳಬೇಕಿದ್ದ ಆಯುಕ್ತರು ತುರ್ತು ಕಾರ್ಯದ ನಿಮಿತ್ತ ವಿಮಾನ ಪ್ರಯಾಣ ರದ್ದುಗೊಳಿಸಿ ರಸ್ತೆ ಮಾರ್ಗದ ಮೂಲಕ ಶೀಘ್ರ ಬೆಂಗಳೂರಿಗೆ ಪ್ರಯಾಣಿಸಿದರು.

ಯಶಸ್ವಿ ಸ್ವಾಗತ

ದೇವಳಕ್ಕೆ ಭೇಟಿ ನೀಡಿದ ಅವರನ್ನು ಶ್ರೀ ದೇವಳ ಆನೆ ಯಶಸ್ವಿ ಹೂಹಾರ ಹಾಕಿ ಸ್ವಾಗತಿಸಿ ಸೊಂಡಿಲನ್ನು ಎತ್ತಿ ಸ್ವಾಗತಿಸಿತು. ಬಳಿಕ ದೇವರ ದರುಶನ ಮಾಡಿದ ಅವರಿಗೆ ಅರ್ಚಕರು ಶಾಲು ಹೊದಿಸಿ ಮಹಾಪ್ರಸಾದ ನೀಡಿದರು. ಬಳಿಕ ಅವರು ಹೊಸಳಿಗಮ್ಮನ ದರುಶನ ಮಾಡಿದರು.

ಮಂಗಳೂರು ವಿಶ್ವವಿದ್ಯಾನಿಲಯದಲ್ಲಿ ಶೈಕ್ಷಣಿಕ ಮಂಡಳಿ ಸಭೆ

ಪ್ರವೇಶಾತಿ ಇಲ್ಲದ ಕೋರ್ಸ್ ರದ್ದುಗೊಳಿಸಲು ನಿರ್ಧಾರ

• ಮಂಗಳೂರು: ಸರ್ಕಾರದ ಆದೇಶದನ್ವಯ ಪ್ರವೇಶಾತಿ ಇಲ್ಲದ ಕೋರ್ಸ್‌ಗಳನ್ನು ರದ್ದುಗೊಳಿಸಿ, ಹೊಸ ಉದ್ಯೋಗ ಆಧಾರಿತ ಕೋರ್ಸ್‌ಗಳನ್ನು ಆರಂಭಿಸಲು ಮಂಗಳೂರು ವಿಶ್ವವಿದ್ಯಾನಿಲಯದ ಸಭಾಂಗಣದಲ್ಲಿ ಸೋಮವಾರ ನಡೆದ ಶೈಕ್ಷಣಿಕ ಮಂಡಳಿ ಸಭೆಯಲ್ಲಿ ನಿರ್ಧರಿಸಲಾಗಿದೆ.

ವಿವಿಯ ಕುಲಪತಿ ಪ್ರೊ.ಪಿ.ಎಲ್.ಧರ್ಮ ಅವರ ಅಧ್ಯಕ್ಷತೆಯಲ್ಲಿ ಸಭೆ ನಡೆಯಿತು.

ವಿದ್ಯಾರ್ಥಿಗಳ ಕೊರತೆ ಎದುರಿಸುತ್ತಿರುವ ಮಂಗಳೂರು ವಿಶ್ವವಿದ್ಯಾಲಯ ಸಂಯೋಜನೆಗೆ ಒಳಪಟ್ಟಿರುವ ಮೂರು ಪ್ರಮುಖ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ 2026-27ನೇ ಶೈಕ್ಷಣಿಕ ಸಾಲಿನಿಂದ ಬ್ಯಾಚುಲರ್ ಆಫ್ ಆರ್ಟ್ಸ್ ಕೋರ್ಸ್‌ಗಳನ್ನು ಸ್ಥಗಿತಗೊಳಿಸಲು ನಿರ್ಧರಿಸಲಾಯಿತು.

ಕಾವೂರು ಸರ್ಕಾರಿ ಕಾಲೇಜು ಇಲ್ಲಿನ ಅರ್ಥಶಾಸ್ತ್ರ, ಇತಿಹಾಸ, ಸಮಾಜಶಾಸ್ತ್ರ ಹಾಗೂ ಇತಿಹಾಸ, ಪತ್ರಿಕೋದ್ಯಮ, ಕನ್ನಡ ಕಾಂಬಿನೇಷನ್‌ಗಳನ್ನು ಸ್ಥಗಿತಗೊಳಿಸಲು ನಿರ್ಧರಿಸಲಾಗಿದೆ. ಅದೇ ರೀತಿ ಪುಂಜಾಲಕಟ್ಟೆ ಸರ್ಕಾರಿ ಕಾಲೇಜಿನ ಅರ್ಥಶಾಸ್ತ್ರ, ಕನ್ನಡ ಮತ್ತು ಸಮಾಜಶಾಸ್ತ್ರ ಕಾಂಬಿನೇಷನ್ ರದ್ದು, ಉಡುಪಿ ಅಜ್ಜರಕಾಡಿನ ಡಾ. ಜಿ. ಶಂಕರ್ ಸರ್ಕಾರಿ ಮಹಿಳಾ ಕಾಲೇಜು ಇಲ್ಲಿನ ಇಂಗ್ಲಿಷ್, ಇತಿಹಾಸ ಮತ್ತು ರಾಜ್ಯಶಾಸ್ತ್ರ ಕಾಂಬಿನೇಷನ್ ಕ್ಲೋಸ್ ಆಗಿದೆ. ಈ ಸರ್ಕಾರಿ ಕಾಲೇಜುಗಳಲ್ಲಿ ಕಲಾ ವಿಭಾಗದ ನಿರ್ದಿಷ್ಟ ಕಾಂಬಿನೇಷನ್‌ಗಳನ್ನು ಮುಚ್ಚಲಾಗುತ್ತಿದೆ.



ವಿಶ್ವದಾದ್ಯಂತ ಸಂಭವಿಸುತ್ತಿರುವ ಭೂಕಂಪ, ಭೂಕುಸಿತ, ಪ್ರವಾಹಗಳಂತಹ ನೈಸರ್ಗಿಕ ವಿಕೋಪಗಳ ಬಗ್ಗೆ ವಿದ್ಯಾರ್ಥಿಗಳಲ್ಲಿ ಜಾಗೃತಿ ಮೂಡಿಸಲು ವಿಪತ್ತು ನಿರ್ವಹಣೆ ಕೋರ್ಸ್ ಅನ್ನು ಓಪನ್ ಎಲೆಕ್ಟಿವ್ ಆಗಿ ಸೇರಿಸಲು ಹಾಗೂ ಜಾಗತಿಕ ಆಹಾರದ ಕೊರತೆ ನೀಗಿಸಲು ಕೃಷಿ ಚಟುವಟಿಕೆಗಳನ್ನು ಉತ್ತೇಜಿಸುವ ನಿಟ್ಟಿನಲ್ಲಿ ವಿಜ್ಞಾನ ವಿಭಾಗದ ಪಠ್ಯಕ್ರಮದಲ್ಲಿ ಆಹಾರ ಬಿಕ್ಕಟ್ಟು ಕುರಿತ ವಿಷಯಗಳನ್ನು ಸೇರಿಸಲು ವಿಭಾಗೀಯ ಮುಖ್ಯಸ್ಥರಿಗೆ ಪ್ರೊ.ಪಿ.ಎಲ್. ಧರ್ಮ ಸೂಚಿಸಿದ್ದಾರೆ.

ಹೊಸ ಕೋರ್ಸ್ ಪರಿಚಯ

ಬಿಎ ಕೋರ್ಸ್‌ಗಳು ಬಂದ್ ಆಗುತ್ತಿದ್ದರೂ, ವಿದ್ಯಾರ್ಥಿಗಳ ಬೇಡಿಕೆಗೆ ತಕ್ಕಂತೆ ಉಪ್ಪಿನಂಗಡಿ, ಪುಂಜಾಲಕಟ್ಟೆ ಹಾಗೂ ಪುತ್ತೂರಿನ ಸರ್ಕಾರಿ ಕಾಲೇಜುಗಳಲ್ಲಿ ಹೊಸ ಕೋರ್ಸ್‌ಗಳನ್ನು ಪರಿಚಯಿಸಲಾಗುತ್ತಿದೆ ಎಂದು ಕುಲಪತಿಗಳು ತಿಳಿಸಿದ್ದಾರೆ.

ಬಿ.ಕಾಂ ಬ್ಯಾಂಕಿಂಗ್ ಫೈನಾನ್ಶಿಯಲ್ ಸರ್ವಿಸಸ್ ಅಂಡ್ ಇನ್ಶೂರೆನ್ಸ್, ಹ್ಯೂಮನ್ ರಿಸೋರ್ಸ್ ಆಪರೇಷನ್ಸ್, ಲಾಜಿಸ್ಟಿಕ್ಸ್ ಹಾಗೂ ಬಿಎಸ್ಸಿ ಕೋರ್ಸ್‌ಗಳಿಗೆ ಅನುಮೋದನೆ ನೀಡಲಾಗಿದೆ. ಮುಡಿಪು ಮತ್ತು ಹರೇಕಳ ಕಾಲೇಜುಗಳಲ್ಲಿ ಬಿ.ಕಾಂ ಮತ್ತು ಬಿಬಿಎ ಸೀಟುಗಳ ಸಂಖ್ಯೆಯನ್ನು ಹೆಚ್ಚಿಸಲಾಗಿದೆ ಎಂದು ಅವರು ತಿಳಿಸಿದ್ದಾರೆ.

ಗಾಂಜಾ ಸೇವನೆ: ಓರ್ವ ಸೆರೆ

• ಮುಲ್ಕಿ: ಪೊಲೀಸ್ ಠಾಣಾ ವ್ಯಾಪ್ತಿಯ ಕೊಳಚಿಕಂಬಳ ನದಿ ತೀರದ ಬಳಿ ಗಾಂಜಾ ಸೇವನೆ ಮಾಡುತ್ತಿದ್ದ ಯುವಕನನ್ನು ಮುಲ್ಕಿ ಪೊಲೀಸರು ಬಂಧಿಸಿ ನ್ಯಾಯಾಲಯಕ್ಕೆ ಹಾಜರು ಪಡಿಸಿದ್ದಾರೆ. ಆರೋಪಿಯನ್ನು ಅಜಿತ್ ಕುಮಾರ್ ಎಂದು ಗುರುತಿಸಲಾಗಿದೆ. ಮುಲ್ಕಿ ಪೊಲೀಸರು ಗಸ್ತುತಿರುಗುತ್ತಿದ್ದ ವೇಳೆ ಕೊಳಚಿ ಕಂಬಳ ಬಳಿ ಓರ್ವ ವ್ಯಕ್ತಿ ನಶೆಯಲ್ಲಿದ್ದಂತೆ ಕಂಡು ಬಂದಿದ್ದು, ವಿಚಾರಿಸಿದಾಗ ಗಾಂಜಾ ಸೇವಿಸಿರುವುದಾಗಿ ತಿಳಿಸಿದ್ದಾನೆ. ಆತನನ್ನು ವಶಕ್ಕೆ ಪಡೆದು ವೈದ್ಯಕೀಯ ತಪಾಸಣೆ ನಡೆಸಿದಾಗ ಗಾಂಜಾ ಸೇವನೆ ಮಾಡಿರುವುದಾಗಿ ದೃಢಪಟ್ಟಿದ್ದು ಆರೋಪಿಯ ವಿರುದ್ಧ ಮುಲ್ಕಿ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಸಂಪಾದಕೀಯ

ಅಪಕ್ವ ನೀತಿಯ ಪ್ರತಿಪಾದನೆ

ಕಾಂಗ್ರೆಸ್ ನಾಯಕಿ ಸೋನಿಯಾ ಗಾಂಧಿ ವಿದೇಶಾಂಗ ನೀತಿಯಲ್ಲೂ ಅಲ್ಪಸಂಖ್ಯಾತ ತುಷ್ಟೀಕರಣ ನೀತಿಯನ್ನು ಅನುಸರಿಸಲು ಯತ್ನಿಸುತ್ತಿರುವಂತಿದೆ. ಕೆಲದಿನಗಳ ಹಿಂದೆ ಪತ್ರಿಕೆಯೊಂದಕ್ಕೆ ಬರೆದಿರುವ ಲೇಖನದಲ್ಲಿ ಸೋನಿಯಾರವರು "ಗಾಝಾ ಕುರಿತಂತೆ ಭಾರತವು ಮೌನ ತಳೆದಿರುವುದು ನೈತಿಕವಾಗಿ ಮತ್ತು ವ್ಯೂಹಾತ್ಮಕವಾಗಿ ದೇಶಕ್ಕೆ ಪ್ರತಿಕೂಲವಾಗಿದೆ. ಇದರಿಂದಾಗಿ ಮುಸ್ಲಿಂ ರಾಷ್ಟ್ರಗಳು ಭಾರತವನ್ನು ದೂರವಿಡುವಂತಾಗಿದೆ" ಎಂಬುದಾಗಿ ಹೇಳಿರುವುದು ಅವರಿಗೆ ವಿದೇಶಾಂಗ ನೀತಿಯ ಕುರಿತಂತೆ ಇರುವ



ಅಪಕ್ವತೆಯನ್ನು ತೋರಿಸುವ ಜತೆಗೇ ಮುಸ್ಲಿಮರ ರಾಜಕೀಯ ಓಲೈಕೆಗಾಗಿ ಎಂತಹುದೇ ಗಿಮಿಕ್ ನಡೆಸಲು ಸಿದ್ಧ ಎಂಬುದನ್ನು ತೋರಿಸಿಕೊಟ್ಟಿದೆ. ಗಾಝಾ ಪರವಾಗಿ, ಪ್ಯಾಲೆಸ್ತೀನ್ ಪರವಾಗಿ ಹೇಳಿಕೆ ನೀಡಿದರೆ ದೇಶದಲ್ಲಿರುವ ಮುಸ್ಲಿಮರ ಮೆಚ್ಚುಗೆ ಗಳಿಸಬಹುದು ಎಂಬಂತಹ ಭ್ರಮೆಯೊಂದು ನಮ್ಮಲ್ಲಿನ ತಥಾಕಥಿತ ಜಾತ್ಯತೀತ ಪಕ್ಷಗಳ ಮುಖಂಡರಲ್ಲಿ ಮನೆಮಾಡಿದೆ. ಅದರಂಗವಾಗಿಯೇ ಸೋನಿಯಾರವರು ಈ ಲೇಖನ ಬರೆದಿದ್ದಾರೆ ಎನ್ನುವುದರಲ್ಲಿ ಅನುಮಾನವೇ ಇಲ್ಲ.

ಭಾರತವು ಪ್ಯಾಲೆಸ್ತೀನ್‌ನ ನ್ಯಾಯೋಚಿತ ಬೇಡಿಕೆಗೆ ಬೆಂಬಲವನ್ನೂ ನೀಡಿದೆ, ಮಾನವೀಯ ನೆಲೆಯಲ್ಲಿ ಗಾಝಾಕ್ಕೆ ಅವಶ್ಯ ನೆರವನ್ನೂ ನೀಡಿದೆ. ವಿಶ್ವಸಂಸ್ಥೆಯಲ್ಲಿ ಕದನವಿರಾಮ ನಿರ್ಣಯದ ಪರವಾಗಿ ಮತವನ್ನೂ ಚಲಾಯಿಸಿದೆ. ಭಾರತವು ತಮಗೆ ವಿರೋಧವಾಗಿದೆಯೆಂದು ಪ್ಯಾಲೆಸ್ತೀನಿಯನ್ನರಂತೂ ತಿಳಿದುಕೊಂಡಿಲ್ಲ. ಇದಕ್ಕೆ ಪ್ಯಾಲೆಸ್ತೀನ್‌ನ ಉನ್ನತ ನಾಗರಿಕ ಗೌರವವನ್ನು ಮೋದಿಯವರಿಗೆ ಪ್ರದಾನ ಮಾಡಿದ್ದಕ್ಕಿಂತ ಬೇರೆ ಪುರಾವೆ ಬೇಕಿಲ್ಲ. ಭಾರತದ ನಿಲುವಿನಿಂದಾಗಿ ಮುಸ್ಲಿಂ ರಾಷ್ಟ್ರಗಳು ಭಾರತವನ್ನು ದೂರ ಮಾಡಿವೆ ಎಂಬ ಸೋನಿಯಾ ಹೇಳಿಕೆಯೂ ನಿರಾಧಾರಿತ. ಮೋದಿಯವರಿಗೆ ತಮ್ಮ ದೇಶದ ಅತ್ಯುನ್ನತ ನಾಗರಿಕ ಪ್ರಶಸ್ತಿಗಳನ್ನು ನೀಡಿರುವ ದೇಶಗಳಲ್ಲಿ ಮುಸ್ಲಿಂ ರಾಷ್ಟ್ರಗಳೂ ಬಹಳಷ್ಟಿವೆ ಎಂಬುದನ್ನು ಮರೆಯಬಾರದು.

ನಿಜವಾಗಿ ಭಾರತದ ವಿದೇಶಾಂಗ ನೀತಿಯು ಈಗ ಹೆಚ್ಚೆಚ್ಚು ಗೆಳೆಯರನ್ನು ಸಂಪಾದಿಸಲು ಕಾರಣವಾಗಿದೆ. ಸಮರ ನಿರತ ರಾಷ್ಟ್ರಗಳೆರಡರ ಜತೆಗೂ ಸೌಹಾರ್ದ ಸಂಬಂಧ ಹೊಂದುವಂತಹ ಅತ್ಯಂತ ಸಮತೋಲಿನ ನಡೆಯನ್ನು ಭಾರತವೀಗ ಪ್ರದರ್ಶಿಸುತ್ತಿದೆ. ಉಕ್ರೇನ್ – ರಶ್ಯಾ, ಪ್ಯಾಲೆಸ್ತೀನ್– ಇಸ್ರೇಲ್, ಅಮೆರಿಕ– ಇರಾನ್ ಮೊದಲಾಗಿ ಎಲ್ಲ ದೇಶಗಳ ಜತೆಗೂ ಭಾರತವು ಉತ್ತಮ ಬಾಂಧವ್ಯ ಹೊಂದಿರುವುದು ಇದಕ್ಕೆ ಸಾಕ್ಷಿ.

ಕೆಲವರು ತಿಳಿದುಕೊಂಡಂತೆ ಭಾರತದ್ದು 'ಅಲಿಪ್ತ ನೀತಿ'ಯಲ್ಲ. ಎಲ್ಲರೊಡನೆ ಬೆರೆಯುವಂತಹ ನೀತಿ. ಈ ನೀತಿಯ ಕಾರಣದಿಂದಾಗಿಯೇ ಭಾರತವು ಜಾಗತಿಕ ಬಿಕ್ಕಟ್ಟಿನ ಸಂದರ್ಭದಲ್ಲೂ ದೇಶದ ಹಿತ ಕಾಯುವಲ್ಲಿ ಸಫಲವಾಗಿದೆ. ಈ ನೀತಿಯನ್ನು ಶ್ಲಾಘಿಸಬೇಕೇ ಹೊರತು, ರಾಜಕೀಯ ಕಾರಣಕ್ಕಾಗಿ ವಿರೋಧಿಸುವುದು ವಿಹಿತವೆನಿಸದು.

ಹೆಂಡತಿ ತೀರಾ ಕೆಟ್ಟವಳಾದರೆ

ಅತಿಪ್ರಚಂಡಾಂ ಬಹುಪಾತಪಾಕಿನೀಂ ವಿವಾದಶೀಲಾಂ ಸ್ವಯಮೇವ ತಪುರೀಮ್ ।
ಆಕ್ರೋಶಬೀಜಾಂ ಪರವೇಶ್ಮ ಗಾಮಿನೀಂ ತ್ಯಜೇಚ್ಚ ಭಾರ್ಯಾಂಥಿ, ದಶಪುತ್ರಸೂರಪಿ ॥

ತುಂಬಾ ಚಂಡಿ ಸ್ವಭಾವದವಳೂ, ಮಿಗುವ ಹಾಗೆ ಭಾರೀ ಖರ್ಚಿನ ಅಡುಗೆ ಮಾಡುವವಳೂ, ಮಾತಿಗೆ ಮಾತು ಬೆಳೆಸುವವಳೂ, ಕಂಡವರ ಮನೆಗೆ ತಿರುಗುವವಳೂ ಆದ ಹೆಂಡತಿಯನ್ನು, ಹತ್ತು ಮಕ್ಕಳನ್ನು ಹಡೆದವಳಾಗಿದ್ದಾಗ್ಯೂ ಬಿಟ್ಟು ಬಿಡತಕ್ಕದ್ದು – ಎಂಬುದು ಶ್ಲೋಕಾರ್ಥ.

ಶ್ಲೋಕ ಸಾಗರ



ಡಾ.ಸೋಂದಾ ಭಾಸ್ಕರ ಭಟ್

ವಿವಾಹ ವಿಚ್ಛೇದನ ಎಂಬ ರೋಗ ಈಗ ದೇಶದ ಉದ್ದಗಲಕ್ಕೆ ವ್ಯಾಪಿಸಿದೆ. ಮೊದಲು ಪಾಶ್ಚಾತ್ಯ ದೇಶದಲ್ಲಿ ಇದು ಹೆಚ್ಚಾಗಿತ್ತು. ಆದರೆ ಇಂದು ನಮ್ಮ ದೇಶದಲ್ಲೂ ಸಾಮಾನ್ಯವೆನಿಸುವಷ್ಟರ ಮಟ್ಟಿಗೆ ಬಂದಿದೆ. ಗಂಡ ಹೆಂಡತಿಯನ್ನು ಬಿಡುವುದು, ಹೆಂಡತಿ ಗಂಡನನ್ನು ಬಿಡುವುದು ಎಂಬುದು ಹಿಂದೆ ಇರಲಿಲ್ಲವೆಂದಲ್ಲ. ಅದಕ್ಕೆ ಬಲವಾದ ಕಾರಣಗಳಿದ್ದವು. ಶಾಸ್ತ್ರಗಳೂ ಸಮ್ಮತಿಸಿದ್ದವು. ಹತ್ತು ಮಕ್ಕಳ ತಾಯಿಯಾಗಿದ್ದರೂ ಎಂಥವಳನ್ನು ಗಂಡ ಬಿಡಬೇಕು ಎಂಬುದನ್ನು ಈ ಶ್ಲೋಕ ಹೇಳುತ್ತದೆ. ಇದು ಕೇವಲ ಗಂಡಸರಿಗೆ ಹೇಳಿದ್ದೆನಿಸಿದರೂ ಹೆಂಗಸರಿಗೂ ನಾವು ಅನ್ವಯಿಸಿಕೊಳ್ಳಬೇಕು.

ಅತಿ ಪ್ರಚಂಡಾಮ್ – ಎಂದರೆ ಚಂಡೀ ಸ್ವಭಾವದವಳು, ಯಾರ ನಿಯಂತ್ರಣಕ್ಕೂ ಬಗ್ಗುವವಳಲ್ಲ. ಕಂಡ ಕಂಡ ವಿಚಾರಕ್ಕೆ ಹಠ ಹಿಡಿಯುವವಳು ಮನೆಯನ್ನೇ ರಣರಂಗವಾಗಿಸಿ ಎಲ್ಲರ ನೆಮ್ಮದಿಗೂ ಕೊಡಲಿ ಪ್ರಾಯವಾದವಳು. ಇವಳಿದ್ದರೆ ಸಂಸಾರವೇ ಸರ್ವನಾಶ ಎಂಬ ಹಂತ ತಲುಪಿದಾಗ ನಿರ್ದಾಕ್ಷಿಣ್ಯವಾಗಿ ತ್ಯಜಿಸಬೇಕು.

ಬಹುಪಾಕಪಾಕಿನೀಮ್– ಅಳತೆ ಮೀರಿ ಅಡುಗೆ ಮಾಡುವವಳು, ಮಾಡಿದ ಅಡುಗೆ ಮಿಕ್ಕುವುದು, ಒಮ್ಮೊಮ್ಮೆ ಕಡಿಮೆಯಾಗುವುದು ಇದು ಇರುವಂಥದ್ದೇ. ಅಳತೆ ಮೀರಿದರೆ ಹೀಗೆಲ್ಲ ಸಂಭವಿಸುತ್ತದೆ. ಆದರೆ ಯಾವುದೇ ಹಿತವಚನವನ್ನು ಕೇಳದೇ ತಾನೂ ತಿಳಿದುಕೊಳ್ಳದೇ ಹೆಚ್ಚು ಹೆಚ್ಚು ಅಡುಗೆ ಮಾಡಿ ತಿಪ್ಪೆಗೆಸೆಯುವ ಮಡದಿ ಕೇವಲ ಮನೆಗೆ ಮಾಡುವ ದ್ರೋಹವಲ್ಲ, ರಾಷ್ಟ್ರದ್ರೋಹದ ಕೆಲಸ. ಆಹಾರ ಉಳಿಸಬೇಕು. ಹಸಿದವರಿಗೆ ಹಂಚಬೇಕು. ಇದನ್ನು ಬಿಟ್ಟು, ಹೇಳಿದ್ದನ್ನೂ ಕೇಳಿಸಿಕೊಳ್ಳದೇ ಆಹಾರವನ್ನು ವ್ಯರ್ಥವಾಗಿ 'ಪೋಲು' ಮಾಡುವ ಮಡದಿಯನ್ನು ಬಿಟ್ಟುಬಿಡಬೇಕು.

ವಿವಾದಶೀಲಾಮ್– ಎಂದರೆ ಜಗಳ ಕಾಯುವವಳು. ಕುಳಿತರೂ ಸರಿಯಿಲ್ಲ, ನಿಂತರೂ ಸರಿಯಿಲ್ಲ, ಓಡಾಡಿದರೂ ಸರಿಯಲ್ಲ ಎಂದು ನಿತ್ಯ ನಿರಂತರ ಜಗಳ ಮಾಡುವವಳನ್ನು' ಬಿಡುವುದೇ ಒಳ್ಳೆಯದು. ಸ್ವವಯಮೇವತಸ್ಕರಮ್– ಕದಿಯುವ ಸ್ವಭಾವವುಳ್ಳವಳು. ಕಳ್ಳತನವೇ ಮಹಾಪಾಪ. ತಾನೇ ಯಜಮಾನಿಯಾದ, ಎಲ್ಲವನ್ನೂ ಸರಿದೂಗಿಸಿಕೊಂಡು ಹೋಗುವ, ಮನೆ ಮಂದಿಗೆ ಸನ್ನಡತೆಯನ್ನು ಬೋಧಿಸುವ ಅವಳೇ ಮಹಾಕಳ್ಳಿಯಾದರೆ, ಮನೆಯ ವಸ್ತುವನ್ನೇ ಮಾರಾಟ ಮಾಡುವ ಮಾನಸಿಕ ಸ್ಥಿತಿಯವಳಾದರೆ ಬಿಟ್ಟುಬಿಡಬೇಕು.

ಆಕ್ರೋಶಬೀಜಾಮ್ – ಆಕ್ರೋಶ ಸ್ವಭಾವದವಳು ಎಂದರ್ಥ. ಎಲ್ಲರ ಅಂತರಂಗದಲ್ಲೂ ಕೋಪದ ಬೀಜ ಬಿತ್ತುವ ಇವಳಿಂದ ಸಂಸಾರವೇ ಹಾಳಾಗುವಂತಿದ್ದರೆ ಬಿಟ್ಟುಬಿಡುವುದೇ ವಾಸಿ.

ಬೇರೆಯವರ ಮನೆ ಸುತ್ತುವವಳು ಬಹುಬೇಗನೆ ನಿಂದೆಗೆ ಕಾರಣಳಾಗುತ್ತಾಳೆ. ಕಂಡಕಂಡವರ ಮನೆಯನ್ನು ಸುತ್ತುವುದೇ ಕೆಲಸ ಮಾಡಿಕೊಂಡರೆ ಲೋಕನಿಂದೆಗೆ ಪಾತ್ರಳಾಗಬೇಕು. ಇಂಥವಳಿಂದ ಮನೆತನಕ್ಕೆ ಕೆಟ್ಟ ಹೆಸರು. ಆದ್ದರಿಂದ ಈ ಹಿಂದೆ ಹೇಳಿದ ಗುಣಸ್ವಭಾವವುಳ್ಳವರನ್ನು ಇಟ್ಟುಕೊಳ್ಳುವುದಕ್ಕಿಂತಲೂ ಬಿಡುವುದೇ ಲೇಸು.

ಹೆಸರಲ್ಲೇನಿದೆ..!? ಆದರೆ ಹೆಸರಲ್ಲೇ ಎಲ್ಲಾ ಇದೆ!

ರಾಘವಾಂಕಣ

• ರಾಘವೇಂದ್ರ ಸುಬ್ರಹ್ಮಣ್ಯ
raghavaankana@gmail.com



ಜಾಗತೀಕರಣದ ಒಂದು ದೊಡ್ಡ ಅಡ್ಡಪರಿಣಾಮವೆಂದರೆ ಕೊಳ್ಳುಬಾಕ ಸಂಸ್ಕೃತಿಗೆ ಇಡೀ ಜಗತ್ತೇ ಸೇರಿಕೊಂಡದ್ದು. 1970ಕ್ಕೂ ಮೊದಲು ಜಾಗತಿಕ ಕಂಪನಿಗಳು ಎಂದರೆ ಕೆಲವು ಪೆಟ್ರೋಲಿಯಂ ಕಂಪನಿಗಳು, ಒಂದೆರಡು ಬ್ಯಾಂಕುಗಳು, ಕೆಲವಷ್ಟು ಗ್ರಾಹಕ ಬ್ರಾಂಡುಗಳು, ಅಲ್ಲೊಂದು ಇಲ್ಲೊಂದು ತಂತ್ರಜ್ಞಾನ ಕೇಂದ್ರಿತ ಕಂಪನಿಗಳಷ್ಟೇ ಇದ್ದವು. ಎಪ್ಪತ್ತರ ದಶಕಕ್ಕೂ ಮುನ್ನ ದಿನಕ್ಕೆ ಒಂದು ಅಥವಾ ಎರಡು ಬ್ರಾಂಡುಗಳ ಹೆಸರು ಕೇಳುತ್ತಿದ್ದ ಒಬ್ಬ ಸಾಮಾನ್ಯ ಗ್ರಾಹಕ ಇವತ್ತು ಒಬ್ಬ ಕೊಳ್ಳುಗನಾಗಿ ದಿನಕ್ಕೆ ಐನೂರಕ್ಕೂ ಬ್ರಾಂಡುಗಳ ಹೆಸರುಗಳನ್ನು ನೋಡುತ್ತಾನೆ, ನೂರಕ್ಕೂ ಹೆಚ್ಚು ಬ್ರಾಂಡುಗಳ ಬಳಕೆಯನ್ನೂ ಮಾಡುತ್ತಾನೆ.

ಆದರೆ ಈ ಪ್ರಸಿದ್ಧ ಬ್ರಾಂಡುಗಳ ಹೆಸರುಗಳು ಎಲ್ಲಿಂದ ಬಂದವು ಎಂದು ಯೋಚಿಸಿದ್ದೀರಾ? ಬ್ರಾಂಡುಗಳ ಹೆಸರನ್ನು ಜನಪ್ರಿಯಗೊಳಿಸಲಿಕ್ಕೆ ಕಂಪನಿಗಳು ಕೋಟ್ಯಂತರ ಡಾಲರ್ ಸುರಿಯುತ್ತವೆ. ಜನರಿಗೆ ಹತ್ತಿರವಾಗಿರಬೇಕು, ಅವರ ನೆನಪಿಗೆ ತಟ್ಟನೇ ಬರಬೇಕು, ಹೆಸರು ತೀರ ಉದ್ದವಾಗಿರಬಾರದು ಅಂತೆಲ್ಲಾ ನಿಯಮಾವಳಿಗಳನ್ನು ಪಾಲಿಸಿ ಹೆಸರನ್ನು ಆರಿಸುತ್ತವೆ. ಆದರೆ ಎಷ್ಟೋ ಸಲ ಈ ಹೆಸರುಗಳು ನಾವು ಊಹಿಸಿಯೇ ಇರದ ಹಿನ್ನೆಲೆಯಿಂದ ಬಂದಿರುತ್ತವೆ. ಇವುಗಳಲ್ಲಿ ಹಲವು ಹೆಸರುಗಳು ಸರಳವಾಗಿ ಕಂಡುಬಂದರೂ, ಅವುಗಳ ಮೂಲ ಯಾವುದೋ ಪುರಾಣದ ಕಥೆಗಳು, ಆಕಸ್ಮಿಕ ಆವಿಷ್ಕಾರಗಳು, ಕುಟುಂಬದ ಹೆಸರುಗಳು, ಸ್ಥಾಪಕರ ಹೆಸರುಗಳು ಅಥವಾ ಅಸ್ತಿತ್ವದಲ್ಲೇ ಇರದ ಯಾವುದೋ ಕಲ್ಪಿತ ಪದಗಳಿಂದ ಬಂದಿವೆ. ಕೆಲ ಜನಪ್ರಿಯ ಕಂಪನಿಗಳ ಹೆಸರುಗಳ ಹಿಂದಿನ ಆಕರ್ಷಕ ಕಥೆಗಳು ಹಾಗೂ ಆಶ್ಚರ್ಯಕರ ವಿವರಗಳು ನಿಮಗಾಗಿ ಇಲ್ಲಿವೆ.

ಆಪಲ್‌ಗೆ ಆ ಹೆಸರು ಬರಲು ಹಲವು ಕಥೆಗಳಿದ್ದರೂ, ಕಂಪನಿಯನ್ನು ಸ್ಥಾಪಿಸುವ ಕೆಲವೇ ದಿನಗಳ ಮುನ್ನ ಸ್ಟೀವ್ ಜಾಬ್ಸ್ ಸೇಬಿನ ತೋಟವೊಂದಕ್ಕೆ ಭೇಟಿ ನೀಡಿದ್ದೇ ಮುಖ್ಯ ಕಾರಣ ಎಂದು ಸ್ವತಃ ಜಾಬ್ಸ್ ಹೇಳಿಕೊಂಡಿದ್ದಾನೆ. ಕಂಪ್ಯೂಟರ್ ಉದ್ಯಮದಲ್ಲಿ ಸಾಮಾನ್ಯವಾಗಿ ಕಂಡುಬರುವ ತಾಂತ್ರಿಕ ಹೆಸರುಗಳಿಗಿಂತ ಬದಲಾಗಿ ಆಪಲ್ ಎಂಬ ಸ್ನೇಹಪರ, ಸುಲಭವಾಗಿ ಸಂಪರ್ಕಿಸಬಹುದಾದ ಮತ್ತು ಕಡಿಮೆ ಗಂಭೀರವಾದ ಹೆಸರನ್ನೇ ನೋಂದಾಯಿಸಿಕೊಂಡ. ಮಾತ್ರವಲ್ಲ, ಈ ಹೆಸರಿನಿಂದಾಗಿ ಟೆಲಿಫೋನ್ ಡೈರೆಕ್ಟರಿಯಲ್ಲಿ, ಅಂದಿನ ಜನಪ್ರಿಯ ಕಂಪನಿಯಾಗಿದ್ದ 'ಅಟಾರಿ'ಗಿಂತಾ 'ಆಪಲ್' ಮೊದಲು ಮುಂದೆ ಕಂಡುಬಂತು. ಇದು ಸ್ಟೀವ್ ಜಾಬ್ ಹೊಡೆದ ಒಂದು ಸಣ್ಣ ಸ್ಪರ್ಧಾತ್ಮಕ ಬೋನಸ್ ಕೂಡಾ ಹೌದು.

ಮೂಲತಃ ತಮ್ಮ ಸಂಶೋಧನಾ ಪ್ರಬಂಧದ ಹೆಸರಾಗಿದ್ದ ಬ್ಯಾಕ್ ರಬ್ ಎಂಬ ಹೆಸರನ್ನೇ ಸ್ಥಾಪಕರಾದ ಲ್ಯಾರಿ ಪೇಜ್ ಮತ್ತು ಸರ್ಗೀ ಬ್ರಿನ್ ತಮ್ಮ ಕಂಪನಿಯ ಹೆಸರಾಗಿ ಅಂತಿಮಗೊಳಿಸಿದ್ದರೂ, ಅಷ್ಟೇನೂ ಗ್ರಾಹಕಸ್ನೇಹಿಯಲ್ಲವೆಂಬ ಕಾರಣಕ್ಕೆ ಒಂದರ ನಂತರ ನೂರು ಸೊನ್ನೆಗಳನ್ನು ಬರೆದರೆ ಸಿಗುವ ಸಂಖ್ಯೆಯಾದ 'ಗೂಗೋಲ್' (Googol) ಎಂದು ಮರುನಾಮಕರಣ ಮಾಡಿದರು. ಬಳಕೆದಾರರು ಕೇಳಿದ ಪ್ರಶ್ನೆಗೆ ತಮ್ಮ ಸರ್ಚ್ ಎಂಜಿನ್ ಅಷ್ಟೊಂದು ಉತ್ತರಗಳನ್ನು ಕೊಡಬಹುದಾದ ಕಾರಣಕ್ಕೆ ಗೂಗೋಲ್ ಎಂಬುದೇ ಸರಿಯಾದ ಹೆಸರು ಎಂದು ಅವರ ಆಲೋಚನೆಯಾಗಿತ್ತು. ತಮಾಷೆಯೆಂದರೆ, ಕಂಪನಿಯ ಎಕ್ಸಿಕ್ಯೂಟಿವ್‌ಗಳೆಲ್ಲಾ ಚರ್ಚಿಸಿ ಹೆಸರನ್ನು ಅಂತಿಮಗೊಳಿಸುವ ಸಮಯದಲ್ಲಿ, ನೋಟ್ಸ್ ಬರೆದುಕೊಂಡವರಿಗೆ ಗೂಗೋಲ್ ಎಂಬ ಪದವೇ ಗೊತ್ತಿಲ್ಲದ ಕಾರಣಕ್ಕೋ ಅಥವಾ ಮೀಟಿಂಗಿನ ಮಂಕುಕವಿದಿತ್ತೋ ಗೊತ್ತಿಲ್ಲ, ಬರೆದ ಕಾಗುಣಿತ ತಪ್ಪಾಗಿ ಗೂಗಲ್ ಎಂದಾಯ್ತು. ಇದೇ ಚೆನ್ನಾಗಿದೆ ಎಂದುಕೊಂಡು ಗೂಗಲ್ ಅನ್ನೇ ಉಳಿಸಿಕೊಂಡರು.

ಮೈಕ್ರೋಕಂಪ್ಯೂಟರ್ ಮತ್ತು ಸಾಫ್ಟ್‌ವೇರ್ ಎಂಬೆರಡು ಪದಗಳ ಸಂಕ್ಷಿಪ್ತರೂಪವಾಗಿ ಬಿಲ್ ಗೇಟ್ಸ್ ತನ್ನ ಕಂಪನಿಯನ್ನು ಮೈಕ್ರೋಸಾಫ್ಟ್ ಎಂದು ಕರೆದ. ಗೇಟ್ಸ್ ತನ್ನ ಕಂಪನಿಯನ್ನು ಮೈಕ್ರೋ-ಸಾಫ್ಟ್ ಎಂದು ರಿಜಿಸ್ಟರ್ ಮಾಡಿಕೊಳ್ಳಲು ಮುಂದಾಗಿದ್ದರೂ, ಹೈಫನ್ ಚಿಹ್ನೆಯನ್ನು ವೆಬ್ ವಿಳಾಸದಲ್ಲಿ ಸೇರಿಸಲು ಇಂಟರ್ನೆಟ್ ಆಗಿನ್ನೂ ತಯಾರಿರಲಿಲ್ಲವಾದ್ದರಿಂದ, ಹೈಫನ್ ಅನ್ನು ಕೈಬಿಟ್ಟು ಮೈಕ್ರೋಸಾಫ್ಟ್ ಎಂಬ ಹೆಸರೇ ಅಂತಿಮಗೊಳಿಸಲಾಯ್ತು. ಇಂಟೆಲ್ ಎಂಬುದು 'ಇಂಟಿಗ್ರೇಟೆಡ್ ಎಲೆಕ್ಟ್ರಾನಿಕ್ಸ್‌ನ ಹ್ರಸ್ವರೂಪ. ಸಂಸ್ಥಾಪಕರಾದ ಗೋರ್ಡನ್ ಮೂರ್ ಮತ್ತು ರಾಬರ್ಟ್ ನಾಯ್ಸ್ ತಮ್ಮ ಕಂಪನಿಯನ್ನು 'ಮೂರ್ ನಾಯ್ಸ್' ಎಂದೇ ಕರೆಯಲು ಬಯಸಿದ್ದರು. ಆದರೆ ಆ ಹೆಸರನ್ನು ಅದಾಗಲೇ ಮತ್ತೊಂದು ಹೋಟೆಲ್ ಕಂಪನಿಯವರು ರಿಜಿಸ್ಟರ್ ಮಾಡಿಕೊಂಡಿದ್ದರಿಂದ ಇಂಟೆಲ್ ಎಂಬ ಹೆಸರೇ ಅಂತಿಮವಾಯ್ತು. ಅಡೋಬಿಯ ಸಹಸಂಸ್ಥಾಪಕ ಜಾನ್ ವಾರ್ನಾಕ್, ಕ್ಯಾಲಿಫೋರ್ನಿಯಾದ ಸಾಂಟಾಕ್ಲಾರಾ ನಗರದಲ್ಲಿದ್ದ ತನ್ನ ಮನೆಯ ಹಿಂದೆ ಹರಿಯುವ ಅಡೋಬಿ ಕ್ರೀಕ್‌ನ ಹೆಸರನ್ನೇ ತನ್ನ ಕಂಪನಿಗಿಟ್ಟ.

ಟೊಯೋಡಾ ಕುಟುಂಬ ಪ್ರಾರಂಭಿಸಿದ ತಮ್ಮ ವಾಹನ ತಯಾರಿಕಾ ಕಂಪನಿಗೆ ತಮ್ಮದೇ ಹೆಸರಿಟ್ಟುಕೊಳ್ಳೋಣ ಎಂಬ ಮನಸ್ಸಿತ್ತು. ಆದರೆ ಜಪಾನೀಸ್ ಭಾಷೆಯಲ್ಲಿ ಬರೆಯುವಾಗ ಟೊಯೋಡಾ ಎಂದು ಬರೆಯಲು ಹತ್ತು ಗೆರೆಗಳೂ, ಟೊಯೋಟಾ ಎಂದು ಬರೆಯಲು ಎಂಟು ಗೆರೆಗಳೂ ಬೇಕಾಗುತ್ತವೆ. ಜಪಾನೀಸ್ ಸಂಸ್ಕೃತಿಯಲ್ಲಿ ಎಂಟು ಸಮೃದ್ಧಿ ಮತ್ತು ಅದೃಷ್ಟದೊಂದಿಗೆ ಸಂಬಂಧಿಸಿದ ಸಂಖ್ಯೆಯಾದ್ದರಿಂದ ಟೊಯೋಟಾ ಹೆಸರಿಗೆ ಪ್ರಾಶಸ್ತ್ಯ ಸಿಕ್ಕಿತು! ಜರ್ಮನ್ ಕಾರು ಕಂಪನಿ 'ಆಡಿ'ಯ ನಿರ್ಮಾತೃ ಆಗಸ್ಟ್ ಹಾರ್ಚ್ ತನ್ನ ಮೊದಲ ಕಂಪನಿಗೆ ತನ್ನ ಹಾರ್ಚ್ ಉಪನಾಮವನ್ನು ಬಳಸಿಯಾಗಿತ್ತು. 'ಹಾರ್ಚ್' ಎಂದರೆ ಜರ್ಮನ್ ಭಾಷೆಯಲ್ಲಿ 'ಕೇಳಿರಿ' ಎಂದಾಗಿರುವುದರಿಂದ, ಸ್ನೇಹಿತರೊಬ್ಬರು ಅದೇ ಪದದ ಲ್ಯಾಟಿನ್ ಅನುವಾದವನ್ನು ಬಳಸಲು ಸೂಚಿಸಿದರು. 'ಆಡಿ' ಎಂದರೆ ಲ್ಯಾಟಿನ್ನಿನಲ್ಲಿ 'ಕೇಳಿರಿ' ಎಂದಾದ್ದರಿಂದ, ಸಂಸ್ಥಾಪಕ ತನ್ನದೇ ಹೆಸರನ್ನು ಬೇರೆ ಬೇರೆ ರೀತಿಯಲ್ಲಿ ಎರಡೂ ಕಂಪನಿಗಳಿಗಿಟ್ಟ.

ಇದೇ ಲ್ಯಾಟಿನ್ ಭಾಷೆಯ ಸಂಬಂಧಿತ ಇನ್ನೊಂದು ಕಥೆ ವೋಲ್ವೋ ಕಂಪನಿಯದ್ದು ಕೂಡ. ಲ್ಯಾಟಿನ್ನಿನಲ್ಲಿ ವೋಲ್ವೋ ಎಂದರೆ ನಾನು ಉರುಳುತ್ತೇನೆ. ಸ್ವೀಡನ್ನಿನ ಬಾಲ್–ಬೇರಿಂಗ್ ತಯಾರಕ ಕಂಪನಿಯಾಗಿದ್ದ ಎಸ್.ಕೆ.ಎಫ್, ವೋಲ್ವೋ ಎಂಬ ಹೆಸರನ್ನು ಅದಾಗಲೇ ನೋಂದಾಯಿಸಿಕೊಂಡಿತ್ತು. ಇಲ್ಲಿ ಕೆಲಸ ಮಾಡುತ್ತಿದ್ದ ಅಸ್ಸಾರ್ ಗೇಬ್ರಿಯಲ್ಸನ್ ಮತ್ತು ಗುಸ್ತಾಫ್ ಲಾರ್ಸನ್, ತಮ್ಮ ಹೊಸ ಕಂಪನಿಯ ಹೆಸರಾಗಿ ವೋಲ್ವೋ ಎಂಬ ಬ್ರಾಂಡ್ ಅನ್ನು ಬಳಸಲಿಕ್ಕೆ ಎಸ್.ಕೆ.ಎಫ್‌ನ ಆಡಳಿತ ಮಂಡಳಿಯನ್ನು ಒಪ್ಪಿಸಿದ್ದೂ ಅಲ್ಲದೇ, ತಮ್ಮ ಕಂಪನಿಯಲ್ಲಿ ಹಣ ಹೂಡುವಂತೆಯೂ ಒಪ್ಪಿಸುವಲ್ಲಿ ಯಶಸ್ವಿಯಾದರು. 1927ರಲ್ಲಿ ಸ್ಥಾಪನೆಯಾದ ವರ್ಷದಿಂದ, 1935ರಲ್ಲಿ ಸ್ವತಂತ್ರವಾಗುವವರೆಗೆ ವೋಲ್ವೋ ಆರ್ಥಿಕವಾಗಿ ಎಸ್.ಕೆ.ಎಫ಼ನ ಹಿಡಿತದಲ್ಲೇ ಇತ್ತು.

'ನಿಪ್ಪಾನ್ ಸಾಂಗ್ಯೊ' ಅಂದರೆ 'ಜಪಾನ್ ಇಂಡಸ್ಟ್ರೀಸ್' ಎಂಬ ಪದದ ಸಂಕ್ಷಿಪ್ತ ರೂಪವಾಗಿ ಹುಟ್ಟಿಕೊಂಡಿದ್ದು ನಿಸ್ಸಾನ್. ಜರ್ಮನಿಯ ಪ್ರಭಾವಿ ಆಟೋಮೊಬೈಲ್ ಡೀಲರ್ ಎಮಿಲ್ ಜೆಲ್ಲಿನೆಕ್‌ನ ಮಗಳ ಹೆಸರು ಮರ್ಸಿಡಿಸ್ ಜೆಲ್ಲಿನೆಕ್. ಗೊಟ್ಟಿಲಿಯೇಬ್ ಡೈಮ್ಲರನ ಕಂಪನಿಯ ಪಾಲುದಾರರಲ್ಲೊಬ್ಬನಾದ ಎಮಿಲ್, ಡೈಮ್ಲರನ ಪ್ರತಿಭಾವಂತ ಎಂಜಿನಿಯರ್ ವಿಲ್ಹೆಲ್ಮ್ ಮೇಬಾಕ್ ನೇತೃತ್ವದಲ್ಲಿ ಹೊಸದೊಂದು ಕಾರು ವಿನ್ಯಾಸವಾಗಬೇಕೆಂದು ಹಣ ಹೂಡಿದವ. ಮಾತ್ರವಲ್ಲ, ತನ್ನ ಮಗಳ ಹೆಸರನ್ನೇ ಆ ಕಾರಿಗೆ ಇಡಬೇಕೆಂದು ಹಠ ಹಿಡಿದವ. ಇಲ್ಲಿ ಎರಡು ತಮಾಷೆಯ ವಿಷಯಗಳನ್ನು ಕೇಳಿ. ಮೊದಲನೆಯದು, ಮುಂದೆ ಮರ್ಸಿಡಿಸ್ ಕಾರುಗಳ ಜನಪ್ರಿಯವಾದಾಗ ಎಮಿಲ್ ತನ್ನ ಹೆಸರನ್ನೇ ಎಮಿಲ್ ಜೆಲ್ಲಿನೆಕ್–ಮರ್ಸಿಡಿಸ್ ಎಂದು ವಿಧ್ಯುಕ್ತವಾಗಿ ಬದಲಾಯಿಸಿಕೊಂಡ. ಅಪ್ಪನೇ ಮಗಳ ಹೆಸರನ್ನು ಎರವಲು ಪಡೆದದ್ದು ಇಡೀ ಜಗತ್ತಿನಲ್ಲೇ ಮೊದಲ ಬಾರಿಯಿರಬೇಕು ಎಂದು ಹೇಳಿದ್ದನಂತೆ. ಎರಡು, ತನ್ನ ಹೆಸರು ಇಷ್ಟೆಲ್ಲಾ ಪ್ರಸಿದ್ಧ ಬ್ರಾಂಡ್ ಆದರೂ ಮರ್ಸಿಡಿಸ್ ಜೆಲ್ಲಿನೆಕ್‌ಗೆ ಕಾರುಗಳ ಬಗ್ಗೆ ಯಾವ ಆಸಕ್ತಿಯೂ ಇರಲಿಲ್ಲ. ಮಾತ್ರವಲ್ಲ, ತನ್ನಿಡೀ ಜೀವನದಲ್ಲಿ ಆಕೆ ಒಂದೇ ಒಂದು ಕಾರನ್ನೂ ಕೊಳ್ಳಲಿಲ್ಲ.

ಕೋಕಾ ಎಲೆಗಳು ಮತ್ತು ಕೋಲಾ ಬೀಜಗಳನ್ನು ಮೂಲ ಫಾರ್ಮ್ಯುಲಾದಲ್ಲಿ ಬಳಸಿದ್ದರಿಂದ, ಆ ಪಾನಿಯಕ್ಕೆ ಕೋಕಾ–ಕೋಲಾ ಎಂಬ ಹೆಸರು ಬಂದಿದ್ದು. ಇವತ್ತು ನಾವು ಕುಡಿಯುವ ಕೊಕಾಕೋಲಾದಲ್ಲಿ ಕೊಕೈನ್‌ನ ಮೂಲ ಪದಾರ್ಥವಾದ ಕೋಕಾವೂ ಇಲ್ಲ, ಕೋಲಾ ಬೀಜಗಳೂ ಇಲ್ಲ. ಆದರೆ ಒಂದು ಶತಮಾನಕ್ಕೂ ಹೆಚ್ಚು ಕಾಲ ಬದಲಾಗದೆ ಉಳಿದ ಈ ಕಂಪನಿಯ ವಿಶಿಷ್ಟ ಲೋಗೋ, ಜಗತ್ತಿನ ಅತ್ಯಂತ ಬೆಲೆಬಾಳುವ ಬ್ರಾಂಡುಗಳಲ್ಲೊಂದು ಹಾಗೂ ಅತ್ಯಂತ ಹೆಚ್ಚು ಹಾಗೂ ಸುಲಭವಾಗಿ ಗುರುತಿಸಲ್ಪಡುವ ಲೋಗೋ. 1893ರಲ್ಲಿ ಅಜೀರ್ಣವನ್ನು ಹೋಗಲಾಡಿಸಲು ಹೆಚ್ಚು ಸಹಾಯ ಮಾಡುತ್ತಿದ್ದ Brad's Drink ಎಂದು ಕರೆಯಲ್ಪಡುತ್ತಿದ್ದ ಪಾನೀಯವೊಂದು ಅಮೇರಿಕಾದ ಫಾರ್ಮಸಿಗಳಲ್ಲಿ ಮಾರಾಟವಾಗುತ್ತಿತ್ತು. ಅಜೀರ್ಣಕ್ಕೆ ಹಳೆಯ ಶೈಲಿಯ ವೈದ್ಯಕೀಯ ಪದವೆಂದರೆ 'ಡಿಸ್ಪೆಪ್ಸಿಯಾ'. ಡಿಸ್ಪೆಪ್ಸಿಯಾಕ್ಕೆ ಸಹಾಯ ಮಾಡುತ್ತಿದ್ದ ಈ ಪಾನೀಯವನ್ನು ಮುಂದೆ ಜನಪ್ರಿಯವಾದ ಬಳಿಕ 'ಪೆಪ್ಸಿ' ಎಂದು ಬದಲಾಯಿಸಿದ್ದು ಕಂಪನಿಯ ಮಾಲೀಕ ಕೇಲಬ್ ಬ್ರಾಡ್–ಹಾಮ್.

ಎಲ್ಲವೂ ಅಂದುಕೊಂಡಂತೆ ನಡೆದಿದ್ದರೆ, ಸ್ಟಾರ್‌ಬಕ್ಸ್‌ನ ಹೆಸರು ಮೊಬಿ–ಡಿಕ್ ಕಾದಂಬರಿಯಲ್ಲಿ ಬರುವ ಹಡಗೊಂದರ ಹೆಸರಾದ 'ಪೆಕ್ವಾಡ್' ಎಂದಾಗಬೇಕಿತ್ತು. ಆದರೆ ಸಂಸ್ಥಾಪಕರು ಕೊನೆಗಳಿಗೆಯಲ್ಲಿ, ಕಂಪನಿಯ ಹೆಸರನ್ನು ಮೋಬಿಯ ಸ್ನೇಹಿತನಾದ ಸ್ಟಾರ್‌ಬಕ್‌ನ ಹೆಸರಿಗೆ ಬದಲಾಯಿಸಿದರು. ಕಾಫಿಗೆ ಯಾವುದೇ ರೀತಿಯ ಸಂಬಂಧವಿಲ್ಲದ ಸ್ಟಾರ್‌ಬಕ್ ಸ್ಥಾಪಕರ ಓದಿನ ಹುಚ್ಚಿನಿಂದಾಗಿ ಕೆಫೆಯೊಂದರ ಹೆಸರಾಗಿ ಉಳಿದ. ಡ್ಯಾನಿಶ್ ಭಾಷೆಯ ಹೆಸರಿನಂತೆ ಕಂಡರೂ ಹಾಗನ್–ಡಾಜ್ಸ್ ಎಂಬುದಕ್ಕೆ ಯಾವ ಅರ್ಥವೂ ಇಲ್ಲ. ಇದೊಂದು ಸಂಪೂರ್ಣ ಅಮೇರಿಕನ್ ಕಂಪನಿ. ಇದರ ಮೂಲಮಾಲೀಕರು ಯುರೋಪಿಯನ್ ಕರಕುಶಲತೆ ಮತ್ತು ಗುಣಮಟ್ಟವನ್ನು ಗ್ರಾಹಕರ ಮನಸ್ಸಿನಲ್ಲಿ ಮೂಡಿಸಲು ಕಾಲ್ಪನಿಕವಾದ ಪದವೊಂದನ್ನು ಕಂಡುಹಿಡಿದದ್ದಷ್ಟೇ.

ಇನ್ನೂ ಕೆಲವು ಕುತೂಹಲಕಾರಿ ಕಂಪನಿಗಳ ಮಾಹಿತಿಗಳು ಮುಂದಿನವಾರಕ್ಕೆ. ಬೇರೆ ಯಾವುದಾದರೂ ಕಂಪನಿಗಳ ಹೆಸರಿನ ಮೂಲ ಬೇಕಿದ್ದಲ್ಲಿ ಮಿಂಚಂಚೆಯ ಮೂಲಕ ಸೂಚಿಸಿ.

ಟ್ರಂಪ್ ಮತ್ತು ಔರಂಗಜೇಬ್ ನಡುವಿನ ಸಾಮ್ಯತೆಗಳು

▸ ಉತ್ಪಲ್ ಕುಮಾರ್

ಔರಂಗಜೇಬ್, ಡೊನಾಲ್ಡ್ ಟ್ರಂಪ್ ಮಧ್ಯೆ ಸಾಕಷ್ಟು ಸಾಮ್ಯತೆಗಳಿವೆ. ಔರಂಗಜೇಬ್ ತನ್ನ ಆಡಳಿತದಲ್ಲಿ ಯಾವೆಲ್ಲ ತಪ್ಪುಗಳನ್ನು ಎಸಗಿದ್ದನೋ ಅದನ್ನೇ ಟ್ರಂಪ್ ಕೂಡಾ ಎಸಗುತ್ತಿದ್ದಾರೆ.

ಡೊನಾಲ್ಡ್ ಟ್ರಂಪ್ ಮತ್ತು ಮೊಘಲ್ ಅರಸ ಔರಂಗಜೇಬ್ ಮಧ್ಯೆ ಹಲವು ವೈರುಧ್ಯಗಳಿವೆ. ಟ್ರಂಪ್ ಧಾರ್ಮಿಕ ವ್ಯಕ್ತಿಯೇನಲ್ಲ. ಔರಂಗಜೇಬ್ ಧರ್ಮಕ್ಕಾಗಿ ಕೊಲ್ಲಲೂ, ಸಾಯಲೂ ತಯಾರಿದ್ದ ವ್ಯಕ್ತಿ. ದೇಶದ ಸಿರಿವಂತ ಸಾಮ್ರಾಜ್ಯದ ಅರಸನಾಗಿದ್ದರೂ ತನ್ನ ವಿರಾಮ ಕಾಲದಲ್ಲಿ ಔರಂಗಜೇಬ್ ಪ್ರಾರ್ಥನೆಯ ಟೊಪ್ಪಿ ಹೊಲಿಯುವ ಮತ್ತು ಕುರಾನಿನ ಪ್ರತಿ ತಯಾರಿಸುವ ಕೆಲಸದಲ್ಲಿ ತೊಡಗಿರುತ್ತಿದ್ದ. ಆದರೆ ಟ್ರಂಪ್ ಐಷಾರಾಮಿ ಜೀವನ ನಡೆಸುತ್ತಿರುವವರು.



ಹಾಗಿದ್ದರೂ ಇವರಿಬ್ಬರ ಮಧ್ಯೆ ಕೆಲವು ಸಾಮ್ಯತೆಗಳೂ ಇವೆ. ಅದು ರಾಜಕೀಯ ವ್ಯವಹಾರ ನಡೆಸುತ್ತಿರುವುದರಲ್ಲಿ ಕಂಡು ಬರುವ ಸಾಮ್ಯತೆ. ಔರಂಗಜೇಬ್ ತನ್ನ ಕಾಲದ ಅತ್ಯಂತ ಶಕ್ತಿಶಾಲಿ ಸಾಮ್ರಾಜ್ಯ ಆಳುತ್ತಿದ್ದ. ಟ್ರಂಪ್ ಶಕ್ತಿಶಾಲಿ ರಾಷ್ಟ್ರದ ಆಡಳಿತಗಾರರಾಗಿ ಚುನಾಯಿತರಾಗಿದ್ದಾರೆ. ಇವರಿಬ್ಬರೂ ತಮ್ಮ ಹಿಂದಿನ ಆಡಳಿತಗಾರರು ಮೃದು ಸ್ವಭಾವದವರು ಎಂದು ಭಾವಿಸುವವರು ಹಾಗೂ ತಮ್ಮ ಸಾಮ್ರಾಜ್ಯವನ್ನು ಮತ್ತಷ್ಟು ಬಲಿಷ್ಠಗೊಳಿಸುವ ಇರಾದೆ ಹೊಂದಿದವರು.

ತಮ್ಮ ಗುರಿಯನ್ನು ಸಾಧಿಸಲು ಇಬ್ಬರೂ ತಮ್ಮ ಗೆಳೆಯರು, ಮಿತ್ರಕೂಟ ಸದಸ್ಯರು ಮತ್ತು ವಿರೋಧಿಗಳೊಂದಿಗೆ ವರ್ತಿಸಿದ ರೀತಿಯಲ್ಲೂ ಬಹಳಷ್ಟು ಸಾಮ್ಯತೆಯಿದೆ. ಔರಂಗಜೇಬ್ ತನ್ನ ಮಿತ್ರರನ್ನು ತನಗೆ ಬೇಕಾದಂತೆ ಬಳಸಿಕೊಂಡವನಾದರೂ ಅವರ ಮೇಲೆ ವಿಶ್ವಾಸವಿಟ್ಟವನಲ್ಲ. ಆತ ಬಲಿಷ್ಠ ಹಿಂದು ರಾಜರ ವಿರುದ್ಧ ಹೋರಾಡಲು ತನ್ನ ಹಿಂದು ದಂಡನಾಯಕರನ್ನೇ ಕಳಿಸುತ್ತಿದ್ದ. ರಾಜಾ ಜೈಸಿಂಗ್‌ನನ್ನು ಶಿವಾಜಿ ವಿರುದ್ಧ ಹೋರಾಡಲು ಕಳಿಸಿದ. ರಾಜಾರಾಮ ಸಿಂಗ್‌ನನ್ನು ಅಸ್ಸಾಂನ ರಾಜರ ವಿರುದ್ಧ ಹೋರಾಡಲು ಕಳಿಸಿದ. ರಾಜಾ ಜಸ್ವಂತ್‌ಸಿಂಗ್‌ನನ್ನು ಅಫಘಾನಿಸ್ತಾನದ ದುರ್ಗಮ ಪ್ರದೇಶದಲ್ಲಿ ಹೋರಾಡಲು ಕಳಿಸಿದ. ಅಗತ್ಯ ಬಿದ್ದಾಗ ಅವರ ಲಾಭ ಪಡೆದುಕೊಂಡು ಬೇಡವೆಂದಾದಾಗ ಅವರನ್ನು ತ್ಯಜಿಸಿದ.

ಟ್ರಂಪ್ ಕೂಡಾ ಇದೇ ರೀತಿ ವ್ಯವಹರಿಸುತ್ತಿದ್ದಾರೆ. ತಮ್ಮ ನ್ಯಾಟೋ ಮಿತ್ರರನ್ನೇ ಹಳಿಯುತ್ತಿದ್ದಾರೆ. ಹಾಗೂ ಯುರೋಪಿನ ಮಿತ್ರ ರಾಷ್ಟ್ರಗಳ ಮುಖಂಡರನ್ನು ಅವಮಾನ ಮಾಡುತ್ತಿದ್ದಾರೆ. ದೀರ್ಘಾವಧಿ ಸ್ನೇಹಿತರ ವಿರುದ್ಧ ತೆರಿಗೆ, ನಿರ್ಬಂಧದಂತಹ ದಂಡನಾ ಕ್ರಮ ವಿಧಿಸಿ ಬೆದರಿಸುತ್ತಿದ್ದಾರೆ. ಕಳೆದೆರಡು ದಶಕಗಳಲ್ಲಿ ಅಮೆರಿಕದ ಸರಕಾರಗಳೆಲ್ಲವೂ ಭಾರತದೊಂದಿಗೆ ವಿಶ್ವಾಸ ವೃದ್ಧಿಗೆ ಸಾಕಷ್ಟು ಪ್ರಯತ್ನ ನಡೆಸಿ ಸಫಲವಾಗಿದ್ದರೆ, ಟ್ರಂಪ್ ಅದನ್ನು ಕೆಲವೇ ತಿಂಗಳಲ್ಲಿ ನಾಶಪಡಿಸಿದ್ದಾರೆ. ಅಮೆರಿಕವನ್ನು ನಂಬುವಂತಿಲ್ಲ ಎಂಬಂತಹ ಭಾರತದ ಹಳೆಯ ನಂಬಿಕೆಯು ಮತ್ತೆ ಸತ್ಯವೆಂಬಂತೆ ಮಾಡಿದ್ದಾರೆ.

ಸಾಮ್ರಾಜ್ಯಗಳು ಬೆದರಿಕೆ ಮತ್ತು ವಿಶ್ವಾಸವನ್ನು ಸಮಾನವಾಗಿ ಬಿಂಬಿಸಿದಾಗಲಷ್ಟೇ ಅವು ಬದುಕುಳಿಯುತ್ತವೆ. ಔರಂಗಜೇಬ್ 1707ರಲ್ಲಿ ಸಾಯುವಾಗ ಮೊಘಲ್ ಸಾಮ್ರಾಜ್ಯವು ಅತ್ಯಂತ ವಿಸ್ತಾರವಾಗಿತ್ತು. ಆದರೆ ಆ ವೇಳೆಗೆ ಅದಕ್ಕೆ ಅತೀ ಕಡಿಮೆ ಸ್ನೇಹಿತರಿದ್ದರು ಹಾಗೂ ಅತ್ಯಂತ ಹೆಚ್ಚು ವೈರಿಗಳಿದ್ದರು. ಹೇಳಲೇನೋ ಅದು ಅಪರಾಜಿತ ಎಂಬಂತಿತ್ತು. ವಾಸ್ತವದಲ್ಲಿ ಅದು ಶಿಥಿಲವಾಗಿತ್ತು.ಎಲ್ಲರ ವಿರೋಧ ಕಟ್ಟಿಕೊಂಡಿತ್ತು.

ಟ್ರಂಪ್‌ರ ಅಮೆರಿಕ ಕೂಡಾ ಈಗ ಅದೇ ಪರಿಸ್ಥಿತಿಯಲ್ಲಿದೆ. ಅಮೆರಿಕ ಅತ್ಯಂತ ದೊಡ್ಡ ಮಿಲಿಟರಿ ಶಕ್ತಿ ಹೊಂದಿದೆ ನಿಜ. ಅದರ ಆರ್ಥಿಕ ಶಕ್ತಿಯೂ ಬಲಿಷ್ಠವಾಗಿದೆ. ತಂತ್ರಜ್ಞಾನದಲ್ಲೂ ಮುಂದಿದೆ. ಆದರೆ ಅದರ ಮಿತ್ರರಾಷ್ಟ್ರಗಳೇ ಈಗ ಅಮೆರಿಕವನ್ನು ವಿಶ್ವಾಸಕ್ಕೆ ತೆಗೆದುಕೊಳ್ಳುತ್ತಿಲ್ಲ. ಅಮೆರಿಕದ ಪ್ರತೀ ನಡೆಯನ್ನೂ ಶಂಕಿಸುತ್ತಿವೆ. ಅಮೆರಿಕದ ಪ್ರಭುತ್ವ ಕೂಡಾ ಕಳೆಗುಂದುತ್ತಿರುವುದು ಇತ್ತೀಚಿನ ಅಮೆರಿಕ – ಇರಾನ್ ಒಪ್ಪಂದದಿಂದಲೂ ಸಾಬೀತಾಗಿದೆ. ಸಾಮ್ರಾಜ್ಯವೊಂದರ ಅಳಿವು ಮಹಾಪತನದಿಂದಲೇ ಆಗಬೇಕೆಂದಿಲ್ಲ. ವಿಶ್ವಾಸದ ಕೊರತೆಯೇ ಪತನದ ಆರಂಭ.

ಔರಂಗಜೇಬ್ ಮತ್ತು ಟ್ರಂಪ್ ಮಧ್ಯೆ ಮತ್ತೊಂದು ಸಾಮ್ಯತೆಯಿದೆ.ತನ್ನ ಹಿಂದಿನ ಅರಸರ ಕಾಲದಲ್ಲಿ ಮೊಘಲ್ ಸಾಮ್ರಾಜ್ಯ ತುಂಬಾ ಮೃದುವಾಗಿ ವರ್ತಿಸಿತ್ತು ಎಂದು ಭಾವಿಸಿದ್ದ ಔರಂಗಜೇಬ್ ಎಲ್ಲಾ ದಿಕ್ಕಿನಲ್ಲೂ ಯುದ್ಧ ಆರಂಭಿಸಿದ. ಪ್ರತಿಯೊಬ್ಬ ವಿರೋಧಿಯನ್ನೂ ಮಣಿಸಲು ಯತ್ನಿಸಿದ. ಇದರಿಂದಾಗಿ ಮೊಘಲ್ ಸಾಮ್ರಾಜ್ಯವು ನಿರಂತರವಾಗಿ ಯುದ್ಧದಲ್ಲೇ ತೊಡಗಿರುವಂತಾಯಿತು. ಉತ್ತರ, ದಕ್ಷಿಣ, ಪೂರ್ವ, ಪಶ್ಚಿಮಗಳಲ್ಲಿ ಔರಂಗಜೇಬ್ ವಿವಿಧ ರಾಜ್ಯಗಳ ವಿರುದ್ಧ ನಿರಂತರ ಹೋರಾಟ ನಡೆಸಿದ. ದಕ್ಷಿಣದಲ್ಲಿ ಮರಾಠರ ಹೊಡೆತ ತಾಳಲಾರದೆ ಔರಂಗಜೇಬ್ ದಖ್ಖನ್‌ನಿಂದ ದೂರ ಸರಿದ. 25 ವರ್ಷಗಳ ಕಾಲ ಗೆಲುವಿನ ಹಂಬಲದಿಂದ ಯುದ್ಧಗಳನ್ನು ನಡೆಸಿದ ಔರಂಗಜೇಬ್ ತಾನು ಸಾಯುವ ವೇಳೆಗೆ ತನ್ನ ಸಾಮ್ರಾಜ್ಯಕ್ಕೆ ಸ್ಥಿರತೆಯನ್ನು ನೀಡಲು ವಿಫಲನಾದ.

ಟ್ರಂಪ್ ಎಲ್ಲಾ ಯುದ್ಧಗಳನ್ನು ಕೊನೆಗೊಳಿಸುವ ಮತ್ತು ಅಮೆರಿಕವು ಯುದ್ಧ ಮಾಡದಿರುವ ವಾಗ್ದನದೊಂದಿಗೆ ಅಧಿಕಾರಕ್ಕೆ ಬಂದಿದ್ದರು. ಆದರೆ ಅವರ ಅಧ್ಯಕ್ಷತೆಯಲ್ಲಿ ಅಮೆರಿಕವು ಕೆಲವಾರು ಸಂಘರ್ಷಗಳಲ್ಲಿ ಕಾಣುವಂತಾಯಿತು. ಅಸ್ಥಿರತೆಯೂ ಹೆಚ್ಚಿದೆ. ಔರಂಗಜೇಬ್‌ನಂತೆ ಟ್ರಂಪ್ ಕೂಡಾ ತಾನು ಗೆಲ್ಲಬಲ್ಲ ಯುದ್ಧವನ್ನು ಆರಿಸುವ ಬದಲಾಗಿ ಸುದೀರ್ಘ ಎಳೆಯುವ ಯುದ್ಧಗಳಲ್ಲಿ ತೊಡಗುವ ಮೂಲಕ ತಮಗೆ ತಾವೇ ಹಾನಿ ಮಾಡಿಕೊಂಡಿದ್ದಾರೆ.

ಇರಾನ್–ಅಮೆರಿಕ ಯುದ್ಧವು ಒಂದು ಅಧ್ಯಯನಶೀಲ ವಿಷಯವಾಗಿದೆ. ಇದೀಗ ಸಮರ ಕೊನೆಗೊಳಿಸಿರುವುದಾಗಿ ಟ್ರಂಪ್ ಘೋಷಿಸಿದ್ದಾರೆ. ಈ ಅನವಶ್ಯ ಯುದ್ಧ ಕೊನೆಗೊಂಡುದು ಸ್ವಾಗತಾರ್ಹವೇ ಆದರೂ ಅಮೆರಿಕದ ಉದ್ದೇಶ ಮತ್ತು ಶಕ್ತಿಯ ಕುರಿತಂತೆ ಹಲವಾರು ಅಹಿತಕರ ಪ್ರಶ್ನೆಗಳು ಎತ್ತಲ್ಪಡುತ್ತಿವೆ. ಒಪ್ಪಂದದ ಅಂಶಗಳನ್ನು ಗಮನಿಸಿದರೆ ಅಮೆರಿಕದ ಮೇಲೆ ಇರಾನೇ ಮೇಲುಗೈ ಸಾಧಿಸಿರುವಂತೆ ತೋರಿ ಬರುತ್ತಿದೆ.

ಯುದ್ಧ ನಿಲ್ಲಿಸುವ ಮೂಲಕ ಟ್ರಂಪ್ ಅವರು ತಮ್ಮ ದೇಶದಲ್ಲಿ ಉದ್ಭವಿಸಬಹುದಾದ ರಾಜಕೀಯ ಸಮಸ್ಯೆಯನ್ನು ಪರಿಹರಿಸಿರಬಹುದು. ಆದರೆ ಅಂತಾರಾಷ್ಟ್ರೀಯವಾಗಿ ದುಬಾರಿ ಬೆಲೆ ತೆತ್ತಿದ್ದಾರೆ. ಅಮೆರಿಕದ ದೌರ್ಬಲ್ಯ ಜಗತ್ತಿಗೆ ತಿಳಿಯುವಂತಾಗಿದೆ. ಅಮೆರಿಕದ ಮಿತ್ರರಾಷ್ಟ್ರಗಳಿಗೂ ಅಮೆರಿಕದ ಸಖ್ಯ ಪ್ರತಿಕೂಲ ಪರಿಣಾಮ ಉಂಟು ಮಾಡಿದೆ. ಇಸ್ರೇಲ್‌ನ ಗುರಿ ಇರಾನ್‌ನ್ನು ದುರ್ಬಲಗೊಳಿಸುವುದಾಗಿತ್ತು. ಆದರೆ ಅಮೆರಿಕದೊಂದಿಗಿನ ಒಪ್ಪಂದದ ಮೂಲಕ ಇರಾನ್ ಹಾಗೇ ಉಳಿದಿರುವುದು ಇಸ್ರೇಲ್‌ಗೆ ಸಹ್ಯವಾಗಿಲ್ಲ. ಅದು ಒಪ್ಪಂದವನ್ನು ಮಾನ್ಯ ಮಾಡುವುದಿಲ್ಲವೆಂದು ಹೇಳುತ್ತಿದೆ. ಕೊಲ್ಲಿಯಲ್ಲಿರುವ ಅಮೆರಿಕದ ಮಿತ್ರರಾಗಿರುವ ಸುನ್ನಿ ರಾಷ್ಟ್ರಗಳಿಗೂ ಇದೀಗ ಅಮೆರಿಕದ ಸ್ನೇಹವು ವರದಾನಕ್ಕಿಂತಲೂ ಹೆಚ್ಚಾಗಿ ಶಾಪವೇ ಆಗಿರುವುದು ಮನದಟ್ಟಾಗಿದೆ.

ಹಾಗಿದ್ದರೆ ಟ್ರಂಪ್ ಸಾಧಿಸಿದ್ದಾದರೂ ಏನು? ಅಮೆರಿಕದ ದೌರ್ಬಲ್ಯವನ್ನು ಎತ್ತಿ ತೋರಿದ್ದಾರೆ. ಇಸ್ರೇಲ್‌ನ ನಿಷ್ಠುರ ಕಟ್ಟಿಕೊಂಡಿದ್ದಾರೆ. ಸುನ್ನಿ ಅರಬ್ ರಾಷ್ಟ್ರಗಳ ಅವಿಶ್ವಾಸಕ್ಕೆ ಪಾತ್ರರಾಗಿದ್ದಾರೆ ಹಾಗೂ ಇರಾನ್ ಬಲಿಷ್ಠವಾಗಿಯೇ ಉಳಿಯಲು ಬಿಟ್ಟಿದ್ದಾರೆ.

ಇಲ್ಲಿರುವ ಪಾಠ ಅತ್ಯಂತ ಸರಳವಾಗಿದೆ.ಅತ್ಯಂತ ಬಲಿಷ್ಠ ಮತ್ತು ಯಶಸ್ವಿ ಆಡಳಿತಗಾರರು ಯಾರೆಂದರೆ ಹೆಚ್ಚು ಸ್ನೇಹಿತರನ್ನು ಸಂಪಾದಿಸಿ ಕಡಿಮೆ ವಿರೋಧಿಗಳನ್ನು ಹೊಂದಿರುವವರು. ಹಾಗೂ ತನ್ನ ಮಿತ್ರರನ್ನೆಲ್ಲಾ ತನ್ನ ಜತೆಯಲ್ಲಿಯೇ ಇಟ್ಟುಕೊಳ್ಳುವವರು. ಅಕ್ಬರ್ ಇದನ್ನು ಅರಿತುಕೊಂಡು ತನ್ನ ಸಾಮ್ರಾಜ್ಯ ಕಟ್ಟಿಕೊಂಡಿದ್ದ. ಔರಂಗಜೇಬ್ ಇದನ್ನು ಅರಿಯದೆ ಕೆಟ್ಟುಹೋದ. ರೂಸ್‌ವೆಲ್ಟ್ ಇದನ್ನು ಅರಿತುದರಿಂದ ಅಮೆರಿಕನ್ ಸಾಮ್ರಾಜ್ಯ ಬೆಳೆಯಿತು. ಟ್ರಂಪ್‌ಗೆ ಇದು ಅರಿಯದಿರುವುದರಿಂದ ಅಮೆರಿಕದ ಪತನ ಆರಂಭವಾಗಿದೆ.

ಆರೆಸ್ಸೆಸ್ ಟೀಕಾಕಾರರ 'ಭ್ರಮರ ಕೀಟ ನ್ಯಾಯ'

'ಭ್ರಮರ ಕೀಟ ನ್ಯಾಯ' ಎಂಬುದು ಸಂಸ್ಕೃತದ ಒಂದು ಉಕ್ತಿ. 'ಭ್ರಮರವು ಕೀಟವೊಂದನ್ನು ತಂದು ತನ್ನ ಗೂಡಿನ ಒಳಗೆ ಇಟ್ಟುಕೊಳ್ಳುತ್ತದೆ. ಭ್ರಮರದ ಭಯದಿಂದ ಆ ಕೀಟವು ಸಹ ಸದಾ ಭ್ರಮರದ ಯೋಚನೆಯನ್ನೇ ಮಾಡಿ ಮಾಡಿ ಕೊನೆಗೆ ಅದು ಭ್ರಮರವೇ ಆಗಿಬಿಡುತ್ತದೆ' ಎಂಬುದು 'ಭ್ರಮರ ಕೀಟ ನ್ಯಾಯ'ದ ವಿವರಣೆ. ನಮ್ಮ ರಾಜ್ಯದ ಗೃಹ ಸಚಿವ ಖರ್ಗೆಯವರು ಪ್ರತಿದಿನ, ಪ್ರತಿಕ್ಷಣ ಕುಳಿತಲ್ಲಿ, ನಿಂತಲ್ಲಿ ಆರೆಸ್ಸೆಸ್ಸನ್ನೇ ಧ್ಯಾನಿಸುತ್ತಾರೆ. ಕೊನೆಗೊಂದು ದಿನ ಅವರೂ 'ಭ್ರಮರ ಕೀಟ ನ್ಯಾಯ'ದಂತೆ ಆರೆಸ್ಸೆಸ್ ಕಾರ್ಯಕರ್ತರಾಗಿ ಬದಲಾಗಬಹುದೇನೋ ಎಂಬ ಅನುಮಾನ ಬಹು ಮಂದಿಯನ್ನು ಕಾಡುತ್ತಿದೆ!

ಪತ್ರ ಮಿತ್ರ

ಆರೆಸ್ಸೆಸ್ ಖರ್ಗೆಯವರಿಗೆ ಏನು ಮಾಡಿದೆ? ಅವರ ಸಂಪತ್ತನ್ನು ದೋಚಿದೆಯೇ? ಅವರ ಕುಟುಂಬಕ್ಕೆ ತೊಂದರೆ ಕೊಟ್ಟಿದೆಯೇ? ಈ ದೇಶಕ್ಕೆ ಹಾನಿ ಎಸಗಿದೆಯೇ? ಶತ್ರು ದೇಶದೊಂದಿಗೆ ಶಾಮೀಲಾಗಿದೆಯೇ? ಯಾರಿಗಾದರೂ ಭಯವನ್ನುಂಟು ಮಾಡಿದೆಯೇ? ಭಯೋತ್ಪಾದನೆ, ಕಳ್ಳ ಸಾಗಾಣಿಕೆ, ಮಾದಕ ದ್ರವ್ಯ ಸರಬರಾಜುಗಳನ್ನು ಮಾಡಿದೆಯೇ? ಹಾಗಿದ್ದರೆ ಅದನ್ನು ಮಟ್ಟ ಹಾಕಲು ಗೃಹ ಸಚಿವರಿಗೆ ಸಾಮರ್ಥ್ಯವಿಲ್ಲವೇ? ಆರೆಸ್ಸೆಸ್‌ನ ಹೆಚ್ಚಿನ ಪೂರ್ಣಾವಧಿ ಕಾರ್ಯಕರ್ತರು ಯಾವುದೇ ಅಪೇಕ್ಷೆ ಇಲ್ಲದೆ ನಿಸ್ವಾರ್ಥ ಬುದ್ಧಿಯಿಂದ, ಸಮರ್ಪಣಾ ಭಾವದಿಂದ ದುಡಿಯುತ್ತಾರೆ. ಸಂಚಾರ ಸಮಯದಲ್ಲಿ ಅವರು ಹಿತೈಷಿಗಳ ಮನೆಗಳಲ್ಲಿ ಉಳಿದುಕೊಳ್ಳುತ್ತಾರೆ. ಅವರು ನೀಡಿದ ಸರಳ ಆಹಾರವನ್ನು ಸೇವಿಸುತ್ತಾರೆ. ಅವರಾರೂ ಪಂಚತಾರಾ (ರೆಸಾರ್ಟ್) ಆತಿಥ್ಯವನ್ನು ಬಯಸಿದವರಲ್ಲ. ಕೆಲವು ವರ್ಷಗಳ ಹಿಂದೆ ಸಂಘದ ಹಿರಿಯ ಕಾರ್ಯಕರ್ತ ಸೀತಾರಾಮ ಕೆದಿಲಾಯ ಎಂಬವರು ಭಾರತ ಪರಿಕ್ರಮಣ ನಡೆಸಿ ಬಂದರು. ಇಡೀ ಭಾರತದಾದ್ಯಂತ ಸಂಚರಿಸಲು ಅವರಿಗೆ ಯಾವುದೇ ತೊಂದರೆಯಾಗಲಿಲ್ಲ. ಭಾರತದಾದ್ಯಂತ ಹರಡಿಕೊಂಡ ಸ್ವಯಂಸೇವಕರು ಮತ್ತು ಹಿತೈಷಿಗಳು ಅವರಿಗೆ ಸಹಕಾರ ನೀಡಿದರು. ನಡಿಗೆಯಲ್ಲೇ ಸಂಚಾರ ಮುಗಿಸಿ ಬಂದ ಅವರಿಗೆ ವಾಹನದ ವೆಚ್ಚದ ಅಗತ್ಯವೇ ಬೀಳಲಿಲ್ಲ. ಇನ್ನು ಸಾಮಾನ್ಯ ಸ್ವಯಂಸೇವಕರು ಶಾಖೆಗಳಲ್ಲಿ ಪಾಲ್ಗೊಳ್ಳುತ್ತಾರೆ. ಗುರುದಕ್ಷಿಣೆ ಸಮರ್ಪಿಸುತ್ತಾರೆ. ಆಪತ್ಕಾಲದಲ್ಲಿ ಸಮಾಜ ಸೇವೆಗೂ ಮುಂದಾಗುತ್ತಾರೆ. ಇವೆಲ್ಲ ಅಜ್ಞಾನಾಂಧಕಾರದಲ್ಲಿ ಮುಳುಗಿದ ಕುರುಡರಿಗೆ ಅರ್ಥವಾಗುವುದಿಲ್ಲ. 'ಭ್ರಮರ ಕೀಟ ನ್ಯಾಯ'ದ ಬಗ್ಗೆ ವೇದಾಂತ ಚಿಂತನೆಯೊಂದು ಹೀಗಿದೆ–

ಜೀವನ್ಮುಕ್ತಿಸ್ತು ತದ್ವಿದ್ವಾನ್ ಸರ್ವೋಪಾಧಿಗುಣಾನ್ ತ್ಯಜೇತ್।
ಸಚ್ಚಿದಾನಂದ ಧರ್ಮಸ್ವಾತ್ ಭಜೇತ್ ಭ್ರಮರಕೀಟವತ್॥

ಆತ್ಮ ಜ್ಞಾನದಿಂದ ಮಾಯಾ ಬಂಧನದ ಭಯವನ್ನು ತ್ಯಜಿಸಿದ ಜ್ಞಾನಿಯು ಕೀಟವು ಭ್ರಮರವನ್ನೇ ಧ್ಯಾನಿಸಿ ಭ್ರಮರವಾದಂತೆ ಸಚ್ಚಿದಾನಂದ ಸ್ವರೂಪನೇ ಆಗುತ್ತಾನೆ . ಹಾಗೆಯೇ ಖರ್ಗೆ ಅವರು ಆತ್ಮಜ್ಞಾನವನ್ನು ಹೊಂದಿ ಆರೆಸ್ಸೆಸ್‌ನ ಭಯವನ್ನು ತ್ಯಜಿಸಿ ಸಚ್ಚಿದಾನಂದ ಸ್ವರೂಪರೇ ಆಗಿ ಪ್ರಜಾಹಿತ ಚಿಂತನೆಯನ್ನೇ ಮಾಡುತ್ತಾ ಗೃಹ ಖಾತೆಯನ್ನು ನಿರ್ವಹಿಸಲಿ ಎಂಬುದೇ ನಮ್ಮೆಲ್ಲರ ಕಳಕಳಿಯಾಗಿದೆ.

–ಎನ್. ಸುಬ್ರಹ್ಮಣ್ಯ ಭಟ್, ಮುಡಿಪು

ಯಕ್ಷಪ್ರಶ್ನೆ!

ಜಾರಿ ನಿರ್ದೇಶನಾಲಯದ ಬೆಂಗಳೂರು ವಲಯ ಕಚೇರಿಯ ಅಧಿಕಾರಿಗಳು ಮೈಸೂರು ಮತ್ತು ಬೆಳಗಾವಿಯಲ್ಲಿ ಒಟ್ಟು 14 ಸ್ಥಳಗಳಲ್ಲಿ ಶೋಧ ಕಾರ್ಯಾಚರಣೆ ನಡೆಸಿ ರಾಜ್ಯ ಅಬಕಾರಿ ಇಲಾಖೆಯಲ್ಲಿ ವ್ಯವಸ್ಥಿತ ಭ್ರಷ್ಟಾಚಾರ ಮತ್ತು ಸರ್ಕಾರಿ ಅಧಿಕಾರಿಗಳು ಅಕ್ರಮವಾಗಿ ಆಸ್ತಿ ಸಂಪಾದಿಸಿರುವ ಆರೋಪಗಳ ಹಿನ್ನೆಲೆಯಲ್ಲಿ ದಾಳಿ ನಡೆಸಿದ್ದಾರೆ. ಕರ್ನಾಟಕ ಅಬಕಾರಿ ಇಲಾಖೆಯ ಹಿರಿಯ ಅಧಿಕಾರಿಗಳ ವಿರುದ್ಧ ಕರ್ನಾಟಕ ಲೋಕಾಯುಕ್ತ ಪೊಲೀಸರು ದಾಖಲಿಸಿದ್ದ ದೂರಿನ ಆಧಾರದ ಮೇಲೆ ಇಡಿ ಅಧಿಕಾರಿಗಳು ಧಾಳಿ ನಡೆಸಿದ್ದಾರೆ. ವಿವಿಧ ಅಬಕಾರಿ ಪರವಾನಗಿಗಳನ್ನು (ಲೈಸೆನ್ಸ್) ಮಂಜೂರು ಮಾಡುವ ಹಾಗೂ ನವೀಕರಿಸುವ ಪ್ರಕ್ರಿಯೆಯಲ್ಲಿ ಅಬಕಾರಿ ಇಲಾಖೆಯ ಹೆಚ್ಚುವರಿ ಆಯುಕ್ತ ವೈ. ಮಂಜುನಾಥ್ ಲಂಚ ಸ್ವೀಕರಿಸಿ ವೈಯಕ್ತಿಕ ಲಾಭ ಪಡೆದಿದ್ದಾರೆ ಎಂಬ ಆರೋಪ ಇದೆ.

ಈ ಪ್ರಕರಣದಲ್ಲಿ ಅಬಕಾರಿ ಇಲಾಖೆಯ ಹೆಚ್ಚುವರಿ ಆಯುಕ್ತ ವೈ. ಮಂಜುನಾಥ್ ಮತ್ತು ಅವರ ಆಪ್ತರಿಗೆ ಸೇರಿದ ಹಲವು ಸ್ಥಳಗಳಲ್ಲಿ ಜಾರಿ ನಿರ್ದೇಶನಾಲಯದ ಅಧಿಕಾರಿಗಳು ದಾಳಿ ನಡೆಸಿದ್ದಾರೆ. ಈ ದಾಳಿಯ ವರದಿಯಾಗುತ್ತಿ ದ್ದಂತೆಯೇ ನಮ್ಮ ರಾಜ್ಯದ ಗೃಹ ಸಚಿವರು ಪ್ರತಿಕ್ರಿಯೆ ನೀಡುತ್ತಾ ಇದೊಂದು ರಾಜಕೀಯ ಪ್ರೇರಿತ ದಾಳಿ.ಇಂತಹ ಪ್ರಕರಣಗಳಲ್ಲಿ ಎಷ್ಟು ಜನರಿಗೆ ಶಿಕ್ಷೆಯಾಗಿದೆ? ಕೇಂದ್ರ ತನಿಖಾ ಸಂಸ್ಥೆಗಳಾದ ಇ.ಡಿ, ಐ.ಟಿ, ಹಾಗೂ ಸಿಬಿಐ ಕೇಂದ್ರ ಸರಕಾರದ ಕೈಗೊಂಬೆಗಳಾಗಿ ಕಾರ್ಯನಿರ್ವಹಿಸುತ್ತಿವೆ ಎನ್ನುವ ಮೂಲಕ ಭ್ರಷ್ಟ ಆರೋಪಿಗಳ ಪರವಾಗಿ ಬ್ಯಾಟ್ ಬೀಸಿದ್ದಾರೆ. ರಾಜ್ಯದ ಪರವಾಗಿ ಕೆಲಸ ಮಾಡಬೇಕಾಗಿರುವ ಗೃಹಮಂತ್ರಿಗಳು ಆರೋಪಿಗಳ ಪರವಾಗಿ ಬ್ಯಾಟಿಂಗ್ ಮಾಡಬಹುದೇ?

ಇದು ಯಕ್ಷಪ್ರಶ್ನೆ!

–ಪಿ.ಜಿ.ರಾಘವೇಂದ್ರ, ಮೈಸೂರು

ದಿವ್ಯೌಷಧವೆಂಬ ಮೋಸ

ಔಷಧೀಯ ಗುಣಗಳ ಹೆಸರಿನಲ್ಲಿ ವಿಟಮಿನ್, ಖನಿಜಾಂಶಗಳು, ಮೆಲಟೋನಿನ್, ಒಮೆಗಾ–3 ಫಿಶ್ ಆಯಿಲ್, ಹಾರ್ಮೋನ್ ಹಾಗೂ ಮೂಲಿಕೆ ಸಾರಗಳನ್ನು 'ಡಯಟರಿ ಸಪ್ಲಿಮೆಂಟ್ಸ್' ಎಂದು ದುಬಾರಿ ಬೆಲೆಗೆ ಮಾರುಕಟ್ಟೆಯಲ್ಲಿ ಮಾರಲಾಗುತ್ತಿದೆ. ನಿಯಮಾವಳಿಗಳ ಲೋಪ ಬಳಸಿಕೊಂಡು ಪ್ಯಾಕೆಟ್‌ಗಳ ಮೇಲೆ ಅತ್ಯಂತ ಸಣ್ಣ ಅಕ್ಷರಗಳಲ್ಲಿ 'ಇದು ಔಷಧೀಯ ಬಳಕೆಗೆ ಅಲ್ಲ' ಎಂದು ಬರೆದು ಜನರನ್ನು ಮೂರ್ಖರನ್ನಾಗಿಸಲಾಗುತ್ತಿದೆ. ಜನರು ಇವುಗಳನ್ನು ನಿಜವಾದ ದಿವ್ಯೌಷಧ ಎಂದು ನಂಬಿ ಮೋಸಹೋಗುತ್ತಿದ್ದಾರೆ. ಕೇಂದ್ರ ಔಷಧ ಗುಣಮಟ್ಟ ನಿಯಂತ್ರಣ ಸಂಸ್ಥೆ ಮತ್ತು ಕೇಂದ್ರ ಆರೋಗ್ಯ ಸಚಿವಾಲಯವು ಈ ಮಾರುಕಟ್ಟೆಯ ಮಹಾ ಮೋಸವನ್ನು ಕೂಡಲೇ ನಿಯಂತ್ರಿಸಬೇಕು. ಇವು ಕೇವಲ ಪೂರಕ ಆಹಾರಗಳೇ ಹೊರತು ಕಾಯಿಲೆ ಗುಣಪಡಿಸುವ ಮದ್ದುಗಳಲ್ಲ ಎಂಬ ಬಗ್ಗೆ ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸುವ ಅಭಿಯಾನವನ್ನು ತಕ್ಷಣವೇ ಹಮ್ಮಿಕೊಳ್ಳಬೇಕು.

–ಡಾ.ವಿಜಯಕುಮಾರ್, ರಾಯಚೂರು

ತಂಡ ಸಾಮರ್ಥ್ಯದ ಸತ್ಯದರ್ಶನ

ಟಿ20 ವಿಶ್ವ ಚಾಂಪ್ಯನ್ ಭಾರತವು ಐರ್ಲೆಂಡಿನೆದುರು ಎರಡೂ ಪಂದ್ಯಗಳನ್ನು ಸೋತಿರುವುದು ತಂಡದ ಲೋಪಗಳನ್ನು ಎತ್ತಿ ತೋರಿದೆ. ಭಾರತದ ಪಿಚ್‌ಗಳಲ್ಲಿ ರನ್ ಸುರಿಮಳೆಗೈಯುವ ಬ್ಯಾಟ್ಸ್‌ಮನ್‌ಗಳು ಬೌಲಿಂಗಿಗೆ ನೆರವೀಯುವ ಪಿಚ್‌ನಲ್ಲಿ ಸಾಮಾನ್ಯ ಬೌಲಿಂಗಿನೆದುರೂ ಹೇಗೆ ಪರದಾಡಿದರು ಎನ್ನುವುದರ ಸತ್ಯದರ್ಶನವಾಗಿದೆ. ಇನ್ನೀಗ ಇಂಗ್ಲೆಂಡಿನ ನೆಲದಲ್ಲಿ ಭಾರತೀಯ ತಂಡದ ನಿರ್ವಹಣೆಯನ್ನು ನೋಡಬೇಕಾಗಿದೆ.

–ಸತೀಶ್ ಅಡಿಗ, ಪುತ್ತೂರು

ಕನ್ನಡಿಗರಿಗೆ ಕಾಂಗ್ರೆಸ್ ಮತ್ತೊಮ್ಮೆ ಮಹಾದ್ರೋಹ: ಆರ್.ಅಶೋಕ

ಬೆಂಗಳೂರು: ನಾಡದ್ರೋಹಿ ಕೈ ಸರ್ಕಾರವು ಕನ್ನಡಿಗರಿಗೆ ಮತ್ತೊಮ್ಮೆ ಮಹಾದ್ರೋಹ ಮಾಡಿದೆ ಎಂದು ವಿಧಾನಸಭೆ ಪ್ರತಿಪಕ್ಷ ನಾಯಕ ಆರ್.ಅಶೋಕ್ ಆರೋಪಿಸಿದ್ದಾರೆ.

ಸಾಮಾಜಿಕ ಜಾಲತಾಣದಲ್ಲಿ ಈ ಕುರಿತು ಪೋಸ್ಟ್ ಮಾಡಿರುವ ಅವರು, ಮುಂಗಾರು ಕ್ಷೀಣಿಸಿ ಕರ್ನಾಟಕದಲ್ಲಿ ಬರದ ಭೀತಿ ಆವರಿಸಿದೆ. ಸಿಲಿಕಾನ್ ಸಿಟಿ ಬೆಂಗಳೂರಿನಲ್ಲಿ ಹನಿ



ನೀರಿಗೂ ಜನ ಪರದಾಡುವ ಭೀಕರ ಪರಿಸ್ಥಿತಿ ಎದುರಾಗಿದೆ. ಆದರೆ, ಈ ಕಳ್ಳ ಕಾಂಗ್ರೆಸ್ ಸರ್ಕಾರ ಕದ್ದುಮುಚ್ಚಿ ತಮಿಳುನಾಡಿಗೆ ಕಾವೇರಿ ನೀರು ಬಿಡುಗಡೆ ಮಾಡುತ್ತಿದೆ ಎಂದು ದೂರಿದ್ದಾರೆ. ಕುಡಿಯುವ ನೀರಿನ ನೆಪವೊಡ್ಡಿ ಕಾವೇರಿ ಕೊಳ್ಳದ ಜೀವನಾಡಿ ಕೆಆರ್‌ಎಸ್ ಡ್ಯಾಂನಿಂದ ತಮಿಳುನಾಡಿಗೆ ಕಾವೇರಿ ನೀರನ್ನು ಹರಿಸಲಾಗುತ್ತಿದೆ!.

ಕಳೆದ ಮೂರು ದಿನಗಳಿಂದ ಪ್ರತಿದಿನ 2,000 ಕ್ಯೂಸೆಕ್ ನೀರನ್ನು ತಮಿಳುನಾಡಿಗೆ ಹರಿಸುತ್ತಿರುವುದು ಕನ್ನಡಿಗರ ಬೆನ್ನಿಗೆ ಚುಚ್ಚುತ್ತಿರುವ ಚೂರಿಯಲ್ಲದೆ ಮತ್ತಿನ್ನೇನು ಮುಖ್ಯಮಂತ್ರಿಗಳೇ? ಈ ನಾಡದ್ರೋಹಿ ಕಾಂಗ್ರೆಸ್ ಇತಿಹಾಸವೇ ಇಷ್ಟು, ಅಧಿಕಾರವಿಲ್ಲದಾಗ ನಮ್ಮ ನೀರು ನಮ್ಮ ಹಕ್ಕು ಎಂದು ನಾಟಕದ ಬೊಬ್ಬೆ! ಅಧಿಕಾರ ಸಿಕ್ಕಾಗ ನಮ್ಮ ನೀರು ತಮಿಳುನಾಡಿನ ಹಕ್ಕು ಎನ್ನುತ್ತಾ ಅಧಿಕಾರಕ್ಕಾಗಿ ತಮಿಳುನಾಡಿನ ಎದುರು ಸಂಪೂರ್ಣ ಶರಣಾಗತಿ ಆಗುವುದು. ನಾಡಿನ ಜನತೆಯ ಹಿತ ಕಾಯದೆ ಹೈಕಮಾಂಡ್ ಅಣತಿಯಂತೆ ತುಳುನಾಡಿನ ಜೊತೆ ರಾಜಿ ಮಾಡಿಕೊಳ್ಳುವುದು ಎಂದು ಟೀಕಿಸಿದ್ದಾರೆ.

ನೀರಿಲ್ಲದೆ, ಬೆಳೆಯಿಲ್ಲದೆ ಕಾವೇರಿ ಕೊಳ್ಳದ ನಮ್ಮ ರೈತರು ಆತ್ಮಹತ್ಯೆ ಮಾಡಿಕೊಂಡರೆ ಅವರ ಶವಯಾತ್ರೆ ಮಾಡುತ್ತೀರಾ? ಬೆಂಗಳೂರಿನ ಜನ ಟ್ಯಾಂಕರ್ ಮಾಫಿಯಾ ಸುಳಿಗೆಗೆ ಸಿಕ್ಕಿ ಪರದಾಡಿದರೆ ಟ್ಯಾಂಕರ್ ಯಾತ್ರೆ ಮಾಡುತ್ತೀರಾ? ಎಂದು ಅಶೋಕ ಪ್ರಶ್ನಿಸಿದ್ದಾರೆ. ಕನ್ನಡ ನಾಡಿನ ಜನತೆಗೆ ಕನಿಷ್ಠ ನೀರಿನ ಭದ್ರತೆ, ನೀರಿನ ಹಕ್ಕು ನೀಡಲಾಗದ ಈ ನಾಡದ್ರೋಹಿ ಕಾಂಗ್ರೆಸ್ ಸರ್ಕಾರಕ್ಕೆ ರಾಜ್ಯದ ಜನತೆ ತಕ್ಕ ಪಾಠ ಕಲಿಸುವುದು ನಿಶ್ಚಿತ ಎಂದವರು ಎಚ್ಚರಿಸಿದ್ದಾರೆ.

ಜಾಗೃತಿ ಜಾಥ



ಚಿಕ್ಕಮಗಳೂರಿನಲ್ಲಿ ಎಸ್‌ಐಆರ್ ಕುರಿತು ಅರಿವು ಮೂಡಿಸಲು ಸೋಮವಾರ ವಿದ್ಯಾರ್ಥಿಗಳಿಂದ ಜಾಗೃತಿ ಜಾಥಾ ನಡೆಸಿದರು. ಶಿಕ್ಷಕರು ಮತ್ತು ಸ್ಥಳೀಯರು ಸಾಥ್ ನೀಡಿದರು.

ಐತಿಹಾಸಿಕ ಸಿಸ್ಟರ್-ಸಿಟಿ ಒಪ್ಪಂದಕ್ಕೆ ಮುಂದು: ಗೃಹಸಚಿವ ಪರಮೇಶ್ವರ್

ಬೆಂಗಳೂರು: ಪೆರು ಗಣರಾಜ್ಯದೊಂದಿಗಿನ ಬಾಂಧವ್ಯವನ್ನು ಮತ್ತಷ್ಟು ಗಟ್ಟಿಗೊಳಿಸುವ ನಿಟ್ಟಿನಲ್ಲಿ, ಅದರ ರಾಜಧಾನಿ ಲಿಮಾನಂತಹ ಪ್ರಮುಖ ನಗರ ಹಾಗೂ ಬೆಂಗಳೂರು ನಗರದ ನಡುವೆ ಐತಿಹಾಸಿಕ ಸಿಸ್ಟರ್-ಸಿಟಿ ಒಪ್ಪಂದ ಮಾಡಿಕೊಳ್ಳಲು ಕರ್ನಾಟಕ ಸರ್ಕಾರ ಅತ್ಯಂತ ಉತ್ಸುಕವಾಗಿದೆ ಎಂದು ಡಿಸಿಎಂ ಡಾ.ಜಿ. ಪರಮೇಶ್ವರ್ ತಿಳಿಸಿದ್ದಾರೆ.

ಪೆರು ರಾಜಧಾನಿ ಲಿಮಾ-ಬೆಂಗಳೂರು ಬಾಂಧವ್ಯ ಗಟ್ಟಿಗೊಳಿಸುವ ಹಿನ್ನೆಲೆ



ಭಾರತ ಮತ್ತು ಪೆರು ನಡುವಿನ 63 ವರ್ಷಗಳ ನಿರಂತರ ರಾಜತಾಂತ್ರಿಕ ಬಾಂಧವ್ಯ ಹಾಗೂ ಪೆರು ಗಣರಾಜ್ಯದ 205ನೇ ಸ್ವಾತಂತ್ರ್ಯ ದಿನಾಚರಣೆಯಂಗವಾಗಿ ಬೆಂಗಳೂರಿನ ಖಾಸಗಿ ಹೋಟೆಲ್‌ನಲ್ಲಿ ಭಾನುವಾರ ಆಯೋಜಿಸಿದ್ದ ಉನ್ನತ ಮಟ್ಟದ ರಾಜತಾಂತ್ರಿಕ ಸಮಾರಂಭದಲ್ಲಿ ಅವರು ಮಾತನಾಡಿದರು. ಈ ವೇಳೆ ಪೆರುವಿನ ಲ್ಯಾಟಿನ್ ಅಮೆರಿಕನ್ ವಿಮೋಚನಾ ಚಳವಳಿಗಳು ಮತ್ತು ಮಹಾತ್ಮ ಗಾಂಧಿ ಅವರ ನೇತೃತ್ವದ ಭಾರತದ ಸ್ವಾತಂತ್ರ್ಯ ಹೋರಾಟದ ನಡುವಿನ ಆಳವಾದ ಸಾಮ್ಯತೆಗಳನ್ನು ಸ್ಮರಿಸಿದರು.

ಭಾರತದ ಮಾಹಿತಿ ತಂತ್ರಜ್ಞಾನ ಅಭಿವೃದ್ಧಿ ಮತ್ತು ಜೈವಿಕ ತಂತ್ರಜ್ಞಾನ ಉತ್ಪಾದನೆಯಲ್ಲಿ ಕರ್ನಾಟಕ ರಾಜ್ಯವು ಶೇ. 40ಕ್ಕಿಂತ ಹೆಚ್ಚಿನ ಪಾಲನ್ನು ಹೊಂದುವ ಮೂಲಕ ಪ್ರಥಮ ಸ್ಥಾನದಲ್ಲಿದೆ. ಈ ಕ್ಷೇತ್ರದಲ್ಲಿ ಇಡೀ ದೇಶವನ್ನೇ ಮುನ್ನಡೆಸುತ್ತಿದೆ. ಇತ್ತೀಚೆಗೆ ರಾಜ್ಯದಲ್ಲಿ ನಡೆದ ಜಾಗತಿಕ ಹೂಡಿಕೆದಾರರ ಸಮಾವೇಶದ ಅಭೂತಪೂರ್ವ ಯಶಸ್ಸು, ಅಲ್ಲಿ ಹರಿದುಬಂದ ಬೃಹತ್ ಹೂಡಿಕೆಗಳು ರಾಜ್ಯದ ಪ್ರಗತಿಯನ್ನು ಮತ್ತಷ್ಟು ಸಾಬೀತುಪಡಿಸಿವೆ ಎಂದು ಮಾಹಿತಿ ನೀಡಿದರು.

ಇದು ಭವಿಷ್ಯದಲ್ಲಿ ಉಭಯ ದೇಶಗಳ ನಡುವಿನ 10 ಬಿಲಿಯನ್ ಡಾಲರ್ ದ್ವಿಪಕ್ಷೀಯ ವ್ಯಾಪಾರ ವೃದ್ಧಿಗೆ ದೊಡ್ಡ ಮುನ್ನುಡಿಯಾಗಲಿದೆ ಎಂದು ಡಾ. ಪರಮೇಶ್ವರ್ ವಿಶ್ವಾಸ ವ್ಯಕ್ತಪಡಿಸಿದರು. ಪೆರು ರಾಯಭಾರಿ ಜೇವಿಯರ್ ಮ್ಯಾನುಯೆಲ್ ಪೌಲಿನಿಚ್ ವೆಲಾರ್ಡೆ, ಬೆಂಗಳೂರಿನಲ್ಲಿರುವ ಪೆರುವಿನ ಗೌರವ ಕಾನ್ಸುಲ್ ವಿಕ್ರಮ್ ವಿಶ್ವನಾಥ್ ಹಾಗೂ ಉನ್ನತ ಅಧಿಕಾರಿಗಳು ಇದ್ದರು.

ಕಿರುಸುದ್ದಿ

ರೈತರ ಮನಸ್ಸಿಗೆ ನೋವಾಗುವ ಯೋಜನೆ ಬೇಡ: ಸೋಮಣ್ಣ

ಚನ್ನಪಟ್ಟಣ: ರೈತರ ಮನಸ್ಸಿಗೆ ನೋವಾಗುವ ಯಾವುದೇ ಯೋಜನೆಯನ್ನು ಕೈಗೆತ್ತಿಕೊಳ್ಳಬಾರದು. ರಾಜ್ಯದ ಅಭಿವೃದ್ಧಿಗೆ ಆದ್ಯತೆ ನೀಡಬೇಕು. ಜನರಿಗೆ ಬೇಡವಾದ ಯೋಜನೆಗಳನ್ನು ಬಲವಂತವಾಗಿ ಜಾರಿಗೊಳಿಸುವ ಅಗತ್ಯ ಇಲ್ಲ ಎಂದು ಕೇಂದ್ರ ರೈಲ್ವೆ ಖಾತೆ ರಾಜ್ಯ ಸಚಿವ ವಿ. ಸೋಮಣ್ಣ ಹೇಳಿದರು. ಚನ್ನಪಟ್ಟಣದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿ, ಬಿಡದಿ ಟೌನ್‌ಶಿಪ್ ಯೋಜನೆ ಕುರಿತು ಪ್ರತಿಕ್ರಿಯಿಸಿ, ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರಿಗೆ ತಾವು ಈಗಾಗಲೇ ತಮ್ಮ ಅಭಿಪ್ರಾಯವನ್ನು ತಿಳಿಸುವುದಾಗಿ ಹೇಳಿದರು. ಸಿಎಂ ಆಗಿ ಅಧಿಕಾರ ವಹಿಸಿ ಕೊಂಡು ಒಂದು ತಿಂಗಳಷ್ಟೇ ಆಗಿದೆ. ಯಾವುದೇ ರೀತಿಯ ಗೊಂದಲಗಳಿಗೆ ಅವಕಾಶ ಕೊಡದೆ ರಾಜ್ಯದ ಅಭಿವೃದ್ಧಿಯತ್ತ ಗಮನ ಹರಿಸಿ ಎಂದು ನಾನು ಸಲಹೆ ನೀಡಿದ್ದೇನೆ. ರೈತರಿಗೆ ಅನಾನುಕೂಲವಾಗುವ ಯೋಜನೆಗಳನ್ನು ಕೈಗೆತ್ತಿಕೊಳ್ಳುವುದು ಸೂಕ್ತವಲ್ಲ. ಬೇರೆ ಸೂಕ್ತ ಸ್ಥಳದಲ್ಲಿ ಟೌನ್‌ಶಿಪ್ ನಿರ್ಮಿಸಿದರೆ ಅದರಲ್ಲಿ ಯಾವುದೇ ತಪ್ಪಿಲ್ಲ ಎಂದು ಹೇಳಿದರು. ಭೈರಮಂಗಲ ಕೆರೆಯ ಸಂರಕ್ಷಣೆ, ಕುಡಿಯುವ ನೀರಿಗೆ ಮೊದಲ ಆದ್ಯತೆ ನೀಡಬೇಕು ಎಂದು ಸಿಎಂಗೆ ಸಲಹೆ ನೀಡಿದ್ದಾಗಿ ತಿಳಿಸಿದ ಅವರು, ರಾಜ್ಯದಲ್ಲಿ ಇನ್ನೂ ನೂರು ಟೌನ್‌ಶಿಪ್‌ಗಳನ್ನು ನಿರ್ಮಿಸುವ ಅವಕಾಶಗಳಿವೆ. ಆದರೆ ರೈತರ ಭಾವನೆಗಳಿಗೆ ಧಕ್ಕೆ ತರುವ ರೀತಿಯ ಯೋಜನೆಗಳನ್ನು ಕೈಗೊಳ್ಳಬಾರದು ಎಂಬುದೇ ನನ್ನ ಸ್ಪಷ್ಟ ಅಭಿಪ್ರಾಯ ಎಂದರು.



ಲಾರಿ-ಬಸ್ ಅಪಘಾತ: 12ಕ್ಕೂ ಹೆಚ್ಚು ಮಂದಿಗೆ ಗಾಯ

ಚಿತ್ರದುರ್ಗ: ಜಿಲ್ಲೆಯ ಚಳ್ಳಕೆರೆ ತಾಲೂಕಿನ ಚಿಕ್ಕಮ್ಮನಹಳ್ಳಿ ರಾಷ್ಟ್ರೀಯ ಹೆದ್ದಾರಿಯಲ್ಲಿ ಲಾರಿ-ಬಸ್ ನಡುವೆ ಭೀಕರ ಅಪಘಾತ ಸಂಭವಿಸಿದೆ. ಬಸ್ಸಿನಲ್ಲಿದ್ದ 12ಕ್ಕೂ ಹೆಚ್ಚು ಮಂದಿಗೆ ಗಾಯವಾಗಿದ್ದು, ಓರ್ವನ ಸ್ಥಿತಿ ಗಂಭೀರವಾಗಿದ್ದು. ಚಿತ್ರದುರ್ಗ ಜಿಲ್ಲೆ ಚಳ್ಳಕೆರೆ ತಾಲೂಕಿನ ಚಿಕ್ಕಮ್ಮನಹಳ್ಳಿ ಹೈವೆಯಲ್ಲಿ ಈ ಘಟನೆ ನಡೆದಿದೆ. ಚಾಲಕನ ನಿಯಂತ್ರಣ ತಪ್ಪಿ ಡಿವೈಡರ್ ದಾಟಿ ಮತ್ತೊಂದು ಬದಿಯಲ್ಲಿ ಚಲಿಸುತ್ತಿದ್ದ ಬಸ್ಸಿಗೆ ಲಾರಿ ಡಿಕ್ಕಿಯಾಗಿದೆ. ಸಿಂಧನೂರು ಕಡೆಯಿಂದ ಬೆಂಗಳೂರಿಗೆ ಹೊರಟಿದ್ದ ಬಸ್ಸಿಗೆ ಲಾರಿ ಡಿಕ್ಕಿ ಹೊಡೆದಿದೆ. ಬಸ್ಸಿನಲ್ಲಿ ಒಟ್ಟು 34 ಮಂದಿ ಪ್ರಯಾಣಿಸುತ್ತಿದ್ದರು. ಗಾಯಾಳುಗಳನ್ನು ಚಳ್ಳಕೆರೆ ತಾಲೂಕು ಆಸ್ಪತ್ರೆಗೆ ದಾಖಲಿಸಿದ್ದು, ಸ್ಥಳಕ್ಕೆ ಪಿಎಸ್‌ಐ ಶಿವಕುಮಾರ್ ಭೇಟಿ ನೀಡಿ, ಪರಿಶೀಲನೆ ನಡೆಸಿದ್ದಾರೆ. ತಳಕು ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಈ ಘಟನೆ ನಡೆದಿದೆ.

ಉಡುಪಿ ಕೋರ್ಟಿಗೂ ಮತ್ತೆ ಬಾಂಬ್ ಬೆದರಿಕೆ

ಉಡುಪಿ: ಉಡುಪಿ ಜಿಲ್ಲಾ ನ್ಯಾಯಾಲಯದ ಸಂಕೀರ್ಣದಲ್ಲಿ ಮೂರನೇ ಬಾರಿಗೆ ಬಾಂಬ್ ಇಟ್ಟಿರುವುದಾಗಿ ಬೆದರಿಕೆ ಇಮೇಲ್ ಸಂದೇಶ ಬಂದಿದೆ. ಈ ಹಿನ್ನೆಲೆಯಲ್ಲಿ ಪೊಲೀಸರು ಸೋಮವಾರ ಬೆಳಿಗ್ಗೆ ಕೋರ್ಟ್ ಆವರಣದಲ್ಲಿ ತೀವ್ರ ಶೋಧ ಕಾರ್ಯ ನಡೆಸಿದರು. ಸೋಮವಾರ ಬೆಳಗ್ಗೆ ಅನಾಮಧೇಯ ಇಮೇಲ್‌ನಿಂದ ಕೋರ್ಟ್ ಇಮೇಲ್‌ಗೆ ಸಂದೇಶ ಬಂದಿದ್ದು, ಕೂಡಲೇ ಈ ಬಗ್ಗೆ ಉಡುಪಿ ನಗರ ಪೊಲೀಸರಿಗೆ ಮಾಹಿತಿ ನೀಡಲಾಯಿತು. ಅದರಂತೆ ಸ್ಥಳಕ್ಕೆ ಆಗಮಿಸಿದ ಶ್ವಾನ ದಳ ಮತ್ತು ಬಾಂಬ್ ನಿಷ್ಕ್ರಿಯ ದಳ ತಪಾಸಣೆ ನಡೆಸಿತು. ಎಲ್ಲೂ ಯಾವುದೇ ವಸ್ತುಗಳು ಪತ್ತೆಯಾಗದ ಹಿನ್ನೆಲೆಯಲ್ಲಿ ಇದೊಂದು ಹುಸಿ ಕರೆ ಎಂಬುದು ದೃಢಪಟ್ಟಿತು. ಜೂ.21ರಂದು ಮತ್ತು ಜೂ.26ರಂದು ಇದೇ ರೀತಿಯ ಇಮೇಲ್ ಸಂದೇಶ ನ್ಯಾಯಾಲಯಕ್ಕೆ ಬಂದಿತ್ತು. ಹೀಗೆ ಪದೇ ಪದೇ ಕೋರ್ಟ್‌ನಲ್ಲಿ ಬಾಂಬ್ ಇಟ್ಟಿರುವ ಬಗ್ಗೆ ಸಂದೇಶ ಬರುತ್ತಿರುವ ಬಗ್ಗೆ ವಕೀಲರು ತೀವ್ರ ಆಕ್ರೋಶ ವ್ಯಕ್ತಪಡಿಸಿದ್ದಾರೆ.

ರಾಜ್ಯದ ವಿದ್ಯುತ್ ನಿಗಮ ಖಾಸಗೀಕರಣ ಕುರಿತು ಸಂಪುಟ ಸಭೆಯಲ್ಲಿ ಚರ್ಚೆ

ಅಭಿಪ್ರಾಯ ಪರಿಗಣನೆ


ಬೆಂಗಳೂರು: ರಾಜ್ಯದ ವಿದ್ಯುತ್ ನಿಗಮಗಳನ್ನು ಖಾಸಗೀಕರಣ ಮಾಡದಿರುವ ಕುರಿತು ಮುಂದಿನ ಸಚಿವ ಸಂಪುಟ ಸಭೆಯಲ್ಲಿ ಚರ್ಚಿಸಿ, ನೌಕರರ ಅಭಿಪ್ರಾಯ ಪರಿಗಣಿಸಿ ತೀರ್ಮಾನ ಕೈಗೊಳ್ಳಲಾಗುವುದು ಎಂದು ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಭರವಸೆ ನೀಡಿದರು.

ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನೌಕರರ ಸಂಘ ಹಾಗೂ ವಿವಿಧ ಸಂಘಗಳ ಒಕ್ಕೂಟವು ಸೋಮವಾರ ಅರಮನೆ ಮೈದಾನದಲ್ಲಿ ಆಯೋಜಿಸಿದ್ದ ಅಭಿನಂದನಾ ಸಮಾರಂಭದಲ್ಲಿ ಮಾತನಾಡಿದ ಅವರು, ಖಾಸಗೀಕರಣದ ವಿಚಾರದಲ್ಲಿ ತಾವ್ಯಾವುದೇ ನಿರ್ಧಾರ ಕೈಗೊಳ್ಳುವುದಿಲ್ಲ ಎಂದು ಸ್ಪಷ್ಟಪಡಿಸಿದರು. 2003ರಲ್ಲಿ ವಿದ್ಯುತ್ ಕ್ಷೇತ್ರದ ಖಾಸಗೀಕರಣಕ್ಕೆ ಅವಕಾಶ ಕಲ್ಪಿಸುವ ಕಾನೂನನ್ನು ಬಿಜೆಪಿ ಸರ್ಕಾರವೇ ತಂದಿತ್ತು. ಅದರ ವಿರುದ್ಧ ಯಾರೂ ಧ್ವನಿ ಎತ್ತಲಿಲ್ಲ. ಈಗ ತಮ್ಮ ಬಳಿ ಬಂದು ಖಾಸಗೀಕರಣಕ್ಕೆ ಅವಕಾಶ ನೀಡಬೇಡಿ ಎಂದು ಮನವಿ ಮಾಡುತ್ತಿರುವುದಾಗಿ ಅವರು ಹೇಳಿದರು.

ವಿದ್ಯುತ್ ಮೂಲಸೌಕರ್ಯವನ್ನು ನಿರ್ಮಿಸಿದ್ದು ಸರ್ಕಾರ ಹಾಗೂ ಇಲಾಖೆಯ ಸಿಬ್ಬಂದಿ. ಆದರೆ, ಲಾಭ ಮಾತ್ರ ಖಾಸಗಿ ಕಂಪನಿಗಳಿಗೆ ಸಿಗುವಂತಾಗಬಾರದು. ಮುಂಬೈ, ದಿಲ್ಲಿ ಸೇರಿದಂತೆ ಹಲವು ನಗರಗಳಲ್ಲಿ ಖಾಸಗೀಕರಣ ನಡೆದಿರುವುದನ್ನು ಉಲ್ಲೇಖಿಸಿದರು. ನೌಕರರು ಸರ್ಕಾರದ ಬಗ್ಗೆ ಕಾಳಜಿ ವಹಿಸಿದರೆ ಸರ್ಕಾರವೂ ಅವರ ಹಿತಾಸಕ್ತಿಯನ್ನು ಕಾಪಾಡಲಿದೆ. 2028ರ ಚುನಾವಣೆಯಲ್ಲೂ ಇದೇ ರೀತಿಯ ಬೆಂಬಲ ಮುಂದುವರಿಯಬೇಕು ಎಂದು ಕರೆ ನೀಡಿದರು.

ಇಂಧನ ಸಚಿವ ಕೆ.ಜೆ. ಜಾರ್ಜ್ ನೇತೃತ್ವದಲ್ಲಿ ಇಲಾಖೆಯಲ್ಲಿ ಹಲವು ಅಭಿವೃದ್ಧಿ ಯೋಜನೆಗಳು ಜಾರಿಯಾಗಿವೆ. ತಮ್ಮ ಹಿಂದಿನ ಅವಧಿಯಲ್ಲಿ ಇಂಧನ ಭವನ ನಿರ್ಮಾಣ, ಸಿಬ್ಬಂದಿಯ ವೇತನ ಪರಿಷ್ಕರಣೆ ಅವಧಿಯನ್ನು ಏಳು ವರ್ಷದಿಂದ ಐದು ವರ್ಷಕ್ಕೆ ಇಳಿಕೆ ಹಾಗೂ ಇಲಾಖೆಯಲ್ಲಿ 25 ಸಾವಿರಕ್ಕೂ ಹೆಚ್ಚು ನೇಮಕಾತಿಗಳನ್ನು ಯಾವುದೇ ಲಂಚವಿಲ್ಲದೆ ನಡೆಸಲಾಗಿದೆ ಎಂದು ಹೇಳಿದರು.

ಇಂಧನ ಇಲಾಖೆ ಸಿಬ್ಬಂದಿ ಕತ್ತಲನ್ನು ದೂರ ಮಾಡುವ ಕಾಯಕ ಜೀವಿಗಳು ಎಂದು ಡಿ.ಕೆ.ಶಿವಕುಮಾರ್ ಬಣ್ಣಿಸಿದರು. ಜನರ ಜೀವನದಲ್ಲಿ ವಿದ್ಯುತ್ ಸಿಬ್ಬಂದಿಯ ಸೇವೆ ಅತ್ಯಂತ ಮಹತ್ವದ್ದಾಗಿದೆ ಎಂದು ಶ್ಲಾಘಿಸಿದರು. ವಿದ್ಯುತ್ ನಿಗಮ ನೌಕರರ ಸಂಘದ ಅಧ್ಯಕ್ಷ ಕೆ. ಬಲರಾಮ್, ಪ್ರಧಾನ ಕಾರ್ಯದರ್ಶಿ ಶಿವರಾಂ, ಖಜಾಂಚಿ ವರದರಾಜ್, ಇಂಜಿನಿಯರ್ ಅಸೋಸಿಯೇಷನ್‌ನ ಪ್ರಧಾನ ಕಾರ್ಯದರ್ಶಿ ಚಂದ್ರಶೇಖರ್ ದೇಸಾಯಿ ಮತ್ತಿತರರಿದ್ದರು.



ಇಂಧನ ಭದ್ರತೆ ಮತ್ತಷ್ಟು ಬಲ

ಮುಂದಿನ 25 ವರ್ಷಗಳ ವಿದ್ಯುತ್ ಭದ್ರತೆಯನ್ನು ಗಮನದಲ್ಲಿಟ್ಟುಕೊಂಡು ಸರ್ಕಾರ ದೂರದೃಷ್ಟಿಯ ಯೋಜನೆಗಳನ್ನು ರೂಪಿಸಿದೆ. ರೈತರ ಸಹಭಾಗಿತ್ವದಲ್ಲಿ 10 ಸಾವಿರ ಎಕರೆ ಪ್ರದೇಶದಲ್ಲಿ ಸೌರ ಉದ್ಯಾನವನ ಅಭಿವೃದ್ಧಿಪಡಿಸಲಾಗಿದ್ದು, ಮತ್ತೆ 10 ಸಾವಿರ ಎಕರೆ ಭೂಮಿ ನೀಡಲು ರೈತರು ಮುಂದೆ ಬಂದಿದ್ದಾರೆ. ಗೃಹಜ್ಯೋತಿ ಯೋಜನೆ ಅಡಿ 1.67 ಕೋಟಿ ಗ್ರಾಹಕರಿಗೆ ಉಚಿತ ವಿದ್ಯುತ್ ಒದಗಿಸಲಾಗುತ್ತಿದ್ದು, ಇದಕ್ಕೆ ಬಜೆಟ್‌ನಲ್ಲಿ ಅನುದಾನ ಮೀಸಲಿಡಲಾಗಿದೆ. ರೈತರ ಪಂಪ್‌ಸೆಟ್‌ಗಳಿಗೆ ಉಚಿತ ವಿದ್ಯುತ್ ಪೂರೈಕೆಗಾಗಿ 21 ಸಾವಿರ ಕೋಟಿ ರೂ. ಅನುದಾನ ನೀಡಲಾಗುತ್ತಿದೆ ಎಂದು ಕೆ.ಜೆ.ಜಾರ್ಜ್ ತಿಳಿಸಿದರು.

ಮತ ಬ್ಯಾಂಕ್‌ಗಾಗಿ ಓಲೈಕೆ: ಬಿವೈವಿ

ಬೆಂಗಳೂರು: ಕಾಂಗ್ರೆಸ್ ಸರ್ಕಾರದ ಆಡಳಿತಾವಧಿಯಲ್ಲಿ ಮತ್ತೆ ವಕ್ಫ್ ಭೂತ ತಲೆ ನುಗ್ಗಿಸಿದೆ! ಸಾವಿರಾರು ರೈತರ ಭೂಮಿ ಹಕ್ಕನ್ನು ವಕ್ಫ್ ಹೆಸರಿನಲ್ಲಿ ಕುಕ್ಕಿ ತಿನ್ನಲು ಹದ್ದಿನ ಕಣ್ಣು ಹಾಕಿದೆ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಆರೋಪಿಸಿದ್ದಾರೆ.

ಸಾಮಾಜಿಕ ಜಾಲತಾಣದಲ್ಲಿ ಈ ಕುರಿತು ಸುದೀರ್ಘ ಪೋಸ್ಟ್‌ವೊಂದನ್ನು ಅವರು ಹಾಕಿದ್ದಾರೆ. ತಲೆತಲಾಂತರಗಳಿಂದ ಬೆವರು ಸುರಿಸಿ, ಉಳುಮೆ ಮಾಡಿ, ಮಣ್ಣನ್ನು ನಂಬಿ ಬದುಕುತ್ತಿರುವ ಮಣ್ಣಿನ ಮಕ್ಕಳಿಗೆ ಈ ಭ್ರಷ್ಟ ಕಾಂಗ್ರೆಸ್ ಸರ್ಕಾರ ಗಂಭೀರ ದ್ರೋಹವೆಸಗಿದೆ.

ವ್ಯವಸ್ಥಿತ ಸಂಚು

ಕಂದಾಯ ಇಲಾಖೆಯ ಮೂಲಕ ನಮ್ಮ ರೈತರ ಭೂಮಿಯ ಮೇಲೆ ಹದ್ದಿನ ಕಣ್ಣಿಟ್ಟಿರುವ ಕಾಂಗ್ರೆಸ್ ಸರ್ಕಾರ, ಭೂದಾಖಲೆಗಳಲ್ಲಿ ನ್ಯಾಯಾಲಯದ ತೀರ್ಪನ್ನು ನುಸುಳಿಸಿ, ವಕ್ಫ್ ಹೆಸರಿನಲ್ಲಿ ರೈತರ ಜಮೀನುಗಳ ಹಕ್ಕನ್ನು ಕಸಿದುಕೊಳ್ಳಲು ವ್ಯವಸ್ಥಿತ ಸಂಚು ರೂಪಿಸಿದೆ ಎಂದು ರೈತರೇ ಆಪಾದಿಸುತ್ತಿದ್ದಾರೆ ಎಂದಿದ್ದಾರೆ.



ಭೂ ನ್ಯಾಯ ಮಂಡಳಿಗಳ ಮೂಲಕ ರೈತರಿಗೆ ಹಕ್ಕು ನೀಡುವ ಸಂದರ್ಭದಲ್ಲಿ, ರಾಜ್ಯ ಕಾಂಗ್ರೆಸ್ ಸರ್ಕಾರ ವಕ್ಫ್ ಮಂಡಳಿ ವ್ಯಾಪ್ತಿಯಲ್ಲಿ ಬರುವ ಆಸ್ತಿಗಳನ್ನು ಮಂಡಳಿಯಿಂದ ಮೊದಲೇ ಯಾಕೆ ಬಿಡುಗಡೆಗೊಳಿಸಲಿಲ್ಲ? ಈ ಕಾಂಗ್ರೆಸ್ ಸರ್ಕಾರದ ಈ ಪ್ರಮಾದದಿಂದ ರೈತರು ಸಮಸ್ಯೆ ಎದುರಿಸುವಂತಾಗಿದೆ. ರಾಜ್ಯ ಸರ್ಕಾರ ಕೂಡಲೇ ಅಗತ್ಯ ನಿರ್ಧಾರ ತೆಗೆದುಕೊಂಡು ನಮ್ಮ ರೈತರ ಹಿತಾಸಕ್ತಿ ರಕ್ಷಿಸದೇ ಹೋದಲ್ಲಿ ರಾಜ್ಯದೆಲ್ಲೆಡೆ ಪಕ್ಷ ಬೀದಿಗಿಳಿದು ರೈತರ ಪರವಾಗಿ ಹೋರಾಡಲಿದೆ ಎಂದು ಎಚ್ಚರಿಸಿದ್ದಾರೆ. ಕೇವಲ ತಮ್ಮ ಮತ ಬ್ಯಾಂಕ್ ಓಲೈಕೆಗಾಗಿ, ಈ ಕಾಂಗ್ರೆಸ್ ಸರ್ಕಾರ ರಿಯಲ್ ಎಸ್ಟೇಟ್ ಏಜೆಂಟರಂತೆ ವರ್ತಿಸುತ್ತಾ ಲ್ಯಾಂಡ್ ಜಿಹಾದ್‌ಗೆ ಬೆನ್ನೆಲುಬಾಗಿ ನಿಂತಿರುವುದು ಅತ್ಯಂತ ಖಂಡನೀಯ ಹಾಗೂ ಅಕ್ಷಮ್ಯ ಅಪರಾಧ. ಇದು ಕೇವಲ ಆರೋಪವಲ್ಲ, ಮಾಧ್ಯಮಗಳಲ್ಲಿ ವರದಿಯಾಗಿರುವಂತೆ ರಾಜ್ಯ ಸರ್ಕಾರದ ಅಂಕಿ-ಅಂಶಗಳೇ ಈ ಗಂಭೀರ ಪರಿಸ್ಥಿತಿಯನ್ನು ಬಿಚ್ಚಿಡುತ್ತಿವೆ.

ರೈತರ ಭೂ ದಾಖಲೆಗಳಲ್ಲಿ ಸೃಷ್ಟಿಸಿರುವ ಇಂತಹ ಗೊಂದಲಗಳಿಗೆ ರಾಜ್ಯ ಸರ್ಕಾರ ತಕ್ಷಣವೇ ಇತಿಶ್ರೀ ಹಾಡಬೇಕು. ವಕ್ಫ್ ಹೆಸರಿನಲ್ಲಿ ರೈತರ ಜಮೀನು ಕಬಳಿಸುವ ಧೋರಣೆ ಕೈಬಿಡಬೇಕು. ಇಲ್ಲದಿದ್ದರೆ, ಅನ್ನದಾತರ ಹಿತ ಕಾಯಲು ಮತ್ತು ಅವರ ಹಕ್ಕನ್ನು ರಕ್ಷಿಸಲು ಪಕ್ಷ ರಾಜ್ಯಾದ್ಯಂತ ಹೋರಾಟಕ್ಕೆ ಇಳಿಯುವುದು ಅನಿವಾರ್ಯವಾಗಲಿದೆ ಎಂದು ವಿಜಯೇಂದ್ರ ಎಚ್ಚರಿಕೆ ನೀಡಿದ್ದಾರೆ.

ಅಕ್ರಮ ಮತದಾರರಿಗೆ ಅವಕಾಶವಿಲ್ಲ: ಸಿ.ಟಿ.ರವಿ

ಚಿಕ್ಕಮಗಳೂರು: ಎಸ್‌ಐಆರ್ ಉದ್ದೇಶವೇ ನೈಜ ಮತದಾರರು ಅವಕಾಶ ಕಳೆದುಕೊಳ್ಳಬಾರದು, ಕಳ್ಳ ಮತಗಳು ಇರಬಾರದು ಎನ್ನುವುದು. ಆದರೆ, ಕಾಂಗ್ರೆಸ್ಸಿಗೆ ಅಕ್ರಮ ಮತದಾರರೂ ಇರಬೇಕು



ಎನ್ನುವ ಉದ್ದೇಶವಿದೆ. ಇದಕ್ಕೆ ಅವಕಾಶವಿಲ್ಲ ಎಂದು ವಿಧಾನ ಪರಿಷತ್ ಸದಸ್ಯ ಸಿ.ಟಿ.ರವಿ ಹೇಳಿದರು.

ಸೋಮವಾರ ನಗರದಲ್ಲಿ ಸುದ್ದಿಗಾರರ ಜೊತೆ ಮಾತನಾಡಿ, ಎಸ್‌ಐಆರ್ ನಡೆಸುವುದು ಬಿಎಲ್‌ಒಗಳು. ಬಹುತೇಕ ಬಿಎಲ್‌ಒಗಳು ಶಿಕ್ಷಕರು, ಕಂದಾಯ ಇಲಾಖೆ ಅಧಿಕಾರಿಗಳೇ ಆಗಿರುತ್ತಾರೆ. ಕಾಂಗ್ರೆಸ್ ಸರ್ಕಾರ ತೋಳ ಬಂತು ತೋಳ ಎನ್ನುವ ರೀತಿಯಲ್ಲಿ ಜನರಲ್ಲಿ ಭೀತಿ ಹುಟ್ಟಿಸಿ, ತನಗೆ ಬೇಕಾದ ಮತಗಳನ್ನು ಮಾತ್ರ ಉಳಿಸಿಕೊಂಡು, ಉಳಿದ ಮತಗಳನ್ನು ಕತ್ತರಿಸುವ ಯೋಜನೆ ಹಾಕಿಕೊಂಡಂತಿದೆ. ಆದ್ದರಿಂದ ನಾವೂ ಸಹ ಇದನ್ನು ಎಚ್ಚರಿಕೆಯಿಂದ ಗಮನಿಸಲು ಸೂಚನೆ ನೀಡಿದ್ದೇವೆ ಎಂದು ತಿಳಿಸಿದರು.

c)Less: Drawdown	0.00	0.36
d)Closing balance	0.50	0.00
iii) Closing balance in IFR as a percentage of closing balance of investments in AFS and HFT/Current category	3.13	0.00

c) Sale and transfers to/from HTM category –
Transfer from HTM Category to AFS Category-Rs.9.49 Cr
Sale During the year- Rs.7.49 Cr

d)Non-SLR investment portfolio
i)Non-performing non-SLR investments (Amount in crores)

Sr. No.	Particulars	Current Year (31-03-2026)	Previous Year (31-03-2025)
a)	Opening balance	0.60	0.60
b)	Additions during the year since 1st April	0.00	0.00
c)	Reductions during the above period	0.00	0.00
d)	**Closing balance**	**0.60**	**0.60**
e)	**Total provisions held**	**0.60**	**0.60**

ii.Issuer composition of non-SLR investments (Amount in crores)

Sr. No. 1	Issuer 2	Amount 3: Current year	Amount: Previous Year	Extent of Private Placement 4: Current year	Previous Year	Extent of 'Below Investment Grade' Securities 5: Current year	Previous Year	Extent of 'Unrated' Securities 6: Current year	Previous Year	Extent of 'Unlisted' Securities 7: Current year	Previous Year
a)	PSUs	0.00	0.00	0.00	0.00	0.00	0.00	0.00	0.00	0.00	0.00
b)	FIs	0.00	0.00	0.00	0.00	0.00	0.00	0.00	0.00	0.00	0.00
c)	Banks	80.91	74.17	0.00	0.00	0.00	0.00	0.00	0.00	0.00	0.00
d)	Private Corporate	0.00	0.00	0.00	0.00	0.00	0.00	0.00	0.00	0.00	0.00
e)	Subsidiaries/ Joint Ventures	0.00	0.00	0.00	0.00	0.00	0.00	0.00	0.00	0.00	0.00
f)	Others	14.00	5.00	0.00	0.00	0.00	0.00	0.00	0.00	0.00	0.00
g)	Provision held towards depreciation	1.10	0.96	0.00	0.00	0.00	0.00	0.00	0.00	0.00	0.00
	Total	94.91	79.17	0.00	0.00	0.00	0.00	0.00	0.00	0.00	0.00

4.Asset quality a)Classification of advances and provisions held (Amount in crores)

	Standard: Total Standard Advances	Non-Performing: Sub- standard	Doubtful	Loss	Total Non- Performing Advances	Total
Gross Standard Advances and NPAs						
Opening Balance	429.42	3.66	25.78	0.18	29.62	459.04
Add: Additions during the year	6.01	2.82	37.11			
Less: Reductions during the year*		3.66	4.44			
Closing balance	435.42	2.82	58.45	0.18	61.45	496.87
*Reductions in Gross NPAs due to:						
Up gradation		0.77	1.43			
Recoveries (excluding recoveries from upgraded accounts)		0.27	3.02			
Write-offs						
Provisions (excluding Floating Provisions)						
Opening balance of provisions held	2.29	1.02	36.24	0.19	37.45	39.74
Add: Fresh provisions made during the year	0.67	0.00	15.04	0.00	15.04	15.71
Less: Excess provision reversed/ Write-off loans	0.24	0.74	10.39	0.01	11.14	11.38
Closing balance of provisions held	2.72	0.28	40.89	0.18	41.35	44.07
Net NPAs						
Opening Balance						
Add: Fresh additions during the year					-7.83	
Less: Reductions during the year						
Closing Balance					20.09	

Ratios (in per cent)	Current Year (31-03-2026)	Previous Year (31-03-2025)
Gross NPA to Gross Advances	12.37	6.45
Net NPA to Net Advances	4.44	-1.87
Provision coverage ratio	67.30	126.43

i)Details of accounts subjected to restructuring-NIL
c)Fraud accounts-NIL
i)Disclosure under Resolution Framework for COVID-19-related Stress-NIL

b)Sector wise Advances and Gross NPAs (Amount in crores)

Sr. No.	Sector*	Current Year (31-03-2026): Outstanding Total Advances	Gross NPAs	Percentage of Gross NPAs to Total Advances in that sector	Previous Year (31-03-2025): Outstanding Total Advances	Gross NPAs	Percentage of Gross NPAs to Total Advances in that sector
i)	**Priority Sector**						
a)	Agriculture and allied activities	51.69	6.43	12.43	50.00	3.43	6.86
b)	Advances to industries sector eligible as priority sector lending	1.04	1.04	100.00	2.73	2.73	100.00
c)	Services	157.02	13.77	8.77	151.93	5.51	3.63
d)	Personal loans	31.53	13.77	43.67	34.88	14.17	40.63
	Subtotal (i)	241.28	35.01	14.51	239.54	25.84	10.79
ii)	**Non-priority Sector**						
a)	Agriculture and allied activities	0.00	0.00	0.00	0.00	0.00	0.00
b)	Industry	0.00	0.00	0.00	0.00	0.00	0.00
c)	Services	255.56	26.41	10.33	219.41	3.76	1.71
d)	Personal loans	0.03	0.03	100	0.10	0.03	30
	Sub-total (ii)	255.59	26.44	10.34	219.51	3.79	1.73
	Total (I + ii)	496.87	61.45	12.37	459.05	29.63	6.45

5. Exposures
a)Exposure to real estate sector
(Amount in crores)

Category	Current Year (31-03-2026)	Previous Year (31-03-2025)
a)Residential Mortgages– Lending fully secured by mortgages on residential property that is or will be occupied by the borrower or that is rented. Individual housing loans eligible for inclusion in priority sector advances shall be shown separately. Exposure would also include non-fund based (NFB) limits.	15.22 14.35	28.42 16.29
b)Commercial Real Estate– Lending secured by mortgages on commercial real estate (office buildings, retail space, multipurpose commercial premises, multifamily residential buildings, multi tenanted commercial premises, industrial or warehouse space, hotels, land acquisition, development and construction, etc.).Exposure would also include non-fund based(NFB) limits;	175.09	94.83
Total Exposure to Real Estate Sector	204.66	139.54

b)Unsecured advances (Amount in crores)

Particulars	Current Year (31-03-2026)	Previous Year(31-03-2025)
Total unsecured advances of the bank	31.77	34.91

6.Concentration of deposits, advances and NPAs a)Concentration of deposits (Amount in crores)

Particulars	Current Year (31-03-2026)	Previous Year(31-03-2025)
Total deposits of the twenty largest depositors	228.88	217.72
Percentage of deposits of twenty largest depositors to total deposits of the bank	32.01	36.05

b)Concentration of advances* (Amount in crores)

Particulars	Current Year (31-03-2026)	Previous Year(31-03-2025)
Total advances to the twenty largest borrowers	166.30	139.91
Percentage of advances to twenty largest borrowers to total advances of the bank	33.47	30.48

c)Concentration of NPAs (Amount in crores)

	Current Year (31-03-2026)	Previous Year(31-03-2025)
Total Exposure to the top twenty NPA accounts	41.19	12.33
Percentage of exposures to the twenty largest NPA exposure to total Gross NPAs.	67.03	41.63

7.Transfers to Depositor Education and Awareness Fund (DEA Fund) (Amount in crores)

Sr. No.	Particulars	Current Year (31-03-2026)	Previous Year(31-03-2025)
i)	Opening balance of amounts transferred to DEA Fund	0.1696	0.1687
ii)	Add: Amounts transferred to DEA Fund during the year	0.0719	0.0009
iii)	Less: Amounts reimbursed by DEA Fund towards claims	0.0000	0.0000
iv)	Closing balance of amounts transferred to DEA Fund	0.2415	0.1696

8.Disclosure of complaints: a)Summary information on complaints received by the bank from customers and from the Offices of Banking Ombudsman (OBOs)- NIL, b)Top five grounds of complaints received by the bank from customers-NIL, 9. Disclosure of penalties imposed by the Reserve Bank of India-NIL

10.Other Disclosures a)Business ratios (Amount in crores)

Particular	Current Year (31-03-2026)	Previous Year (31-03-2025)
i. Interest Income as a percentage to Working Funds	8.98%	9.91%
ii. Non-interest income as a percentage to Working Funds	1.33%	0.54%
iii. Cost of Deposits	8.24%	8.17%
iv. Net Interest Margin	3.55%	4.15%
v. Operating Profit as a percentage to Working Funds	3.14%	2.98%
vi. Return on Assets	1.22%	1.28%
vii. Business (deposits plus advances) per employee	13.93	11.81
viii. Profit per employee	0.1189	0.10

b)Bank assurance business – NIL, c)Disclosures regarding Priority Sector Lending Certificates (PSLCs) - NIL
Investment with SIDBI towards Priority Sector Advance Short fall – Rs.5.09 Cr

d)Provisions and contingencies (Amount in crores)

Provision debited to Profit and Loss Account	Current Year (31-03-2026)	Previous Year (31-03-2025)
i)Provisions for NPI	-	-
ii)Provision towards NPA	12.53	8.21
iii)Provision made towards Income tax	3.54	3.25
iv)Other Provisions and Contingencies (with details)		
Special Reserve	0.25	0.27
Deferred Tax Liability	0.06	0.07
Social Welfare Fund	0.00	0.35
Provision for Business Expansion and Training programmes	0.00	0.10

e)Payment of DICGC Insurance Premium (Amount in crores)

Sr. No.	Particulars	Current Year (31-03-2026)	Previous Year(31-03-2025)
i)	Payment of DICGC Insurance Premium	0.8674	0.7864
ii)	Arrears in payment of DICGC premium	-	-

f)Disclosure of facilities granted to directors and their relatives: UCBs shall disclose any fund or non-fund (guarantees, letters of credit, etc.) facilities extended to directors, their relatives, companies or firms in which they are interested--**NIL**

Yashpal A Suvarna, Chairman **Narayana T Amin,** Director **Vinaya Karkera,** Director **Sharath Kumar Shetty N,** Managing Director

AUDITORS CERTIFICATE : 1) I have audited the Balance Sheet of Mahalakshmi Co-operative Bank Ltd., Udupi as on 31-03-2026 and also annexed Profit & Loss account of the Bank for the year ended on the date. 2) I have obtained all the informations and explanations during the course of Audit which is to the best of my knowledge and belief are necessary for the purpose of Audit and have found them to be satisfactory. 3) In my opinion and as per the information furnished to me and subject to my detailed Audit Report and annexures enclosed to this Report the Balance Sheet and Profit and Loss account as on 31-03-2026 exhibits true and fair state of affairs of the Bank.

Place : Udupi, Date: 25-06-2026

for I V Sharma & Co, Chartered Accountants (FRN: 003787S), CA I V Sharma (M No 018845), Partner Mangalore. UDIN:26018845JEWCJY2518

'ಮಾರ್ಗದರ್ಶಿ – ಕ್ರ್ಯಾಕಿಂಗ್ ದಿ ಯುಪಿಎಸ್ಸಿ ಎಕ್ಸಾಮಿನೇಷನ್' ಎಂಬ ವಿಚಾರ ಸಂಕಿರಣದಲ್ಲಿ ಸ್ವಾಮಿ ಜಿತಕಾಮಾನಂದಜಿ

ಕರಾವಳಿ ಕರ್ನಾಟಕದ ವಿದ್ಯಾರ್ಥಿಗಳು ಸ್ಪರ್ಧಾತ್ಮಕ ಪರೀಕ್ಷೆಗಳನ್ನು ಎದುರಿಸಬೇಕು



ಮಂಗಳೂರು: ಮಂಗಳೂರಿನ ವಿದ್ಯಾರ್ಥಿಗಳು ಸ್ಪರ್ಧಾತ್ಮಕ ಪರೀಕ್ಷೆಗಳು ಕಠಿಣವೆಂಬ ಭಾವನೆಯಿಂದ ಅವುಗಳನ್ನು ಕಡಿಮೆ ಸಂಖ್ಯೆಯಲ್ಲಿ ಪ್ರಯತ್ನಿಸುತ್ತಿದ್ದಾರೆ. ಆದರೆ, ದೃಢ ಸಂಕಲ್ಪ ಮತ್ತು ಸೂಕ್ತ ಮಾರ್ಗದರ್ಶನ ಇದ್ದರೆ ಯಶಸ್ಸು ಸಾಧ್ಯ. ಪರೀಕ್ಷೆಗಳಿಗೆ ಸಿದ್ಧತೆ ನಡೆಸುವ ವಿದ್ಯಾರ್ಥಿಗಳಿಗಾಗಿ ರಾಮಕೃಷ್ಣ ಮಿಷನ್‌ನಲ್ಲಿ ವಿಶೇಷ ರೀಡಿಂಗ್ ರೂಂ ವ್ಯವಸ್ಥೆ ಮಾಡಲಾಗಿದ್ದು, ಅನೇಕ ವಿದ್ಯಾರ್ಥಿಗಳು ಅದರ ಪ್ರಯೋಜನ ಪಡೆಯುತ್ತಿದ್ದಾರೆ ಎಂದು ರಾಮಕೃಷ್ಣ ಮಿಷನ್ ಮಂಗಳೂರು ಕಾರ್ಯದರ್ಶಿ ಸ್ವಾಮಿ ಜಿತಕಾಮಾನಂದಜಿ ಹೇಳಿದರು.

ರಚನಾ ಚೇಂಬರ್ ಆಫ್ ಕಾಮರ್ಸ್ ಆ್ಯಂಡ್ ಇಂಡಸ್ಟ್ರಿ ಹಾಗೂ ಮಂಗಳೂರು ಐಎಎಸ್ ಸಂಸ್ಥೆಯು ರಾಮಕೃಷ್ಣ ಮಿಷನ್ ಮಂಗಳೂರು ಸಹಯೋಗದಲ್ಲಿ ನಗರದ ರಾಮಕೃಷ್ಣ ಮಠದಲ್ಲಿ ಭಾನುವಾರ ಆಯೋಜಿಸಿದ್ದ 'ಮಾರ್ಗದರ್ಶಿ – ಕ್ರ್ಯಾಕಿಂಗ್ ದಿ ಯುಪಿಎಸ್ಸಿ ಎಕ್ಸಾಮಿನೇಷನ್' ಎಂಬ ವಿಚಾರ ಸಂಕಿರಣದಲ್ಲಿ ಅವರು ಆಶೀರ್ವಚನ ನೀಡಿದರು.

ಯುಪಿಎಸ್ಸಿ ಮಾಸ್ಟರ್ ತರಬೇತುದಾರರಾದ ಮೋಹನ್ ಕೃಷ್ಣಮೂರ್ತಿ ಹಾಗೂ ಚಂದ್ರಮೋಹನ್ ಇನಗಂಟಿ, ಬಲ್ಮಠ ಸರ್ಕಾರಿ ಪ್ರಥಮ ದರ್ಜೆ ಮಹಿಳಾ ಕಾಲೇಜು ಸಮಾಜಶಾಸ್ತ್ರ ವಿಭಾಗದ ಮುಖ್ಯಸ್ಥೆ ಡಾ. ಸುಮನಾ ಬಿ., ಗೂಗಲ್ ಮತ್ತು ಮೈಕ್ರೋಸಾಫ್ಟ್‌ನ ಜಾಗತಿಕ ಪ್ರಮಾಣಿತ ಶಿಕ್ಷಣತಜ್ಞ ಡಾನ್ ಪ್ರಕಾಶ್ ಮುಖ್ಯ ಅತಿಥಿಯಾಗಿದ್ದರು.

ರಚನಾ ಚೇಂಬರ್ ಆಫ್ ಕಾಮರ್ಸ್ ಆ್ಯಂಡ್ ಇಂಡಸ್ಟ್ರಿ ಅಧ್ಯಕ್ಷ ರಾಯ್ ಕ್ಯಾಸ್ಟಲಿನೊ ಸ್ವಾಗತಿಸಿದರು. ಮಂಗಳೂರು ಐಎಎಸ್ ಸಂಸ್ಥಾಪಕ ಸಂತೋಷ್ ರಾವ್ ವಂದಿಸಿದರು. ರಾಯಾನ್ ಇಂಟರ್‌ನ್ಯಾಷನಲ್ ಶಾಲೆಯ ಪ್ರಾಂಶುಪಾಲೆ ವೈಜಯಂತಿ ಹೆಗ್ಡೆ, ಬಿಯರೀಸ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಯ ಪ್ರಾಂಶುಪಾಲ ಡಾ. ಸಿ. ಕಮಲಕಣ್ಣನ್, ಸಂದೇಶ ಫೌಂಡೇಶನ್ ಫಾರ್ ಕಲ್ಚರ್ ಆ್ಯಂಡ್ ಎಜುಕೇಶನ್‌ನ ನಿರ್ದೇಶಕ ಫಾ. ರೋಷನ್ ರೊಸಾರಿಯೊ, ರಚನಾ ಕಾರ್ಯದರ್ಶಿ ಅಲ್ವಾನ್ ರೊಡ್ರಿಗಸ್ ಹಾಗೂ ಸದಸ್ಯರಾದ ವಿಲಿಯಂ ಡಿಸೋಜ, ಎಡ್ವರ್ಡ್ ಫೆರ್ನಾಂಡಿಸ್, ನವೀನ್ ಲೋಬೊ ಉಪಸ್ಥಿತರಿದ್ದರು.

ಬಳಿಕ ಮೋಹನ್ ಕೃಷ್ಣಮೂರ್ತಿ, ಚಂದ್ರಮೋಹನ್ ಇನಗಂಟಿ, ಡಾ. ಸುಮನಾ ಬಿ., ಡಾನ್ ಪ್ರಕಾಶ್, ಸಂತೋಷ್ ರಾವ್ ಅವರು ಯುಪಿಎಸ್ಸಿ ಪರೀಕ್ಷೆಯ ಮಾದರಿ, ಪರಿಣಾಮಕಾರಿ ಸಿದ್ಧತಾ ವಿಧಾನಗಳು, ಸಮಯ ನಿರ್ವಹಣೆ, ಉತ್ಪಾದಕತೆ, ಅಭ್ಯರ್ಥಿಗಳು ಸಾಮಾನ್ಯವಾಗಿ ಮಾಡುವ ತಪ್ಪುಗಳು ಹಾಗೂ ನಾಗರಿಕ ಸೇವೆಯಲ್ಲಿನ ವೃತ್ತಿ ಅವಕಾಶಗಳ ಕುರಿತು ಪ್ರಾಯೋಗಿಕ ಮಾಹಿತಿ ಯನ್ನು ಹಂಚಿಕೊಂಡರು. ಜಾಸ್ಲಿನ್ ಲೋಬೊ ನಿರೂಪಿಸಿದರು. ನಾಗರಿಕ ಸೇವಾ ಪರೀಕ್ಷಾ ಆಕಾಂಕ್ಷಿಗಳು, ವಿದ್ಯಾರ್ಥಿಗಳು, ಪೋಷಕರು ಹಾಗೂ ಶಿಕ್ಷಕರು ಭಾಗವಹಿಸಿದ್ದರು.

ರಸ್ತೆ ಅಭಿವೃದ್ಧಿ ಕಾಮಗಾರಿಗೆ ಶಾಸಕ ವೇದವ್ಯಾಸ ಕಾಮತ್ ಚಾಲನೆ



ಮಂಗಳೂರು: ಮಹಾನಗರ ಪಾಲಿಕೆ ವ್ಯಾಪ್ತಿಯ 48ನೇ ವೆಲೆನ್ಸಿಯ ವಾರ್ಡಿನ ರೆಡ್ ಬಿಲ್ಡಿಂಗ್ ರೋಹನ್ ಕಾರ್ಪೊರೇಷನ್ ಹಿಂಭಾಗ ರಸ್ತೆಯ ಅಭಿವೃದ್ಧಿ ಕಾಮಗಾರಿಯು 20ಲಕ್ಷ ರೂ. ವಿಶೇಷ ಅನುದಾನದಲ್ಲಿ ನಡೆಯಲಿದ್ದು ಶಾಸಕ ವೇದವ್ಯಾಸ ಕಾಮತ್ ರವರ ನೇತೃತ್ವದಲ್ಲಿ ಗುದ್ದಲಿ ಪೂಜೆಯು ನಡೆಯಿತು. ನಂತರ ಮಾತನಾಡಿದ ಶಾಸಕರು, ಕಾಮಗಾರಿ ವೇಳೆ ಉಂಟಾಗುವ ಅಡಚಣೆಗೆ ಸಹಕರಿಸಿ ಎಂದು ಮನವಿ ಮಾಡಿದರು.

ಈ ಸಂದರ್ಭದಲ್ಲಿ ನಿಕಟಪೂರ್ವ ಪಾಲಿಕೆ ಸದಸ್ಯರಾದ ಸಂದೀಪ್ ಗರೋಡಿ, ಪ್ರಮುಖರಾದ ಪ್ರಕಾಶ್ ಗರೋಡಿ, ಜೇಮ್ಸ್ ಡಿಸೋಜ, ಪ್ರವೀಣ್ ನಿಡ್ಡೆಲ್, ವರುಣ್ ರಾಜ್ ಅಂಬಟ್, ಪದ್ಮನಾಭ, ನಾಗರಾಜ್, ಕೃತಿಕ್ ಉಜ್ಜೋಡಿ, ಮನ್ವಿತ್, ಸೇರಿದಂತೆ ಪರಿಸರದ ನಿವಾಸಿಗಳು, ವಾರ್ಡಿನ ಕಾರ್ಯಕರ್ತರು ಉಪಸ್ಥಿತರಿದ್ದರು.

ಕುದ್ಮುಲ್ ರಂಗರಾವ್ ಹೆಸರು ಚಿರಸ್ಥಾಯಿಯಾಗಿ ಉಳಿಯಬೇಕು

ಶಾಸಕ ಕಾಮತ್ ಆಶಯ

ಮಂಗಳೂರು: ದಲಿತೋದ್ಧಾರಕ, ಸಾಮಾಜಿಕ ಸುಧಾರಣೆಯ ಹರಿಕಾರ, ಕುದ್ಮುಲ್ ರಂಗರಾವ್ ಅವರ ಜನ್ಮದಿನದ ಅಂಗವಾಗಿ ಬಿಜೆಪಿ ಮಂಗಳೂರು ನಗರ ದಕ್ಷಿಣ ಎಸ್ಸಿ ಮೋರ್ಚಾ ವತಿಯಿಂದ ಅತ್ತಾವರ ಬಾಬುಗುಡ್ಡೆಯಲ್ಲಿರುವ ಸ್ಮಾರಕಕ್ಕೆ ಪುಷ್ಪ ನಮನಗಳ ಸಹಿತ ಗೌರವ ಸಲ್ಲಿಸುವ ಕಾರ್ಯಕ್ರಮ ಸೋಮವಾರ ನೆರವೇರಿತು.



ಈ ವೇಳೆ ಮಾತನಾಡಿದ ಶಾಸಕ ವೇದವ್ಯಾಸ ಕಾಮತ್, ಪೂಜನೀಯ ಕುದ್ಮುಲ್ ರಂಗರಾಯರು ಶೋಷಿತರ ಅಭಿವೃದ್ಧಿಗಾಗಿ ಇಡೀ ಬದುಕನ್ನು ಮುಡಿಪಾಗಿಟ್ಟ ಮಹಾನ್ ಮಾನವತಾವಾದಿ. ಭಿಕ್ಷೆ ಬೇಡಿಯಾದರೂ ದಲಿತ ಬಂಧುಗಳನ್ನು ಸಮಾಜದ ಮುಖ್ಯ ವಾಹಿನಿಗೆ ತರುತ್ತೇನೆ ಎಂಬ ಅಚಲ ವಿಶ್ವಾಸ ಹೊಂದಿದ್ದವರು. ಅವರ ಹೆಸರು ಚಿರಸ್ಥಾಯಿಯಾಗಿ ಉಳಿಯಬೇಕೆಂದು ಪ್ರತಿ ವರ್ಷ ಮ.ನ.ಪಾ ವತಿಯಿಂದ ಜಯಂತಿ ಆಚರಣೆ ನಡೆಯುವಂತೆ, ಹಿಂದಿನ ಬಿಜೆಪಿ ಆಡಳಿತದ ಅವಧಿಯಲ್ಲಿ ನಿರ್ಣಯಿಸಲಾಗಿತ್ತು. ಆದರೆ, ಕಾಂಗ್ರೆಸ್ ನೇತೃತ್ವದ ಪಾಲಿಕೆಯು ಕಳೆದ ವರ್ಷ ಎಲ್ಲವನ್ನು ಕಡೆಗಣಿಸಿ ಜಯಂತಿ ಆಚರಿಸದಿದ್ದದ್ದು ದುರದೃಷ್ಟಕರ. ಇದೀಗ ಕುದ್ಮುಲ್ ರಂಗರಾವ್ ಎಜುಕೇಶನ್ ಟ್ರಸ್ಟ್, ಅಖಿಲ ಭಾರತ ಮುಂಡಾಲ ಯುವ ವೇದಿಕೆ ಸಹಿತ ನಮ್ಮೆಲ್ಲರ ಆಗ್ರಹದ ನಂತರ ಬಿಜೆಪಿಯ ನಿರ್ಣಯದಂತೆ ಪಾಲಿಕೆ ವತಿಯಿಂದಲೇ ಜಯಂತಿ ಆಚರಣೆ ನಡೆದಿರುವುದು ಸಮಾಧಾನಕರ ಸಂಗತಿ ಎಂದರು.

ಈ ಸಂದರ್ಭದಲ್ಲಿ ಬಿಜೆಪಿ ದ.ಕ. ಜಿಲ್ಲಾಧ್ಯಕ್ಷ ಸತೀಶ್ ಕುಂಪಲ, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಪ್ರೇಮಾನಂದ ಶೆಟ್ಟಿ, ಮಂಡಲದ ಅಧ್ಯಕ್ಷ ರಮೇಶ್ ಕಂಡೆಟ್ಟು, ಪ್ರಧಾನ ಕಾರ್ಯದರ್ಶಿ ಲಲ್ಲೇಶ್ ಕುಮಾರ್, ಕಾರ್ಯದರ್ಶಿ ರಘುವೀರ್ ಬಾಬುಗುಡ್ಡೆ, ಕುದ್ಮುಲ್ ರಂಗರಾವ್ ಎಜುಕೇಶನ್ ಟ್ರಸ್ಟ್‌ನ ಅಧ್ಯಕ್ಷ ಬಿ.ಆರ್. ಹೃದಯನಾಥ್, ಉಪಾಧ್ಯಕ್ಷ ಶಾಮ ಕರ್ಕೇರ, ಪ್ರಮುಖರಾದ ಶೈಲೇಶ್ ಶೆಟ್ಟಿ, ಭಾನುಮತಿ ಪಿ.ಎಸ್., ಭರತ್ ಕುಮಾರ್, ನಿತಿನ್ ಕುಮಾರ್, ದೀಪಕ್ ಪೈ, ಮೋಹನ್ ಪೂಜಾರಿ, ಪುಷ್ಪರಾಜ್ ಶೆಟ್ಟಿ, ರವಿ ಕಾಪಿಕಾಡ್, ರಾಜೇಂದ್ರ, ಯಶವಂತ ಕುದ್ರೋಳಿ, ಆಶ್ವಿತ್ ಕೊಟ್ಟಾರಿ, ರಘುವೀರ್ ಸೂಪರ್ ಪೇಟೆ, ವಸಂತ್ ಬಂಗೇರ, ಕಸ್ತೂರಿ, ಅನಿತಾ ದಯಾಕರ್, ಬಿ.ಎಸ್. ಶಶಿಕಾಂತ್ ಸೇರಿದಂತೆ ಟ್ರಸ್ಟ್ ಸದಸ್ಯರು ಹಾಗೂ ಬಿಜೆಪಿ ಕಾರ್ಯಕರ್ತರು ಉಪಸ್ಥಿತರಿದ್ದರು.

ಸುರತ್ಕಲ್‌ನಲ್ಲಿ 4ನೇ ವರ್ಷದ ಮಾವು-ಹಲಸು ಮೇಳ

ಗ್ರಾಹಕರಿಂದ ಉತ್ತಮ ಸ್ಪಂದನೆ

ಸುರತ್ಕಲ್: ವಿದ್ಯಾದಾಯಿನಿ ಸಂಘದ ವತಿಯಿಂದ ಆಯೋಜಿಸಲಾದ ನಾಲ್ಕನೇ ವರ್ಷದ ಮಾವು-ಹಲಸು ಮೇಳಕ್ಕೆ ಗ್ರಾಹಕರಿಂದ ಉತ್ತಮ ಸ್ಪಂದನೆ ವ್ಯಕ್ತವಾಯಿತು. ಮೇಳದಲ್ಲಿ ಹಲಸಿನ ಹೋಳಿಗೆ, ತೆಂಗಿನ ಹಾಲಿನ ಪಾಯಸ, ಅಡಿಕೆ ಐಸ್ ಕ್ರೀಮ್, ಹಲಸಿನ ಚಿಪ್ಸ್, ಕಡುಬು, ಹಪ್ಪಳ ಸೇರಿದಂತೆ ವಿವಿಧ ಮೌಲ್ಯವರ್ಧಿತ ತಿಂಡಿ-ತಿನಿಸುಗಳಿದ್ದವು. ಹೊಸ ರುಚಿಗಳನ್ನು ಜನರು ಇಷ್ಟಪಟ್ಟು ಸವಿದರು. ಕುಟುಂಬ ಸಹಿತ ಆಗಮಿಸಿದವರು ರುಚಿ ನೋಡಿ ಮೆಚ್ಚುಗೆ ವ್ಯಕ್ತಪಡಿಸಿದರು. ಹಲವರು ಮನೆಗೆ ಕೊಂಡೊಯ್ದರು. 80 ಸ್ಟಾಲ್‌ಗಳಲ್ಲಿ ವ್ಯಾಪಾರ ಭರ್ಜರಿಯಾಗಿ ನಡೆಯಿತು.

ಸುರತ್ಕಲ್ ಹಿಂದು ವಿದ್ಯಾದಾಯಿನಿ ಸಂಘ, ವಿದ್ಯಾದಾಯಿನಿ ಕೃಷಿ ಮತ್ತು ಗ್ರಾಮಾಭಿವೃದ್ಧಿ ಸಂಸ್ಥೆ ವಿರಾಟ್ ಆಶ್ರಯದಲ್ಲಿ ವಜ್ರ ಮಹೋತ್ಸವದ ಅಂಗವಾಗಿ ಎರಡು ದಿನಗಳ ಮಾವು-ಹಲಸು ಮೇಳ ಹಾಗೂ ಸ್ವಾವಲಂಬಿ ಸಂತೆಗೆ ಶನಿವಾರ ಚಾಲನೆ ನೀಡಲಾಯಿತು. ಉದ್ಯಮಿ ಕೆ. ಪ್ರಕಾಶ್ ರಾವ್ ಕಲ್ಲಾವಿ ಮೇಳ ಉದ್ಘಾಟಿಸಿ, ದೇಶದಲ್ಲಿ 90 ಲಕ್ಷ ಟನ್ ಮಾವು ಉತ್ಪಾದನೆಯಾದರೂ ಕೇವಲ 40 ಟನ್ ಮಾತ್ರ ರಫ್ತಾಗುತ್ತಿದೆ. ರಾಜ್ಯವು ಉತ್ಪಾದನೆಯಲ್ಲಿ ಮೂರನೇ ಸ್ಥಾನದಲ್ಲಿದ್ದು, ಇಂತಹ ಮೇಳಗಳು ರೈತರಿಗೆ ನೇರ ಮಾರುಕಟ್ಟೆ ಒದಗಿಸುತ್ತವೆ ಎಂದರು. ಎಚ್.ವಿ. ಸಂಘದ ಅಧ್ಯಕ್ಷ ಎಚ್. ಜಯಚಂದ್ರ ಹತ್ವಾರ್ ಅಧ್ಯಕ್ಷತೆ ವಹಿಸಿದ್ದರು. ಆಗರಿ ರಾಘವೇಂದ್ರ ರಾವ್, ಸುಧಾಕರ್ ರಾವ್ ಪೇಜಾವರ, ವೆಂಕಟ್ರಾವ್, ಮೃದುಲಾ, ಎಚ್. ಎಲ್. ರಾವ್, ಟಿ.ಎನ್. ರಮೇಶ್, ಸುಭಾಷ್ ಉಪಸ್ಥಿತರಿದ್ದರು. ವೈ. ರಾಘವೇಂದ್ರ ರಾವ್ ಸ್ವಾಗತಿಸಿ, ಮೀನಾಕ್ಷಿ ವಾಸುದೇವ ರಾವ್ ನಿರೂಪಿಸಿದರು.

ಆಹಾರೇತರ 44, ಆಹಾರ 8, ಹಣ್ಣು-ಹಂಪಲು 5 ಸೇರಿದಂತೆ ಒಟ್ಟು 80 ಸ್ಟಾಲ್‌ಗಳಿದ್ದವು. ರೈತರಿಗೆ ನೇರ ಮಾರಾಟದಿಂದ ಅನುಕೂಲವಾಗಿ ಮೇಳ ಯಶಸ್ವಿಯಾಯಿತು.

ಕಿರುಸುದ್ದಿ

ಕ್ಲೀನ್ ಕೂರ್ಗ್ ತಂಡದ ಸದಸ್ಯರಿಂದ ಶಾಸಕ ಎ.ಎಸ್. ಪೊನ್ನಣ್ಣ ಭೇಟಿ

• ನಾಪೋಕ್ಲು: ಕೊಡಗಿನ ಪರಿಸರವನ್ನು ಸ್ವಚ್ಛ, ಸುಂದರ ಹಾಗೂ ಸುರಕ್ಷಿತವಾಗಿಡುವ ಉದ್ದೇಶದಿಂದ ಕ್ಲೀನ್ ಕೂರ್ಗ್ ತಂಡ ಹಮ್ಮಿಕೊಂಡಿರುವ ಸೈಕಲ್ ಜಾಥಾದ ಅಂಗವಾಗಿ ತಂಡದ ಸದಸ್ಯರು ವಿರಾಜಪೇಟೆಯಲ್ಲಿರುವ ಶಾಸಕ ಎ.ಎಸ್. ಪೊನ್ನಣ್ಣ ಅವರ ಗೃಹ ಕಚೇರಿಗೆ ಭೇಟಿ ನೀಡಿ ಅಭಿಯಾನದ ಉದ್ದೇಶ ಮತ್ತು ಕಾರ್ಯಯೋಜನೆ ಕುರಿತು ವಿವರಿಸಿದರು. ಈ ಸಂದರ್ಭದಲ್ಲಿ ಶಾಸಕರು ತಂಡದ ಪರಿಸರ ಕಾಳಜಿ ಹಾಗೂ ಸಾಮಾಜಿಕ ಬದ್ಧತೆಯನ್ನು ಶ್ಲಾಘಿಸಿ, 'ಸ್ವಚ್ಛ ಕೊಡಗು' ಎಂಬ ಸಂಕಲ್ಪವನ್ನು ಸಾಕಾರಗೊಳಿಸಲು ಪ್ರತಿಯೊಬ್ಬ ನಾಗರಿಕರ ಸಹಭಾಗಿತ್ವ ಅಗತ್ಯವೆಂದು ಅಭಿಪ್ರಾಯಪಟ್ಟರು. ಕ್ಲೀನ್ ಕೂರ್ಗ್ ತಂಡದ ಈ ಜನಜಾಗೃತಿ ಅಭಿಯಾನಕ್ಕೆ ತಮ್ಮ ಸಂಪೂರ್ಣ ಬೆಂಬಲ ಮತ್ತು ಶುಭ ಹಾರೈಕೆಗಳನ್ನು ತಿಳಿಸಿ, ಪರಿಸರ ಸಂರಕ್ಷಣೆಯಂತಹ ಉತ್ತಮ ಕಾರ್ಯಗಳು ನಿರಂತರವಾಗಿ ನಡೆಯಬೇಕೆಂದು ಆಶಿಸಿದರು. ಈ ಭೇಟಿ ಸಂದರ್ಭ ಕ್ಲೀನ್ ಕೂರ್ಗ್ ತಂಡದ ಸದಸ್ಯರುಗಳಾದ ಬಡುವಂಡ ಅರುಣ್ ಅಪ್ಪಚ್ಚು, ಅಚ್ಚಕಾಳಿರ ಅಶ್ವಥ್, ಕಟ್ಟೇರ ಗೌತಮ್, ಐಚೆಟ್ಟಿರ ಸುಬ್ಬಯ್ಯ, ಚೆಂಗಂಡ ಮುತ್ತಣ್ಣ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

ಕಲ್ಲಡ್ಕ ಜೆಮ್ ಪಬ್ಲಿಕ್ ಸ್ಕೂಲ್‌ನಲ್ಲಿ ಡೈಪರ್ ಕುರಿತು ಅರಿವು ಕಾರ್ಯಾಗಾರ

• ಬಂಟ್ವಾಳ: ಗೋಳ್ತಮಜಲ್ ಗ್ರಾಮ ಪಂಚಾಯತ್, ಹಸಿರು ದಳ ಮಂಗಳೂರು, ಆಶೀರ್ವಾದ ಸಂಜೀವಿನಿ ಒಕ್ಕೂಟ ವತಿಯಿಂದ ಜೆಮ್ ಪಬ್ಲಿಕ್ ಸ್ಕೂಲ್‌ನಲ್ಲಿ ಋತುಚಕ್ರ ಹಾಗೂ ಡೈಪರ್ ಕುರಿತು ಅರಿವು ಕಾರ್ಯಾಗಾರವನ್ನು ನಡೆಸಲಾಯಿತು. ಕಾರ್ಯಾಗಾರದಲ್ಲಿ ಸ್ಯಾನಿಟರಿ ಪ್ಯಾಡ್‌ಗಳ ದುಷ್ಪರಿಣಾಮಗಳು, ಅವುಗಳಿಗೆ ಪರ್ಯಾಯವಾಗಿ ಬಳಸಬಹುದಾದ ಸುಸ್ಥಿರ ಆಯ್ಕೆಗಳು ಹಾಗೂ ಡೈಪರ್ ಬಳಕೆಯ ಕುರಿತು ಅರಿವು ಮೂಡಿಸಲಾಯಿತು. ವಿದ್ಯಾರ್ಥಿನಿಯರು ಮುಕ್ತವಾಗಿ ಚರ್ಚಿಸಿ ಋತುಚಕ್ರಕ್ಕೆ ಸಂಬಂಧಿಸಿದ ವಿವಿಧ ಆರೋಗ್ಯ ಸಮಸ್ಯೆಗಳು ಮತ್ತು ಅನುಮಾನಗಳ ಕುರಿತು ಸಂಪನ್ಮೂಲ ವ್ಯಕ್ತಿಗಳಿಂದ ಮಾಹಿತಿ ಪಡೆದುಕೊಂಡರು. ಸಂಪನ್ಮೂಲ ವ್ಯಕ್ತಿಗಳಾಗಿ ಹಸಿರು ದಳ ಮೇಲ್ವಿಚಾರಕರಾದ ಪ್ರಿಯ ಮತ್ತು ರೇಖಾ ಮಾಹಿತಿ ನೀಡಿದರು. ಭವ್ಯ ಸಹಕರಿಸಿದರು. ಪ್ರಾಂಶುಪಾಲರಾದ ನಿರಂಜನ್, ಆಶೀರ್ವಾದ ಸಂಜೀವಿನಿ ಒಕ್ಕೂಟದ ಅಧ್ಯಕ್ಷೆ ವಿದ್ಯಾ, ಎಮ್ ಬಿ ಕೆ ಭವಾನಿ, ಎಲ್ ಸಿ ಆರ್ ಪಿ ಅರುಣಾಕ್ಷಿ, ಹಸಿರು ದಳ ಮೇಲ್ವಿಚಾರಕರಾದ ಸಾಂತಪ್ಪ ಉಪಸ್ಥಿತರಿದ್ದರು. ಪಲ್ಲವಿ, ಕಾರ್ಯಕ್ರಮ ನಿರೂಪಿಸಿದರು.

ಕುಕ್ಕೆ: ದೇವಳದ ನಾಗಪ್ಪ ಹಿತ್ಲುನಲ್ಲಿ ದೈವದ ನೇಮೋತ್ಸವ

• ಸುಬ್ರಹ್ಮಣ್ಯ: ಮಹತೋಭಾರ ಕುಕ್ಕೆ ಶ್ರೀ ಸುಬ್ರಹ್ಮಣ್ಯ ದೇವಸ್ಥಾನದ ನಾಗಪ್ಪಹಿತ್ಲುನಲ್ಲಿ ಪಂಜುರ್ಲಿ ದೈವದ ನೇಮೋತ್ಸವ ಶನಿವಾರ ರಾತ್ರಿ ನಡೆಯಿತು. ಶ್ರೀ ದೈವದ ನರ್ತನ ಸೇವೆಯ ಬಳಿಕ ನಾಗಪ್ಪಹಿತ್ಲು ಪಂಜುರ್ಲಿ ದೈವವು ಪ್ರಸಾದ ವಿತರಿಸಿ ಸರ್ವರನ್ನು ಹರಸಿತು. ಬಳಿಕ ಸುಬ್ರಹ್ಮಣ್ಯದ ರುದ್ರಪಾದದ ಬಳಿಯ ಅಜ್ಜಿಹಿತ್ಲು ಎಂಬಲ್ಲಿ ಕಲ್ಲುರ್ಟಿ ದೈವದ ನೇಮೋತ್ಸವವು ಪೂರ್ವಶಿಷ್ಟ ಸಂಪ್ರದಾಯದ ಪ್ರಕಾರ ನೆರವೇರಿತು. ನರ್ತನಸೇವೆಯ ನಂತರ ಅಜ್ಜಿಹಿತ್ಲು ಕಲ್ಲುರ್ಟಿ ದೈವದಿಂದ ಸರ್ವರೂ ಪ್ರಸಾದ ಸ್ವೀಕರಿಸಿದರು. ಈ ಸಂದರ್ಭದಲ್ಲಿ ದೇವಳದ ವ್ಯವಸ್ಥಾಪನಾ ಸಮಿತಿ ಅಧ್ಯಕ್ಷ ಹರೀಶ್ ಎಸ್.ಇಂಜಾಡಿ, ವ್ಯವಸ್ಥಾಪನಾ ಸಮಿತಿ ಸದಸ್ಯ ಅಶೋಕ್ ನೆಕ್ರಾಜೆ, ಸೌಮ್ಯಾ ಭರತ್, ಶ್ರೀ ದೇವಳದ ಹೆಬ್ಬಾರ್ ಪ್ರಸನ್ನ ಭಟ್, ಹಿರಿಯ ಸಿಬ್ಬಂದಿ ನಾಗೇಶ್ ಎ.ವಿ, ಮೂಲನಿವಾಸಿ ಮಲೆ ಕುಡಿಯ ಜನಾಂಗದ ಗುರಿಕಾರ ಚಂದ್ರಶೇಖರ ಕೋಡಿಕಜೆ, ಶ್ರೀ ದೇವಳದ ಎನ್.ಸಿ.ಲಕ್ಷ್ಮಣ, ಲೋಕೇಶ್ ಎಂ.ಆರ್, ದೈವದ ಪೂಜಾರಿ ದಯಾನಂದ ದೋಣಿಮನೆ, ಅನ್ವಿತ್ ದೋಣಿಮನೆ, ಪ್ರಮುಖರಾದ ಚೇತನಾ ಹರೀಶ್, ಭರತ್ ಕಲ್ಲುಗುಡ್ಡೆ, ಪುರುಷೋತ್ತಮ ಮೊದಲಾದವರು ಉಪಸ್ಥಿತರಿದ್ದರು.

ಉಚಿತ ಯೋಗ ಶಿಬಿರ

• ಮುಲ್ಕಿ: ಅಂಗರಗುಡ್ಡೆ ಶ್ರೀರಾಮ ಭಜನಾ ಮಂಡಳಿಯ ಆಶ್ರಯದಲ್ಲಿ ಉಚಿತ ಯೋಗ ಶಿಬಿರದ ಉದ್ಘಾಟನೆಯನ್ನು ಯೋಗ ಗುರುಗಳಾದ ಕೆಂಚನಕೆರೆಯ ಜಯ ಮುದ್ದು ಶೆಟ್ಟಿಯವರು ಶ್ರೀರಾಮ ಭಜನಾ ಮಂದಿರದಲ್ಲಿ ದೀಪ ಬೆಳಗಿಸಿ ಉದ್ಘಾಟಿಸಿದರು. ಕಿನ್ನಿಗೋಳಿ ಪಟ್ಟಣ ಪಂಚಾಯತ್ ಅಧ್ಯಕ್ಷ ಗುರುರಾಜ್ ಮಲ್ಲಿಗೆಯಂಗಡಿ, ಬಿಜೆಪಿ ನಾಯಕ ಈಶ್ವರ್ ಕಟೀಲ್, ಶ್ರೀರಾಮ ಭಜನಾ ಮಂದಿರದ ಅಧ್ಯಕ್ಷ ಸುಧೀರ್ ಶೆಟ್ಟಿ, ಯೋಗ ಶಿಕ್ಷಕರದ ಜಯ ಸಿ ಸಾಲ್ಯಾನ್ ಅಂಗರಗುಡ್ಡೆ, ಮಹಿಳಾಮಂಡಲದ ಅಧ್ಯಕ್ಷರಾದ ಮೋಹಿನಿ ಕೋಟ್ಯಾನ್, ಚಂದ್ರಶೇಖರ್, ಸಂಪತ್ ಕುಮಾರ್, ದಿನೇಶ್ ಕೋಟ್ಯಾನ್, ಸತೀಶ್ ಆಚಾರ್ಯ, ವಿಜಯ್ ಭಂಡಾರಿ, ಗುಣಪಾಲ್, ಜೀವನ್ ಶೆಟ್ಟಿ ಅಂಗರಗುಡ್ಡೆ, ಉದ್ಯಮಿ ತಾರಾನಾಥ್ ದೇವಾಡಿಗ, ಅನಿತಾ ಶೆಟ್ಟಿ, ಕಾವ್ಯ ಶೆಟ್ಟಿ, ಪುಷ್ಪ ಶೆಟ್ಟಿ, ರೂಪಾಕ್ಷಿ ಶೆಟ್ಟಿಗಾರ್, ಪುಷ್ಪ ಸಾಲ್ಯಾನ್ ಹಾಗೂ ಶ್ರೀರಾಮ ಭಜನಾ ಮಂದಿರದ ಸದಸ್ಯರು ಉಪಸ್ಥಿತರಿದ್ದರು. ಪ್ರತಿ ದಿನ ಬೆಳಿಗ್ಗೆ 6 ರಿಂದ 7 ಗಂಟೆಯವರೆಗೆ ಉಚಿತ ಯೋಗ ಶಿಬಿರ ನಡೆಯಲಿದೆ.



ಮಡಿಕೇರಿ ನಗರ ಮಹಿಳಾ ಕಾಂಗ್ರೆಸ್ ವತಿಯಿಂದ ನಗರದ ಮಹಿಳಾ ಪ್ರಥಮ ದರ್ಜೆ ಕಾಲೇಜ್‌ನಲ್ಲಿ ಸಸಿಗಳನ್ನು ನೆಟ್ಟು ಪರಿಸರ ದಿನಾಚರಣೆ ನಡೆಯಿತು. ಅಧ್ಯಕ್ಷೆ ಶಶಿಕಲಾ, ಪ್ರಧಾನ ಕಾರ್ಯದರ್ಶಿ ಪವಿತ್ರ ಎಸ್., ನಗರ ಕಾಂಗ್ರೆಸ್ ಅಧ್ಯಕ್ಷ ಪ್ರಕಾಶ್ ಆಚಾರ್ಯ, ಪ್ರಧಾನ ಕಾರ್ಯದರ್ಶಿ ಚೇತನ್ ಕೊಟಚ್, ಜುಲೇಕಾ ಬಿ, ಲೀಲಾ ಶೇಷಮ್ಮ, ಹೊಟ್ಟೆಯಂಡ ಫ್ಯಾನ್ಸಿ ಪಾರ್ವತಿ, ಮಿನಾಜ್ ಪ್ರವೀಣ್, ಧನಲಕ್ಷ್ಮಿ, ಪಪ್ಪು, ಹರಿಣಾಕ್ಷಿ, ರೇವತಿ ರಮೇಶ್, ಪ್ರೇಮ ನಿಂಗಪ್ಪ, ಪ್ರೇಮ ಕೃಷ್ಣಪ್ಪ, ವಿಮಲ, ರೈಸ ಖಾನ್, ತಾಜುನ್ನಿಸ, ರೀನಾ, ಶೈನಾಜ್, ಅರ್ಜುನ್ ಸೂರ್ಯ, ಕಾಲೇಜಿನ ಪ್ರಾಂಶುಪಾಲರಾದ ವಿಮಲಾ ಹೆಚ್., ಮತ್ತಿತರರು ಪಾಲ್ಗೊಂಡಿದ್ದರು.

ಪತ್ನಿಯನ್ನು ಕೊಂದವನಿಗೆ ಜೀವಾವಧಿ ಶಿಕ್ಷೆ

• ಮಡಿಕೇರಿ: ಕುಡಿದಮತ್ತಿನಲ್ಲಿ ಪತ್ನಿಯೊಂದಿಗೆ ಜಗಳವಾಡಿ ಕಾಫಿ ಗಿಡದ ದೊಣ್ಣೆಯಿಂದ ಹಲ್ಲೆ ಮಾಡಿ ಆಕೆಯನ್ನು ಕೊಲೆ ಮಾಡಿದ ಆರೋಪ ಸಾಬೀತಾದ ಹಿನ್ನೆಲೆಯಲ್ಲಿ ಮಡಿಕೇರಿಯ ಎರಡನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯವು ಅಪರಾಧಿಗೆ ಜೀವಾವಧಿ ಶಿಕ್ಷೆ ಹಾಗೂ ದಂಡ ವಿಧಿಸಿ ತೀರ್ಪು ನೀಡಿದೆ. ಪೊನ್ನಂಪೇಟೆ ಪೊಲೀಸ್ ಠಾಣಾ ವ್ಯಾಪ್ತಿಯ ಕಾನೂರು ಗ್ರಾಮದ ಮುಕ್ಕಾಟಿರ ಎಸ್. ಕುಶಾಲಪ್ಪರವರ ಬಾಡಿಗೆ ಮನೆಯಲ್ಲಿ ವಾಸವಿದ್ದ ರಂಗಸ್ವಾಮಿ ಟಿ. (52) ಎಂಬಾತನೇ ತನ್ನ ಪತ್ನಿ ಲತಾಳನ್ನು ಕೊಂದು ಇದೀಗ ಶಿಕ್ಷೆಗೆ ಒಳಗಾದವನಾಗಿದ್ದಾನೆ.

ಗಾರೆ ಕೆಲಸ ಮಾಡಿಕೊಂಡಿದ್ದ ರಂಗಸ್ವಾಮಿ ಮತ್ತು ಆತನ ಪತ್ನಿ ಪ್ರತಿನಿತ್ಯ ಮದ್ಯಪಾನ ಮಾಡಿ ಜಗಳವಾಡುತ್ತಿದ್ದರು. ಅದೇ ರೀತಿ 2023ರ ಆ.29 ರಾತ್ರಿ ಇಬ್ಬರೂ ನಶೆಯ ಗುಂಗಿನಲ್ಲಿ ಮತ್ತೆ ಜಗಳವಾಡಿದ್ದಾರೆ. ಜಗಳ ವಿಪರೀತಕ್ಕೆ ತಿರುಗಿದ ಪರಿಣಾಮ ರಂಗಸ್ವಾಮಿ ಕಾಫಿ ಗಿಡದ ದೊಣ್ಣೆಯಿಂದ ಪತ್ನಿ ಮೇಲೆ ಮಾರಣಾಂತಿಕವಾಗಿ ಹಲ್ಲೆ ಮಾಡಿದ್ದಾನೆ. ದೊಣ್ಣೆಯ ಏಟಿಗೆ ತೀವ್ರ ಗಾಯಗೊಂಡ ಲತಾ ಕೊನೆಯುಸಿರು ಎಳೆದಿದ್ದರೆ ಕೃತ್ಯ ಎಸಗಿದ ನಂತರ ರಂಗಸ್ವಾಮಿ ಅಲ್ಲಿಂದ ಪರಾರಿಯಾಗಿದ್ದ. ಮರುದಿನ ಬೆಳಗ್ಗೆ ಪ್ರಕರಣ ಬೆಳಕಿಗೆ ಬಂದಿದ್ದು, ಮನೆ ಮಾಲಕ ಮುಕ್ಕಾಟಿರ ಎಸ್. ಕುಶಾಲಪ್ಪ ಅವರು ನೀಡಿದ ದೂರಿನ ಮೇರೆಗೆ ಪೊನ್ನಂಪೇಟೆ ಪೊಲೀಸ್ ಠಾಣೆಯ ಅಂದಿನ ಪ್ರಭಾರ ಪಿಎಸ್‌ಐ ಕಾವೇರಪ್ಪ ಟಿ.ಎಂ. ಅವರು ರಂಗಸ್ವಾಮಿ ವಿರುದ್ಧ ಪ್ರಕರಣ ದಾಖಲಿಸಿಕೊಂಡಿದ್ದರು. ಪ್ರಕರಣದ ತನಿಖೆ ಪೂರ್ಣಗೊಳಿಸಿ ಅಂದಿನ ಗೋಣಿಕೊಪ್ಪಲು ವೃತ್ತ ನಿರೀಕ್ಷಕ ಗೋವಿಂದರಾಜು ಅವರು ಆರೋಪಿ ವಿರುದ್ಧ ನ್ಯಾಯಾಲಯಕ್ಕೆ ದೋಷಾರೋಪಣಾ ಪಟ್ಟಿ ಸಲ್ಲಿಸಿದ್ದರು.

ಪ್ರಕರಣದ ವಿಚಾರಣೆ ನಡೆಸಿದ ಮಡಿಕೇರಿಯ ಎರಡನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯದ ನ್ಯಾಯಾಧೀಶ ನಟರಾಜು ಎಸ್. ಅವರು, ಆರೋಪಿ ಮೇಲಿನ ಆರೋಪ ಸಾಬೀತಾದ ಹಿನ್ನೆಲೆಯಲ್ಲಿ ರಂಗಸ್ವಾಮಿಗೆ ಜೀವಾವಧಿ ಕಠಿಣ ಕಾರಾಗೃಹ ಶಿಕ್ಷೆ ಹಾಗೂ ರೂ. 10 ಸಾವಿರ ದಂಡ ವಿಧಿಸಿ ತೀರ್ಪು ನೀಡಿದ್ದಾರೆ. ಅಲ್ಲದೆ ಕಲಂ 301 ಐಪಿಸಿಗಾಗಿ 3 ವರ್ಷಗಳ ಸಾಧಾರಣ ಕಾರಾಗೃಹ ಶಿಕ್ಷೆ ಹಾಗೂ 6 ಸಾವಿರ ರೂ. ದಂಡ ಹೆಚ್ಚುವರಿಯಾಗಿ ತೀರ್ಪು ನೀಡಿದ್ದಾರೆ.

ಸರಕಾರದ ಪರವಾಗಿ ಸರಕಾರಿ ಅಭಿಯೋಜಕ ಯಾಸಿನ್ ಅಹಮ್ಮದ್ ಅವರು ವಾದ ಮಂಡಿಸಿದ್ದರು.

ಉಡುಪಿ ಶ್ರೀ ಲಕ್ಷ್ಮಿ ವೆಂಕಟೇಶ ದೇವಸ್ಥಾನದ ವತಿಯಿಂದ ಸಂಪೂರ್ಣ ಸಹಕಾರ, ಸಹಭಾಗಿತ್ವ

ಬ್ರಹ್ಮಾವರದಲ್ಲಿ 'ವಯೋವಂದನ' ಆಯೋಜನೆ

• ಕಾರ್ಕಳ : ಉಡುಪಿ ಜಿಲ್ಲೆಯ ಜಿಎಸ್‌ಬಿ ಸಮಾಜ ಹಿತ ರಕ್ಷಣಾ ವೇದಿಕೆ ನೇತೃತ್ವದಲ್ಲಿ ಬ್ರಹ್ಮಾವರ ತಾಲೂಕು ಉಪ್ಪೂರಿನಲ್ಲಿ 1.11 ಎಕ್ರೆ ಜಾಗದಲ್ಲಿ ನಿರ್ಮಾಣಗೊಳ್ಳಲಿರುವ ವಯೋವಂದನ ಆತಿಥ್ಯ ಗೃಹ ಯೋಜನೆ ಹಿರಿಯರ ಬದುಕಿನ ಸಂಧ್ಯಾಕಾಲದ ಆಸರೆ ಆಗಲಿದ್ದು, ಈ ಯೋಜನೆಯ ನಿರ್ಮಾಣ ಕಾರ್ಯ ಮತ್ತು ಆ ಬಳಿಕದ ನಿರ್ವಹಣೆಗೆ ಸಮಾಜದ ಸಹಭಾಗಿತ್ವ ಅತಿ ಅಗತ್ಯ. ಈ ಯೋಜನೆಗೆ ವೈಯಕ್ತಿಕವಾಗಿ ಮತ್ತು ಉಡುಪಿ ಶ್ರೀ ಲಕ್ಷ್ಮಿ ವೆಂಕಟೇಶ ದೇವಸ್ಥಾನದ ವತಿಯಿಂದ ಸಂಪೂರ್ಣ ಸಹಕಾರ ಮತ್ತು ಸಹಭಾಗಿತ್ವ ನೀಡುವುದಾಗಿ ಉಡುಪಿ ಶ್ರೀ ಲಕ್ಷ್ಮಿ ವೆಂಕಟೇಶ ದೇವಸ್ಥಾನದ ನೂತನ ವಿಶ್ವಸ್ತರಾದ ಸಿಎ ಗುಜ್ಜಾಡಿ ಪ್ರಭಾಕರ್ ನಾಯಕ್ ತಿಳಿಸಿದರು.

ಅವರು ಭಾನುವಾರದಂದು ಉಡುಪಿಯ ಶ್ರೀ ಪದ್ಮಾವತಿ ಸಭಾಭವನದಲ್ಲಿ ನಿರ್ಮಾಣ ಯೋಜನೆಯ ವಿವಿಧ ಸಮಿತಿಗಳ ರಚನೆ ಮತ್ತು ಸಮಾಲೋಚನಾ ಸಭೆಯ ಉದ್ಘಾಟನೆಯನ್ನು ನೆರವೇರಿಸಿ ಮಾತನಾಡಿದರು.

ಜಿಎಸ್‌ಬಿ ಸಮಾಜ ಹಿತ ರಕ್ಷಣಾ ವೇದಿಕೆ ಕಳೆದ 14 ವರ್ಷಗಳಿಂದ ಸಮಾಜ ಸಂಘಟನೆ ಮತ್ತು ಸಮಾಜಮುಖಿ ಕಾರ್ಯಗಳ ಮೂಲಕ ಸಮಾಜದ ಎಲ್ಲಾ ವರ್ಗದವರ ಪ್ರೀತಿ ವಿಶ್ವಾಸವನ್ನು ಗಳಿಸಿದ್ದು, ಎಲ್ಲಾ ಅಡೆತಡೆ ಸವಾಲುಗಳನ್ನು ಎದುರಿಸಿ ಸಮಾಜದ ಅವಶ್ಯಕತೆ ಇರುವ ಹಿರಿಯ ನಾಗರಿಕರಿಗೆ



ನೆಮ್ಮದಿಯ ತಾಣದ ನಿರ್ಮಾಣ ಮತ್ತು ಯಶಸ್ವಿ ಕಾರ್ಯನಿರ್ವಹಣೆ ಸಾಧ್ಯವಾಗಲಿದೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಉಡುಪಿಯ ತ್ರಿಶಾ ವಿದ್ಯಾ ಕಾಲೇಜಿನ ಸಂಸ್ಥಾಪಕ ಸಿಎ ಗೋಪಾಲಕೃಷ್ಣ ಭಟ್ ಮತ್ತು ಮೂಡಬಿದ್ರೆ ವಿಜಯ್ ಕುಮಾರ್ ಶೆಣೈಯವರು ವಯೋವಂದನ ಯೋಜನೆಯ ಕಟ್ಟಡ ನಿರ್ಮಾಣದ ಪೂರ್ವಭಾವಿ ಸಿದ್ಧತೆ, ಯೋಜನೆಯ ನಿರ್ವಹಣೆಯ ಖರ್ಚು ವೆಚ್ಚದ ವಿವರಗಳನ್ನು ದೃಶ್ಯ ಶ್ರಾವ್ಯ ಮಾಧ್ಯಮದ ಮೂಲಕ ವಿವರಿಸಿದರು.

ವಿವಿಧ ಸಮಿತಿಗಳ ರಚನೆ

ಇದೇ ಸಂದರ್ಭದಲ್ಲಿ ವಯೋವಂದನ ಕಟ್ಟಡ ನಿರ್ಮಾಣ ಯೋಜನ ಸಮಿತಿ ಅಧ್ಯಕ್ಷರಾಗಿ ಬೆಂಗಳೂರಿನ ಮಹಾಲಸಾ ಇಲೆಕ್ಟ್ರಿಕಲ್‌ನ ಮಾಲಕ ಮೂಡಬಿದ್ರೆ ವಿಜಯಕುಮಾರ್ ಶೆಣೈ, ಸಂಚಾಲಕರಾಗಿ ಕಾಪು ಹರೀಶ್ ನಾಯಕ್, ಕೆ.ಸಿ. ಕಾಮತ್, ಬಾಲಕೃಷ್ಣ ಶೆಣೈ ಮಣಿಪಾಲ ಆಯ್ಕೆಯಾದರು.

ಹಣಕಾಸು ಸಮಿತಿ ಮತ್ತು ಲೆಕ್ಕಪತ್ರ ಮೇಲ್ವಿಚಾರಣ ಸಮಿತಿಯ ಅಧ್ಯಕ್ಷರಾಗಿ ಸಿಎ ಗೋಪಾಲಕೃಷ್ಣ ಭಟ್, ಗೌರವ ಸಲಹೆಗಾರರಾಗಿ ಸಿಎ ಎಸ್‌ಎಸ್ ನಾಯಕ್ ಮಂಗಳೂರು, ಮತ್ತು ಸಂಚಾಲಕರುಗಳಾಗಿ ನಾಗೇಶ್ ಕಾಮತ್ ಮತ್ತು ಮೋಹನದಾಸ ಶಾನುಭಾಗ್, ಅಜಿತ್ ಶೆಣೈ ಉಡುಪಿ ಆಯ್ಕೆಯಾದರು.

ಕಟ್ಟಡ ನಿರ್ಮಾಣ ಸಾಮಗ್ರಿ ಸಂಗ್ರಹಣ ಮತ್ತು ಮೇಲ್ವಿಚಾರಣಾ ಸಮಿತಿ ಸಂಚಾಲಕರುಗಳಾಗಿ ಬೆಳ್ಮಣ್ ವೆಂಕಟರಾಯ ಕಾಮತ್ ಮತ್ತು ಮೂಡಬಿದ್ರೆ ರಘುವೀರ್ ಶೆಣೈ ಯ ವರಿಗೆ ಜವಾಬ್ದಾರಿ ಹಂಚಿಕೆ ಮಾಡಲಾಯಿತು.

ಕಟ್ಟಡ ನಿರ್ಮಾಣ ಕೆಲಸದ ಗುತ್ತಿಗೆಯನ್ನು ಬೆಳ್ಮಣ್ ಕಾಮಾಕ್ಷಿ ಕನ್ಸ್ಟ್ರಕ್ಷನ್‌ನ ಸುಧೀರ್ ಕಾಮತ್ ಅವರಿಗೆ ನೀಡಲಾಯಿತು.

ಡಾ. ರಾಜ್ ಗೋಪಾಲ್ ಶೆಣೈ, ಉಡುಪಿ ಮತ್ತು ಮಂಗಳೂರಿನ ಖ್ಯಾತ ಲೆಕ್ಕ ಪರಿಶೋಧಕರಾದ ಸಿಎ ಎಸ್‌ಎಸ್ ನಾಯಕ್ ಮಾತನಾಡಿದರು.

> **ದೇಣಿಗೆ ಚೆಕ್ ಹಸ್ತಾಂತರ**
>
> ಸಿಂಡಿಕೇಟ್ ಬ್ಯಾಂಕಿನ ನಿವೃತ್ತ ಎಜಿಎಂ ಉಡುಪಿಯ ಅಶೋಕ್ ನಾಯಕ್, ನಿವೃತ್ತ ಬ್ಯಾಂಕರ್ ಕಾಪುವಿನ ಲಕ್ಷ್ಮೀನಾರಾಯಣ ನಾಯಕ್ ದಂಪತಿಗಳು, ಲಕ್ಷ್ಮಿ ವೆಂಕಟೇಶ ಕ್ರೆಡಿಟ್ ಕಾರ್ಪೊರೇಟಿವ್ ಸೊಸೈಟಿಯ ವತಿಯಿಂದ ನಿವೃತ್ತ ಬ್ಯಾಂಕರ್ ಮಲ್ಪೆ ಶ್ರೀನಿವಾಸ್ ಭಟ್ ನೇತೃತ್ವದಲ್ಲಿ ಹಾಗೂ ಉಡುಪಿಯ ಯು. ಎಸ್. ನಾಯಕ್ ಮೆಮೋರಿಯಲ್ ಚಾರಿಟೇಬಲ್ ಟ್ರಸ್ಟ್‌ನ ವತಿಯಿಂದ ವಿಶ್ವಸ್ಥರಾದ ಬಂಗಾಳ ಸಿಎ ಸುರೇಶ್ ನಾಯಕ್ ಮತ್ತು ಸಿಎ ಗುಜ್ಜಾಡಿ ಪ್ರಭಾಕರ್ ನಾಯಕ್‌ರವರು ವಯೋವಂದನ ಯೋಜನೆಯ ಕೊಠಡಿ ನಿರ್ಮಾಣಕ್ಕೆ ತಲಾ 8 ಲಕ್ಷ ರೂಪಾಯಿ ದೇಣಿಗೆ ಚೆಕ್ಕನ್ನು ವೇದಿಕೆಯ ಪದಾಧಿಕಾರಿಗಳಿಗೆ ಹಸ್ತಾಂತರಿಸಿದರು.

ವೇದಿಕೆಯಲ್ಲಿ ಉಡುಪಿಯ ಖ್ಯಾತ ಸರ್ಜನ್ ಡಾ. ಸುರೇಶ್ ಶೆಣೈ, ಕಲ್ಯಾಣಪುರ ಶ್ರೀ ವೆಂಕಟರಮಣ ದೇವಸ್ಥಾನದ ವಿಶ್ವಸ್ಥರಾದ ತೋನ್ಸೆ ರಾಮರಾಯ ಕಿಣಿ, ಉಡುಪಿ ಶ್ರೀ ಲಕ್ಷ್ಮಿ ವೆಂಕಟೇಶ ದೇವಸ್ಥಾನದ ವಿಶ್ವಸ್ಥರಾದ ಮಹೇಶ ಶೆಣೈ, ಯುವಕ ಮಂಡಳಿಯ ಅಧ್ಯಕ್ಷ ನಿತೇಶ್ ಶೆಣೈ, ಮತ್ತು ಕಲ್ಯಾಣಪುರ ವೆಂಕಟರಮಣ ದೇವಸ್ಥಾನದ ಮಹಿಳಾ ಮಂಡಳಿಯ ಅಧ್ಯಕ್ಷರಾದ ಸೀಮಾ. ಎಸ್. ಪೈ ಉಪಸ್ಥಿತರಿದ್ದರು.

ಈ ಸಂದರ್ಭದಲ್ಲಿ ಜಿಎಸ್‌ಬಿ ಸಮಾಜ ಹಿತರಕ್ಷಣಾ ವೇದಿಕೆಯ ಪರಿಕಲ್ಪನೆ ಮತ್ತು ಸಂಯೋಜನೆಯಲ್ಲಿ ಸಿದ್ಧಗೊಂಡಿರುವ ಡಾ.ಪಿ. ದಯಾನಂದ ಪೈ ಸಾರ್ಥಕ 'ಬದುಕಿನ ಸಾಕ್ಷಾತ್ಕಾರ' ಎನ್ನುವ ಪುಸ್ತಕದ ಸಂಪಾದಕಿಯಾದ ಕಾರ್ಕಳದ ಪ್ರತಿಭಾನ್ವಿತ ಲೇಖಕಿ ಪ್ರಜ್ವಲಾ ಶೆಣೈಯವರಿಗೆ ಸನ್ಮಾನಿಸಿ, ಗೌರವಾರ್ಪಣೆ ಮಾಡಲಾಯಿತು. ವೇದಮೂರ್ತಿ ರಾಮಚಂದ್ರ ಅನಂತ ಭಟ್ ಸಮಾರಂಭದ ಅಧ್ಯಕ್ಷತೆಯನ್ನು ವಹಿಸಿದ್ದರು. ಜಿಎಸ್‌ಬಿ ಸಮಾಜ ಹಿತರಕ್ಷಣಾ ವೇದಿಕೆ ಅಧ್ಯಕ್ಷ ಜಿ. ಸತೀಶ್ ಹೆಗಡೆ ಸ್ವಾಗತಿಸಿ, ವೇದಿಕೆಯ ಸಂಚಾಲಕರಾದ ಆರ್. ವಿವೇಕಾನಂದ ಶೆಣೈಯವರು ಪ್ರಸ್ತಾವನೆಗೈದರು. ವೇದಿಕೆಯ ಪ್ರಧಾನ ಕಾರ್ಯದರ್ಶಿ ಸಾಣೂರು ನರಸಿಂಹ ಕಾಮತ್ ಕಾರ್ಯಕ್ರಮ ನಿರೂಪಿಸಿ, ಕಾಪು ಹರೀಶ್ ನಾಯಕ್ ವಂದಿಸಿದರು.

9ನೇ ಕರ್ನಾಟಕ ರಾಜ್ಯ ಸ್ಕೂಲ್ ಚೆಸ್ ಚಾಂಪಿಯನ್ ಶಿಪ್ ಸಮಾರೋಪ



• ಕಾಪು : ಶ್ರೀ ನಾರಾಯಣ ಗುರು ಸ್ಕೂಲ್ ಆಫ್ ಚೆಸ್ ಕಾಪು ವತಿಯಿಂದ ಹಾಗೂ ಅಕಿಲಿಯೆನ್ಸ್ ಟೆಕ್ನಾಲಜಿ ಮಂಗಳೂರು ಹಾಗೂ ಶ್ರೀ ಹಳೇ ಮಾರಿಯಮ್ಮ ದೇವಸ್ಥಾನ ಕಾಪು ಆಶ್ರಯದಲ್ಲಿ ನಡೆದ 9ನೇ ಕರ್ನಾಟಕ ರಾಜ್ಯ ಸ್ಕೂಲ್ ಚೆಸ್ ಚಾಂಪಿಯನ್ ಶಿಪ್ ಸಮಾರೋಪ ಸಮಾರಂಭವು ಶ್ರೀ ಹಳೇ ಮಾರಿಯಮ್ಮ ಸಭಾಭವನ ಕಾಪುವಿನಲ್ಲಿ ಜರುಗಿತು. ವಿವಿಧ ಜಿಲ್ಲೆಗಳಿಂದ ಒಟ್ಟು 390 ಆಟಗಾರರು ಭಾಗವಹಿಸಿದರು.

ಒಟ್ಟು 12 ವಿಭಾಗದಲ್ಲಿ ಸ್ಪರ್ಧೆ ನಡೆದು ಪ್ರತೀ ವಿಭಾಗದಲ್ಲಿ 2 ರಂತೆ 24 ಆಟಗಾರರು ರಾಷ್ಟ್ರ ಮಟ್ಟಕ್ಕೆ ಆಯ್ಕೆ ಆಗಿದ್ದಾರೆ.

ಸಮಾರೋಪ ಸಮಾರಂಭದ ಅಧ್ಯಕ್ಷತೆಯನ್ನು ದಂಡತೀರ್ಥ ಪ್ರತಿಷ್ಠಾನದ ಅಧ್ಯಕ್ಷ ಡಾ. ಸೀತಾರಾಮ ಭಟ್ ವಹಿಸಿದ್ದರು. ಅವಿನಾಶ್ ಶೆಟ್ಟಿ ಬಹುಮಾನ ವಿತರಿಸಿದರು. ಮುಖ್ಯ ಅತಿಥಿಗಳಾಗಿ ಮಾಜಿ ಶಾಸಕ ಲಾಲಾಜಿ ಆರ್. ಮೆಂಡನ್, ಕಾಪು ಶ್ರೀ ಹಳೇ ಮಾರಿಯಮ್ಮ ದೇವಸ್ಥಾನದ ಮೊಕ್ತೇಸರ ರಾಮ್ ನಾಯಕ್, ಸುನಿಲ್ ಪೂಜಾರಿ, ಮಧುಕರ್, ಕರ್ನಾಟಕ ರಾಜ್ಯ ಚೆಸ್ ಅಸೋಸಿಯೇಷನ್ ಉಪಾಧ್ಯಕ್ಷ ರಮೇಶ್ ಕೋಟೆ, ಉಡುಪಿ ಜಿಲ್ಲಾ ಚೆಸ್ ಅಸೋಸಿಯೇಷನ್‌ನ ಕಾರ್ಯದರ್ಶಿ ಸಿದ್ಧಕೃಷ್ಣ ಬಾಬು ಜೆ. ಪೂಜಾರಿ ಉಪ್ಪುಂದ, ನಾಗೇಶ್ ಕಾರಂತ್ ಪಾಂಗಳ, ಉಮಾನಾಥ ಕಾಪು ಲೋಕೇಶ್ ಬೆಳ್ಚಡ ಉಪಸ್ಥಿತರಿದ್ದರು.

ನಿರ್ದೇಶಕಿ ಸೌಂದರ್ಯ ಯು. ಕೆ. ಸ್ವಾಗತಿಸಿದರು, ಉಮಾನಾಥ ಕಾಪು ವಂದಿಸಿದರು. ಶ್ರೀ ನಾರಾಯಣ ಗುರು ಸ್ಕೂಲ್ ಆಫ್ ಚೆಸ್ ಸ್ಥಾಪಕ ಸಾಕ್ಷಾತ್ ಯು. ಕೆ. ಕಾರ್ಯಕ್ರಮ ನಿರೂಪಿಸಿದರು.

ಕಾರ್ಕಳ ಕರಾವಳಿ ರಂಗಾಯಣದ ನಿರ್ದೇಶಕ ಆರ್.ವೆಂಕಟರಮಣ ಐತಾಳ್

ಬೈಲಾ ಅನ್ವಯ ಕರಾವಳಿ ರಂಗಾಯಣ ನಾಮಕರಣ

• ಕಾರ್ಕಳ: ಯಕ್ಷಗಾನಕ್ಕೆ ಈಗಾಗಲೇ ಯಕ್ಷಗಾನ ಕೇಂದ್ರ. ಯಕ್ಷಗಾನ ಅಕಾಡೆಮಿಯಿದೆ. ಈ ಸಂಬಂಧ ಇದರ ಗೊಂದಲ ನಿವಾರಿಸಲು 'ಯಕ್ಷ ರಂಗಾಯಣ' ಎಂಬ ಶೀರ್ಷಿಕೆಯ ಅರ್ಥವ್ಯಾಪ್ತಿಯನ್ನು ಯಕ್ಷಗಾನದ ತವರು ನೆಲೆಯಾದ ಕರಾವಳಿಯ ಕಲೆಗಳ ಸತ್ವ ಮತ್ತು ಸೊಗಡನ್ನು ಹೀರಿ ಕೊಂಡು ಇಲ್ಲಿನ ರಂಗಭೂಮಿ ಕಟ್ಟಿ ಬೆಳೆಯಲು ಸಾಧ್ಯವಾಗಬೇಕು ಎಂಬ ಕಾರಣಕ್ಕಾಗಿ ಹಾಗೂ 1993 ರಲ್ಲಿ ಮಾಡಿದ್ದ ರಂಗಾಯಣದ ಬೈಲಾದಲ್ಲಿ 'ಕರಾವಳಿ ರಂಗಾಯಣ' ಎಂದು ಉಲ್ಲೇಖವಾಗಿರುವುದನ್ನೂ ಪರಿಗಣಿಸಿ ರಂಗಸಮಾಜದ ಶಿಫಾರಸ್ಸಿನಂತೆ ಅವರ ಸಲಹೆ ಮೇರೆಗೆ 'ಕರಾವಳಿ ರಂಗಾಯಣ ಕಾರ್ಕಳ' ಎಂದು ಬದಲಾಯಿಸಿ ಸರಕಾರವು ಆದೇಶ ಹೊರಡಿಸಿದೆ ಎಂದು ಕಾರ್ಕಳ ಕರಾವಳಿ ರಂಗಾಯಣದ ನಿರ್ದೇಶಕ ಆರ್. ವೆಂಕಟರಮಣ ಐತಾಳ್ ಹೇಳಿದರು.

ಸೋಮವಾರ ಪತ್ರಿಕಾ ಭವನದಲ್ಲಿ ನಡೆದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಯಕ್ಷ ರಂಗಾಯಣ ಕಾರ್ಕಳ ಎಂಬ ಶೀರ್ಷಿಕೆಯು ಸಾಹಿತಿಗಳಲ್ಲಿ, ವಿದ್ವಾಂಸರಲ್ಲಿ ಹಾಗೂ ಜನರಲ್ಲಿ ಇದು ಯಕ್ಷಗಾನಕ್ಕೆ ಸಂಬಂಧಿಸಿದ ರಂಗಾಯಣ ಎಂಬ ಕಲ್ಪನೆಯಿದೆ. ಭಾರತೀಯ ರಂಗಭೂಮಿಯ ಪ್ರಸಿದ್ದ ರಂಗನಿರ್ದೇಶಕ, ರಂಗಭೀಷ್ಮ ಎಂದೇ ಖ್ಯಾತರಾದ ಬಿ.ವಿ.ಕಾರಂತರ



ಬಹುದೊಡ್ಡ ಕನಸು ಈ ರಂಗಾಯಣ. ಪ್ರಾದೇಶಿಕ ಭಾಷೆ ಮತ್ತು ಸಾಂಸ್ಕೃತಿಕ ಸೊಗಡನ್ನು ಜೀವಂತವಾಗಿಡಲು ಮೈಸೂರು, ಕರಾವಳಿ, ಮಲೆನಾಡು ಮತ್ತು ಹೈದ್ರಾಬಾದ್ / ಕರ್ನಾಟಕ ರಂಗಾಯಣಗಳ ಸ್ಥಾಪನೆಯ ಕನಸು ಕಂಡವರು ಕಾರಂತರು. ಅಂತೆಯೇ ಮೈಸೂರಿನ ನಂತರ ಧಾರವಾಡ, ಶಿವಮೊಗ್ಗ, ಗುಲ್ಬರ್ಗ ಮತ್ತು ದಾವಣಗೆರೆಯಲ್ಲಿ ರಂಗಾಯಣಗಳು ಸ್ಥಾಪನೆಯಾದವು. ಕರ್ನಾಟಕದ ಆರನೇ ರಂಗಾಯಣವು ಉಡುಪಿ ಜಿಲ್ಲೆಯ ಕಾರ್ಕಳದಲ್ಲಿ 'ಯಕ್ಷ ರಂಗಾಯಣ'ವಾಗಿ ಸ್ಥಾಪನೆಯಾಗಿದೆ. 2022 ಮಾರ್ಚ್ 10 ರಂದು ಯಕ್ಷ ರಂಗಾಯಣದ ಕಟ್ಟಡಕ್ಕೆ ಅಂದಿನ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಚಿವರಾದ ವಿ.ಸುನಿಲ್ ಕುಮಾರ್‌ರಿಂದ ಭೂಮಿಪೂಜೆ ನೆರವೇರಿತ್ತು. ಜೀವನ್ ರಾಂ ಸುಳ್ಯ ರವರು ಯಕ್ಷರಂಗಾಯಣದ ಪ್ರಥಮ ನಿರ್ದೇಶಕರಾಗಿ ಸರಕಾರದಿಂದ ನೇಮಕಗೊಂಡಿದ್ದರು. ಪ್ರಸ್ತುತ ಯಕ್ಷ ರಂಗಾಯಣದ ನಿರ್ದೇಶಕರಾಗಿ ಬಿ.ಆರ್. ವೆಂಕಟರಮಣ ಐತಾಳ ಸರ್ಕಾರದಿಂದ ನೇಮಕಗೊಂಡಿದ್ದಾರೆ ಎಂದರು.

ಆಧುನಿಕ ರಂಗಭೂಮಿಯ ಪರಿಕಲ್ಪನೆಯಲ್ಲಿ ಯಕ್ಷಗಾನವನ್ನು ಕಟ್ಟುವ ಹಾಗೂ ಯಕ್ಷಗಾನದ ಪುರಾಣ, ಕತೆ, ಕಾವ್ಯಗಳನ್ನು ಬಳಸಿಕೊಂಡು ರಂಗಭೂಮಿಯನ್ನು ಕಟ್ಟುವ ಜೊತೆ ಜೊತೆಗೆ ಕರಾವಳಿ–ಪ್ರಾದೇಶಿಕ ಸಾಂಸ್ಕೃತಿಕ ಶ್ರೀಮಂತಿಕೆಯನ್ನೂ ಪಸರಿಸುವುದು ಯಕ್ಷ ರಂಗಾಯಣದ ಗುರಿಯಾಗಿದೆ. ಯುವಜನತೆಯನ್ನು ಸಾಂಸ್ಕೃತಿಕ ಸಂಗತಿಗಳತ್ತ ಸೆಳೆಯುವಂತಹ ರಂಗ ಶಿಬಿರಗಳು, ಯಕ್ಷಗಾನ ತರಬೇತಿ, ರಂಗ ತಾಂತ್ರಿಕ ಕಾರ್ಯಾಗಾರ, ನಾಟಕ ರಚನಾ ಕಮ್ಮಟ, ಅಭಿನಯ–ಮಾತುಗಾರಿಕೆ ತರಬೇತಿ, ವಿಚಾರ ಸಂಕಿರಣ, ಮಕ್ಕಳ ಶಿಬಿರ, ಜಾನಪದ ಕಮ್ಮಟ, ಕಾಲೇಜು ರಂಗೋತ್ಸವ, ನಾಟಕೋತ್ಸವ, ಯಕ್ಷೋತ್ಸವ, ರಾಷ್ಟ್ರೀಯ ಸಾಂಸ್ಕೃತಿಕ ಉತ್ಸವ, ಸಂಚಾರಿ ರಂಗ ತಂಡದ ರಂಗ ಪ್ರವಾಸ ಸೇರಿದಂತೆ ವೈವಿಧ್ಯಮಯ ಕಾರ್ಯಕ್ರಮಗಳನ್ನು ನಡೆಸುವುದು ಹಾಗೂ ಡಿಪ್ಲೋಮಾ ಕೋರ್ಸ್‌ಗಾಗಿ 'ರಂಗ ಶಿಕ್ಷಣ ಕೇಂದ್ರವನ್ನು ಆರಂಭಿಸುವುದು ಯಕ್ಷ ರಂಗಾಯಣದ ಪ್ರಮುಖ ಹೆಜ್ಜೆಯಾಗಿದೆ ಎಂದರು.

ಕರಾವಳಿಯ ಸಂಸ್ಕೃತಿಯನ್ನು ಬಿಂಬಿಸುವ ಯಕ್ಷ ರಂಗಾಯಣದ ಸುಸಜ್ಜಿತ ಕಟ್ಟಡ ನಿರ್ಮಾಣದ ಕೆಲಸವು ಈಗಾಗಲೇ ಅದಕ್ಕಾಗಿಯೇ ಮೀಸಲಿಟ್ಟ 3 ಎಕ್ರೆ ಜಾಗದಲ್ಲಿ ಆರಂಭಗೊಂಡಿದೆ. ಕಾರ್ಕಳದ ಪ್ರಸಿದ್ಧ ಪ್ರವಾಸಿ ತಾಣವಾಗಿರುವ ಕೋಟಿ ಚೆನ್ನಯ ಥೀಂ ಪಾರ್ಕ್‌ನಲ್ಲಿ ಸದ್ಯ ತಾತ್ಕಾಲಿಕ ಕಚೇರಿ ಹೊಂದಿರುವ ಯಕ್ಷ ರಂಗಾಯಣವು ತನ್ನ ನಿರಂತರ ಮತ್ತು ಪರಿಣಾಮಕಾರಿ ಕಾರ್ಯಕ್ರಮಗಳಿಂದಾಗಿ ಆರಂಭದ ಮೊದಲ ವರ್ಷದಲ್ಲೇ ರಾಜ್ಯದೆಲ್ಲೆಡೆ ಪ್ರಸಿದ್ಧಿಯನ್ನು ಪಡೆದಿರುತ್ತದೆ ಎಂದರು. ಯಕ್ಷಗಾನ ರಂಗಾಯಣ ಕಾರ್ಕಳವು 2025–26ನೇ ಸಾಲಿನಲ್ಲಿ 12 ಮಂದಿ ರೆಪರ್ಟರಿ ಕಲಾವಿದರನ್ನು ನೇಮಕ ಮಾಡಿಕೊಂಡು ನಾಲ್ಕು ನಾಟಕವನ್ನು 70 ಕಡೆಗಳಲ್ಲಿ ಪ್ರದರ್ಶನವನ್ನು ನೀಡಿ ಯಶಸ್ವಿಯಾಗಿದೆ ಎಂದರು.

ಯಕ್ಷಗಾನಕ್ಕೆ ಶಾಂತಾರಾಮ ಕುಡ್ವರ ಕೊಡುಗೆ ಅಪಾರ

• ಮಂಗಳೂರು: ಬಹು ಭಾಷಾ ಯಕ್ಷಗಾನ ವೇಷಧಾರಿಯಾಗಿ ಮತ್ತು ತಾಳಮದ್ದಳೆ ಅರ್ಥದಾರಿ ಕಲಾವಿದನಾಗಿಯೂ, ಜೊತೆಗೆ ಯಕ್ಷಗಾನ ಸಂಘಟನಾ ಚತುರನಾಗಿ, ಉತ್ತಮ ಲೇಖಕ, ವಾಗ್ಮಿ, ವಿಮರ್ಶಕನಾಗಿ, ಯಕ್ಷಗಾನ ಪ್ರಸಂಗ ರಚನಕಾರನಾಗಿ, ಕಲಾವಿದರ ಕಷ್ಟ ಸುಖಗಳಲ್ಲಿಯೂ ಸಮಭಾಗಿಯಾಗಿ ಆಪತ್ಬಾಂಧವನಾಗಿ ನೆರವು ನೀಡಿ, ಸಾರ್ಥಕ ಸೇವೆಯನ್ನು ಸಲ್ಲಿಸುತ್ತಿರುವ ಶಾಂತರಾಮ ಕುಡ್ವರ ಬಹುಮುಖ ವ್ಯಕ್ತಿತ್ವ ಅಭಿನಂದನೀಯ, ಅಭಿವಂದನೀಯ. ಯಕ್ಷಗಾನಕ್ಕೆ ಕುಡ್ವರ ಕೊಡುಗೆ ಅಪಾರ ಎಂದು ಮೂಡುಬಿದಿರೆಯ ವಾಸ್ತು ತಜ್ಞ ಮಾರೂರು ರಾಘವೇಂದ್ರ ಭಂಡಾರ್ಕಾರ್ ಅವರು ಹೇಳಿದರು.

ಇಲ್ಲಿನ ಜನತಾ ವಿವಿದುದ್ದೇಶ ಸಹಕಾರೀ ಸಂಘ ಪಡುಮಾರ್ನಾಡು ಮತ್ತು ಸಾವಯವ ಕೃಷಿಕ ಬಳಗ ಮೂಡುಬಿದಿರೆ ಇವರ ಆಶ್ರಯದಲ್ಲಿ ಯಕ್ಷಗಾನ ಕಲಾವಿದ ಮತ್ತು ವಿಮರ್ಶಕ ಶಾಂತರಾಮ ಕುಡ್ವರಿಗೆ ಹಮ್ಮಿಕೊಂಡ ಸನ್ಮಾನ ಕಾರ್ಯಕ್ರಮದಲ್ಲಿ ಅಭಿನಂದನಾ ಭಾಷಣ ಮಾಡಿದರು.

ಶಾಂತರಾಮ ಕುಡ್ವರನ್ನು ರೇಷ್ಮೆ ಶಾಲು ಹೊದಿಸಿ, ಪೇಟ ತೊಡಿಸಿ ಫಲ ಪುಷ್ಪ ಸ್ಮರಣಿಕೆಗಳನ್ನು ನೀಡಿ



ಗೌರವಿಸಲಾಯ್ತು. ಅನ್ನದಾತರಾಗಿರುವ ಸಾವಯವ ರೈತ ಬಳಗದಿಂದ ಮತ್ತು ಜನತಾ ಸಹಕಾರ ಸಂಘದಿಂದ ತಾನು ಸನ್ಮಾನಗೊಂಡಿರುವುದಕ್ಕೆ ತೀವ್ರ ಸಂತಸ ವ್ಯಕ್ತಪಡಿಸಿದ ಕುಡ್ವ ಅವರು ಈ ಗೌರವವನ್ನು ತಾನೂ ಎಂದೂ ಮರೆಯಲು ಸಾಧ್ಯವಿಲ್ಲ ಎಂದರಲ್ಲದೆ, ಈ ಹಿಂದೆ ಕೃಷಿ ವಿಚಾರಗಳ ಬಗ್ಗೆ ಜಿಲ್ಲೆಯ ಪ್ರಸಿದ್ಧ ಕಲಾವಿದರಿಂದ 'ಕೃಷಿ ವಿಜಯ' ಎಂಬ ತಾಳಮದ್ದಳೆ ಕೂಟ ಕೂಡ ನಡೆದಿರುವುದನ್ನು ಅವರು ಈ ಸಂದರ್ಭದಲ್ಲಿ ಸ್ಮರಿಸಿದರು.

ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಹಿರಿಯ ಸಹಕಾರೀ ಧುರೀಣ ಜನತಾ ವಿವಿಧೋದ್ದೇಶ ಸಹಕಾರೀ ಸಂಘದ ಅಧ್ಯಕ್ಷ ಪಡುಮಾರ್ನಾಡು ದಯಾನಂದ ಪೈ ಅವರು ಮಾತನಾಡಿ, ಈಗಾಗಲೇ ಕುಡ್ವರಿಗೆ ದೇಶ ವಿದೇಶಗಳಲ್ಲಿ 350 ಕ್ಕೂ ಹೆಚ್ಚಿನ ಸನ್ಮಾನಗಳು ಆಗಿದ್ದು, ಯಕ್ಷಗಾನಕ್ಕಾಗಿಯೇ ತಮ್ಮ ಬದುಕನ್ನು ಮುಡಿಪಾಗಿಟ್ಟಿರುವ ಶಾಂತರಾಮ ಕುಡ್ವರ ಯಕ್ಷಗಾನ ಸೇವೆಯನ್ನು ಅವರು ಪ್ರಶಂಸಿದರು. ಕಡಲಕೆರೆ ಪ್ರೇರಣಾ ಶಾಲೆಯ ಸಂಚಾಲಕನಾಗಿಯೂ ಕುಡ್ವರು ಜಿಲ್ಲೆಯಲ್ಲಿಯೇ ಈ ವಿದ್ಯಾರ್ಥಿ ಸಂಸ್ಥೆಯನ್ನು ಮಾದರಿ ಶಾಲೆಯನ್ನಾಗಿಸುವಲ್ಲಿ ಕಾರಣಕರ್ತರಾಗಿದ್ದಾರೆ ಎಂದೂ ಶ್ಲಾಘಿಸಿದರು.

ಪ್ರಗತಿಪರ ಸಾವಯವ ಕೃಷಿಕ ಇರ್ವತ್ತೂರು ವೆಂಕಟರಮಣ ಭಟ್, ದಯಾನಂದ ಭಟ್ ಅಚ್ಚರಕಟ್ಟೆ, ಅಮೃತ ಸಾವಯವ ಮಳಿಗೆಯ ಅಶೋಕ್ ಭಂಡಾರಿ, ರೈತ ಸಂಘದ ಅಧ್ಯಕ್ಷ ಹರಿಪ್ರಸಾದ್ ನಾಯಕ್, ಸಾವಯವ ಕೃಷಿಕ ಗೋಪಾಲಕೃಷ್ಣ ಭಟ್, ಜಿನೇಂದ್ರ ಹೆಗ್ಡೆ, ಕಾರ್ಪೊರೇಶನ್ ಬ್ಯಾಂಕ್ ನಿವೃತ್ತ ಸೀನಿಯರ್ ಮ್ಯಾನೇಜರ್ ಸುಧೀರ್ ನಾಯಕ್, ನಿವೃತ್ತ ಬ್ಯಾಂಕ್ ಉದ್ಯೋಗಿ ಪ್ರಭಾಕರ ಪ್ರಭು, ನವೀನ್ ಅಂಬೂರಿ ಮತ್ತಿತರರು ಉಪಸ್ಥಿತರಿದ್ದರು.

ದಯಾನಂದ ಭಟ್ ಸ್ವಾಗತಿಸಿ, ಕಾರ್ಯಕ್ರಮ ನಿರ್ವಹಿಸಿದರು. ಅಶೋಕ್ ಭಂಡಾರಿ ವಂದಿಸಿದರು.

ತಿರುವನಂತಪುರದಲ್ಲಿ ನಡೆದ ಸಿಪಿಎಂ ಹಿಂಸಾಚಾರದ ವಿರುದ್ಧ ಧರಣಿ ಸತ್ಯಾಗ್ರಹ

ಕಾಸರಗೋಡಿನಲ್ಲಿ ಬಿಜೆಪಿ ಪ್ರತಿಭಟನಾ ಮೆರವಣಿಗೆ

• ಕಾಸರಗೋಡು: ತಿರುವನಂತಪುರ ಕಾರ್ಪೋರೇಶನ್ ಮೇಯರ್, ಉಪಮೇಯರ್ ಸೇರಿದಂತೆ ಬಿಜೆಪಿ ಕೌನ್ಸಿಲರ್‌ಗಳ ಮೇಲೆ ಹಿಂಸಾಚಾರ ನಡೆಸಿದ ಸಿಪಿಎಂ ಕೃತ್ಯವನ್ನು ಖಂಡಿಸಿ ಬಿಜೆಪಿ ಕಾಸರಗೋಡು ಜಿಲ್ಲಾ ಸಮಿತಿಯ ಆಶ್ರಯದಲ್ಲಿ ಕಾಸರಗೋಡು ನಗರದಲ್ಲಿ ಪ್ರತಿಭಟನಾ ಮೆರವಣಿಗೆ ಮತ್ತು ಧರಣಿ ಸತ್ಯಾಗ್ರಹವನ್ನು ನಡೆಸಲಾಯಿತು.

ಬಿಜೆಪಿ ಜಿಲ್ಲಾಧ್ಯಕ್ಷೆ ಎಂ.ಎಲ್.ಅಶ್ವಿನಿ ಪ್ರತಿಭಟನೆಯನ್ನು ಉದ್ಘಾಟಿಸಿ ಮಾತನಾಡಿ, ಸಿಪಿಎಂಗೆ ರಾಜ್ಯ ಆಡಳಿತ ಕಳೆದುಕೊಂಡಿರುವುದಕ್ಕಿಂತ ತಿರುವನಂತಪುರ ಕಾರ್ಪೋರೇಶನ್ ಆಡಳಿತದ ನಷ್ಟವು ಹೆಚ್ಚು ಆತಂಕಕಾರಿಯಾಗಿದೆ ಎಂದು ಹೇಳಿದರು.

ಸಿಪಿಎಂನ ಹಿಂಸಾಚಾರಕ್ಕೆ ಅಕ್ರಮ ಕಟ್ಟಡಗಳ ಧ್ವಂಸ ಮತ್ತು ಮೇಯರ್ ಕಚೇರಿಯ ಜನಪ್ರಿಯತೆಯೇ ಕಾರಣ ಎಂದು ಎಂ.ಎಲ್.ಅಶ್ವಿನಿ ನುಡಿದರು, [ಬಿಜೆಪಿ] ಆಡಳಿತದಿಂದಾಗಿ ತಿರುವನಂತಪುರದಲ್ಲಿ ಸಿಪಿಎಂ ಪಕ್ಷಕ್ಕೆ ನಡುಕ ಜೋರಾಗಿದೆ. ಮಾತ್ರವಲ್ಲದೆ ತಿರುವನಂತಪುರದಲ್ಲಿ ಮತ್ತೆ ಸಿಪಿಎಂ ಅಧಿಕಾರ



ಪಡೆಯಲು ಸಾಧ್ಯವಿಲ್ಲ ಎಂಬುದು ಆ ಪಕ್ಷಕ್ಕೆ ಮನವರಿಕೆಯಾಗಿದೆ ಎಂದು ಅವರು ತಿಳಿಸಿದರು.

ಬಿಜೆಪಿ ಜಿಲ್ಲಾ ಪ್ರಧಾನ ಕಾರ್ಯದರ್ಶಿಗಳಾದ ಮನುಲಾಲ್ ಮೇಲತ್, ಎನ್.ಬಾಬುರಾಜ್, ಪಿ.ಆರ್.ಸುನೀಲ್, ಜಿಲ್ಲಾ ಉಪಾಧ್ಯಕ್ಷ ಮುರಳೀಧರ ಯಾದವ್, ಒಬಿಸಿ ಮೋರ್ಚಾ ರಾಜ್ಯ ಪ್ರಧಾನ ಕಾರ್ಯದರ್ಶಿ ಕೆ.ಎಸ್.ಶೈಜು, ಜಿಲ್ಲಾ ಸೆಲ್ ಸಂಯೋಜಕ ಸುಕುಮಾರ ಕುದ್ರೆಪ್ಪಾಡಿ, ಒಬಿಸಿ ಮೋರ್ಚಾ ಜಿಲ್ಲಾಧ್ಯಕ್ಷ ಕೆ.ಪಿ.ವಲ್ಸರಾಜ್, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಕೆ.ದಯಾನಂದ ಮುಜುಂಗಾವು, ಜಿಲ್ಲಾ ಉಪಾಧ್ಯಕ್ಷ ಟಿ.ವಿ.ಮುರಳಿ, ಮಹಿಳಾ ಮೋರ್ಚಾ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಅನಿತಾ ನಾಯ್ಕ್, ಶ್ರೀಲತಾ ಟೀಚರ್ ಸೇರಿದಂತೆ ಹಿರಿಯ ಮುಖಂಡರು ನೇತೃತ್ವ ವಹಿಸಿದ್ದರು.

ಮಂಗಳವಾರದ ಪಂದ್ಯ(ನಾಕೌಟ್)

ನೆದರ್‌ಲೆಂಡ್-ಮೊರಾಕ್ಕೊ, ಬೆಳಗ್ಗೆ 6.30

ಐವರಿಕೋಸ್ಟ್-ನಾರ್ವೆ, ರಾತ್ರಿ 10.30

ಫ್ರಾನ್ಸ್-ಸ್ವೀಡನ್, ಮಧ್ಯರಾತ್ರಿ 2.30

ಮೆಕ್ಸಿಕೋ-ಈಕ್ವಡೊರ್, ಬುಧವಾರ ಬೆಳಗ್ಗೆ 6.30

ಕಿರುಸುದ್ದಿ

ಟೆಸ್ಟ್ ಚಾಂಪಿಯನ್‌ಶಿಪ್: 5ನೇ ಸ್ಥಾನಕ್ಕೇರಿದ ಭಾರತ

ದುಬೈ: ವೆಸ್ಟ್ ಇಂಡೀಸ್ ವಿರುದ್ಧ ಇನ್ನಿಂಗ್ಸ್ ಮತ್ತು 217 ರನ್‌ಗಳ ಹೀನಾಯ ಸೋಲುಂಡ ಶ್ರೀಲಂಕಾ, 2025–27ರ ವಿಶ್ವ ಟೆಸ್ಟ್ ಚಾಂಪಿಯನ್‌ಶಿಪ್‌ನಲ್ಲಿ 3ನೇ ಸ್ಥಾನದಿಂದ 6ನೇ ಸ್ಥಾನಕ್ಕೆ ಕುಸಿದಿದೆ. ಇದರಿಂದ ಶುಭ್ಮನ್ ಗಿಲ್ ನೇತೃತ್ವದ ಭಾರತ ತಂಡವು ಒಂದು ಸ್ಥಾನದ ಬಡ್ತಿ ಪಡೆದು ಅಂಕಪಟ್ಟಿಯಲ್ಲಿ 5ನೇ ಸ್ಥಾನಕ್ಕೇರಿದೆ. 17 ತಿಂಗಳ ಬಳಿಕ ಟೆಸ್ಟ್ ಪಂದ್ಯವೊಂದನ್ನು ಗೆದ್ದ ವೆಸ್ಟ್ ಇಂಡೀಸ್ ಚಾಂಪಿಯನ್‌ಶಿಪ್ ಅಂಕಪಟ್ಟಿಯಲ್ಲಿ ಕೊನೆಯ ಸ್ಥಾನದಿಂದ 8ನೇ ಸ್ಥಾನಕ್ಕೇರಿದೆ. ಇದರಿಂದ ಪಾಕಿಸ್ತಾನ 9ನೇ (ಕೊನೆಯ) ಸ್ಥಾನಕ್ಕೆ ಕುಸಿದಿದೆ. ತಮ್ಮ ಮುಂದಿನ ವೆಸ್ಟ್ ಇಂಡೀಸ್ ಸರಣಿಯಲ್ಲಿ ಟೆಸ್ಟ್ ಗೆಲ್ಲುವವರೆಗೆ ಪಾಕ್ ಕೊನೆಯ ಸ್ಥಾನದಲ್ಲೇ ಇರಲಿದೆ.

87 ಮೀ+ ಜ್ಯಾವೆಲಿನ್ ಎಸೆದ 3ನೇ ಭಾರತೀಯ ರೋಹಿತ್



ಭುವನೇಶ್ವರ್: ಭಾರತೀಯ ಅಥ್ಲೆಟಿಕ್ಸ್ ಇತಿಹಾಸದಲ್ಲಿಯೇ 87 ಮೀ.ಗಿಂತ ಹೆಚ್ಚು ದೂರ ಜ್ಯಾವೆಲಿನ್ ಎಸೆದ ಮೂರನೇ ಅಥ್ಲೀಟ್ ಎಂಬ ದಾಖಲೆಯನ್ನು ರೋಹಿತ್ ಯಾದವ್ ಬರೆದಿದ್ದಾರೆ. ಭುವನೇಶ್ವರದಲ್ಲಿ ನಡೆದ ಅಂತರರಾಜ್ಯ ಹಿರಿಯರ ಅಥ್ಲೆಟಿಕ್ಸ್ ಚಾಂಪಿಯನ್‌ಶಿಪ್‌ನಲ್ಲಿ 87.05 ಮೀ. ದೂರ ಜ್ಯಾವೆಲಿನ್ ಎಸೆದಿದ್ದರು. ಈ ಹಿಂದೆ ನೀರಜ್ ಚೋಪ್ರಾ ಮತ್ತು ಕಿಶೋರ್ ಜೆನಾ ಈ ದಾಖಲೆ ಬರೆದಿದ್ದಾರೆ.

ವೈಭವ್ ಸಿದ್ಧ, ಆದರೆ ಸಂಜು ವಿಶ್ವಕಪ್ ರೂವಾರಿ: ರಯಾನ್

ಬೆಲ್‌ಫಾಸ್ಟ್: ಐರ್ಲೆಂಡ್ ವಿರುದ್ಧ ಭಾರತೀಯರು ಟಿ20 ಸರಣಿ ಸೋಲುಂಡಿದ್ದು, 15ರ ಹರೆಯದ ಬ್ಯಾಟರ್ ವೈಭವ್ ಸೂರ್ಯವಂಶಿ ಅವರನ್ನು ಆಡಿಸದಿರುವ ಬಗ್ಗೆ ಭಾರೀ ಟೀಕೆ ವ್ಯಕ್ತವಾಗಿತ್ತು. ಈ ಬಗ್ಗೆ ಪ್ರತಿಕ್ರಿಯಿಸಿದ ಭಾರತ ತಂಡದ ಸಹಾಯಕ ಕೋಚ್ ರಯಾನ್ ಟೆನ್ ಡೊಶೆಟ್, ಹೌದು. ವೈಭವ್ ಸೂರ್ಯವಂಶಿ ಅವರು ಅಂತಾರಾಷ್ಟ್ರೀಯ ಪಂದ್ಯಗಳನ್ನಾಡಲು ಎಲ್ಲಾ ರೀತಿಯಲ್ಲೂ ಸಿದ್ಧರಿದ್ದಾರೆ. ಅದರಲ್ಲಿ ಯಾವುದೇ ಸಂಶಯಗಳಿಲ್ಲ. ಆದರೆ ಮೂರು ತಿಂಗಳ ಹಿಂದೆ ಭಾರತದ ಟಿ20 ವಿಶ್ವಕಪ್ ಗೆಲುವಿನಲ್ಲಿ ಸಂಜು ಸ್ಯಾಮ್ಸನ್ ಪ್ರಮುಖ ಪಾತ್ರ ವಹಿಸಿದ್ದರು ಎಂದು ಹೇಳಿದ್ದಾರೆ. ಖಂಡಿತವಾಗಿ ವೈಭವ್ ಐಪಿಎಲ್‌ನಲ್ಲಿ ಉತ್ತಮ ಪ್ರದರ್ಶನ ನೀಡಿದ್ದಾರೆ. ಆಟಗಾರರಿಗೆ ಆತ್ಮವಿಶ್ವಾಸ ತುಂಬುವುದು ಮುಖ್ಯ. ದೀರ್ಘಾವಧಿ ಗುರಿಯೊಂದಿಗೆ ನಾವು ತಂಡ ಕಟ್ಟುತ್ತಿದ್ದೇವೆ. ವೈಭವ್ ಆಡುವುದನ್ನು ನೋಡಲು ನಾವೂ ನಿಮ್ಮಷ್ಟೇ ಉತ್ಸುಕರಾಗಿದ್ದೇವೆ. ಆದರೆ ಆಡಿಸುವುದಕ್ಕೆ ಪ್ರಕ್ರಿಯೆ ಅನುಸರಿಸಬೇಕು ಎಂದು ಟೆನ್ ಡೊಶೆಟ್ ಹೇಳಿದ್ದಾರೆ.

ಶೂಟೌಟ್‌ನಲ್ಲಿ ಗೆದ್ದ ಭಾರತ

ಹೊಸದಿಲ್ಲಿ: ಎಫ್‌ಐಎಚ್ ಪ್ರೊ ಲೀಗ್ 2025–26 ಹಾಕಿಯಲ್ಲಿ ಭಾರತ ಹಾಗೂ ಇಂಗ್ಲೆಂಡ್ ನಡುವಿನ ರೋಚಕ ಪಂದ್ಯವು ಫುಲ್‌ಟೈಮ್ ವೇಳೆಗೆ ಗೋಲ್ ಕಾಣದೆ ಟೈ ಆಗಿದ್ದು, ಶೂಟೌಟ್‌ನಲ್ಲಿ ಭಾರತ 3–2 ಗೋಲ್‌ಗಳ ಅಂತರದಿಂದ ಗೆಲುವು ಸಾಧಿಸಿದೆ. ಗೆಲುವಿನೊಂದಿಗೆ ಭಾರತ ತನ್ನ ಎಫ್‌ಐಎಚ್ ಪ್ರೊ ಲೀಗ್ ಋತು ಮುಕ್ತಾಯಗೊಳಿಸಿದೆ. ಭಾರತದ ಪರ ಗೋಲ್ ಕೀಪರ್ ಮೋಹಿತ್, ಸೂರಜ್ ಕರ್ಕೇರಾ ಎದುರಾಳಿ ಆಟಗಾರರು ಗೋಲ್ ಹೊಡೆಯದಂತೆ ನೋಡಿಕೊಂಡರು. ಇಂಗ್ಲೆಂಡ್ ವಿರುದ್ಧ ಗೆಲುವು ಸಾಧಿಸಿದ ಭಾರತೀಯ ಪುರುಷರ ತಂಡ ಬೋನಸ್ ಅಂಕವನ್ನು ಸಂಪಾದಿಸಿದೆ. ಇದರಿಂದ 16 ಪಂದ್ಯಗಳಿಂದ 19 ಅಂಕಗಳೊಂದಿಗೆ ಭಾರತ 8ನೇ ಸ್ಥಾನ ಸಂಪಾದಿಸಿದೆ. 19 ಅಂಕಗಳನ್ನು ಹೊಂದಿರುವ ಸ್ಪೇನ್ ಭಾರತಕ್ಕಿಂತ(4) ಹೆಚ್ಚು 5 ಗೆಲುವು ಸಾಧಿಸಿದ್ದು, 7ನೇ ಸ್ಥಾನ ಸಂಪಾದಿಸಿದೆ. ಶೂಟೌಟ್‌ನಲ್ಲಿ ಭಾರತ ಪರ ಅಭಿಷೇಕ್, ಶಿಲಾನಂದ್ ಲಾಕ್ರಾ, ಹಾರ್ದಿಕ್ ಸಿಂಗ್ ಸ್ಕೋರ್ ಮಾಡಿದರು. ಸುಖ್‌ಜೀತ್ ಸಿಂಗ್ ಮತ್ತು ದಿಲ್‌ಪ್ರೀತ್ ಸಿಂಗ್ ಗೋಲ್ ಹೊಡೆಯಲಿಲ್ಲ. ಇಂಗ್ಲೆಂಡ್ ಪರ ಕೇವಲ ಜಾಕ್ ವ್ಯಾಲೆನ್ಸ್ ಮತ್ತು ಡೇವಿಡ್ ಗುಡ್‌ಫೀಲ್ಡ್ ಗೋಲ್ ದಾಖಲಿಸಿದ್ದರು.

ಕೆನಡಾ ಪಾಲಿಗೆ ಯುಸ್ಟಾಕಿಯೊ ಹೀರೋ | ಕಮರಿದ ದಕ್ಷಿಣ ಆಫ್ರಿಕಾ ವಿಶ್ವಕಪ್ ಕನಸು

ನನಸಾದ ಕೆನಡಾ ಪ್ರಿಕ್ವಾರ್ಟರ್ ಕನಸು

ಕ್ಯಾಲಿಫೋರ್ನಿಯಾ: ಕೆನಡಾ ಇದೇ ಮೊದಲ ಬಾರಿಗೆ ವಿಶ್ವಕಪ್ ಇತಿಹಾಸದಲ್ಲಿ ಪ್ರಿಕ್ವಾರ್ಟರ್ ಫೈನಲ್ (16ರ ಸುತ್ತನ್ನು) ಪ್ರವೇಶಿಸಿದೆ. ಈ ಬಾರಿಯ ವಿಶ್ವಕಪ್‌ನ ಮೊದಲ ನಾಕೌಟ್ (32ರ ಸುತ್ತಿನ) ಪಂದ್ಯದಲ್ಲಿ ದಕ್ಷಿಣ ಆಫ್ರಿಕಾ ವಿರುದ್ಧ ಏಕೈಕ ಗೋಲಿನ ಗೆಲುವು ಸಾಧಿಸಿದೆ. ಎಕ್ಸ್‌ಟ್ರಾ ಟೈಮ್‌ನಲ್ಲಿ ಸ್ಟೀಫನ್ ಯುಸ್ಟಾಕಿಯೊ ಗೋಲ್ ಹೊಡೆಯುತ್ತಲೇ ಕೆನಡಾ ಕೋಚ್, ಆಟಗಾರರು ಮೈದಾನಕ್ಕಿಳಿದು ಸಂಭ್ರಮಿಸಿದರು. ಕೆಂಪು ಬಣ್ಣದ ಧಿರಿಸಲಿದ್ದ ಕೆನಡಾ ಅಭಿಮಾನಿಗಳ ಮಹಾಪೂರ ಸಂಭ್ರಮಪಟ್ಟಿತು.

ಇದೇ ಮೊದಲ ಬಾರಿ ವಿಶ್ವಕಪ್ ನಾಕೌಟ್ ಗೆದ್ದ ಕೆನಡಾ

ಮೊದಲಾರ್ಧ ಯಾವುದೇ ಗೋಲ್ ದಾಖಲಾಗಲಿಲ್ಲ. 90 ನಿಮಿಷಗಳವರೆಗೂ ಎರಡೂ ತಂಡಗಳು ಯಾವುದೇ ಗೋಲ್ ಹೊಡೆಯದೆ ಮತ್ತು ಹೊಡೆಯಲೂ ಬಿಡದೆ ಒತ್ತಡ ಹೇರಿದ್ದರು. ಆದರೆ ಕೊನೆಯ ಕ್ಷಣಗಳಲ್ಲಿ ಸಿಕ್ಕ ಸಣ್ಣದೊಂದು ಅವಕಾಶವನ್ನು ಸ್ಟೀಫನ್ ಯುಸ್ಟಾಕಿಯೊ ಬಳಸಿಕೊಂಡರು. ಕೆನಡಾ ನಾಕೌಟ್ ಗೆಲುವಿನ ಸಂಪೂರ್ಣ ಶ್ರೇಯಸ್ಸು ಸ್ಟೀಫನ್ ಯುಸ್ಟಾಕಿಯೊ ಅವರಿಗೆ ಸಲ್ಲುತ್ತದೆ. 90+2 ನಿಮಿಷದಲ್ಲಿ ಗೋಲ್ ಹೊಡೆದು ಯುಸ್ಟಾಕಿಯೊ, ಕೆನಡಾದ ಮೈಲಿಗಲ್ಲು ಗೆಲುವಿನ ರೂವಾರಿಯಾದರು. ಎಕ್ಸ್‌ಟ್ರಾ ಟೈಮ್‌ನ ಎರಡನೇ ನಿಮಿಷದಲ್ಲೇ ಯುಸ್ಟಾಕಿಯೋ ಗೋಲ್ ದಾಖಲಿಸಿದರು.

ಜು.4ರಂದು ಹ್ಯೂಸ್ಟನ್‌ನಲ್ಲಿ ನಡೆಯಲಿರುವ ಪ್ರಿಕ್ವಾರ್ಟರ್‌ನಲ್ಲಿ ನೆದರ್‌ಲೆಂಡ್ ಅಥವಾ ಮೊರಾಕ್ಕೊ ತಂಡವನ್ನು ಕೆನಡಾ ಎದುರಿಸಬೇಕಿದೆ.

ಟೋಕಿಯೋದಲ್ಲಿ ಸ್ವರ್ಣ: ಕೆನಡಾದಲ್ಲಿ ಚಳಿಗಾಲ ಹಾಕಿ ಹಾಗೂ ಬೇಸಿಗೆಗಾಲದಲ್ಲಿ ಪುರುಷರ ಫುಟ್ಬಾಲ್ ರಾಷ್ಟ್ರೀಯ ತಂಡ ಪ್ರಾಬಲ್ಯ ಮೆರೆಯುತ್ತವೆ. ಅದೇ ರೀತಿ ಈ ಬಾರಿ ವಿಶ್ವಕಪ್‌ನಲ್ಲಿ ಕೆನಡಾ ಅದ್ಭುತ ಪ್ರದರ್ಶನ ನೀಡಿ ಕ್ವಾರ್ಟರ್‌ಗೇರಿದೆ. 1985 ಮತ್ತು 2000ದಲ್ಲಿ ಕೊಂಕಾಕಾಫ್ ಗೋಲ್ಡ್ ಕಪ್ ಚಾಂಪಿಯನ್ ಶಿಪ್ ಗೆದ್ದಿರುವುದು ಬಿಟ್ಟರೆ 2020ರ ಟೋಕಿಯೋ ಒಲಿಂಪಿಕ್ಸ್‌ನಲ್ಲಿ ಕೆನಡಾ ಸ್ವರ್ಣ ಪದಕ ಗೆದ್ದಿತ್ತು. ಆದರೆ ವಿಶ್ವಕಪ್‌ನಲ್ಲಿ ಇದೇ ಮೊದಲ ಬಾರಿ ಪ್ರಿಕ್ವಾರ್ಟರ್ ಪ್ರವೇಶಿಸಿದೆ.



ಹೊರಬಿದ್ದ ದ.ಆಫ್ರಿಕಾ

ದಕ್ಷಿಣ ಆಫ್ರಿಕಾ ಪೆನಾಲ್ಟಿ ಏರಿಯಾದಿಂದ ಸಿಕ್ಕ ಚೆಂಡನ್ನು ಯುಸ್ಟಾಕಿಯೊ ಬಲವಾಗಿ ಹೊಡೆದಿದ್ದು, ಗೋಲಿ ರಾನ್‌ವೆನ್ ವಿಲಿಯಮ್ಸ್ ಬಲಬದಿಗೆ ಡೈವ್ ಹೊಡೆದರೂ ಚೆಂಡನ್ನು ತಡೆಯಲು ಸಾಧ್ಯವಾಗಲಿಲ್ಲ. ಎಕ್ಸ್‌ಟ್ರಾ ಟೈಮ್‌ನಲ್ಲೂ ಸಮಬಲದ ಹೋರಾಟ ನೀಡಿದ ದಕ್ಷಿಣ ಆಫ್ರಿಕಾ ನಾಕೌಟ್ ಪಂದ್ಯವನ್ನು ಪೆನಾಲ್ಟಿ ಶೂಟೌಟ್‌ನತ್ತ ಕೊಂಡೊಯ್ಯುವ ಸಾಧ್ಯತೆಯಿತ್ತು. ಸ್ಟೀಫನ್ ಗೋಲ್ ಹೊಡೆದ ಬಳಿಕವೂ ಸಮಬಲ ಸಾಧಿಸಲು ದಕ್ಷಿಣ ಆಫ್ರಿಕಾ ತನ್ನ ಶಕ್ತಿಮೀರಿ ಪ್ರಯತ್ನ ನಡೆಸಿದರೂ ಗೋಲ್ ದಾಖಲಿಸುವಲ್ಲಿ ಯಶಸ್ವಿಯಾಗಲಿಲ್ಲ.

> ನನ್ನಲ್ಲಿದ್ದ ಎಲ್ಲಾ ಸಾಮರ್ಥ್ಯ ಒಟ್ಟುಗೂಡಿಸಿ ಗೋಲ್ ಹೊಡೆದುಬಿಟ್ಟೆ.
>
> ■ **ಸ್ಟೀಫನ್ ಯುಸ್ಟಾಕಿಯೊ,** ಕೆನಡಾ ಆಟಗಾರ

» ಕೆನಡಾ 1-0 ದಕ್ಷಿಣ ಆಫ್ರಿಕಾ

» 90+2 ಸ್ಟೀಫನ್ ಯುಸ್ಟಾಕಿಯೊ (ಕೆನಡಾ)

ಫೇವರಿಟ್ಸ್‌ಗೆ ಸುಲಭ ಹಾದಿ

ಬಹುನಿರೀಕ್ಷೆಯ ಫಿಫಾ ವಿಶ್ವಕಪ್ 2026ರ ನಾಕೌಟ್ ಹಂತ ಈಗಾಗಲೇ ಆರಂಭವಾಗಿದ್ದು, ಈ ಬಾರಿ ವಿಶ್ವಕಪ್‌ನಲ್ಲಿ ಕೆನಡಾ ಕ್ವಾರ್ಟರ್ ಫೈನಲ್ ಪ್ರವೇಶಿಸಿದ ಮೊದಲ ತಂಡ. ಫುಟ್ಬಾಲ್ ಪಂಡಿತರ ಪ್ರಕಾರ, ಇವ್ಯಾವೂ ಫೇವರಿಟ್‌ಗಳಲ್ಲ. ಕಪ್ ಗೆಲ್ಲುವ ಫೇವರಿಟ್‌ಗಳಾದ ಅರ್ಜೆಂಟೀನಾ, ಫ್ರಾನ್ಸ್ ನಂತಹ ತಂಡಗಳು ಸುಲಭ ಹಾದಿಯನ್ನು ಹೊಂದಿವೆ.

ಅರ್ಜೆಂಟೀನಾ: ಲಿಯೊನೆಲ್ ಮೆಸ್ಸಿ ನೇತೃತ್ವದ ಹಾಲಿ ಚಾಂಪಿಯನ್ನರು ಶನಿವಾರ ಪದಾರ್ಪಣಾ ವಿಶ್ವಕಪ್‌ನಲ್ಲಿ ನಾಕೌಟ್‌ಗೇರಿದ ಕೇಪ್ ವರ್ಡೆಯನ್ನು ಎದುರಿಸಲಿದ್ದಾರೆ. ಕೇಪ್ ವರ್ಡೆ ಚಮತ್ಕಾರ ಮಾಡದಿದ್ದರೆ ಅರ್ಜೆಂಟೀನಾ ಗೆಲ್ಲುವು ಶತಸಿದ್ಧ. ಪ್ರಿಕ್ವಾರ್ಟರ್‌ನಲ್ಲಿ ಮೆಸ್ಸಿ ಬಳಗವು ಸುಲಭ ಭೇಟೆಗಳಾದ ಆಸ್ಟ್ರೇಲಿಯಾ ಅಥವಾ ಈಜಿಪ್ಟನ್ನು ಎದುರಿಸಲಿದೆ. ಕ್ವಾರ್ಟರ್ ಫೈನಲ್‌ನಲ್ಲಿ 11ನೇ ರ್‍ಯಾಂಕ್‌ನ ಕೊಲಂಬಿಯಾ ಹಾಗೂ ಸೆಮಿಫೈನಲ್‌ನಲ್ಲಿ ಇಂಗ್ಲೆಂಡ್ ಅಥವಾ ಬ್ರೆಜಿಲ್ ಎದುರಿಸುವ ಸಾಧ್ಯತೆಯಿದೆ. ಮತ್ತೊಮ್ಮೆ ಅರ್ಜೆಂಟೀನಾ ಮತ್ತು ಫ್ರಾನ್ಸ್ ಫೈನಲ್ ನಿರೀಕ್ಷೆಯಿದೆ.

ಫ್ರಾನ್ಸ್: ಕಿಲಿಯನ್ ಎಂಬಾಪ್ಪೆ ಅವರ ಫ್ರಾನ್ಸ್ ಬುಧವಾರ ಸ್ವೀಡನ್ ಸವಾಲನ್ನು ಎದುರಿಸಲಿದೆ. 2018ರ ಚಾಂಪಿಯನ್ನರು ಲಯದಲ್ಲಿರುವ ಎಂಬಾಪ್ಪೆ ಹೊಂದಿದ್ದು, ಸ್ವೀಡನ್ ವಿರುದ್ಧ ಗೆಲ್ಲಬಹುದು. 16ರ ಸುತ್ತಿನಲ್ಲಿ ಜರ್ಮನಿ ಅಥವಾ ಪರಗ್ವೆ ಸಿಗಲಿವೆ. ಕ್ವಾರ್ಟರ್‌ನಲ್ಲಿ ಮೊರಾಕ್ಕೊ ಸಿಗಲಿದೆ. ಒಂದು ವೇಳೆ ಸ್ಪೇನ್ ರೊನಾಲ್ಡೊರ ಪೋರ್ಚುಗಲ್ ಎದುರು ಸೋತರೆ, ಫ್ರಾನ್ಸ್ ಫೈನಲ್ ಹಾದಿ ಇನ್ನಷ್ಟು ಸುಲಭ.

ಇಂಗ್ಲೆಂಡ್: ಹ್ಯಾರಿ ಕೇನ್ ಅವರ ಇಂಗ್ಲೆಂಡ್ 32ರ ಸುತ್ತಿನಲ್ಲಿ ಬುಧವಾರ ಡಿಆರ್ ಕಾಂಗೊವನ್ನು ಎದುರಿಸಲಿದೆ. 1966ರ ಚಾಂಪಿಯನ್ನರು ಈ ಬಾರಿ ಕಪ್ ಗೆಲ್ಲುವ ಗುರಿ ಹೊಂದಿದೆ. 16ರ ಸುತ್ತಿನಲ್ಲಿ ಮೆಕ್ಸಿಕೊ ಅಥವಾ ಈಕ್ವಡೊರ್ ಎದುರಿಸಬೇಕಿದೆ. ಇಂಗ್ಲೆಂಡ್ ಗೆದ್ದರೆ, ಕ್ವಾರ್ಟರ್‌ನಲ್ಲಿ 5ನೇ ರ್‍ಯಾಂಕ್‌ನ ಬ್ರೆಜಿಲ್ ಸಿಗಲಿದೆ.

ಅತ್ತ ದರಿ, ಇತ್ತ ಹುಲಿ

ಇದು ಅಕ್ಷರಶಃ ಕ್ರಿಸ್ಟಿಯಾನೋ ರೊನಾಲ್ಡೊರ ಪೋರ್ಚುಗಲ್ ಪರಿಸ್ಥಿತಿ. ತನ್ನ ಗುಂಪಿನ ಕೊನೆಯ ಪಂದ್ಯದಲ್ಲಿ ಕೊಲಂಬಿಯಾ ವಿರುದ್ಧ ಡ್ರಾ ಸಾಧಿಸಿದ ಪೋರ್ಚುಗಲ್, 32ರ ಸುತ್ತಿನಲ್ಲಿ ಜು.3ರಂದು ಕ್ರೊವೇಶಿಯಾ ಎದುರಿಸಲಿದೆ. 16ರ ಸುತ್ತಿನಲ್ಲಿ ಸ್ಪೇನ್ ಅಥವಾ ಆಸ್ಟ್ರಿಯಾ ಸಿಗಲಿವೆ. ಇದೆಲ್ಲ ಮೀರಿ ಕ್ವಾರ್ಟರ್‌ಗೇರಿದರೆ ಬೆಲ್ಜಿಯಂ, ಅಮೆರಿಕ, ಸೆನೆಗಲ್ ಅಥವಾ ಬೊಸ್ನಿಯಾ ಸಿಗಲಿವೆ. ಸೆಮಿಫೈನಲ್‌ನಲ್ಲಿ ಫ್ರಾನ್ಸ್, ನೆದರ್‌ಲೆಂಡ್, ಜರ್ಮನಿ ಅಥವಾ ಮೊರಾಕ್ಕೊ ಸಿಗಲಿವೆ. ಒಂದು ವೇಳೆ ಕೊಲಂಬಿಯಾ ವಿರುದ್ಧ ಗೆದ್ದಿದ್ದರೂ ಪೋರ್ಚುಗಲ್ ಕಠಿಣ ಎದುರಾಳಿಗಳನ್ನೇ ಎದುರಿಸಬೇಕಿತ್ತು.

ಎವಿಸಿ ವಾಲಿಬಾಲ್: ಐತಿಹಾಸಿಕ ಸಾಧನೆಗೈದ ಭಾರತ

ಭಾರತಕ್ಕೆ ಚೊಚ್ಚಲ ಕಂಚು



ಆಹಮದಾಬಾದ್: ಎವಿಸಿ ಪುರುಷರ ವಾಲಿಬಾಲ್ ಕಪ್‌ನಲ್ಲಿ ಭಾರತ ತಂಡವು ಚೊಚ್ಚಲ ಕಂಚಿನ ಪದಕ ಗೆದ್ದು ಇತಿಹಾಸ ಸೃಷ್ಟಿಸಿದೆ. ತಮಗಿಂತ ಪ್ರಬಲವಾದ ಬಹ್ರೈನ್ ತಂಡವನ್ನು ಸೋಲಿಸಿ ಭಾರತೀಯರು ಕಂಚು ಗೆದ್ದುಕೊಂಡಿದ್ದಾರೆ. ವಿಶ್ವ ರ್‍ಯಾಂಕಿಂಗ್‌ನಲ್ಲಿ 40ನೇ ಸ್ಥಾನದಲ್ಲಿದ್ದ ಬಹ್ರೈನ್ ತಂಡವನ್ನು ಸೋಲಿಸಿದ ಭಾರತ 18 ಸ್ಥಾನಗಳ ಬಡ್ತಿ ಪಡೆದು 42ನೇ ಸ್ಥಾನಕ್ಕೇರಿದೆ. 25–23, 23–25, 25–21, 25–17 ಅಂತರದ ಗೆಲುವು ಸಾಧಿಸಿದ ಭಾರತ, ಅರ್ಹವಾಗಿ ಇದೇ ಮೊದಲ ಬಾರಿಗೆ ವಾಲಿಬಾಲ್ ಕಪ್‌ನಲ್ಲಿ ಪೋಡಿಯಂ ಫಿನಿಶ್ ಕಂಡಿದೆ.

ವಾಲಿಬಾಲ್ ಕಪ್‌ನಲ್ಲಿ ಐತಿಹಾಸಿಕ ಕಂಚು ಗೆದ್ದ ಭಾರತೀಯ ಪುರುಷರ ತಂಡವನ್ನು ಕ್ರೀಡಾ ಸಚಿವ ಮನ್ಸುಖ್ ಮಾಂಡವೀಯ ಸನ್ಮಾನಿಸಿದ್ದಾರೆ.

> ಇದು ಐತಿಹಾಸಿಕ ಪದಕ, ಭಾರತೀಯ ವಾಲಿಬಾಲ್‌ಗೆ ಐತಿಹಾಸಿಕ ಕ್ಷಣ. ಇದಿನ್ನೂ ಆರಂಭವಷ್ಟೇ. ಪ್ರತಿ ಸಾಧನೆಯೂ ಇನ್ನಷ್ಟು ದೊಡ್ಡ ಜವಾಬ್ದಾರಿ ಮತ್ತು ಹೆಚ್ಚಿನ ನಿರೀಕ್ಷೆಗಳನ್ನು ಹುಟ್ಟುಹಾಕುತ್ತವೆ. ಅಂತಾರಾಷ್ಟ್ರೀಯ ಮಟ್ಟದಲ್ಲಿ ನಮ್ಮ ಅಥ್ಲೀಟ್‌ಗಳ ಸ್ಥಿರತೆ ಕಾಯ್ದುಕೊಳ್ಳಲು ಬೇಕಾದ ಅಗತ್ಯ ನೆರವುಗಳನ್ನು ಸರ್ಕಾರ ನೀಡಲಿದೆ.
>
> ■ **ಮನ್ಸುಖ್ ಮಾಂಡವೀಯ,** ಕ್ರೀಡಾ ಸಚಿವ

ಗಾಂಧಿನಗರದಲ್ಲಿ ತಂಡದ ನಾಯಕ ಜೆರೋಮ್ ವಿನೀತ್ ಚಾರ್ಲ್ಸ್ ಮತ್ತು ಕೋಚ್ ಸರ್ಬಿಯಾದ ಡ್ರೇಗನ್ ಮಿಹೈಲೊವಿಕ್ ಅವರನ್ನು ಭೇಟಿಯಾಗಿ ಸಚಿವ ಮಾಂಡವೀಯ ಅಭಿನಂದಿಸಿದ್ದಾರೆ.

ಯುಎಸ್ ಓಪನ್ ಫೈನಲ್‌ನಲ್ಲಿ ಸು ಲಿ ಯಾಂಗ್ ಎದುರು ಸೋಲು

ಬ್ಯಾಡ್ಮಿಂಟನ್: ಕಿದಂಬಿ ಶ್ರೀಕಾಂತ್ ರನ್ನರ್‌ಅಪ್

ಕ್ಯಾಲಿಫೋರ್ನಿಯಾ: ಯುಎಸ್ ಓಪನ್ ಬ್ಯಾಡ್ಮಿಂಟನ್ ಪಂದ್ಯಾವಳಿಯಲ್ಲಿ ಭಾರತದ ತಾರಾ ಶಟ್ಲರ್ ಕಿದಂಬಿ ಶ್ರೀಕಾಂತ್ ಅವರು ರನ್ನರ್‌ಅಪ್ ಆಗಿ ಹೊರಹೊಮ್ಮಿದ್ದಾರೆ. ಇಲ್ಲಿನ ಫುಲೆರ್ಟನ್‌ನಲ್ಲಿ ಭಾನುವಾರ ತಡರಾತ್ರಿ ನಡೆದ ಫೈನಲ್‌ನಲ್ಲಿ ಚೈನೀಸ್ ತೈಪೆ ಎದುರಾಳಿ ಸು ಲಿ ಯಾಂಗ್ ಎದುರು 15–21, 21–16, 9–21 ಅಂತರದಿಂದ ಶ್ರೀಕಾಂತ್ ಸೋತಿದ್ದಾರೆ. ಟೂರ್ನಿಯುದ್ದಕ್ಕೂ ಅದ್ಭುತ ಪ್ರದರ್ಶನ ನೀಡಿದ ಶ್ರೀಕಾಂತ್ ಫೈನಲ್‌ನಲ್ಲಿ ವಿರೋಚಿತ ಸೋಲುಂಡಿದ್ದಾರೆ.

ತಮಗಿಂತ 9 ವರ್ಷ ಕಿರಿಯರಾದ ಚೈನೀಸ್ ತೈಪೆ ಎದುರಾಳಿಯ ಎದುರು ಸ್ಥಿರ ಪ್ರದರ್ಶನ ನೀಡುವಲ್ಲಿ 33ರ ಶ್ರೀಕಾಂತ್ ವಿಫಲರಾದರು. ಒಂದು ಗಂಟೆ ಮತ್ತು 9 ನಿಮಿಷಗಳ ಸೆಣಸಾಟದಲ್ಲಿ ಸು ಲಿ ಯಾಂಗ್ ಗೆಲುವು ಸಾಧಿಸಿದರು. ಆರಂಭಿಕ ಗೇಮ್‌ನಲ್ಲೇ 10–5ರ ಮುನ್ನಡೆಯೊಂದಿಗೆ ಸು ಒತ್ತಡ ಹೇರಿದ್ದರು. ಶ್ರೀಕಾಂತ್ ಕಂಬ್ಯಾಕ್ ಮಾಡಿ 10–10 ಸಮಬಲ ಸಾಧಿಸಿದರೂ ಸು ಸತತ 7 ಅಂಕಗಳನ್ನು ಸಂಪಾದಿಸಿದರು. ಎರಡನೇ ಗೇಮ್‌ನಲ್ಲಿ 15–13 ಮುನ್ನಡೆ ಪಡೆದುಕೊಂಡಿದ್ದ ಶ್ರೀಕಾಂತ್ 20–13ರವರೆಗೆ ಸು ಅಂಕ ಸಂಪಾದಿಸಲು ಬಿಡಲಿಲ್ಲ. ಅಂತಿಮವಾಗಿ ಶ್ರೀಕಾಂತ್ 21–16ರಿಂದ ಎರಡನೇ ಗೇಮ್ ತಮ್ಮದಾಗಿಸಿದ್ದರು. ಮೂರನೇ ಗೇಮ್‌ನಲ್ಲಿ 24ರ ಹರೆಯದ ಲಿ ಯಾಂಗ್ 9–7ರ ಮುನ್ನಡೆ ಸಾಧಿಸಿದ್ದರು. ಅಲ್ಲಿಂದ ಶ್ರೀಕಾಂತ್ ಅವರಿಗೆ ಒಂದೂ ಅಂಕ ಬಿಟ್ಟುಕೊಡಲಿಲ್ಲ. ಶ್ರೀಕಾಂತ್ ಮೂರನೇ ಗೇಮ್‌ನಲ್ಲಿ 9–21 ಅಂಕಗಳಿಂದ ಸೋಲುಂಡರು. ಶ್ರೀಕಾಂತ್ ಪ್ರಶಸ್ತಿ ಬರ ಎದುರಿಸುತ್ತಿದ್ದು, 2017ರ ಫ್ರೆಂಚ್ ಓಪನ್ ಬ್ಯಾಡ್ಮಿಂಟನ್ ಟೂರ್ನಿಯಲ್ಲಿ ಕಡೆಯದಾಗಿ ಪ್ರಶಸ್ತಿ ಮುಡಿಗೇರಿಸಿದ್ದರು.



ಸೆಮಿಯಲ್ಲಿ ಕ್ರೀಡಾ ಸ್ಫೂರ್ತಿ

ಸೆಮಿಫೈನಲ್‌ನಲ್ಲಿ ಜಪಾನ್ ಶಟ್ಲರ್ ಯುಡೈ ಒಕೊಮೊಟೊರನ್ನು ಶ್ರೀಕಾಂತ್ 22–20, 15–21, 21–19 ಅಂತರದಿಂದ ಸೋಲಿಸಿದ್ದರು. ವೀಕ್ಷಕ ವಿವರಣೆಕಾರರ ಪ್ರಕಾರ ಇದು ಯುಎಸ್ ಓಪನ್‌ನ ಶ್ರೇಷ್ಠ ಪಂದ್ಯಗಳಲ್ಲೊಂದು. ಭಾರೀ ಸಂಖ್ಯೆಯಲ್ಲಿ ಸೇರಿದ್ದ ಜಪಾನಿ ಶಟ್ಲರ್ ಅಭಿಮಾನಿಗಳು ಪಂದ್ಯದ ವೇಳೆ ಶ್ರೀಕಾಂತ್ ಎದೆಗುಂದಿಸುವ ಪ್ರಯತ್ನಗಳನ್ನು ಮಾಡಿದ್ದರು. ಡಿಸೈಡರ್ ಗೇಮ್‌ನಲ್ಲಿ ಶ್ರೀಕಾಂತ್ 10–8 ಮುನ್ನಡೆ ಸಾಧಿಸಿದ್ದರು. ಈ ವೇಳೆ ಶ್ರೀಕಾಂತ್ ಮತ್ತು ಯುಡೈ ನಡುವೆ 17 ಹೊಡೆತಗಳ ರ್‍ಯಾಲಿ ನಡೆದಿತ್ತು. ಶ್ರೀಕಾಂತ್ ಅವರಿಗೆ ರೆಫರಿ ಅಂಕ ನೀಡಿದ್ದರು. ಜಪಾನ್ ಶಟ್ಲರ್ ರೆಫರಿಯೊಂದಿಗೆ ವಾಗ್ವಾದಕ್ಕೆ ಇಳಿದಿದ್ದರು. ಜಪಾನ್ ಅಭಿಮಾನಿಗಳು ಔಟ್, ಔಟ್ ಎಂದು ಬೊಬ್ಬೆ ಹಾಕಿದ್ದರು. ಮುನ್ನಡೆ 11–8 ಆಗಿತ್ತಾದರೂ ರೆಫರಿಯೊಂದಿಗೆ ಮಾತನಾಡಿದ ಶ್ರೀಕಾಂತ್ ಅಂಕವನ್ನು ಬಿಟ್ಟುಕೊಟ್ಟಿದ್ದರು. ಕೋಚ್ ಸಾಯಿ ಪ್ರಣೀತ್, ಪಾರುಪಲ್ಲಿ ಕಶ್ಯಪ್ ತಮ್ಮ ಆಟಗಾರನ ಕ್ರೀಡಾ ಸ್ಫೂರ್ತಿಯನ್ನು ಮೆಚ್ಚಿಕೊಂಡಿದ್ದಾರೆ.

ವಿಂಬಲ್ಡನ್: ಜಾರಿಬಿದ್ದ ಮಾಯಾ

ಲಂಡನ್: ಇತ್ತೀಚೆಗೆ ಫ್ರೆಂಚ್ ಓಪನ್ ಕಿರೀಟ ಮುಡಿಗೇರಿಸಿಕೊಂಡಿದ್ದ ಪೋಲೆಂಡ್ ತಾರೆ ಮಾಯಾ ಖಾಪ್ಲಿನ್ಸ್ಕಾ ವಿಂಬಲ್ಡನ್ 2026ರ ಮೊದಲ ಸುತ್ತಿನಲ್ಲಿ ಗಾಯಾಳುವಾಗಿ ಪಂದ್ಯಾವಳಿಯಿಂದಲೇ ಹೊರಬಿದ್ದಿದ್ದಾರೆ. ಥೈಲಾಂಡ್ ಅರ್ಹತಾ ಸುತ್ತಿನ ಆಟಗಾರ್ತಿ ಮನಂಚಯಾ ಸವಾಮಗ್‌ಕಾವ್ ಅವರ ಎದುರು ಸುಲಭದಲ್ಲಿ ಗೆಲುವು ಸಾಧಿಸುವವರಿದ್ದ ಮಾಯಾ ಹಸಿರು ಹುಲ್ಲಿನ ಅಂಗಣದಲ್ಲಿ ಕಾಲು ಜಾರಿ ಬಿದ್ದಿದ್ದು, ಗಾಯಗೊಂಡಿದ್ದಾರೆ. ಮೊದಲ ಸೆಟ್ ಗೆದ್ದಿದ್ದ ಮಾಯಾ, ದ್ವಿತೀಯ ಸೆಟ್‌ನಲ್ಲಿ ಇನ್ನೇನು ಒಂದು ಅಂಕ ಗೆಲ್ಲಬೇಕೆನ್ನುವಷ್ಟರಲ್ಲಿ ಜಾರಿ ಬಿದ್ದಿದ್ದು, ವಿಂಬಲ್ಡನ್ ಪ್ರಶಸ್ತಿಯೂ ಕೈಜಾರಿದೆ. ಮೊದಲ ಸೆಟ್‌ನಲ್ಲಿ ಅವರು 6–2 ಅಂತರದಿಂದ ಗೆಲುವು ಸಾಧಿಸಿದ್ದು, ದ್ವಿತೀಯ ಸೆಟ್‌ನಲ್ಲಿ 5–2(40–30) ಅಂಕಗಳಿಂದ ಮುನ್ನಡೆಯನ್ನು ಸಾಧಿಸಿದ್ದರು. ಗಾಯಾಳು ಎಮ್ಮಾ ರಾಡುಕಾನು ಸಹ ಗಾಯದಿಂದಾಗಿ ಸ್ಪರ್ಧೆಯಿಂದ ಹೊರಗುಳಿದಿದ್ದಾರೆ.

ಆಘಾತದಿಂದ ಬಚಾವಾದ ಸಿನ್ನರ್: ಪುರುಷರ ಹಾಲಿ ಚಾಂಪಿಯನ್ ಮತ್ತು ವಿಶ್ವ ನಂ.1 ಯಾನಿಕ್ ಸಿನ್ನರ್ ದೊಡ್ಡ ಆಘಾತದಿಂದ ಸ್ವಲ್ಪದರಲ್ಲೇ ಪಾರಾಗಿದ್ದಾರೆ.

ಇಲ್ಲಿ ವಿಂಬಲ್ಡನ್ ಮೊದಲ ಸುತ್ತಿನಲ್ಲಿ ಕೆಕ್ ಮಾನೊವಿಕ್ ವಿರುದ್ಧ 1–2 ಸೆಟ್‌ಗಳ ಹಿನ್ನಡೆ ಅನುಭವಿಸಿದ್ದ ಸಿನ್ನರ್ ಹೋರಾಡಿ ಗೆದ್ದಿದ್ದಾರೆ. ಅವರು 4–6, 6–3, 6–7, 6–2, 6–3 ಸೆಟ್ ಅಂತರದಿಂದ ಜಯಿಸಿದ್ದಾರೆ.

ಪುರುಷರ ರ್‍ಯಾಂಕಿಂಗ್, ಮಹಿಳಾ ಟಿ20 ವಿಶ್ವಕಪ್ ನಿರ್ಣಾಯಕ

ಒಲಿಂಪಿಕ್ಸ್ ಅರ್ಹತಾ ಮಾನದಂಡ ಪ್ರಕಟ

ಹೊಸದಿಲ್ಲಿ: 2028ರ ಲಾಸ್ ಏಂಜಲೀಸ್ ಒಲಿಂಪಿಕ್ಸ್‌ನಲ್ಲಿ ನಡೆಯಲಿರುವ ಕ್ರಿಕೆಟ್ ಸ್ಪರ್ಧೆಗೆ ಅರ್ಹತೆ ಪಡೆಯಲು ಪುರುಷರ ವಿಭಾಗದಲ್ಲಿ ಐಸಿಸಿ ಟಿ20 ತಂಡಗಳ ರ್‍ಯಾಂಕಿಂಗ್ ಹಾಗೂ ಮಹಿಳೆಯರ ವಿಭಾಗದಲ್ಲಿ ನಡೆಯುತ್ತಿರುವ ಟಿ20 ವಿಶ್ವಕಪ್‌ನ ಅಂತಿಮ ಸ್ಥಾನಮಾನವೇ ಪ್ರಮುಖ ಮಾನದಂಡವಾಗಲಿದೆ.



ಅಂತಾರಾಷ್ಟ್ರೀಯ ಕ್ರಿಕೆಟ್ ನಿಯಂತ್ರಣ ಮಂಡಳಿ (ಐಸಿಸಿ) ಸೋಮವಾರ ಒಲಿಂಪಿಕ್ಸ್ ಕ್ರಿಕೆಟ್ ಅರ್ಹತಾ ಮಾನದಂಡವನ್ನು ಪ್ರಕಟಿಸಿದೆ. ಸುಮಾರು 100 ವರ್ಷಗಳ ಬಳಿಕ ಒಲಿಂಪಿಕ್ಸ್‌ಗೆ ಮರಳುತ್ತಿರುವ ಕ್ರಿಕೆಟ್‌ನಲ್ಲಿ ಪುರುಷ ಮತ್ತು ಮಹಿಳಾ ವಿಭಾಗಗಳಲ್ಲಿ ತಲಾ ಆರು ತಂಡಗಳು ಸ್ಪರ್ಧಿಸಲಿವೆ.

ಪುರುಷರ ರ್‍ಯಾಂಕಿಂಗ್‌ಗೆ ಆದ್ಯತೆ: ಅತ್ಯುನ್ನತ ರ್‍ಯಾಂಕಿಂಗ್ ಹೊಂದಿರುವ ನಾಲ್ಕು ರಾಷ್ಟ್ರಗಳ ರಾಷ್ಟ್ರೀಯ ಒಲಿಂಪಿಕ್ ಸಮಿತಿಗಳಿಗೆ ನೇರ ಅರ್ಹತೆ(ಎನ್‌ಒಸಿ) ದೊರೆಯಲಿದೆ. 2026ರ ಡಿ.31ರಂದು ಪ್ರಕಟವಾಗುವ ಐಸಿಸಿ ಪುರುಷರ ಟಿ20 ತಂಡಗಳ ರ್‍ಯಾಂಕಿಂಗ್ ಪರಿಗಣಿಸಲಾಗುತ್ತದೆ. ಆತಿಥೇಯ ಅಮೆರಿಕಕ್ಕೆ ಪುರುಷ ಮತ್ತು ಮಹಿಳಾ ವಿಭಾಗಗಳಲ್ಲಿ ತಲಾ ಒಂದು ಸ್ಥಾನ ಖಾತರಿಯಾಗಿದೆ.

ಮಹಿಳಾ ವಿಶ್ವಕಪ್ ಫಲಿತಾಂಶ ಮಾನದಂಡ: ಇಂಗ್ಲೆಂಡ್‌ನಲ್ಲಿ ನಡೆಯುತ್ತಿರುವ ಐಸಿಸಿ ಮಹಿಳಾ ಟಿ20 ವಿಶ್ವಕಪ್‌ನ ಅಂತಿಮ ಸ್ಥಾನಮಾನ ಆಧಾರಿಸಿ ಅಗ್ರ ನಾಲ್ಕು ತಂಡಗಳಿಗೆ ಎನ್‌ಒಸಿ ಕೋಟಾದಲ್ಲಿ ಸ್ಥಾನ ನೀಡಲಾಗುತ್ತದೆ.

ವಿಂಡೀಸ್‌ಗಿಲ್ಲ ನೇರ ಅವಕಾಶ: ವೆಸ್ಟ್ ಇಂಡೀಸ್ ಸೆಮಿಫೈನಲ್ ಪ್ರವೇಶಿಸಿದರೂ, ಅದು ಹಲವು ಕೆರಿಬಿಯನ್ ರಾಷ್ಟ್ರಗಳ ಸಂಯುಕ್ತ ತಂಡವಾಗಿದ್ದು, ಪ್ರತ್ಯೇಕ ಐಒಸಿ ರಾಷ್ಟ್ರೀಯ ಒಲಿಂಪಿಕ್ ಸಮಿತಿಯಾಗಿ ಮಾನ್ಯತೆ ಹೊಂದಿಲ್ಲ.

ಜಯ್ ಶಾ ಹೇಳಿದ್ದೇನು?: ಐಸಿಸಿ ಅಧ್ಯಕ್ಷ ಜಯ್ ಶಾ, 100 ವರ್ಷಗಳ ಬಳಿಕ ಒಲಿಂಪಿಕ್ಸ್‌ಗೆ ಕ್ರಿಕೆಟ್ ಮರಳುತ್ತಿರುವುದು ನಮ್ಮ ಕ್ರೀಡೆಗೆ ಐತಿಹಾಸಿಕ ಕ್ಷಣವಾಗಿದೆ. ಈ ಅರ್ಹತಾ ಮಾರ್ಗಸೂಚಿ ಪ್ರಕಟವಾಗಿರುವುದು ಲಾಸ್ ಏಂಜಲೀಸ್ ಒಲಿಂಪಿಕ್ಸ್‌ಗೆ ಮಹತ್ವದ ಹೆಜ್ಜೆಯಾಗಿದ್ದು, ವಿಶ್ವದ ಎಲ್ಲ ಸದಸ್ಯ ರಾಷ್ಟ್ರಗಳಿಗೆ ಒಲಿಂಪಿಕ್ ವೇದಿಕೆಯನ್ನು ತಲುಪಲು ಸ್ಪಷ್ಟ ಅವಕಾಶ ಕಲ್ಪಿಸಿದೆ ಎಂದು ಹೇಳಿದ್ದಾರೆ.

ಮಯಾಂಕ್, ತಾಹ ಅಬ್ಬರದ ಬ್ಯಾಟಿಂಗ್ | ಪ್ಲೇಆಫ್ ಆಸೆ ಜೀವಂತ

ತವರಿನಲ್ಲಿ ಹುಬ್ಬಳ್ಳಿಗೆ ಭರ್ಜರಿ ಜಯ

▸ ವಿಜಯಕುಮಾರ ಬೆಳ್ಳೇರಿಮಠ

ಹುಬ್ಬಳ್ಳಿ: ಅನುಭವಿ ಮಯಾಂಕ್ ಅಗರವಾಲ್ ಹಾಗೂ ಮೊಹಮ್ಮದ್ ತಾಹ ಅವರ ಅಬ್ಬರದ ಬ್ಯಾಟಿಂಗ್‌ನಿಂದ ಮಹರಾಜ ಟ್ರೋಫಿಯ ಟಿ-20 ಟೂರ್ನಿಯಲ್ಲಿ ಹುಬ್ಬಳ್ಳಿ ಟೈಗರ್ಸ್ ತವರಿನ ಅಂಗಳದಲ್ಲಿ ಗೆದ್ದು ಬೀಗಿತು. ಎರಡನೇ ಗೆಲುವಿನೊಂದಿಗೆ 5 ಅಂಕಗಳಿಸಿ ಪ್ಲೇಆಫ್ ಆಸೆ ಜೀವಂತ ಉಳಿಸಿಕೊಂಡಿತು.

ಇಲ್ಲಿನ ರಾಜನಗರದ ಕೆಎಸ್‌ಸಿಎ ಕ್ರೀಡಾಂಗಣದಲ್ಲಿ ಸೋಮವಾರ ಮಳೆ ಸುರಿದಿದ್ದರಿಂದ ಪಂದ್ಯವನ್ನು 15 ಓವರ್‌ಗಳಿಗೆ ಸೀಮಿತಗೊಳಿಸಲಾಯಿತು. ಗುಲ್ಬರ್ಗಾ ಮಿಸ್ಟಿಕ್ಸ್ ನೀಡಿದ 140 ರನ್‌ಗಳ ಗುರಿಯನ್ನು ಹುಬ್ಬಳ್ಳಿ 17 ಎಸೆತಗಳು ಬಾಕಿ ಇರುವಂತೆಯೇ ಯಾವುದೇ ವಿಕೆಟ್ ಕಳೆದುಕೊಳ್ಳದೆ ಮುಟ್ಟಿತು. ಹಿಂದಿನ ಪಂದ್ಯದ ಸೋಲಿನ ಸೇಡು ತೀರಿಸಿಕೊಂಡಿತು. ಆರಂಭಿಕ ಆಟಗಾರ ಮಯಾಂಕ ಅಗರವಾಲ್(81) ಹಾಗೂ



ಚಿತ್ರ: ಮಂಜುನಾಥ ಜರತಾರಘರ

ಮೊಹಮ್ಮದ ತಾಹಾ(51) ಜೋಡಿ ಗುಲ್ಬರ್ಗಾ ಬೌಲರ್‌ಗಳ ಬೆವರಿಳಿಸಿದರು. ಮಳೆ ನಿಂತರೂ ಸಹ ಇವರಿಬ್ಬರ ಅಬ್ಬರದ ಬ್ಯಾಟಿಂಗ್ ತಡೆಯಲು ಗುಲ್ಬರ್ಗ ತಂಡದ ಬೌಲರ್‌ಗಳಿಗೆ ಆಗಲಿಲ್ಲ. ಇಬ್ಬರೂ ಜತೆಗೂಡಿ ಕೇವಲ 73 ಎಸೆತಕ್ಕೆ 143 ರನ್ ಕಲೆಹಾಕಿದರು.

ಮನೀಶ್-ರೆಡ್ಡಿ ಆಟ ವ್ಯರ್ಥ: ಟಾಸ್ ಸೋತು ಬ್ಯಾಟ್ ಮಾಡಿದ ಗುಲ್ಬರ್ಗಾ ಪರ ಆರಂಭಿಕರಾದ ಲೋಚನ್ ಗೌಡ, ನಾಯಕ ಶರತ್ ಬಿ.ಆರ್. ಹಾಗೂ ಪ್ರಕರ ಸಿ. ಬೇಗ ವಿಕೆಟ್ ಒಪ್ಪಿಸಿದರು. ವೈಭವ್ ಶರ್ಮಾ 17ಕ್ಕೆ 3 ವಿಕೆಟ್ ಕಬಳಿಸಿ ಗುಲ್ಬರ್ಗಾ ಮೊತ್ತ ಹೆಚ್ಚುವುದನ್ನು ನಿಯಂತ್ರಿಸಿದರು. ಕುಸಿದಿದ್ದ ಗುಲ್ಬರ್ಗಾಗೆ ಶಿಪ್ಪಾ ರೆಡ್ಡಿ (51) ಅರ್ಧ ಶತಕದಾಟ, ರೆಡ್ಡಿ ಮತ್ತು ಮನೀಶ್ ಪಾಂಡೆ(35) 44 ರನ್ ಜತೆಯಾಟ ಆಸರೆಯಾಗಿತು.

ಸಂಕ್ಷಿಪ್ತ ಸ್ಕೋರ್


ಗುಲ್ಬರ್ಗಾ: ಶಿಪ್ಪಾ ರೆಡ್ಡಿ 51(34), ಮನೀಶ್ ಪಾಂಡೆ 35(20), ವೈಭವ್ ಶರ್ಮಾ (17ಕ್ಕೆ 3).

ಹುಬ್ಬಳ್ಳಿ: ಮಯಾಂಕ್ 81(38), ಮೊಹಮ್ಮದ್ ತಾಹಾ 51(34).

ಪಂದ್ಯಶ್ರೇಷ್ಠ: ವೈಭವ್ ಶರ್ಮಾ.

ಪದಬಂಧ

» ರಾಜಾ ಸಂಗಮೇಶ ಹಿರೇಮಠ



6030

ಎಡದಿಂದ ಬಲಕ್ಕೆ

3.ನಾಲ್ಕು ವಿಧದ ಸೈನ್ಯಗಳುಳ್ಳ ಬುದ್ಧಿವಂತಿಕೆಯ ಆಟ (4)
5.ಕಹಿರುಚಿಯುಳ್ಳ ತರಕಾರಿ (3)
6.ಹಲ್ಲಿನ ಮೇಲ್ಪೈ ಹಾನಿಗೊಳಗಾಗುವುದು (4)
7.ಭೂಪಟ–ನೀಲಿನಕಾಶೆ (2)
8.ಗುಂಪಿನ ಒಡೆಯನಾದ ಶಿವಪುತ್ರ ತಿರುಗಿದ್ದಾನೆ (4)
10.ಪಕ್ಷದ ಹದಿಮೂರನೆಯ ದಿವಸ (4)
13.ಸಣ್ಣಕೋಟೆ–ದುರ್ಗವಿದು (2)
14.ಮತದ ನಡುವೆ ಅಂತರಂಗದ ಅಭಿಪ್ರಾಯವಿದೆ (4)
16.ಸೂಚ್ಯವಾಗಿ ಹೇಳು–ಶಬ್ದ ಮಾಡುವುದು (3)
17.ಕಮಲದಲ್ಲಿ ಹುಟ್ಟಿದವನು–ಬ್ರಹ್ಮ(4)

ಮೇಲಿನಿಂದ ಕೆಳಕ್ಕೆ

1.ಇದು ದಿಶೆಯ ತುದಿ (3)
2.ಇನ್ನೊಬ್ಬರ ಕೆಲಸ ಸುಲಭಗೊಳಿಸಲು ನೀಡುವ ಆಸರೆ (3)
3.ಬೆಳ್ಳಿ ತೆರೆಯ ಸಿನಿಮಾ ಇದು (5)
4. "ನಾನು ಶರಣಾಗುತ್ತಿದ್ದೇನೆ" ಎಂಬರ್ಥದ ಶಬ್ದ(3)
6. ಗಂಡಹೆಂಡಿರು ಕೂಡಿ ಕಾಣುತ್ತಿದ್ದಾರೆ (3)
9. ವಿಷ್ಣುವಿನ ವಾಹನದ ಚಿಹ್ನೆಯುಳ್ಳ ಪತಾಕೆ (5)
11.ವಿದ್ಯೆಯನ್ನು ಕಲಿತವನು (3)
12.ಕೊಂಚ ಕಡೆಯಲ್ಲಿರುವ ಕೃಶವಾದುದು (3)
14.ಅಸ್ಪಷ್ಟವಾದುದು–ಮಬ್ಬು (3)
15. ಗಾಢ,ವಿಶೇಷತೆಯಿಂದ ಕೂಡಿದ್ದು (3)

6029 ಉತ್ತರ

ಎಡದಿಂದ ಬಲಕ್ಕೆ:
1.ಸಂಚಾರ 3.ಲಲಾಮ
5.ಪಾನಕ 7.ಗಗನ
9.ಕನಕಾಚಲ
11.ಗಡಗಡಿಸು
14.ಗಂಗೆತ್ತು
15.ಬೀಜಾಣು
16.ತಿಜೋರಿ 17.ಸರಳು

ಮೇಲಿನಿಂದ ಕೆಳಕ್ಕೆ :
1.ಸಂಕಲನ 2.ರಸಪಾಕ
4.ಮನೋಬಲ 6.ಕಾಡು
8.ಗರುಡ 10.ಚರಿಗೆ
11.ಗತಭ್ರಾಂತಿ
12.ಗಣಿ 13.ಸುಮನಸ
14.ಗಂಟುಬೀಳು

ಕಿರುಸುದ್ದಿ

ಬಾವಿಗೆ ಹಾರಿ ವ್ಯಕ್ತಿ ಆತ್ಮಹತ್ಯೆ

ಕಿನ್ನಿಗೋಳಿ: ಕಿನ್ನಿಗೋಳಿಯಲ್ಲಿ ಪೂಂಜಾಲಕಟ್ಟೆ ನಿವಾಸಿ ರಮೇಶ್ ಪೂಜಾರಿ (40) ಬಾವಿಗೆ ಹಾರಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಮೃತ ರಮೇಶ್ ಕಳೆದ 18 ವರ್ಷಗಳಿಂದ ಕಿನ್ನಿಗೋಳಿಯ ಖಾಸಗಿ ಬೇಕರಿಯೊಂದರಲ್ಲಿ ಕೆಲಸ ಮಾಡುತ್ತಿದ್ದು, ಬೇಕರಿ ಫ್ಯಾಕ್ಟರಿಯಲ್ಲೇ ವಾಸವಿದ್ದರು.



ಸೋಮವಾರ ಬೆಳಿಗ್ಗೆ ಅವರು ಎಂದಿನಂತೆ ಕೆಲಸಕ್ಕೆ ಹಾಜರಾಗದ ಹಿನ್ನೆಲೆಯಲ್ಲಿ ಸಹೋದ್ಯೋಗಿಗಳು ಹುಡುಕಾಟ ನಡೆಸಿದಾಗ ಬಾವಿಯ ಸಮೀಪ ಅವರ ಪಾದರಕ್ಷೆಗಳು ಪತ್ತೆಯಾಗಿದ್ದು ಅನುಮಾನಗೊಂಡು ಬಾವಿಯಲ್ಲಿ ಪರಿಶೀಲಿಸಿದಾಗ ಮೃತದೇಹ ಪತ್ತೆಯಾಗಿದೆ. ಸ್ಥಳಕ್ಕೆ ಆಗಮಿಸಿದ ಜೀವರಕ್ಷಕ ಆಂಬುಲೆನ್ಸ್ ತಂಡದ ದಾವೂದ್, ಪ್ರಸಾದ್ ಪೂಜಾರಿ, ಜಲಾಲ್, ಅಖ್ತರ್, ಸ್ಥಳೀಯರಾದ ಪ್ರವೀಣ್ ಕಾಪಿಕಾಡ್ ಹಾಗೂ ಸ್ಥಳೀಯರ ಸಹಕಾರದೊಂದಿಗೆ ಮೃತದೇಹವನ್ನು ಬಾವಿಯಿಂದ ಮೇಲಕ್ಕೆ ಎತ್ತಲಾಯಿತು. ಆತ್ಮಹತ್ಯೆಗೆ ನಿಖರ ಕಾರಣ ಇನ್ನೂ ತಿಳಿದುಬಂದಿಲ್ಲ. ಘಟನೆಗೆ ಸಂಬಂಧಿಸಿದಂತೆ ಪೊಲೀಸರು ಪ್ರಕರಣ ದಾಖಲಿಸಿಕೊಂಡು ಮುಂದಿನ ತನಿಖೆ ನಡೆಸುತ್ತಿದ್ದಾರೆ. ಮೃತರು ತಾಯಿ, ಓರ್ವ ಸಹೋದರ, ಓರ್ವ ಸಹೋದರಿ ಹಾಗೂ ಬಂಧು-ಬಳಗವನ್ನು ಅಗಲಿದ್ದಾರೆ.

ಮಾದಕ ವಸ್ತು ಸೇವನೆ : ಇಬ್ಬರ ಬಂಧನ

ಬಂಟ್ವಾಳ : ತಾಲೂಕು ಪುದು ಗ್ರಾಮದ ಸುಜೀರು ನದಿ ಬದಿಮಾದಕ ವಸ್ತುವನ್ನು ಸೇವಿಸಿ ನಶೆಯೇರಿಸಿಕೊಂಡು ಸಾರ್ವಜನಿಕ ಸ್ಥಳದಲ್ಲಿ ಜನರಿಗೆ ತೊಂದರೆಯಾಗು ವಂತೆ ವರ್ತಿಸುತ್ತಿದ್ದ ಇಬ್ಬರು ಯುವಕರನ್ನು ಬಂಟ್ವಾಳ ಗ್ರಾಮಾಂತರ ಪೊಲೀಸರು ಬಂಧಿಸಿದ್ದಾರೆ. ಆದಂ ರಕೀಝ್ ಹಾಗೂ ಅಬ್ದುಲ್ ರಫತ್ ಬಂಧಿತ ಯುವಕರಾಗಿದ್ದಾರೆ. ಖಚಿತ ವರ್ತಮಾನದ ಮೇರೆಗೆ ಬಂಟ್ವಾಳ ಗ್ರಾಮಾಂತರ ಪೊಲೀಸ್ ಠಾಣೆಯ ಎಸ್ ಐ ಕಲೈಮಾರ್ ಪಿ. ಮತ್ತವರ ಸಿಬ್ಬಂದಿಗಳು ಸ್ಥಳಕ್ಕೆ ತೆರಳಿ ಪರಿಶೀಲಿಸಿದಾಗ ಇಬ್ಬರು ಯುವಕರು ಮಾದಕ ವಸ್ತುವನ್ನು ಸೇವಿಸಿ ನಶೆ ಹೊಂದಿ ಸಾರ್ವಜನಿಕರಿಗೆ ತೊಂದರೆಯಾಗುವ ರೀತಿಯಲ್ಲಿ ವರ್ತಿಸುತ್ತಿರುವುದು ಕಂಡು ಬಂದಿದೆ. ಕೂಡಲೇ ಯುವಕರಿಬ್ಬರನ್ನು ವಶಕ್ಕೆ ಪಡೆದು ವಿಚಾರಿಸಿ ಮಾದಕವಸ್ತು ಸೇವನೆಯ ಬಗ್ಗೆ ಖಚಿತಪಡಿಸಿಕೊಳ್ಳಲು ಬಂಟ್ವಾಳ ತಾಲೂಕು ಆಸ್ಪತ್ರೆಯಲ್ಲಿ ತಪಾಸಣೆಗೊಳಪಡಿಸಿದಾಗ ಇವರಿಬ್ಬರು ಮಾದಕವಸ್ತು ಸೇವಿಸಿರುವುದು ದೃಢಪಟ್ಟಿದೆ. ಈ ಬಗ್ಗೆ ಬಂಟ್ವಾಳ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಬೈಕ್‌ಗೆ ಬೊಲೆರೋ ಪಿಕಪ್ ಡಿಕ್ಕಿ: ಸವಾರ ಗಂಭೀರ

ಕೋಟ: ಬೈಕ್‌ಗೆ ಬೊಲೆರೋ ಪಿಕಪ್ ಡಿಕ್ಕಿ ಹೊಡೆದು ಬೈಕ್ ಸವಾರ ಗಂಭೀರ ಗಾಯಗೊಂಡ ಘಟನೆ ಸೋಮವಾರ ಮುಂಜಾನೆ ರಾಷ್ಟ್ರೀಯ ಹೆದ್ದಾರಿ 66ರ ಮಾಬುಕಳ ಸರ್ಕಲ್‌ನಲ್ಲಿ ಸಂಭವಿಸಿದೆ. ಗಂಭೀರ ಗಾಯಗೊಂಡ ಬೈಕ್ ಸವಾರನನ್ನು ಮಾಬುಕಳ ನಿವಾಸಿ ಭಾಸ್ಕರ ಪೂಜಾರಿ ಎಂದು ಗುರುತಿಸಲಾಗಿದೆ. ಭಾಸ್ಕರ ಪೂಜಾರಿ ಸಾಸ್ತಾನದಿಂದ ಮಾಬುಕಳ ಕಡೆ ಬರುತ್ತಿದ್ದ ವೇಳೆ ಉಡುಪಿ ಕಡೆಯಿಂದ ಅತೀವೇಗ ಹಾಗೂ ಅಜಾಗರೂಕತೆ ಚಲಾಯಿಸಿಕೊಂಡು ಬಂದ ಬೊಲೆರೋ ಪಿಕಪ್ ವಾಹನವು ಬೈಕ್‌ಗೆ ನೇರ ಡಿಕ್ಕಿ ಹೊಡೆದಿದೆ. ಡಿಕ್ಕಿಯ ರಭಸಕ್ಕೆ ಬೈಕ್ ಸವಾರ ರಸ್ತೆಗೆ ಬಿದ್ದು ಗಂಭೀರವಾಗಿ ಗಾಯಗೊಂಡಿದ್ದಾರೆ. ಸ್ಥಳೀಯರು ಕೂಡಲೇ ಗಾಯಾಳುವಿಗೆ ಪ್ರಾಥಮಿಕ ಚಿಕಿತ್ಸೆ ನೀಡಿ ಆಂಬುಲೆನ್ಸ್ ಮೂಲಕ ಮಣಿಪಾಲ ಆಸ್ಪತ್ರೆಗೆ ದಾಖಲಿಸಲಾಗಿದೆ. ಅಪಘಾತ ಸಂಬಂಧಿಸಿದಂತೆ ಕೋಟ ಪೊಲೀಸರು ಸ್ಥಳಕ್ಕಾಗಮಿಸಿ ಪರಿಶೀಲಿಸಿ ಪ್ರಕರಣ ದಾಖಲಿಸಿಕೊಂಡಿದ್ದಾರೆ.

ಬೈಕ್ ಡಿಕ್ಕಿ: ಮಹಿಳೆಗೆ ಗಾಯ

ಕುಂದಾಪುರ : ತ್ರಾಸಿ ಬೀಚ್‌ನಲ್ಲಿ ಕರ್ತವ್ಯ ನಿರ್ವಹಿಸಿ ಮಧ್ಯಾಹ್ನ ಊಟಕ್ಕೆ ಹೋಗಲು ತ್ರಾಸಿಯ ವಿಟಮಿನ್ ಸಿ ಹೋಟೇಲ್ ಎದುರು ಬಸ್ಸಿಗಾಗಿ ಕಾದು ನಿಂತುಕೊಂಡಿದ್ದ ಗೃಹರಕ್ಷಕ ದಳ ಕುಂದಾಪುರ ಘಟಕದ ಸಿಬ್ಬಂದಿ, ಗುಜ್ಜಾಡಿ ನಿವಾಸಿ ಪ್ರತಿಮಾ (35) ಎಂಬವರಿಗೆ ಬೈಂದೂರು ಕಡೆಯಿಂದ ತ್ರಾಸಿ ಕಡೆಗೆ ಹೋಗುತ್ತಿದ್ದ ಬೈಕ್ ಡಿಕ್ಕಿ ಹೊಡೆದ ಪರಿಣಾಮ ಗಾಯಗೊಂಡು ಕುಂದಾಪುರ ಖಾಸಗಿ ಆಸ್ಪತ್ರೆಯಲ್ಲಿ ದಾಖಲಾಗಿದ್ದಾರೆ. ಗಂಗೊಳ್ಳಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಎರಡು ಸರ ಸುಲಿಗೆ ಪ್ರಕರಣ: ಆರೋಪಿಯ ಬಂಧನ

ಸುರತ್ಕಲ್: ಸುರತ್ಕಲ್ ಠಾಣಾ ವ್ಯಾಪ್ತಿಯಲ್ಲಿ ಎರಡು ಸರ ಸುಲಿಗೆ ಪ್ರಕರಣಗಳನ್ನು ಭೇದಿಸಿದ ಸುರತ್ಕಲ್ ಪೊಲೀಸರು ಆರೋಪಿಯನ್ನು ಬಂಧಿಸಿದ್ದಾರೆ. ಕಳವಾದ ಚಿನ್ನಾಭರಣಗಳನ್ನು ವಶಪಡಿಸಿಕೊಳ್ಳಲಾಗಿದೆ. 2ನೇ ಬ್ಲಾಕ್ ನಿವಾಸಿ ಮೊಹಮ್ಮದ್ ಅಬ್ದುಲ್ ಜಾಫರ್ (28) ಬಂಧಿತ ಆರೋಪಿ. ಜೂ. 26ರ ಮುಂಜಾನೆ 2 ಗಂಟೆಗೆ ಚೊಕ್ಕಬೆಟ್ಟು ಅಜಾದ್ ನಗರ 2ನೇ ಬ್ಲಾಕ್‌ನ ಜಾಹೀದ್ ಮನೆಯಲ್ಲಿ ಮಲಗಿದ್ದಾಗ ಕಿಟಕಿ ಮೂಲಕ ಕೈ ಹಾಕಿದ ಈತ ಮಹಿಳೆಯ ಕುತ್ತಿಗೆಯಲ್ಲಿದ್ದ ಕರಿಮಣಿ ಸರ ಸುಲಿಗೆ ಮಾಡಿದ್ದ. ತುಂಡಾದ ಸರದ 20,000 ರೂ. ಮೌಲ್ಯದ ಭಾಗದ ಚಿನ್ನದ ಸರದೊಂದಿಗೆ ಆರೋಪಿ ಪರಾರಿಯಾಗಿದ್ದ. ಜೂ 27ರ ಬೆಳಿಗ್ಗೆ 5ರಿಂದ 5.15ರ ಮಧ್ಯೆ ಚೊಕ್ಕಬೆಟ್ಟು 8ನೇ ಬ್ಲಾಕ್‌ನ ಫಯಾಜ್ ಎಂಬವರ ಮನೆಯ ಬಾಗಿಲು ತೆರೆದು ಒಳನುಗ್ಗಿ ಮಹಿಳೆಯ ಕುತ್ತಿಗೆಯಲ್ಲಿದ್ದ 1 ಲಕ್ಷ ಮೌಲ್ಯದ ಸರವನ್ನು ದೋಚಿದ್ದ. ಪ್ರಕರಣ ದಾಖಲಿಸಿ ಕೊಂಡು ತನಿಖೆ ನಡೆಸಿದ ಪೊಲೀಸರು ಮೊಹಮ್ಮದ್ ಅಬ್ದುಲ್ ಜಾಫರ್ ನನ್ನು ಸೋಮವಾರ ಸ್ಟೇಟ್ ಬ್ಯಾಂಕ್ ಬಳಿ ಚಿನ್ನಾಭರಣಗಳ ಸಹಿತ ಬಂಧಿಸಿದ್ದಾರೆ. ಆರೋಪಿ ವಿರುದ್ಧ ಸುರತ್ಕಲ್ ಠಾಣೆಯಲ್ಲಿ 2025ರಲ್ಲಿ ಹಾಗೂ ಉರ್ವಾ ಠಾಣೆಯಲ್ಲಿ 2018ರಲ್ಲಿ ಪ್ರಕರಣಗಳು ದಾಖಲಾಗಿವೆ.

ವಿದ್ಯುತ್ ಕಂಬ, ಕಾರಿನ ಮೇಲೆ ಬಿದ್ದ ಮರ

ವಿಟ್ಲ: ಪಡೀಬಾಗಿಲು ಸಮೀಪ ಮರವು ವಿದ್ಯುತ್ ಕಂಬದ ಮೇಲೆ ಬಿದ್ದ ಪರಿಣಾಮ, ಮರ ಹಾಗೂ ವಿದ್ಯುತ್ ಕಂಬ ಚಲಿಸುತ್ತಿದ್ದ ಸ್ವಿಫ್ಟ್ ಕಾರಿನ ಮೇಲೆ ಬಿದ್ದ ಘಟನೆ ಸೋಮವಾರ ಬೆಳಗ್ಗೆ ನಡೆದಿದೆ. ಕುದ್ದುಪದವು ಕಡೆಯಿಂದ ವಿಟ್ಲ ಕಡೆಗೆ ಬರುತ್ತಿದ್ದ ಸ್ವಿಫ್ಟ್ ಕಾರಿನ ಮೇಲೆ ಬಿದ್ದಿವೆ. ಕಾರಿನಲ್ಲಿ ಗಂಡ-ಹೆಂಡತಿ ಪ್ರಯಾಣಿಸುತ್ತಿದ್ದು, ಅದೃಷ್ಟವಶಾತ್ ಯಾವುದೇ ಪ್ರಾಣಾಪಾಯ ಸಂಭವಿಸಿಲ್ಲ. ಘಟನೆಯ ಪರಿಣಾಮ ಕೆಲಕಾಲ ಹೆದ್ದಾರಿ ಸಂಚಾರಕ್ಕೆ ಅಡಚಣೆ ಉಂಟಾಗಿ, ವಾಹನ ಸಂಚಾರ ಸ್ಥಗಿತಗೊಂಡಿತ್ತು.

ಪತ್ನಿ, ಮಗನ ಅಪಹರಿಸಿ ಆತಂಕ ಹುಟ್ಟಿಸಿದ ಏಳು ಮಂದಿ ಆಗುಂತುಕರು | ಚಿನ್ನ, ಕಾರಿನೊಂದಿಗೆ ಪರಾರಿ

ಬೈಕಂಪಾಡಿ: ಚಿನ್ನ ವ್ಯಾಪಾರಿಯ ದರೋಡೆ

ಮಂಗಳೂರು: ಮಂಗಳೂರು ಸಮೀಪದ ಬೈಕಂಪಾಡಿಯಲ್ಲಿ ಸೋಮವಾರ ಮುಂಜಾನೆ ನಡೆದ ಭಾರೀ ದರೋಡೆ ಪ್ರಕರಣವವೊಂದು ನಗರವನ್ನು ಬೆಚ್ಚಿ ಬೀಳಿಸಿದೆ.

180 ಗ್ರಾಂ ಚಿನ್ನ ಮತ್ತು ನಗದು ಸಹಿತ ಸುಮಾರು 20 ಲಕ್ಷ ರೂ. ಮೌಲ್ಯದ ಸೊತ್ತು ದೋಚಿದ್ದಾರೆ ಎಂದು ದೂರುದಾರರು ಪಣಂಬೂರು ಪೊಲೀಸ್ ಠಾಣೆಗೆ ದೂರು ನೀಡಿದ್ದಾರೆ.

ಮುಂಬೈನಿಂದ ಪತ್ನಿ, ಮಗನ ಜೊತೆ ಕಾರಿನಲ್ಲಿ ಕೇರಳಕ್ಕೆ ತೆರಳುತ್ತಿದ್ದ ಚಿನ್ನದ ವ್ಯಾಪಾರಿಯನ್ನು ಅಡ್ಡಗಟ್ಟಿ ಲಕ್ಷಾಂತರ ಮೌಲ್ಯದ ಚಿನ್ನ ಮತ್ತು ನಗದು ಅಪಹರಿಸಿರುವ ಘಟನೆ ಬೆಳಕಿಗೆ ಬರುತ್ತಿದ್ದಂತೆ ಪೊಲೀಸರು ಆರೋಪಿಗಳ ಪತ್ತೆಗಾಗಿ ಕಾರ್ಯಾಚರಣೆ ಆರಂಭಿಸಿದ್ದಾರೆ.

ಯಾರು ವ್ಯಾಪಾರಿ?

ಕೇರಳದ ಪಯ್ಯನ್ನೂರು ನಿವಾಸಿ, ಚಿನ್ನದ ವ್ಯಾಪಾರಿ ವಿಕಾಸ್ (42) ಎಂಬವರು ವರ್ಷ ತನ್ನ ಪತ್ನಿ ಹಾಗೂ ಪುತ್ರನೊಂದಿಗೆ ಬಿಳಿ ಬಣ್ಣದ ಸ್ವಿಫ್ಟ್ ಡಿಸೈರ್ ಕಾರಿನಲ್ಲಿ ಮುಂಬಯಿನಿಂದ ಕೇರಳಕ್ಕೆ ಹಿಂದಿರುಗುತ್ತಿದ್ದರು. ಮುಂಜಾನೆ ಸುಮಾರು 3 ಗಂಟೆಗೆ ಬೈಕಂಪಾಡಿ ಬಳಿ ಎರಡು ಇನ್ನೋವಾ ಕಾರುಗಳು ಹಾಗೂ ಒಂದು ಸ್ವಿಫ್ಟ್ ಕಾರಿನಲ್ಲಿ ಬಂದ 7ರಿಂದ 8 ಮಂದಿ ಅಪರಿಚಿತರು ವಿಕಾಸ್ ಅವರ ಕಾರನ್ನು ಅಡ್ಡಗಟ್ಟಿದ್ದಾರೆ.

ಅಪಹರಣ ಯತ್ನ

ಕಾರಿನಿಂದ ಎಳೆದು ಹಾಕುವ ಸಂದರ್ಭ ವಿಕಾಸ್ ಅವರಿಗೆ ಕೈಯಿಂದ ಹಲ್ಲೆ ನಡೆಸಲಾಗಿದೆ. ಪತ್ನಿ ಮತ್ತು ಮಗನ ಸಮೇತ ಕಾರನ್ನು ದುಷ್ಕರ್ಮಿಗಳು ಒಯ್ದಿದ್ದಾರೆ. ಪತ್ನಿ ಮತ್ತು ಮಗನನ್ನು ಕಾರಿನಲ್ಲಿಯೇ ಎಳೆದೊಯ್ಯುವಾಗ ಅಡ್ಡ ಬಂದ ವಿಕಾಸ್ ಅವರ ಮೇಲೆ ಕಾರು ಹತ್ತಿಸಲು ಆರೋಪಿಗಳು ಪ್ರಯತ್ನಿಸಿದ್ದಾರೆ. ಬಳಿಕ ಕೂಳೂರು ಬಳಿ ಪತ್ನಿ, ಮಗನನ್ನು ಕಾರಿನಿಂದ ಇಳಿಸಿ ಆರೋಪಿಗಳು ಕಾರಿನೊಂದಿಗೆ ಪರಾರಿಯಾಗಿದ್ದಾರೆ.

ಈ ಸಂದರ್ಭದಲ್ಲಿ ಉದ್ಯಮಿಯ ಪತ್ನಿಯ ಕುತ್ತಿಗೆ, ಕಿವಿಯಲ್ಲಿದ್ದ ಯಾವುದೇ ಚಿನ್ನಾಭರಣವನ್ನು ತೆಗೆದುಕೊಳ್ಳದೆ ಕಾರಿನಿಂದ ಇಳಿಸಿ ಹೋಗಿದ್ದಾರೆ. ದರೋಡೆಕೋರರು ವಿಕಾಸ್ ಅವರಿಗೆ ಹಲ್ಲೆ ನಡೆಸಿದ್ದರೂ ಪತ್ನಿ ಮತ್ತು ಮಗನಿಗೆ ಯಾವುದೇ ಹಾನಿ ಮಾಡಿಲ್ಲ.

ವಿಕಾಸ್ ಪಯ್ಯನ್ನೂರಿನಲ್ಲಿ ಚಿನ್ನದ ವ್ಯಾಪಾರ ನಡೆಸುತ್ತಿದ್ದು, ಮುಂಬಯಿನ ಸಾಂಗ್ಲಿಯಲ್ಲಿ ವಿವಾಹ ಸಮಾರಂಭದಲ್ಲಿ ಭಾಗವಹಿಸಿ ವಾಪಸಾಗುತ್ತಿದ್ದರು.

ತನಿಖೆಗೆ 15 ತಂಡ ರಚನೆ

ದರೋಡೆಗೆ ಬಳಸಿದ ಕಾರಿನ ನಂಬರ್ ಪ್ಲೇಟ್ ನಕಲಿಯಾಗಿರುವ ಸಾಧ್ಯತೆ ಇದೆ. ಆರೋಪಿಗಳ ಪತ್ತೆಗಾಗಿ ಸಿಸಿಟಿವಿ ದೃಶ್ಯಗಳನ್ನು ಆಧರಿಸಿ ಪೊಲೀಸರು ತನಿಖೆ ಆರಂಭಿಸಿದ್ದಾರೆ. ಪೊಲೀಸ್ ಆಯುಕ್ತರು 15 ತಂಡ ರಚಿಸಿ ವಿವಿಧ ಆಯಾಮಗಳಲ್ಲಿ ತನಿಖೆಗೆ ಸೂಚಿಸಿದ್ದಾರೆ.





ಮೊದಲೇ ಸಿದ್ಧತೆ

ದರೋಡೆ ನಡೆಸಿದ ತಂಡದಲ್ಲಿ ಎಳೆಂಟು ಮಂದಿ ಇದ್ದು, ಇವರೆಲ್ಲರೂ ಪಕ್ಕಾ ಪ್ಲ್ಯಾನ್ ಮಾಡಿಕೊಂಡು ದರೋಡೆಗೆ ಸ್ಕೆಚ್ ಹಾಕಿರುವುದು ಸ್ಪಷ್ಟವಾಗಿದೆ. ಪಣಂಬೂರು ಪ್ರದೇಶದಲ್ಲಿಯೇ ಅಡ್ಡಗಟ್ಟಿದ್ದಾಕೆ? ಮಂಗಳೂರಿನ ಯಾರದ್ದಾದರೂ ಕೈವಾಡವಿದೆಯೇ ಎಂಬ ನಿಟ್ಟಿನಲ್ಲಿಯೂ ಮಾಹಿತಿ ಕಲೆ ಹಾಕುವ ಕಾರ್ಯ ಸಾಗಿದೆ.

ಪಯ್ಯನ್ನೂರಿನಲ್ಲಿ ಚಿನ್ನದ ವ್ಯಾಪಾರ

ವಿಕಾಸ್ ಅವರು ಕೇರಳದ ಪಯ್ಯನ್ನೂರಿನಲ್ಲಿ ಚಿನ್ನದ ವ್ಯಾಪಾರ ನಡೆಸುತ್ತಿದ್ದು, ಮುಂಬೈ ಬಳಿಯ ಸಾಂಗ್ಲಿಯಲ್ಲಿ ಪರಿಚಯಸ್ಥರ ವಿವಾಹ ಸಮಾರಂಭದಲ್ಲಿ ಪಾಲ್ಗೊಂಡು ಮರಳುತ್ತಿದ್ದಾಗ ಈ ಘಟನೆ ನಡೆದಿದೆ. ಕೇರಳದ ಚಿನ್ನದ ವ್ಯಾಪಾರಿಗಳು ಮುಂಬೈನಲ್ಲಿ ಗಟ್ಟಿಗಳ ರೂಪದಲ್ಲಿ ಚಿನ್ನ ಖರೀದಿಸಿ ಒಯ್ಯುವುದು ಸಾಮಾನ್ಯವಾಗಿದ್ದು ದೊಡ್ಡ ಮೊತ್ತದ ಚಿನ್ನ ಕಳವಾಗಿರುವ ಸಾಧ್ಯತೆ ಇದೆ ಎನ್ನಲಾಗಿದೆ. ಆರೋಪಿಗಳ ಪತ್ತೆಗಾಗಿ ಸಿಸಿಟಿವಿ ದೃಶ್ಯಗಳನ್ನು ಆಧರಿಸಿ ಪೊಲೀಸರು ತನಿಖೆ ಮುಂದುವರಿಸಿದ್ದಾರೆ.

ಘಟನಾ ಸ್ಥಳಕ್ಕೆ ಪೊಲೀಸ್ ಅಧಿಕಾರಿಗಳ ತಂಡ ಭೇಟಿ ನೀಡಿ ಮಹಜರು ನಡೆಸಿತು. ಪಣಂಬೂರು ಪೊಲೀಸ್ ಠಾಣೆಯಲ್ಲಿ ಡಿಸಿಪಿ ರವಿಶಂಕರ್ ಅಧಿಕಾರಿಗಳೊಂದಿಗೆ ಚರ್ಚಿಸಿದರು. ದರೋಡೆಗೆ ಒಳಗಾದ ವಿಕಾಸ್ ಅವರಿಂದ ಪೊಲೀಸರು ಮಾಹಿತಿ ಪಡೆದುಕೊಂಡಿದ್ದಾರೆ.

ಅನ್ಬನಂತನ್ ಐಯ್ಯಪ್ಪನ್ ಹೆಸರಿನಲ್ಲಿ ಪ್ರತೀಕಾರದ ಇ-ಮೇಲ್

ಮಂಗಳೂರು ಜಿಲ್ಲಾ ನ್ಯಾಯಾಲಯಕ್ಕೆ ಬಂತು ಕೆಮಿಕಲ್ ಬಾಂಬ್ ಬೆದರಿಕೆ!!

ಮಂಗಳೂರು: ಉಡುಪಿ ನ್ಯಾಯಾಲಯಕ್ಕೆ ಬಾಂಬ್ ಬೆದರಿಕೆಯ ಸುದ್ದಿ ಹಸಿರಾಗಿರುವಾಗಲೇ ಸೋಮವಾರ ಮಂಗಳೂರಿನಲ್ಲಿರುವ ಜಿಲ್ಲಾ ನ್ಯಾಯಾಲಯಕ್ಕೂ ಬಾಂಬ್ ಬೆದರಿಕೆ ಸಂದೇಶ ಬಂದಿದೆ.

ಮಂಗಳೂರಿನಲ್ಲಿರುವ ಜಿಲ್ಲಾ ನ್ಯಾಯಾಲಯ ಸಂಕೀರ್ಣಕ್ಕೆ ಅಪರಿಚಿತ ವ್ಯಕ್ತಿಯೊಬ್ಬ ಬಾಂಬ್ ಬೆದರಿಕೆ ಇಮೇಲ್ ಸಂದೇಶ ಕಳಿಸಿದ್ದು ಆತಂಕ ಹುಟ್ಟಿಸಿತ್ತುಫಿ. ವಿಷಯ ತಿಳಿದ ತಕ್ಷಣ ಕಾರ್ಯೋನ್ಮುಖರಾದ ಪೊಲೀಸರು ಬಾಂಬ್ ಪತ್ತೆದಳ ಮತ್ತು ಶ್ವಾನದಳ ಮೂಲಕ ಪರಿಶೀಲನೆ ಆರಂಭಿಸಿದ್ದಾರೆ.

ಅನ್ಬನಂತನ್ ಐಯ್ಯಪ್ಪನ್ ಹೆಸರಿನಲ್ಲಿ ಇ-ಮೇಲ್!

ಮಂಗಳೂರು ಜಿಲ್ಲಾ ಕೋರ್ಟಿನ ಇ-ಮೇಲ್ ವಿಳಾಸಕ್ಕೆ ಅನ್ಬನಂತನ್ ಐಯ್ಯಪ್ಪನ್ ಎಂಬ ಹೆಸರಿನಲ್ಲಿ ಇ-ಮೇಲ್ ಸಂದೇಶ ಬಂದಿದ್ದು ಕೋರ್ಟ್ ಆವರಣದಲ್ಲಿ ಕೆಮಿಕಲ್ ಬಾಂಬ್ ಇಟ್ಟು ಸ್ಫೋಟಿಸುವುದಾಗಿ ಬೆದರಿಕೆ ಹಾಕಿದ್ದಾನೆ. ಇಸ್ರೇಲ್ ದೂತಾವಾಸದೊಂದಿಗೆ ಮಂಗಳೂರು ನ್ಯಾಯಾಲಯವನ್ನೂ ಬಾಂಬ್ ಇಟ್ಟು ಸ್ಫೋಟಿಸುವುದಾಗಿ ಬೆದರಿಕೆ ಹಾಕಿದ್ದಾನೆ.

ತನ್ನನ್ನು ಝೂನ್ ಝಿ ಡಿಎಂಕೆ ಲೀಡರ್ ಎಂದು ಹೇಳಿಕೊಂಡಿರುವ ಅನ್ಬನಂತನ್ ಐಯ್ಯಪ್ಪನ್, ಸಂಸದ ಎನ್. ಆರ್. ಇಳಂಗೋವನ್ ನಾಡಿಗೆ ದ್ರೋಹ ಎಸಗಿದ್ದಾರೆ, ಈ ಕಾರಣಕ್ಕಾಗಿ ಬಾಂಬ್ ಹಾಕುತ್ತಿದ್ದೇನೆ ಎಂದು ಹೇಳಿಕೊಂಡಿದ್ದಾನೆ.

ಎಲ್ಲಾ ನ್ಯಾಯಾಧೀಶರ ಮೂಗು ಮತ್ತು ಬಾಯಿಗಳನ್ನು ಮುಚ್ಚಿ ಅವರನ್ನು ಕೂಡಲೇ ಸ್ಥಳಾಂತರಿಸಿ ಎಂದು ಬೆದರಿಕೆ ಹಾಕಿದ್ದಾನೆ.

ಬಾಂಬ್ ಬೆದರಿಕೆ ಹಿನ್ನೆಲೆ ನ್ಯಾಯಾಲಯ ಆವರಣದಲ್ಲಿ ಬಾಂಬ್ ಪತ್ತೆ ದಳ ಮತ್ತು ಶ್ವಾನದಳದಿಂದ ಶೋಧ ನಡೆಸಲಾಗಿದೆ. ಕೋರ್ಟ್ ಕಟ್ಟಡದ ಎಲ್ಲ ಕೊಠಡಿಗಳಲ್ಲಿ ಶೋಧ ಕಾರ್ಯಾಚರಣೆ ಮಾಡಲಾಗಿದೆ. ಕಳೆದ ರಾತ್ರಿ ಇಮೇಲ್ ಬಂದಿದ್ದು ಮಂಗಳೂರು ಪೊಲೀಸರು ಮಧ್ಯಾಹ್ನ ವೇಳೆಗೆ ಕೋರ್ಟ್ ಆವರಣದಲ್ಲಿ ತಪಾಸಣೆ ನಡೆಸಿದ್ದಾರೆ.



- ಜಿಲ್ಲಾ ಕೋರ್ಟಿನ ಇ-ಮೇಲ್ ವಿಳಾಸಕ್ಕೆ ಅನ್ಬನಂತನ್ ಐಯ್ಯಪ್ಪನ್ ಎಂಬ ಹೆಸರಿನಲ್ಲಿ ಇ-ಮೇಲ್ ಸಂದೇಶ
- ಕೋರ್ಟ್ ಆವರಣದಲ್ಲಿ ಕೆಮಿಕಲ್ ಬಾಂಬ್ ಇಟ್ಟು ಸ್ಫೋಟಿಸುವುದಾಗಿ ಬೆದರಿಕೆ

ಗಂಜಿಮಠ ಗಣೇಶಪುರದಲ್ಲಿ ಎಲ್‌ಪಿಜಿ ಗ್ಯಾಸ್ ಸೋರಿಕೆ

ಬೆಂಕಿ ತಗಲಿ ವ್ಯಕ್ತಿಗೆ ಗಾಯ

ಕೈಕಂಬ: ಅಡುಗೆ ಅನಿಲ (ಎಲ್‌ಪಿಜಿ) ಸೋರಿಕೆಯಿಂದ ಬೆಂಕಿಗೆ ಹೊತ್ತಿಕೊಂಡು ಮನೆ ಯಜಮಾನ ಸುಟ್ಟ ಗಾಯಗಳೊಂದಿಗೆ ಮೂಡಬಿದ್ರೆಯ ಖಾಸಗಿ ಆಸ್ಪತ್ರೆಗೆ ದಾಖಲಾದ ದುರ್ಘಟನೆ ಗಂಜಿಮಠ ಪಂಚಾಯತ್‌ನ ಬಡಗುಳಿಪಾಡಿ ಗ್ರಾಮದ ಗಣೇಶನಗರದಲ್ಲಿ ಜೂ. 29ರ ಬೆಳಿಗ್ಗೆ ಸಂಭವಿಸಿದೆ.

ಬಜಪೆ ಪೊಲೀಸ್ ಠಾಣಾ ವ್ಯಾಪ್ತಿಯ ಗಂಜಿಮಠ ಗಣೇಶ ನಗರದ ನಿವಾಸಿ ಲಿಂಗಪ್ಪ ಗೌಡ(68)ಗಾಯಗೊಂಡವರು.

ಶೇ.60ರಷ್ಟು ಸುಟ್ಟ ಗಾಯಗೊಳಗಾಗಿ ಮೂಡಬಿದ್ರೆ ಖಾಸಗಿ ಆಸ್ಪತ್ರೆಯಲ್ಲಿ ಪ್ರಾಥಮಿಕ ಚಿಕಿತ್ಸೆ ಪಡೆದಿರುವ ಲಿಂಗಪ್ಪ ಗೌಡ ಅವರನ್ನು ಹೆಚ್ಚಿನ ಚಿಕಿತ್ಸೆಗಾಗಿ ಮಂಗಳೂರಿನ ಖಾಸಗಿ ಆಸ್ಪತ್ರೆಗೆ ದಾಖಲಿಸಲಾಗಿದೆ. ಗೌಡ ಅವರು ಮನೆಯಲ್ಲಿ ಒಬ್ಬರೇ ಇದ್ದಾಗ ಈ ದುರ್ಘಟನೆ ಸಂಭವಿಸಿದೆ.



ಗಣೇಶಪುರದ ಮನೆಯಲ್ಲಿ ಲಿಂಗಪ್ಪ ಗೌಡರು ಏಕಾಂಕಿಯಾಗಿ ವಾಸಿಸುತ್ತಿದ್ದು, ಕೆಟ್ಟು ಹೋಗಿದ್ದ ಮನೆಯ ಎಲ್‌ಪಿಜಿ ಸ್ಟವ್ ಜೂ. 28ರಂದು ಎಡಪದವಿನಲ್ಲಿ ದುರಸ್ತಿ ಮಾಡಿ ತಂದಿದ್ದರು. ಸೊಮವಾರ ಬೆಳಿಗ್ಗೆ ಎಂದಿನಂತೆ ಅನ್ನ ಸಂಬಾರು ತಯಾರಿಸಲು ಗ್ಯಾಸ್ ಒಲೆಗೆ ಬೆಂಕಿ ಹಚ್ಚಿದಾಗ ಒಮ್ಮೆಲೇ ಬೆಂಕಿ ಹತ್ತಿಕೊಂಡಿದೆ. ಬೆಂಕಿಯ ಜ್ವಾಲೆ ನೇರವಾಗಿ ಮನೆಯ ಚಾವಣಿಗೆ ತಗುಲಿದ್ದು, ಚಾವಣಿಯ ಸಿಮೆಂಟ್ ಶೀಟ್‌ನ ಸಂಪೂರ್ಣ ಪುಡಿ ಪುಡಿಯಾಗಿದೆ. ಮನೆಯೊಳಗೆ ಗ್ಯಾಸ್ ಹರಡಿದ್ದರಿಂದ ಬೆಂಕಿಗೆ ಇತರ ಸೊತ್ತುಗಳು ಸುಟ್ಟು ಕರಕಲಾಗಿವೆ. ಮೈ-ಕೈಗೆ ಬೆಂಕಿ ಆವರಿಸಿಕೊಂಡಿದ್ದ ಗೌಡ ಅವರು ಬೊಬ್ಬಿಡುತ್ತ ಹೊರಗೆ ಓಡಿ ಬಂದಿದ್ದು, ಇವರನ್ನು ಕಂಡ ಅಲ್ಲೇ ಹತ್ತಿರದಲ್ಲಿದ್ದ ಚಾಲಕರೊಬ್ಬರು ತನ್ನ ರಿಕ್ಷಾದಲ್ಲಿ ಗೌಡರನ್ನು ಮೂಡಬಿದ್ರೆಯ ಆಸ್ಪತ್ರೆಗೆ ಕೊಂಡೊಯ್ದಿದ್ದಾರೆ.





ವಿವಾಹಿತ ಗೌಡ ಅವರ ಪತ್ನಿ ಮತ್ತು ನಾಲ್ವರು ಹೆಣ್ಣು ಮಕ್ಕಳು ಪ್ರತ್ಯೇಕವಾಗಿ ವಾಸಿಸುತ್ತಿದ್ದಾರೆ. ಎಲ್‌ಪಿಜಿ ಗ್ಯಾಸ್ ಸಿಲಿಂಡರಿಗೆ ಸರಿಯಾಗಿ ಪೈಪ್ ಅಳವಡಿಕೆ ಮಾಡದ ಪ್ರಮಾದದಿಂದ ಗ್ಯಾಸ್ ಸೋರಿಕೆಯಾಗಿ ಬೆಂಕಿ ಹತ್ತಿಕೊಂಡಿದೆ ಎನ್ನಲಾಗಿದೆ. ಗ್ಯಾಸ್ ಸಿಲಿಂಡರ್ ಸ್ಫೋಟಗೊಂಡಿಲ್ಲ. ಒಂದು ವೇಳೆ ಗ್ಯಾಸ್ ಸಿಲಿಂಡರಿಗೆ ಬೆಂಕಿ ತಗುಲಿ ಸ್ಫೋಟಗೊಂಡಿದ್ದರೆ ಭಾರೀ ಅನಾಹುತ ಆಗುತ್ತಿತ್ತು.


ಘಟನಾ ಸ್ಥಳಕ್ಕೆ ಧಾವಿಸಿದ ಬಜಪೆ ಪೊಲೀಸರು ಮಹಜರು ನಡೆಸಿ, ಗಾಯಾಳುವಿನ ಪರವಾಗಿ ವೈದ್ಯರಿಂದ ಹೇಳಿಕೆ ಪಡೆದುಕೊಂಡು ತನಿಖೆ ನಡೆಸುತ್ತಿದ್ದಾರೆ.

ಅವೈಜ್ಞಾನಿಕ ತ್ಯಾಜ್ಯ ನೀರು ಚರಂಡಿಗೆ: ಹೊಟೇಲ್ ಮಾಲಿಕಗೆ ಬಿತ್ತು ದಂಡ!

ಕಾಸರಗೋಡು: ತ್ಯಾಜ್ಯ ನಿರ್ವಹಣಾ ಕಾನೂನುಗಳ ಉಲ್ಲಂಘನೆಯನ್ನು ತನಿಖೆ ಮಾಡುವ ಜಿಲ್ಲಾ ಜಾರಿ ದಳ (ಎನ್‌ಫೋರ್ಸ್‌ಮೆಂಟ್ ಸ್ಕ್ವಾಡ್) ಸೋಮವಾರ ನಡೆಸಿದ ತಪಾಸಣೆಯ ಸಂದರ್ಭ ಉಪ್ಪಳದಲ್ಲಿ ಹೊಟೇಲ್‌ನ ತ್ಯಾಜ್ಯ ನೀರನ್ನು ಅವೈಜ್ಞಾನಿಕವಾಗಿ ಸಂಸ್ಕರಿಸಲಾಗುತ್ತಿದೆ ಎಂದು ಕಂಡುಬಂದ ನಂತರ ಹೊಟೇಲ್ ಮಾಲಕರಿಗೆ 25,000 ರೂ. ದಂಡ ವಿಧಿಸಲಾಯಿತು.

ಮಾಲಿನ್ಯ ಜಲವನ್ನು ಚರಂಡಿಗೆ ಬಿಡಲಾಗುತ್ತಿತ್ತು ಮತ್ತು ಹತ್ತಿರದ ಕ್ವಾರ್ಟರ್ಸ್‌ಗಳು ಹಾಗೂ ಇತರ ಪ್ರದೇಶಗಳಿಗೆ ದುರ್ವಾಸನೆ ಬರುತ್ತಿತ್ತು. ಇದರಿಂದಾಗಿ ಸೊಳ್ಳೆಗಳು ಹರಡಲು ಕಾರಣವಾಗಿತ್ತು. ಈ ಹಿನ್ನೆಲೆಯಲ್ಲಿ ಎರಡು ವಾರಗಳಲ್ಲಿ ಸೋಕ್ ಪಿಟ್ ಅಳವಡಿಸಲು ಮತ್ತು ತ್ಯಾಜ್ಯ ನೀರನ್ನು ವೈಜ್ಞಾನಿಕ ರೀತಿಯಲ್ಲಿ ಸಂಸ್ಕರಿಸಲು ಮಾಲಕರಿಗೆ ಸೂಚಿಸಲಾಯಿತು.

ಉದುಮದಲ್ಲಿರುವ ರೆಸಾರ್ಟ್‌ನಲ್ಲಿ ನಡೆಸಿದ ತಪಾಸಣೆಯಲ್ಲಿ ನದಿ ಬದಿಯಲ್ಲಿ ತ್ಯಾಜ್ಯವನ್ನು ಸುರಿದು ದುರ್ವಾಸನೆ ಬರುವಂತೆ ಮಾಡಿದ್ದಕ್ಕಾಗಿ ತಪ್ಪಿತಸ್ಥರಿಗೆ 15,000 ರೂ. ದಂಡ ವಿಧಿಸಲಾಯಿತು. ಜಿಲ್ಲಾ ಜಾರಿ ದಳದ ಅಧಿಕಾರಿ ಕೆ.ವಿ.ಮುಹಮ್ಮದ್ ಮದನಿ, ಸ್ಕ್ವಾಡ್ ಸದಸ್ಯ ವಿ.ಎಂ.ಜೋಸ್, ಆರೋಗ್ಯ ಅಧಿಕಾರಿ ಕೆ.ರಜನಿ ಮತ್ತು ಎಂ.ರಾಜೇಶ್ ನೇತೃತ್ವದಲ್ಲಿ ತಪಾಸಣೆ ನಡೆಸಲಾಯಿತು.



ಶಾಸಕರ ಪ್ರದೇಶ ಅಭಿವೃದ್ಧಿ ನಿಧಿ: ಉಡುಪಿ ಪೊಲೀಸ್ ಇಲಾಖೆಗೆ ಶಾಸಕ ಸುನಿಲ್ ಬೊಲೆರೊ ಜೀಪ್ ಕೊಡುಗೆ

ಉಡುಪಿ: ಕಾರ್ಕಳ ಶಾಸಕ ವಿ. ಸುನಿಲ್ ಕುಮಾರ್ ಅವರು ತಮ್ಮ ಶಾಸಕರ ಪ್ರದೇಶ ಅಭಿವೃದ್ಧಿ ನಿಧಿಯ ಅಡಿಯಲ್ಲಿ ಉಡುಪಿ ಜಿಲ್ಲಾ ಪೊಲೀಸ್ ಇಲಾಖೆಯ ಸುಗಮ ಕಾರ್ಯನಿರ್ವಹಣೆಗಾಗಿ ಮಹೀಂದ್ರಾ ಕಂಪನಿಯ ನೂತನ ಬೊಲೆರೊ ಜೀಪ್ ಅನ್ನು ಕಾಣಿಕೆಯಾಗಿ ನೀಡಿದ್ದಾರೆ.

ಸೋಮವಾರ (ಜೂನ್ 29) ಉಡುಪಿಯ ಜಿಲ್ಲಾ ಪೊಲೀಸ್ ಕಚೇರಿಯಲ್ಲಿನಡೆದಸರಳಸಮಾರಂಭದಲ್ಲಿ ಶಾಸಕ ಸುನಿಲ್ ಕುಮಾರ್ ಅವರು ಹೊಸ ಜೀಪಿನ ಕೀಲಿಕೈಯನ್ನು ಉಡುಪಿ ಜಿಲ್ಲಾ ಪೊಲೀಸ್ ಅಧೀಕ್ಷಕರಾದ (ಎಸ್ಪಿ) ಹರಿರಾಮ್ ಶಂಕರ್, ಐಪಿಎಸ್ ಅವರಿಗೆ ಅಧಿಕೃತವಾಗಿ ಹಸ್ತಾಂತರಿಸಿದರು.

ಕಾರ್ಯಕ್ರಮದಲ್ಲಿ ಉಡುಪಿ ಡಿಎಆರ್ ಪೊಲೀಸ್ ಉಪಾಧೀಕ್ಷಕ ತಿಮ್ಮಪ್ಪ ಗೌಡ, ಜಿಲ್ಲಾ ಸಶಸ್ತ್ರ ಮೀಸಲು ಪಡೆಯ ಪೊಲೀಸ್ ನಿರೀಕ್ಷಕ ರವಿ ಕುಮಾರ್ ಹಾಗೂ ಉಡುಪಿ ಜಿಲ್ಲಾ ಪೊಲೀಸ್ ಕಚೇರಿಯ ಸಹಾಯಕ ಆಡಳಿತ ಅಧಿಕಾರಿ ಗೋಪಾಲ್ ಸೇರಿದಂತೆ ಪ್ರಮುಖ ಅಧಿಕಾರಿಗಳು ಉಪಸ್ಥಿತರಿದ್ದರು.



ಗೇಬಿಯನ್ ವಾಲ್ ನಿರ್ಮಾಣವಾಗಿದ್ದರೂ ದೂರವಾಗದ ಆತಂಕ | ಎಚ್ಚರಿಕೆಯ ಕರೆಗಂಟೆ ಬಾರಿಸುತ್ತವೆ ನೀರಿನ ಝರಿಗಳು

ಕೆತ್ತಿಕಲ್‌ನಲ್ಲಿ ಜೆಸಿಬಿ ಮೇಲೆ ಉರುಳಿ ಬಿದ್ದ ಬೃಹತ್ ಗಾತ್ರದ ಬಂಡೆ

ಮಂಗಳೂರು/ಕೈಕಂಬ: ಕೆತ್ತಿಕಲ್ ಮತ್ತೆ ಭೀತಿ ಹುಟ್ಟಿಸುತ್ತಿದೆ. ಮಂಗಳೂರು-ಮೂಡುಬಿದಿರೆ ರಾಷ್ಟ್ರೀಯ ಹೆದ್ದಾರಿ 169ರ ವಾಮಂಜೂರು ಕೆತ್ತಿಕಲ್‌ನಲ್ಲಿ ಕಳೆದ ವರ್ಷ ಭೂ ಕುಸಿತಗೊಂಡು ಸುತ್ತಮುತ್ತಲಿನ ಪರಿಸರದ ಮಂದಿಯ ಆತಂಕ ಹೆಚ್ಚಿಸಿತ್ತು. ಈ ಬಾರಿಯ ಮಳೆಗಾಲದಲ್ಲೂ ಜನತೆಯನ್ನು ಭಯ ಕಾಡುತ್ತಲೇ ಇದೆ.

ಜನತೆಗೆ ಧೈರ್ಯತುಂಬುವಂತೆ ಗೇಬಿಯನ್ ವಾಲ್ ನಿರ್ಮಾಣವಾಗಿದ್ದರೂ ಜನತೆಯ ಆತಂಕ ಮಾತ್ರ ದೂರವಾಗಿಲ್ಲ. ಈ ಭಾಗದಲ್ಲಿ ಸಾಗುವ ವಾಹನ ಸವಾರರಲ್ಲೂ ಭಯ ಕಾಡುತ್ತಲೇ ಇದೆ. ಆರಂಭದ ಮಳೆಗೆ ಇಲ್ಲಿನ ಹೆದ್ದಾರಿಯಲ್ಲಿ ಕೃತಕ ನೆರೆ ಉಂಟಾಗಿ ಅವಾಂತರ ಸೃಷ್ಟಿಯಾಗಿತ್ತು. ಸೋಮವಾರ ಕೂಡ ಬೃಹತ್ ಕಲ್ಲೊಂದು ಉರುಳಿ ಬಿದ್ದಿರುವುದು ಈ ಗುಡ್ಡ ಸೇಫ್ ಅಲ್ಲ ಎಂಬುದನ್ನು ದೃಢಪಡಿಸಿದೆ.

ಆಪರೇಟರ್ ಪಾರು

ಕೆತ್ತಿಕಲ್‌ನಲ್ಲಿ ಹೆದ್ದಾರಿ ಕಾಮಗಾರಿ ನಡೆಯುತ್ತಿದ್ದು ಈ ವೇಳೆ ಕೆಲಸ ಮಾಡುತ್ತಿದ್ದ ಜೇಸಿಬಿ ಮೇಲೆ ದೊಡ್ಡ ಗಾತ್ರದ ಮುರ ಕಲ್ಲಿನ ಬಂಡೆಯೊಂದು ಉರುಳಿ ಬಿದ್ದು ಜೇಸಿಬಿ ಜಖಂಗೊಂಡ ಘಟನೆ ಸೋಮವಾರ ನಡೆದಿದೆ.



- ಕೆಲಸ ಮಾಡುತ್ತಿದ್ದ ಜೇಸಿಬಿ ಮೇಲೆ ಮುರ ಕಲ್ಲಿನ ಬಂಡೆಯೊಂದು ಉರುಳಿ ಬಿದ್ದು ಜೇಸಿಬಿ ಜಖಂ
- ಜೇಸಿಬಿ ಆಪರೇಟರ್ ಕೆಳಗೆ ಹಾರಿದ್ದು, ಅಪಾಯದಿಂದ ಪಾರಾಗಿದ್ದಾನೆ

ಕೆತ್ತಿಕಲ್‌ನಲ್ಲಿ ಹೆದ್ದಾರಿ ಬದಿಗೆ ತಡೆಗೋಡೆ ನಿರ್ಮಾಣ ಮಾಡಲು ಗುಡ್ಡದ ಮೇಲೆ ಜೇಸಿಬಿ ಮಣ್ಣು ಅಗೆಯುತ್ತಿದ್ದ ಮೇಲಿಂದ ದೊಡ್ಡ ಗಾತ್ರದ ಮುರ (ಕೆಂಪು) ಕಲ್ಲಿನ ಬಂಡೆಯೊಂದು ಉರುಳಿ ಜೇಸಿಬಿಯ ಬಕೆಟ್ ಮೇಲೆ ಬಿದ್ದು ಬಕೆಟ್ ಜಖಂಗೊಂಡಿದೆ. ಈ ವೇಳೆ ಜೇಸಿಬಿ ಆಪರೇಟರ್ ಕೆಳಗೆ ಹಾರಿದ್ದು, ಅಪಾಯದಿಂದ ಪಾರಾಗಿದ್ದಾನೆ ಎನ್ನಲಾಗಿದೆ.

ಕಳೆದ ಮಳೆಗಾಲದಲ್ಲಿ ಇದೇ ಜಾಗದಲ್ಲಿ ಭಾರೀ ಪ್ರಮಾಣದ ಗುಡ್ಡ ಕುಸಿತವಾಗಿ ವಾಹನ ಸಂಚಾರಕ್ಕೆ ಆತಂಕ ತಂದೊಡ್ಡಿತ್ತು. ಈ ಜಾಗದಲ್ಲಿ ಗುಡ್ಡ ಕುಸಿಯದಂತೆ ಈ ಬಾರಿ ತಡೆಗೋಡೆ ನಿರ್ಮಾಣಕ್ಕಾಗಿ ಮಣ್ಣು ಅಗೆಯುತ್ತಿದ್ದ ವೇಳೆ ಈ ಘಟನೆ ನಡೆದಿದೆ.

ಮುಂಗಾರು ಆರಂಭದ ವೇಳೆ ಸುರಿದ ಭಾರೀ ಮಳೆಯ ಸಂದರ್ಭ ಕೆತ್ತಿಕಲ್ ಗುಡ್ಡ ಪ್ರದೇಶದ ಕೆಳಗಡೆ ಹಾದು ಹೋದ ಹೆದ್ದಾರಿಯಲ್ಲಿ ಅಕ್ಷರಶಃ ಕೃತಕ ನೆರೆ ಕಂಡು ಬಂದಿತ್ತು. ಇದರಿಂದಾಗಿ ವಾಹನ ಸವಾರರು ಸಂಕಷ್ಟ ಎದುರಿಸುವಂತಾಗಿತ್ತು.

ಕಳೆದ ವರ್ಷದ ಮಳೆಗೆ ಗುಡ್ಡ ಕುಸಿದಿದ್ದ ಕೆತ್ತಿಕಲ್ ಗುಡ್ಡ ಪ್ರದೇಶದಲ್ಲಿ ರಾಷ್ಟ್ರೀಯ ಹೆದ್ದಾರಿ ರಕ್ಷಣೆಗಾಗಿ ಈ ಬಾರಿ ಗೇಬಿಯನ್ ವಾಲ್ ನಿರ್ಮಿಸಲಾಗಿದೆ. ಹಿಂದಿನ ಬಾರಿ ಇಲ್ಲಿ ಗುಡ್ಡದ ಮೇಲಿಂದ ಹೆದ್ದಾರಿಯತ್ತ ಒಂದೆರಡು ನೀರಿನ ಝರಿ ಇದ್ದರೂ ಮಳೆ ಬಿರುಸುಗೊಳ್ಳುತ್ತಿದ್ದಂತೆ ಅಲ್ಲಲ್ಲಿ ನೀರಿನ ಝರಿಗಳು ಕಂಡುಬರುತ್ತಿರುವುದು ಎಚ್ಚರಿಕೆಯ ಕರೆಗಂಟೆಯಂತಿದೆ.

Hosadigantha Kannada Daily Printed & Published by P.S.Prakash on behalf of Jnanabharathi Prakashana Limited. published at : 2nd Floor, Micasa, Near KSRTC Bus stand, Bejai, Mangaluru - 575 004, Phone : 2497091 to 2497093. Fax : 2497098. RNI:29813/78,
Printed at Digantha Mudrana Ltd., D/No.5-184-185, Industrial Estate, Yeyyadi, Mangaluru - 575 008. . Editor: P.S.Prakash, Group Editor: Vinayak S. Bhat, Resident Editor : Prakash Ilanthila.

ಇಂದಿನ ಹವಾಮಾನ

ದಕ್ಷಿಣ ಕನ್ನಡ	ಉಡುಪಿ
27^{0} 24^{0}	27^{0} 24^{0}

ಹೊಸ ದಿಗಂತ
ರಾಷ್ಟ್ರ ಜಾಗೃತಿಯ ದೈನಿಕ

ಸಂಗಮ

ದಕ್ಷಿಣ ಕನ್ನಡ | ಉಡುಪಿ | ಕೊಡಗು | ಕಾಸರಗೋಡು

ಮಂಗಳವಾರ 30, ಜೂನ್ 2026 | e-mail diganthamlr@gmail.com | Website www.hosadigantha.com | e-paper epaper.hosadigantha.com | MANGALURU



ಪುಟ 2

ಗಡಿ ಪ್ರದೇಶದಲ್ಲಿ ಮಾದಕ ವಸ್ತು ಹಾವಳಿ, ಕ್ರಮಕ್ಕೆ ಆಗ್ರಹ



ಪುಟ 5

ಸುಸಜ್ಜಿತ ಕಟಡವಿದ್ದರೂ ಪ್ರಯಾಣಿಕರಿಗಿಲ್ಲ ಅಗತ್ಯ ಸೌಲಭ್ಯ

ಸುದ್ದಿ ಅಪ್ಡೇಟ್‌ಗಾಗಿ Google lensನಲ್ಲಿ ಈ QR ಕೋಡ್ ಸ್ಕ್ಯಾನ್ ಮಾಡಿ, whatsApp ಗ್ರೂಪ್ ಇಂದೇ ಸೇರಿ!

ಜೂನ್ ತಿಂಗಳಾಂತ್ಯ ಕಾಣಿಸಿಕೊಂಡ ಮಳೆಯಾರ್ಭಟಕ್ಕೆ ತತ್ತರಿಸಿ ಉರುಳಿಬಿದ್ದು ಮರ...



ಮಂಗಳೂರು ನಗರದ ಸಹಿತ ದಕ್ಷಿಣ ಕನ್ನಡ ಜಿಲ್ಲೆಯ ವಿವಿಧ ಕಡೆಗಳಲ್ಲಿ ಶನಿವಾರದ ಬಳಿಕ ಮಳೆ ಬಿರುಸುಗೊಂಡಿದೆ. ಮಳೆಯ ಸಂದರ್ಭ ಕಾಣಿಸಿಕೊಂಡ ಗಾಳಿಯ ಆರ್ಭಟಕ್ಕೆ ಮಂಗಳೂರಿನ ಬೆಂದೂರ್ ಸಂತ ಆಗ್ನೆಸ್ ಕಾಲೇಜು ಮುಂಭಾಗ ತಡರಾತ್ರಿ ಬೃಹತ್ ಗಾತ್ರದ ಮರವೊಂದು ರಸ್ತೆಗೆ ಅಡ್ಡಲಾಗಿ ಬಿದ್ದು ಸಂಚಾರಕ್ಕೆ ಅಡ್ಡಿಯಾಯಿತು. ಕದ್ರಿ ಅಗ್ನಿಶಾಮಕ ಠಾಣೆ ಸಿಬ್ಬಂದಿ ಸ್ಥಳಕ್ಕೆ ಆಗಮಿಸಿ ರಸ್ತೆಯಿಂದ ಮರ ತೆರವುಗೊಳಿಸಿದರು.

ಎಲ್ಲೆಡೆ ಮಳೆಯ ಅಬ್ಬರ | ಜನಜೀವನ ಅಸ್ತವ್ಯಸ್ತ | ಅಲ್ಲಲ್ಲಿ ಕೃತಕ ನೆರೆ

ಇಳೆಗೆ ಮುಂಗಾರಿನ ಸಿಂಗಾರ!

ದಕ್ಷಿಣ ಕನ್ನಡ, ಉಡುಪಿ ಜಿಲ್ಲೆಗಳಲ್ಲಿ ಕೃಷಿ ಕಾಯಕಕ್ಕೆ ಸಿಕ್ಕಿದೆ ವೇಗ

ಮಂಗಳೂರು/ಉಡುಪಿ/ಕಾಸರಗೋಡು: ಕರಾವಳಿಯಲ್ಲಿ ಈಗ ಮುಂಗಾರು ಕೊನೆಗೂ ಬಿರುಸುಗೊಂಡಿದ್ದು, ದಕ್ಷಿಣ ಕನ್ನಡ, ಉಡುಪಿ ಜಿಲ್ಲೆಗಳಾದ್ಯಂತ ಭಾನುವಾರ ರಾತ್ರಿ ಆರಂಭವಾದ ಮಳೆ ಸೋಮವಾರವೂ ದಿನವಿಡೀ ಮುಂದುವರಿದಿದೆ.

ಧಾರಾಕಾರ ಮಳೆಯಿಂದ ಹಲವೆಡೆ ಜನಜೀವನ ಅಸ್ತವ್ಯಸ್ತಗೊಂಡರೆ, ಇನ್ನು ಕೆಲವೆಡೆ ತಗ್ಗು ಪ್ರದೇಶ ಜಲಾವೃತಗೊಂಡಿವೆ. ಅಲ್ಲಲ್ಲಿ ರಸ್ತೆಗಳ ಮೇಲೆಯೇ ಮಳೆನೀರು ನಿಂತು ವಾಹನ ಸಂಚಾರಕ್ಕೆ ಅಡಚಣೆ ಉಂಟಾಗಿದ್ದು, ಕೆಲವೆಡೆ ಮನೆಗಳಿಗೆ ಹಾನಿಯಾಗಿದೆ. ಕರಾವಳಿಯಲ್ಲಿ ಈಗ ಮಳೆಗಾಲದ ಸ್ಪಷ್ಟ ಚಿತ್ರಣ ಅರಳಿಕೊಂಡಿದ್ದು, ಉತ್ತಮ ಮಳೆ ಹಲವು ನಿರೀಕ್ಷೆ ಹುಟ್ಟುಹಾಕಿರುವ ಹಿನ್ನೆಲೆಯಲ್ಲಿ ಕೃಷಿ ಚಟುವಟಿಕೆಗಳು ಚುರುಕುಗೊಂಡು ಹೊಸ ಭರವಸೆ ಮೂಡಿಸಿದೆ.

ಮೂಡುಬಿದಿರೆಯಲ್ಲಿ ದಿನವಿಡೀ ನಿರಂತರ ಮಳೆ

ಮೂಡುಬಿದಿರೆ ನಗರ, ಸುತ್ತಮುತ್ತಲಿನಲ್ಲಿ ಈ ಮುಂಗಾರಿನಲ್ಲೇ ಮೊದಲ ಬಾರಿಗೆ ಬೆಳಗ್ಗೆಯಿಂದ ಸಂಜೆಯವರೆಗೆ ನಿರಂತರವಾಗಿ ಮಳೆ ಸುರಿಯಿತು. ಬೆಳಗ್ಗೆಯಿಂದಲೇ ದಟ್ಟ ಮೋಡಗಳು ಆವರಿಸಿದ್ದರಿಂದ ಸೂರ್ಯನ ದರುಶನವೇ ಆಗಲಿಲ್ಲ. ಗಾಳಿಯ ಅಬ್ಬರ ಅಥವಾ ಗುಡುಗು, ಸಿಡಿಲು ಆರ್ಭಟ ಇಲ್ಲದೆ ಮಳೆ ನಿರಂತರ ಸುರಿದ ಪರಿಣಾಮ ಇಡೀ ಪ್ರದೇಶದಲ್ಲಿ ಆಹ್ಲಾದಕರ ವಾತಾವರಣ ನಿರ್ಮಾಣವಾಯಿತು. ನಗರದ ಹಲವು ರಸ್ತೆಗಳಲ್ಲಿ ಮಳೆನೀರು ಹರಿದು ವಾಹನ ಸವಾರರು ಎಚ್ಚರಿಕೆಯಿಂದ ಸಂಚರಿಸಬೇಕಾಯಿತು. ಚರಂಡಿ ವ್ಯವಸ್ಥೆ ಸಮರ್ಪಕವಾಗಿರದ ಕೆಲವು ಪ್ರದೇಶಗಳಲ್ಲಿ ನೀರು ರಸ್ತೆಯಲ್ಲೇ ಹರಿದು ಸಣ್ಣ ಪ್ರಮಾಣದ ಸಮಸ್ಯೆ ಉಂಟಾಯಿತು. ದಿನಪೂರ್ತಿ ಮಳೆ ಸುರಿದ ಪರಿಣಾಮ ವ್ಯಾಪಾರ ವಹಿವಾಟಿನ ಮೇಲೂ ಪರಿಣಾಮ ಬೀರಿತು. ಸಾರ್ವಜನಿಕರು ಛತ್ರಿ, ರೈನ್ ಕೋಟ್ ಆಶ್ರಯ ಪಡೆಯುವಂತಾಯಿತು.

ಸುರತ್ಕಲ್-ಪಣಂಬೂರಿನಲ್ಲಿ ಜಲಾವೃತ ಸಮಸ್ಯೆ

ಭಾನುವಾರ ರಾತ್ರಿ ಸುರಿದ ಭಾರೀ ಮಳೆಯಿಂದ ಸುರತ್ಕಲ್, ಪಣಂಬೂರು, ಬೈಕಂಪಾಡಿ, ಎನ್‌ಐಟಿಕೆ ಜಂಕ್ಷನ್ ಹಾಗೂ ಮಾರುಕಟ್ಟೆ ರಸ್ತೆ ಸೇರಿದಂತೆ ಹಲವು ತಗ್ಗು ಪ್ರದೇಶಗಳು ಜಲಾವೃತಗೊಂಡವು. ರಾಷ್ಟ್ರೀಯ ಹೆದ್ದಾರಿ 66ರ ಬದಿಯಲ್ಲಿ ಸಮರ್ಪಕ ಚರಂಡಿ ವ್ಯವಸ್ಥೆ ಇಲ್ಲದೆ ಮಳೆನೀರು ಎಲ್ಲೆಡೆಯಲ್ಲಿ ಸಂಕಷ್ಟ ಸೃಷ್ಟಿಸಿತು.

ಮಳೆ ನೀರಿನ ರಭಸಕ್ಕೆ ಮತ್ತೊಮ್ಮೆ ಕೊಚ್ಚಿಹೋದ ಅಂಬಡಬೆಟ್ಟು ರಸ್ತೆ

ವಾಹನ ಸಂಚಾರ ಸ್ಥಗಿತ | ಸಂಕಷ್ಟದಲ್ಲಿ ಜನತೆ



ಬೆಳ್ತಂಗಡಿ: ಉಜಿರೆ – ಗುರಿಪಳ್ಳ ರಸ್ತೆಯ ಅಂಬಡಬೆಟ್ಟು ಎಂಬಲ್ಲಿ ನಿರ್ಮಾಣವಾಗುತ್ತಿರುವ ಹೊಸ ಸೇತುವೆ ಬಳಿ ನಿರ್ಮಿಸಲಾಗಿದ್ದ ತಾತ್ಕಾಲಿಕ ರಸ್ತೆ ಸೋಮವಾರ ಸುರಿದ ಭಾರೀ ಮಳೆಗೆ ಮತ್ತೆ ಕೊಚ್ಚಿ ಹೋಗಿ ಗುರಿಪಳ್ಳ, ನಡ, ಇಂದಬೆಟ್ಟು, ಪಡ್ಡು ಮೊದಲಾದ ಪರಿಸರದ ಸಾವಿರಾರು ಕುಟುಂಬಗಳು ಸುತ್ತು ಬಳಸಿನ ರಸ್ತೆಗಳಲ್ಲಿ ಸಂಚರಿಸುವುದು ಮತ್ತೊಮ್ಮೆ ಅನಿವಾರ್ಯವಾಗಿದೆ.

ತಾತ್ಕಾಲಿಕ ಸೇತುವೆ ನಿರ್ಮಾಣ

ಈ ಹಿಂದೆ ಜೂ.9ರಂದು ಸುರಿದ ಮಳೆಗೆ ತಾತ್ಕಾಲಿಕ ಸೇತುವೆ ಕೊಚ್ಚಿ ಹೋಗಿ ಅದೇ ಸ್ಥಳದಲ್ಲಿ ಮತ್ತೆ ತಾತ್ಕಾಲಿಕ ಸೇತುವೆ ನಿರ್ಮಿಸಿ ಸಂಚಾರ ವ್ಯವಸ್ಥೆ ಕಲ್ಪಿಸಲಾಗಿತ್ತು. ಬಳಿಕ ದಕ್ಷಿಣ ಕನ್ನಡ ಜಿಲ್ಲಾಧಿಕಾರಿ ಇಲ್ಲಿ ಸಂಚಾರಕ್ಕೆ ನಿಷೇಧ ಹೇರಿದ್ದರು. ವಾಹನಗಳ ಓಡಾಟ ಯಥಾ ಪ್ರಕಾರ ನಡೆಯುತ್ತಿತ್ತು. ಆದರೆ ಇದೀಗ ಸಂಪರ್ಕ ರಸ್ತೆ ಸಂಪೂರ್ಣ ಕೊಚ್ಚಿ ಹೋಗಿ ವಾಹನ ಸಂಚಾರ ಅಸಾಧ್ಯವಾಗಿದೆ.

2.50 ಕೋ. ರೂ. ವೆಚ್ಚ

ಅಂಬಡಬೆಟ್ಟು ಎಂಬಲ್ಲಿ ಹರಿಯುವ ಹಳ್ಳದ ಸೇತುವೆ ಶಿಥಿಲಾವಸ್ಥೆ ತಲುಪಿತ್ತು. ಬಹು ವರ್ಷದ ಬೇಡಿಕೆ ಇಲ್ಲಿನ ಕಿರು ಸೇತುವೆಗೆ ಸುಮಾರು 2 ವರ್ಷದ ಹಿಂದೆ ಅನುಮೋದನೆ ದೊರಕಿತ್ತು. 2.50 ಕೋ. ರೂ. ವೆಚ್ಚದ ಈ ಕಿರು ಸೇತುವೆಗೆ ಫೆ.10ರಂದು ಶಿಲಾನ್ಯಾಸ ನೆರವೇರಿತ್ತು. »ಪುಟ 6

ಎಲ್ಲೆಲ್ಲಿ? ಏನೇನಾಗಿದೆ?

- ಕರಾವಳಿ ಭಾಗದ ಜಿಲ್ಲೆಗಳಾದ್ಯಂತ ದಿನವಿಡೀ ಸುರಿದ ಧಾರಾಕಾರ ಮಳೆ
- ಸುರತ್ಕಲ್, ಪಣಂಬೂರು ಭಾಗದ ತಗ್ಗು ಪ್ರದೇಶಗಳು ಸಂಪೂರ್ಣ ಜಲಾವೃತ
- ರಾಷ್ಟ್ರೀಯ ಹೆದ್ದಾರಿ 66ರ ಕೆಲವೆಡೆ ನೀರು ನಿಂತು ಸಂಚಾರಕ್ಕೆ ತೊಂದರೆ
- ಬಂಟ್ವಾಳ ತಾಲೂಕಿನ ಬಿ.ಮೂಡದಲ್ಲಿ ಗಾಳಿ ಮಳೆ ಆರ್ಭಟಕ್ಕೆ ಮನೆಗೆ ಹಾನಿ
- ಮಳೆ ಚುರುಕಾದ ಬೆನ್ನಿಗೇ ಕುಂದಾಪುರ ಪರಿಸರದಲ್ಲಿ ನಾಟಿ ಕಾರ್ಯಕ್ಕೆ ವೇಗ
- ಮಳೆಗೆ ಕರ್ಕುಂಜೆಯಲ್ಲಿ ಮನೆ ಮೇಲೆ ಮರ ಬಿದ್ದು 40 ಸಾವಿರ ರೂ. ನಷ್ಟ
- ಮಳೆ ಆಗಮನ ಹಿನ್ನೆಲೆಯಲ್ಲಿ ಇಳಿಕೆಯಾದ ತಾಪಮಾನ, ಕರಾವಳಿಗೆ ಮತ್ತೆ ತಂಪಿನ ವಾತಾವರಣ ಅನುಭವ
- ಮುಂದಿನ ಕೆಲವು ದಿನಗಳ ಕಾಲ ಇದೇ ಮಾದರಿಯಲ್ಲಿ ಮಳೆಯ ನಿರೀಕ್ಷೆ
- ಕೊಡಗು ಜಿಲ್ಲೆಯಲ್ಲಿಯೂ ಇಳೆಗೆ ತಂಪೆರೆದ ಸೋಮವಾರದ ಮಳೆ
- ಮಂಜಿನ ನಗರಿಯಲ್ಲಿ ಮತ್ತೆ ಅರಳಿದ ಮಳೆಗಾಲದ ಗತ ವೈಭವ
- ಸತತವಾಗಿ ಮಳೆ ಸುರಿದರೂ ಕರಾವಳಿ ಭಾಗದ ಜೀವನದಿಗಳಲ್ಲಿ ಇನ್ನೂ ಕೂಡಾ ಏರಿಕೆ ಕಾಣದ ಜೀವಜಲದ ಮಟ್ಟ

ಮಳೆಯೊಂದಿಗೆ ಕಾಣಿಸಿದ ಭಾರೀ ಗಾಳಿಗೆ ಬೆಚ್ಚಿದ ನಾಗರಿಕರು

ಸೋಮವಾರ ಮಳೆಯ ಜೊತೆಯಲ್ಲಿಯೇ ಕಾಣಿಸಿಕೊಂಡ ಗಾಳಿ ಹಲವೆಡೆಗಳಲ್ಲಿ ಭಾರೀ ಆತಂಕ ಹುಟ್ಟಿಸಿತು. ಗಂಟೆಗೆ ಸುಮಾರು 50 ಕಿಮೀ ವೇಗದಲ್ಲಿ ಬೀಸುತ್ತಿದ್ದ ಗಾಳಿ ಹಲವೆಡೆಗಳಲ್ಲಿ ಒಂದಿಷ್ಟು ಆಸ್ತಿಪಾಸ್ತಿಗೆ ಹಾನಿ ಉಂಟುಮಾಡಿದೆ.

ಬಂಟ್ವಾಳದಲ್ಲಿ ಮನೆಗೆ ಹಾನಿ: ಎಚ್ಚರಿಕೆ ವಹಿಸಲು ಸೂಚನೆ

ಬಂಟ್ವಾಳ ತಾಲೂಕಿನಾದ್ಯಂತ ಭಾನುವಾರ ರಾತ್ರಿಯಿಂದ ಮಳೆ ಉತ್ತಮ ಪ್ರಮಾಣದಲ್ಲಿ ಸುರಿಯಿತು. ಸೋಮವಾರ ಮಧ್ಯಾಹ್ನ ಕೆಲಕಾಲ ಮಳೆ ವಿರಾಮ ನೀಡಿದರೂ ನಂತರ ಮತ್ತೆ ಬಿರುಸುಗೊಂಡಿತು. ಮಳೆಯ ಪರಿಣಾಮ ಬಿ.ಮೂಡ ಗ್ರಾಮದ ಗಾಂದೋಡಿ ಎಂಬಲ್ಲಿ ಆಸ್ಯಮ್ಮ ಅವರ ವಾಸದ ಮನೆಗೆ ಹಾನಿಯಾಗಿದೆ. ಸ್ಥಳೀಯ ಅಧಿಕಾರಿಗಳು ಹಾನಿಯ ಪರಿಶೀಲನೆ ನಡೆಸಿದ್ದು, ಮಳೆಯು ಮುಂದುವರಿದರೆ ಇನ್ನಷ್ಟು ಎಚ್ಚರಿಕೆ ವಹಿಸುವಂತೆ ಸಾರ್ವಜನಿಕರಿಗೆ ಸೂಚಿಸಲಾಗಿದೆ.

ಕುಂದಾಪುರ ತಾಲೂಕಿನಲ್ಲಿ ಮನೆ ಮೇಲೆ ಉರುಳಿದ ಮರ

ಕುಂದಾಪುರ ತಾಲೂಕಿನ ಕರ್ಕುಂಜೆ ಗ್ರಾಮದ ಕರ್ಕುಂಜೆಮನೆ ಎಂಬಲ್ಲಿ ಜಾನಕಿ ಶೆಟ್ಟಿ ಅವರ ಮನೆಯ ಮೇಲೆ ಮರ ಬಿದ್ದ ಪರಿಣಾಮ ಮನೆಯ ಒಂದು ಭಾಗಕ್ಕೆ ಹಾನಿಯಾಗಿದ್ದು, ಸುಮಾರು ರೂ. 40 ಸಾವಿರ ನಷ್ಟ ಸಂಭವಿಸಿದೆ.

ಕೃಷಿ ಕ್ಷೇತ್ರದಲ್ಲಿ ಸಂಚಲನ ಸೃಷ್ಟಿಸಿದ ಮಳೆ: ನಾಟಿಗೆ ವೇಗ

ಉಡುಪಿ ಜಿಲ್ಲೆಯ ಕುಂದಾಪುರ ತಾಲೂಕಿನಾದ್ಯಂತ ಭಾನುವಾರದಿಂದ ಉತ್ತಮ ಮಳೆಯಾಗುತ್ತಿದ್ದು, ಕೃಷಿ ಚಟುವಟಿಕೆಗಳು ವೇಗ ಪಡೆದಿವೆ. ಗದ್ದೆಗಳಲ್ಲಿ ನೀರಿನ ಮಟ್ಟ ಏರಿಕೆಯಾಗಿರುವ ಹಿನ್ನೆಲೆಯಲ್ಲಿ ರೈತರು ನಾಟಿ ಕಾರ್ಯ ಆರಂಭಿಸಿದ್ದಾರೆ. ಚರಂಡಿಗಳು, ತೋಡುಗಳು ಹಾಗೂ ಸಣ್ಣ ಹೊಳೆಗಳಲ್ಲಿ ನೀರು ಉಕ್ಕಿ ಹರಿಯುತ್ತಿದ್ದು, ಕೆಲವು ತಗ್ಗು ಪ್ರದೇಶಗಳಲ್ಲಿ ಕೃತಕ ನೆರೆ ಪರಿಸ್ಥಿತಿ ನಿರ್ಮಾಣವಾಗಿದೆ. ಮಳೆ ಮುಂದುವರಿದರೆ ಕೃಷಿಗೆ ಇನ್ನಷ್ಟು ಅನುಕೂಲವಾಗಲಿದೆ ಎಂದು ರೈತರು ತಿಳಿಸಿದ್ದಾರೆ.

ಸುತ್ತಮುತ್ತ

ಮಳೆ ಬಂದರೂ ಕಾಣದ ತೂಫಾನ್: ಮೀನುಗಾರಿಕೆ ಕ್ಷೇತ್ರ ಇನ್ನೂ ಗಾಢ ಮೌನ

ಕುಂದಾಪುರ: ಮಳೆ ಆರಂಭವಾದರೂ ಸಮುದ್ರದಲ್ಲಿ ಇನ್ನೂ ತೂಫಾನ್ ಕಾಣಿಸಿಕೊಳ್ಳದ ಹಿನ್ನೆಲೆಯಲ್ಲಿ ನಾಡದೋಣಿ ಮೀನುಗಾರಿಕೆ ನಿರೀಕ್ಷಿತ ಮಟ್ಟದಲ್ಲಿ ಆರಂಭವಾಗಿಲ್ಲ. ಇದರ ಪರಿಣಾಮ ಸಮುದ್ರ ಮೀನುಗಳ ಕೊರತೆ ಕಂಡುಬಂದಿದ್ದು, ಹೊಳೆ ಹಾಗೂ ನದಿಗಳಲ್ಲಿ ಸಿಗುವ ಮೀನುಗಳಿಗೆ ಬೇಡಿಕೆ ಹೆಚ್ಚಾಗಿದೆ. ಜೊತೆಗೆ ಮಾರುಕಟ್ಟೆಯಲ್ಲಿ ಅವುಗಳ ಬೆಲೆ ಏರಿಕೆಯಾಗಿದೆ. ಸ್ಥಳೀಯ ಮಾರುಕಟ್ಟೆಗಳಲ್ಲಿ ತಾಜಾ ಸಮುದ್ರ ಮೀನುಗಳ ಲಭ್ಯತೆಯೂ ಕಡಿಮೆಯಾಗಿದೆ.

ಕೊಡಗು ಜಿಲ್ಲೆಯಲ್ಲಿಯ ಎಲ್ಲೆಡೆ ಈಗ ಕಾಣಿಸುತ್ತಿದೆ ಮುಂಗಾರು ಮ್ಯಾಜಿಕ್!

ಮಡಿಕೇರಿ: ಕೊಡಗು ಜಿಲ್ಲೆಯಲ್ಲಿ ಸೋಮವಾರ ಸ್ವಲ್ಪ ಮಟ್ಟಿಗೆ ಮಳೆಯಾಗಿದ್ದು, ಮುಂಗಾರಿನ ವಾತಾವರಣ ಮನೆ ಮಾಡಿದೆ. ಬೆಳಗಿನಿಂದಲೇ ಮೋಡ ಕವಿದ ವಾತಾವರಣದ ನಡುವೆ ಆಗಾಗ ಹಗುರವಾದ ಮಳೆಯಾಗುತ್ತಿದ್ದು, ಬಿಸಿಯಾಗಿದ್ದ ತಾಪಮಾನದಲ್ಲೂ ಬದಲಾವಣೆ ಕಂಡು ಬಂದಿದೆ. ಸೋಮವಾರ ಬೆಳಗ್ಗೆ 8.30ಕ್ಕೆ ಕೊನೆಗೊಂಡಂತೆ ಕಳೆದ 24 ಗಂಟೆ ಅವಧಿಯಲ್ಲಿ ಜಿಲ್ಲೆಯಲ್ಲಿ ಸರಾಸರಿ 1.38 ಮಿಲಿ ಮೀಟರ್‌ನಷ್ಟು ಮಳೆಯಾಗಿದೆ.

ಕರಾವಳಿಯಲ್ಲಿ ಭಾರೀ ಮಳೆ ಸಾಧ್ಯತೆ: ಜು.6 ತನಕ ಆರೆಂಜ್ ಅಲರ್ಟ್

ಮಂಗಳೂರು: ಮುಂಗಾರು ಚುರುಕುಗೊಂಡಿರುವ ಹಿನ್ನೆಲೆಯಲ್ಲಿ ಎಲ್ಲೆಡೆ ಮಳೆ ಬಿರುಸುಗೊಳ್ಳುತ್ತಿದ್ದು, ಈ ನಡುವೆ ಕರಾವಳಿ ಜಿಲ್ಲೆಗಳ ಕೆಲವೆಡೆ ನಾಳೆಯಿಂದ ಭಾರೀ ಮಳೆ ಸುರಿಯಲಿದೆ ಎಂದು ಕೇಂದ್ರ ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ. ಮುನ್ನೆಚ್ಚರಿಕಾ ಕ್ರಮವಾಗಿ ಕರಾವಳಿ ಭಾಗದಲ್ಲಿ ಇಂದಿನಿಂದ (ಜೂ.30) ಜು.6ರವರೆಗೆ ಆರೆಂಜ್ ಅಲರ್ಟ್ ಘೋಷಿಸಲಾಗಿದೆ. ಎಲ್ಲೆಡೆ ಎಚ್ಚರಿಕೆ ವಹಿಸಲು ಹವಾಮಾನ ಇಲಾಖೆ ಸೂಚಿಸಿದೆ.

ಕಾಸರಗೋಡು ಜಿಲ್ಲೆಯ ವಿವಿಧ ಕಡೆಗಳಲ್ಲಿ ಭುವಿಗೆ ತಂಪೆರೆದ ಮುಂಗಾರು

ಕಾಸರಗೋಡು: ಜಿಲ್ಲೆಯ ವಿವಿಧ ಭಾಗಗಳಲ್ಲಿ ಸೋಮವಾರ ಮಳೆಯಾಗಿದೆ. ಹಠಾತ್ ಚುರುಕುಗೊಂಡ ಮಳೆಯಿಂದಾಗಿ ಈಗ ಈ ಭಾಗದ ಕೃಷಿ ಕ್ಷೇತ್ರಕ್ಕೆ ಹೊಸ ಚೈತನ್ಯ ಒದಗಿಬಂದಿದೆ.

ತುಂಬೆ ಅಣೆಕಟ್ಟಿನಲ್ಲಿ ಮತ್ತೆ ಇಳಿಕೆಯಾದ ಒಳಹರಿವು | ಆತಂಕದಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ ನಾಗರಿಕರು

ಜೂನ್ ಅಂತ್ಯವಾದರೂ ನೇತ್ರಾವತಿ ಮಡಿಲು ಖಾಲಿ ಖಾಲಿ



ಸಂಗಮ ವಿಶೇಷ

ಬಂಟ್ವಾಳ: ಅಬ್ಬರಿಸಬೇಕಿದ್ದ ಮುಂಗಾರು ಮಳೆ ಮಾತ್ರ ಜೂನ್ ತಿಂಗಳು ಅಂತ್ಯವಾಗುತ್ತಿದ್ದರೂ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಇನ್ನೂ ನಿರೀಕ್ಷಿತ ಬಿರುಸು ತೋರಿಲ್ಲ. ಕಳೆದ ಕೆಲವು ದಿನಗಳಿಂದ ಮಳೆಯಾಗುತ್ತಿದ್ದರೂ, ಎಲ್ಲೂ ಧಾರಾಕಾರ, ನಿರಂತರ ಮಳೆ ಸುರಿಯದ ಕಾರಣ ಪ್ರಮುಖ ನದಿಗಳಲ್ಲಿ ನಿರೀಕ್ಷಿತ ಪ್ರಮಾಣದ ನೀರಿನ ಹರಿವು ಕಾಣಿಸುತ್ತಿಲ್ಲ.

ಏರಿಕೆಯಾಗದ ನೇತ್ರಾವತಿ ಮಟ್ಟ

ಕರಾವಳಿಯ ಜೀವನದಿ ನೇತ್ರಾವತಿ ಇನ್ನೂ ತುಂಬಿ ತುಳುಕದೇ ಸಾಧಾರಣ ಮಟ್ಟದಲ್ಲೇ ಹರಿಯುತ್ತಿದೆ. ಸಾಮಾನ್ಯವಾಗಿ ಜೂನ್ ಅಂತ್ಯದ ವೇಳೆಗೆ ನದಿಯಲ್ಲಿ ನೀರಿನ ಹರಿವು ಗಣನೀಯ ಹೆಚ್ಚಳ ಆಗಬೇಕಿದ್ದರೂ, ಈ ಬಾರಿ ಮಾತ್ರ ಇಲ್ಲಿನ ಪರಿಸ್ಥಿತಿ ತುಸು ಭಿನ್ನವಾಗಿದೆ.

ನೀರು ಸಂಗ್ರಹಿಸಿಡುವ ಸ್ಥಿತಿ ಎದುರಾಗಿದೆ

ಮಂಗಳೂರು ನಗರಕ್ಕೆ ಕುಡಿಯುವ ನೀರಿನ ಪ್ರಮುಖ ಮೂಲವಾದ ತುಂಬೆ ವೆಂಟೆಡ್ ಡ್ಯಾಂನಲ್ಲೂ ಸದ್ಯ ಎಲ್ಲ ಗೇಟ್ ಮುಚ್ಚಿ ನೀರನ್ನು ಸಂಗ್ರಹಿಸಿಟ್ಟಿರುವ ಸ್ಥಿತಿ ಮುಂದುವರಿದಿದೆ.

- ಜೂನ್ ಅಂತ್ಯವಾದರೂ ಕಾಣಿಸದ ಮುಂಗಾರು ಬಿರುಸು
- ಇನ್ನೂ ತುಂಬಿ ಹರಿಯುತ್ತಿಲ್ಲ ಜಿಲ್ಲೆಯ ಜೀವನದಿ ನೇತ್ರಾವತಿ
- ಮುನ್ನೆಚ್ಚರಿಕಾ ಕ್ರಮವಾಗಿ ತುಂಬೆ ಡ್ಯಾಂನಲ್ಲಿ ನೀರು ಸಂಗ್ರಹ ಶುರು
- ಈಗ ಎಲ್ಲೆಡೆ ಜಲಕ್ಷಾಮದ ಆತಂಕ ಹೆಚ್ಚಿಸುತ್ತಿದೆ ಮಳೆ ತೀವ್ರ ಕೊರತೆ

ಪ್ರತೀ ವರ್ಷ ನದಿ ಉಕ್ಕಿ ಹರಿಯುತಿತ್ತು

ಪ್ರತೀ ವರ್ಷ ಜೂನ್ ತಿಂಗಳಲ್ಲಿ ಮುಂಗಾರು ಪ್ರವೇಶಿಸುತ್ತಿದ್ದಂತೆ ನಿರಂತರ ಮಳೆ ಸುರಿದು ನೇತ್ರಾವತಿ ನದಿ ಉಕ್ಕಿ ಹರಿಯುವ ದೃಶ್ಯಗಳು ಕಾಣುತಿತ್ತು. ಗ್ರಾಮಾಂತರ ಪ್ರದೇಶದಲ್ಲೂ ಬಾವಿ, ಕೆರೆಗಳು ತುಂಬುತ್ತಿದ್ದವು. ಆದರೆ ಈ ಬಾರಿ ಪರಿಸ್ಥಿತಿ ಭಿನ್ನವಾಗಿದೆ. ಜೂನ್ ತಿಂಗಳ ಬಹುತೇಕ ದಿನ ಬಿಸಿಲಿನ ಝಳದಿಂದಲೇ ಕೂಡಿತ್ತು. ಆಗೊಮ್ಮೆ, ಈಗಮ್ಮೊ ಮಳೆ ಬಿಟ್ಟರೆ ಅಬ್ಬರದ ನಿರಂತರ ಮಳೆ ಇಲ್ಲ. »ಪುಟ 6

ಸದ್ಯ ತುಂಬೆ ಅಣೆಕಟ್ಟಿನ ನೀರಿನ ಮಟ್ಟ 5.90 ಮೀ.

ಸೋಮವಾರ ತುಂಬೆ ವೆಂಟೆಡ್ ಡ್ಯಾಂನಲ್ಲಿ 30 ಗೇಟ್‌ಗಳ ಪೈಕಿ ಒಂದು ಗೇಟನ್ನು ತೆರವುಗೊಳಿಸಿ ಉಳಿದ 29 ಗೇಟ್ ಮುಚ್ಚಿ ನೀರು ಶೇಖರಿಸಲಾಗಿದ್ದು, ಸದ್ಯ ನೀರಿನ ಮಟ್ಟ 5.90 ಮೀ.ಅಡಿಯಷ್ಟಕ್ಕೆ ಕಾಯ್ದಿರಿಸಲಾಗಿದೆ. ಡ್ಯಾಂನಲ್ಲಿ ನೀರಿನ ಒಳಹರಿವು ಕೂಡ ಕಡಿಮೆಯಾಗಿದೆ.

ಅತಂತ್ರ ಸ್ಥಿತಿಯಲ್ಲಿದ್ದಾರೆ ಈ ಭಾಗದ ಅನ್ನದಾತರು

ಈಗ ರೈತರು ಭತ್ತದ ನಾಟಿಗೆ ಬೇಕಾದ ಎಲ್ಲ ಸಿದ್ಧತೆ ಮಾಡಿಕೊಂಡಿದ್ದರೂ ಪೂರ್ಣ ಪ್ರಮಾಣದ ಮಳೆ ಬಾರದೆ ಗದ್ದೆಗೆ ಸಾಕಷ್ಟು ನೀರು ಸಿಗದ ಪರಿಣಾಮ ಕೃಷಿ ಚಟುವಟಿಕೆಯನ್ನು ನಿರೀಕ್ಷಿತ ಮಟ್ಟದಲ್ಲಿ ಆರಂಭಿಸಲು ರೈತರಿಗೆ ಸಾಧ್ಯವಾಗುತ್ತಿಲ್ಲ. ಕಳೆದ ವರ್ಷ ಈ ವೇಳೆಗೆ ಸಾಕಷ್ಟು ಮಳೆಯಾಗಿತ್ತು. ಈ ಬಾರಿ ಮುಂಗಾರು ತಡವಾಗಿರುವುದು ರೈತರಲ್ಲಿ ಒಂದಷ್ಟು ಆತಂಕ ಮೂಡಿಸಿದಂತಿದೆ.

ವಿದ್ಯುತ್ ಕಂಬಗಳನ್ನು ಸೇರಿಸಿ ರಸ್ತೆಗೆ ಕಾಂಕ್ರೀಟ್: ವ್ಯಕ್ತಿಗೆ ನೋಟೀಸ್ 3

ಮಡಿಕೇರಿಯ ಐತಿಹಾಸಿಕ ಸ್ಥಳಗಳ ಅಭಿವೃದ್ಧಿಗೆ ಬೇಕಿದೆ ಸಾಥ್ 4

ವಿನೂತನ ಆವಿಷ್ಕಾರದೊಂದಿಗೆ ಕಾಲುಸಂಕಗಳ ನಿರ್ಮಾಣ: ಗಂಟಿಹೊಳೆ 6

ಸುತ್ತಮುತ್ತ

ಜುಲೈ1: ಪತ್ರಿಕಾ ದಿನಾಚರಣೆ

ಮೂಡುಬಿದಿರೆ: ಪ್ರೆಸ್‌ಕ್ಲಬ್ ಮೂಡುಬಿದಿರೆ ಮತ್ತು ಮೂಡುಬಿದಿರೆ ತಾಲೂಕು ಕಾರ್ಯನಿರತ ಪತ್ರಕರ್ತರ ಸಂಘದ ಜಂಟಿ ಸಹಭಾಗಿತ್ವದಲ್ಲಿ ಮೂಡುಬಿದಿರೆ ಸಮಾಜ ಮಂದಿರದಲ್ಲಿ ಜು.1ರಂದು ಮಧ್ಯಾಹ್ನ 3ಗಂಟೆಗೆ ಪತ್ರಿಕಾ ದಿನಾಚರಣೆ ನಡೆಯಲಿದೆ. ಸಭೆಯ ಅಧ್ಯಕ್ಷತೆಯನ್ನು ಮೂಡುಬಿದಿರೆ ಪ್ರೆಸ್ ಕ್ಲಬ್ ಅಧ್ಯಕ್ಷ ಬಿ. ಸೀತಾರಾಮ ಆಚಾರ್ಯ ವಹಿಸಿಕೊಳ್ಳಲಿದ್ದು, ಶಾಸಕ ಉಮಾನಾಥ ಎ. ಕೋಟ್ಯಾನ್ ಉದ್ಘಾಟಿಸುವರು. ಮುಖ್ಯ ಅತಿಥಿಗಳಾಗಿ ಮಾಜಿ ಸಚಿವ ಕೆ. ಅಭಯಚಂದ್ರ ಜೈನ್, ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ಮಿಥುನ್ ರೈ, ದ.ಕ. ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ಪುಷ್ಪರಾಜ್ ಬಿ.ಎನ್., ರಾಜ್ಯ ಸಮಿತಿ ಸದಸ್ಯ ಶ್ರೀನಿವಾಸ ನಾಯಕ್ ಇಂದಾಜೆ ಮತ್ತು ತಾಲೂಕು ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ನವೀನ್ ಸಾಲ್ಯಾನ್ ಭಾಗವಹಿಸಲಿದ್ದಾರೆ. ಟಿವಿ9 ಮಡಿಕೇರಿ ವಿಡಿಯೋ ಜರ್ನಲಿಸ್ಟ್ ನವೀನ್ ಸುವರ್ಣರಿಗೆ ಪ್ರೆಸ್ ಕ್ಲಬ್ ಗೌರವ ನೀಡಿ ಸನ್ಮಾನಿಸಲಾಗುವುದು. ಸನ್ಮತ್ ಎಸ್. ಆಚಾರ್ಯ, ಅಮೋಘ್ ಹೆಗ್ಡೆಗೆ ಪ್ರತಿಭಾ ಪುರಸ್ಕಾರ ನಡೆಯಲಿದೆ. ವಿಶ್ರಾಂತ ಪತ್ರಕರ್ತ ಸದಾನಂದ ಹೆಗಡೆಕಟ್ಟೆ ಪ್ರಾಯೋಜಿತ ದತ್ತಿನಿಧಿ ಉಪನ್ಯಾಸದಲ್ಲಿ ಖ್ಯಾತ ಎಐ ಮತ್ತು ಸೈಬರ್ ಭದ್ರತಾ ತಜ್ಞ ಡಾ. ಅನಂತ್ ಪ್ರಭು ಜಿ. 'ಎಐ ಮೂಲಕ ಪತ್ರಕರ್ತರಿಗಿರುವ ಅವಕಾಶಗಳು ಮತ್ತು ಸವಾಲುಗಳು' ವಿಷಯದಲ್ಲಿ ಮಾತನಾಡಲಿದ್ದಾರೆ.

ಸಮೃದ್ ಆರ್. ಶೆಟ್ಟಿ ಜಿಲ್ಲಾ ಮಟ್ಟಕ್ಕೆ ಆಯ್ಕೆ

ಪುತ್ತೂರು: ನಗರದ ತೆಂಕಿಲದ ವಿವೇಕಾನಂದ ಆಂಗ್ಲ ಮಾಧ್ಯಮ ಶಾಲೆಯ 10ನೇ ತರಗತಿಯ ಸಮೃದ್ಧ್ ಆರ್. ಶೆಟ್ಟಿ 'ಇನ್‌ಸ್ಪೈರ್ ಅವಾರ್ಡ್ ಮನಾಕ್' ಸ್ಪರ್ಧೆಯ ಮೊದಲ ಹಂತದ ಆನ್‌ಲೈನ್



ಸ್ಪರ್ಧೆಯನ್ನು ಯಶಸ್ವಿಯಾಗಿ ಪೂರ್ಣಗೊಳಿಸಿ ಜಿಲ್ಲಾ ಹಂತಕ್ಕೆ ಆಯ್ಕೆಯಾಗಿದ್ದಾರೆ. 'ದಿ ಲ್ಯಾಂಡ್ ಮೈನ್ ಡಿಟೆಕ್ಷನ್ ರೊಬೊಟೊ ಫಾರ್ ಬೆಟರ್ ವರ್ಲ್ಡ್' ಎಂಬ ಶೀರ್ಷಿಕೆಯೊಂದಿಗೆ ವಿಜ್ಞಾನ ಮಾದರಿಯನ್ನು ಪ್ರಸ್ತುತಪಡಿಸಿ ಜಿಲ್ಲಾ ಹಂತಕ್ಕೆ ಆಯ್ಕೆಯಾಗಿದ್ದಾರೆ ಎಂದು ಶಾಲಾ ಮುಖ್ಯ ಶಿಕ್ಷಕ ಸತೀಶ್ ಕುಮಾರ್ ರೈ ತಿಳಿಸಿದ್ದಾರೆ. ಅವರು ಶೋಭಾ ಮತ್ತು ರಾಮಚಂದ್ರ ಕೆ. ದಂಪತಿ ಪುತ್ರ.

ಶೀಘ್ರದಲ್ಲೇ ಇನ್ನೂ 4 ಬಸ್‌ಗಳು ಸೇರ್ಪಡೆ

ಮೂಡುಬಿದಿರೆ: ಕೆಎಸ್‌ಆರ್‌ಟಿಸಿ ಬಸ್‌ಗಳಿಗೆ ತಾತ್ಕಾಲಿಕ ತಂಗುದಾಣ ಕಲ್ಪಿಸುವ ನಿಟ್ಟಿನಲ್ಲಿ ಪುರಸಭೆ, ಕೆಎಸ್‌ಆರ್‌ಟಿಸಿ ವಿಭಾಗದ ಅಧಿಕಾರಿಗಳು, ಮಾಜಿ ಸಚಿವ ಕೆ. ಅಮರನಾಥ ಶೆಟ್ಟಿ ವೃತ್ತದ ಬಳಿ ಸೋಮವಾರ ಸ್ಥಳ ಪರಿಶೀಲನೆ ನಡೆಸಿದರು. ಕೆಎಸ್‌ಆರ್‌ಟಿಸಿ ಹಿರಿಯ ವಿಭಾಗೀಯ ನಿಯಂತ್ರಣಾಧಿಕಾರಿ ರಾಜೇಶ್ ಶೆಟ್ಟಿ ಮಾತನಾಡಿ, ಪ್ರಸ್ತುತ ನಾಲ್ಕು ಕೆಎಸ್‌ಆರ್‌ಟಿಸಿ ಬಸ್‌ಗಳು ಮಂಗಳೂರು–ಮೂಡುಬಿದಿರೆ– ಕಾರ್ಕಳ ಮಾರ್ಗದಲ್ಲಿ ಸಂಚರಿಸುತ್ತಿದ್ದು, ಶೀಘ್ರದಲ್ಲೇ ಇನ್ನೂ ನಾಲ್ಕು ಬಸ್‌ಗಳು ಸೇರ್ಪಡೆಯಾಗಲಿವೆ. ಇದರಿಂದ ಉಂಟಾಗುವ ತೊಂದರೆ ತಪ್ಪಿಸಲು ಪುರಸಭೆಯ ಮನವಿಯಂತೆ ತಾತ್ಕಾಲಿಕ ನಿಲುಗಡೆ ವ್ಯವಸ್ಥೆ ಮಾಡಲಾಗುವುದು ಎಂದು ತಿಳಿಸಿದರು. ಪುರಸಭೆಯ ಮುಖ್ಯಾಧಿಕಾರಿ ಇಂದು ಎಂ. ಮಾತನಾಡಿ, ಶಾಶ್ವತ ಕೆಎಸ್‌ಆರ್‌ಟಿಸಿ ಬಸ್ ತಂಗುದಾಣ ನಿರ್ಮಾಣವಾಗುವವರೆಗೆ ಖಾಸಗಿ ವಾಹನಗಳ ಪಾರ್ಕಿಂಗ್‌ಗೆ ಮೀಸಲಾದ ಅರ್ಧ ಜಾಗದಲ್ಲಿ ತಾತ್ಕಾಲಿಕವಾಗಿ ಬಸ್‌ಗಳ ನಿಲುಗಡೆಗೆ ಅವಕಾಶ ಕಲ್ಪಿಸಲಾಗುವುದು ಎಂದು ಹೇಳಿದರು. ಈ ವೇಳೆ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿಯ ತಾಲೂಕು ಅಧ್ಯಕ್ಷ ಅರುಣ್ ಕುಮಾರ್ ಶೆಟ್ಟಿ, ರೈತ ಸೇನೆಯ ಜಿಲ್ಲಾ ಅಧ್ಯಕ್ಷ ಹರಿಪ್ರಸಾದ್ ನಾಯಕ್, ಕಾರ್ಯದರ್ಶಿ ಶಿವರಾಮ್ ಜೆ. ಶೆಟ್ಟಿ, ಕೆಎಸ್‌ಆರ್‌ಟಿಸಿ ಸಹಾಯಕ ಎಂಜಿನಿಯರ್ ಹರೀಶ್, ಶಿವಾನಂದ ಪಾಂಡ್ರು ಇದ್ದರು.

ಬಪ್ಪನಾಡು ಶ್ರೀ ಗಣೇಶೋತ್ಸವ ಸಮಿತಿ ಅಧ್ಯಕ್ಷರಾಗಿ ಆಯ್ಕೆ

ಮುಲ್ಕಿ: ಬಪ್ಪನಾಡು ಸಾರ್ವಜನಿಕ ಶ್ರೀ ಗಣೇಶೋತ್ಸವ ಸಮಿತಿಯ 51ನೇ ವರ್ಷದ



ಅಧ್ಯಕ್ಷರಾಗಿ ಸುನಿಲ್ ಆಳ್ವ ಆಯ್ಕೆಯಾಗಿದ್ದಾರೆ. ಪ್ರಧಾನ ಕಾರ್ಯದರ್ಶಿಯಾಗಿ ಜಯಾನಂದ್ ರಾವ್ ಖಜಾಂಚಿಯಾಗಿ ರಾಘವೇಂದ್ರ ಭಟ್ ,ಗೌರವಾಧ್ಯಕ್ಷರಾಗಿ ಯದುನಾರಾಯಣ ಶೆಟ್ಟಿ, ಕಾರ್ಯಾಧ್ಯಕ್ಷರಾಗಿ ಚಂದ್ರಶೇಖರ್ ಸುವರ್ಣ ಆಯ್ಕೆಯಾಗಿದ್ದಾರೆ.

ಸುಳ್ಯ ಗ್ಯಾರಂಟಿ ಅನುಷ್ಠಾನ ಸಮಿತಿ ಸಭೆಯಲ್ಲಿ ಜಿಲ್ಲಾಧ್ಯಕ್ಷ ಭರತ್ ಮುಂಡೋಡಿ ತಾಕೀತು

ಅಧಿಕಾರಿಗಳು ಸಮಗ್ರ ಮಾಹಿತಿಯೊಂದಿಗೆ ಸಭೆಗೆ ಹಾಜರಾಗಿ

ಸುಳ್ಯ: ತಾಲೂಕಿನಲ್ಲಿ ಪಂಚ ಗ್ಯಾರಂಟಿಗೆ ಒಳಪಡುವ ಇಲಾಖಾ ಅಕಾರಿಗಳು ಸಭೆಗೆ ಆಗಮಿಸುವಾಗ ಹಿರಿಯ ಅಧಿಕಾರಿಗಳ ಪರವಾಗಿ ಬರುವ ಸಂದರ್ಭದಲ್ಲಿ ಸಭಾ ನಿರ್ಣಯದಲ್ಲಿ ಉಲ್ಲೇಖಿಸಲಾಗಿದ ವಿಚಾರಗಳ ಬಗ್ಗೆ ಸಂಪೂರ್ಣ ಮಾಹಿತಿ ಪಡೆದುಕೊಂಡು ಸಭೆಗೆ ಆಗಮಿಸಬೇಕು ಎಂದು ಮೆಸ್ಕಾಂ ಹಾಗೂ ಕೆಎಸ್‌ಆರ್‌ಟಿಸಿ ಅ ಕಾರಿಗಳ ಉತ್ತರಕ್ಕೆ ಜಿಲ್ಲಾ ಗ್ಯಾರಂಟಿ ಅನುಷ್ಠಾನ ಸಮಿತಿ ಅಧ್ಯಕ್ಷ ಭರತ್ ಮುಂಡೋಡಿ ಗರಂ ಆಗಿ ಪ್ರತಿಕ್ರಿಯಿಸಿದರು.



ಸುಳ್ಯ ತಾಲೂಕು ಪಂಚಾಯತ್ ಸಭಾಂಗಣದಲ್ಲಿ ನಡೆದ ಗ್ಯಾರಂಟಿ ಅನುಷ್ಠಾನ ಸಮಿತಿ ಮಾಸಿಕ ಸಭೆಯಲ್ಲಿ ಅವರು ಮಾತನಾಡಿದರು.

ಮೃತಪಟ್ಟವರ ಹಣ ಜಮೆ–ವರದಿ ಸಲ್ಲಿಸಿ

ರಾಜ್ಯದಲ್ಲಿ ಪ್ರಥಮ ಬಾರಿಗೆ ಗೃಹಲಕ್ಷ್ಮೀ ಯೋಜನೆಯ ಮೊತ್ತವು ಮೃತಪಟ್ಟವರ ಖಾತೆಗೆ ಡಿಬಿಟಿ ಮೂಲಕ ಜಮೆ ಆಗಿದ್ದು ಇದನ್ನು ಗಮನಿಸಿ ಸರಕಾರಕ್ಕೆ ವರದಿ ಸಲ್ಲಿಸಬೇಕಾಗಿದೆ. ಜತೆಗೆ, ಅಧಿಕಾರಿಗಳು ಅಂತಹ ಖಾತೆಗಳನ್ನು ಪರಿಶೀಲಿಸಿ ಚುರುಕಾಗಿ ಕ್ರಮ ಕೈಗೊಂಡು ಮೊತ್ತ ಸರಕಾರಕ್ಕೆ ಮರು ಪಾವತಿ ಆಗುವಂತೆ ಕ್ರಮ ವಹಿಸಬೇಕು ಎಂದು ಹೇಳಿದರು. ಮುಂದಿನ ಸಭೆಯಲ್ಲಿ ತಾಲೂಕಿನ ಸಂಪೂರ್ಣ ಗ್ಯಾರಂಟಿಗಳ ಅಂಕಿ ಅಂಶಗಳನ್ನು ನೀಡುವಂತೆ ಕ್ರಮ ವಹಿಸಬೇಕು ಎಂದು ಭರತ್ ಮುಂಡೋಡಿ ಅಧಿಕಾರಿಗಳಿಗೆ ಸೂಚಿಸಿದರು.

ತಾಲೂಕು ಅಧ್ಯಕ್ಷ ಶಾಹುಲ್ ಹಮೀದ್ ಕುತ್ತಮೊಟ್ಟೆ ಅಧ್ಯಕ್ಷತೆ ವಹಿಸಿದ್ದರು. ಗ್ಯಾರಂಟಿ ಅನುಷ್ಠಾನ ಸಮಿತಿ ಕಾರ್ಯದರ್ಶಿ ರಾಜಣ್ಣ ಉಪಸ್ಥಿತರಿದ್ದರು

ಸುಳ್ಯದಲ್ಲಿ ಡಬಲ್ ಎಂಟ್ರಿ

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ 3477 ಜನರಿಗೆ ರೂ.3,34,40 ಜಮೆ ಆಗಿದ್ದು ಇವುಗಳನ್ನು ಮರಳಿ ಪಡೆಯಲು ಸೂಚನೆ ನೀಡಲಾಗಿದೆ. ಜೊತೆಗೆ ಸುಳ್ಯದಲ್ಲಿ 827 ಜನರಲ್ಲಿ 151 ಜನರಿಗೆ ಕರೆ ಮಾಡಿ ಖಾತೆಗಳ ಮಾಹಿತಿಯನ್ನು ಪಡೆದಿದ್ದು ಜೊತೆಗೆ ಸುಳ್ಯದಲ್ಲಿ ಮೃತಪಟ್ಟ 772 ಮಂದಿಯ ಹೆಸರಿನಲ್ಲಿ ರೂ.23,32 ಸಾವಿರ ಜಮೆಯಾಗಿದೆ. ಜೊತೆಗೆ ಸುಳ್ಯದಲ್ಲಿ ಇಬ್ಬರು ಜೀವಂತ ಫಲಾನುಭವಿಗಳನ್ನು ಮೃತ ಎಂದು ಪ್ರಕಟಿಸಿದ್ದು ಇಂತಹ ಗಂಭೀರ ಸಮಸ್ಯೆಗಳು ಉದ್ಭವವಾಗದಂತೆ ಡೇಟಾ ಎಂಟ್ರಿ ಆಪರೇಟರ್ಸ್ ಜಾಗೃತೆ ವಹಿಸಬೇಕು ಎಂದು ಭರತ್ ಮುಂಡೋಡಿ ಸೂಚಿಸಿದರು.

ಮತ್ತೆ ಬಸ್ ಆರಂಭವಾಗಲಿ

ಜೊತೆಗೆ ಕೊರೋನಾ ಮುಂಚಿತವಾಗಿ ತೆರಳುತ್ತಿದ್ದ ಪ್ರದೇಶಗಳಿಗೆ ಈ ಹಿಂದಿನಂತೆಯೇ ನೂತನ ಬಸ್ಸುಗಳು ಬಂದಾಗ ಯಾವುದೇ ಒತ್ತಡಕ್ಕೆ ಒಳಗಾಗದೇ ಕಳುಹಿಸಿ ಕೊಡಬೇಕು ಎಂದು ಸೂಚಿಸಿದರು.

ಮರು ಅರ್ಜಿ ಸಲ್ಲಿಕೆ ಬಗ್ಗೆ ಅಧಿಕೃತ ಮಾಹಿತಿ ನೀಡಿಲ್ಲ

ಇದೀಗ ಗ್ಯಾರಂಟಿ ಯೋಜನೆಗಳ ಕುರಿತು ಜನರು ಕಚೇರಿಗೆ ಕರೆ ಮಾಡಿ ಮರು ಅರ್ಜಿ ಸಲ್ಲಿಕೆಯ ಬಗ್ಗೆ ವಿಚಾರಿಸುತ್ತಿದ್ದು, ಈ ಕುರಿತು ಇದುವರೆಗೆ ಸರಕಾರದಿಂದ ಯಾವುದೇ ಅಧಿಕೃತ ಮಾಹಿತಿ ದೊರಕಿಲ್ಲ, ಆದುದರಿಂದ ಸರಕಾರ ಈ ಕುರಿತು ಮಾಹಿತಿ ಒದಗಿಸಿದ ತಕ್ಷಣ ಅಧಿಕೃತ ಮಾಹಿತಿ ನೀಡುವುದಾಗಿ ಸಭೆಗೆ ತಿಳಿಸಲಾಯಿತು.

ಮೆಸ್ಕಾಂ, ಗ್ರಾ.ಪಂ.ಗೆ ನೊಟೀಸ್ ನೀಡಲು ಸೂಚನೆ

ಸುಳ್ಯ ನಗರದಲ್ಲಿ ಕಾಂಕ್ರೀಟ್ ರಸ್ತೆಯ ಮಧ್ಯೆ ವಿದ್ಯುತ್ ಕಂಬಗಳಿದ್ದು ನಿರ್ಲಕ್ಷ್ಯದ ಕಾಮಗಾರಿ ನಡೆಸಿರುವುದು ಯಾಕಾಗಿ? ನಿಮಗೆ ಜವಾಬ್ದಾರಿ ಇಲ್ಲವೇ ಎಂದು ಭರತ್ ಮುಂಡೋಡಿ ಪ್ರಶ್ನಿಸಿದರು. ಸಭಾ ನಿರ್ಣಯದಂತೆ ಮೆಸ್ಕಾಂ ಹಾಗೂ ಪಟ್ಟಣ ಪಂಚಾಯತ್‌ಗೆ ನೊಟೀಸ್ ನೀಡಲು ಸೂಚನೆ ನೀಡಲಾಯಿತು.

ಅನ್ನಪ್ಪಾಡಿ ಶ್ರೀ ಬಾಲ ಗಣಪತಿ ದೇಗುಲ ಗದ್ದೆಯಲ್ಲಿ ಭತ್ತದ ಬೇಸಾಯ



ಬಂಟ್ವಾಳ: ಗಣೇಶ ಚತುರ್ಥಿಯಂದು ಮನೆ ತುಂಬಿಸಲು ಭಕ್ತರಿಗೆ ತೆನೆ ವಿತರಣೆಗೆ ಅನುಕೂಲವಾಗುವ ನಿಟ್ಟಿನಲ್ಲಿ ಸಜೀಪಮೂಡ ಗ್ರಾಮದ ಅನ್ನಪ್ಪಾಡಿ ಶ್ರೀ ಬಾಲ ಗಣಪತಿ ದೇವಸ್ಥಾನದ ಗದ್ದೆಯಲ್ಲಿ ಭಾನುವಾರ ಸಾಮೂಹಿಕವಾಗಿ ಭತ್ತದ ಬೇಸಾಯ ಮಾಡಲಾಯಿತು.

ಇದರ ಪ್ರಯುಕ್ತ ಕೆಸರುಗದ್ದೆ ಕ್ರೀಡಾಕೂಟ ಆಯೋಜಿಸಲಾಗಿದ್ದು, ಸಜೀಪ ಮಾಗಣೆ ತಂತ್ರಿ ಎಂ. ಸುಬ್ರಹ್ಮಣ್ಯ ಭಟ್ ಉದ್ಘಾಟಿಸಿದರು. ದೇವಸ್ಥಾನ ಆಡಳಿತ ಸಮಿತಿ ಅಧ್ಯಕ್ಷ ಯಶವಂತ ಪೂಜಾರಿ ದೇರಾಜೆಗುತ್ತು ಅಧ್ಯಕ್ಷತೆ ವಹಿಸಿದ್ದರು. ಮಾಜಿ ಶಾಸಕ ಕೆ. ರುಕ್ಮಯ ಪೂಜಾರಿ, ಜಿ.ಪಂ. ಮಾಜಿ ಸದಸ್ಯ ಕೆ. ರವೀಂದ್ರ ಕಂಬಳಿ, ಬಿಜೆಪಿ ಮುಖಂಡರಾದ ರವೀಂದ್ರ ಶೆಟ್ಟಿ ಉಳಿದೊಟ್ಟು, ಶ್ರೀಕಾಂತ್ ಶೆಟ್ಟಿ ಸಂಕೇಶ, ನಂದಾವರ ಕ್ಷೇತ್ರದ ವ್ಯವಸ್ಥಾಪನ ಸಮಿತಿ ಅಧ್ಯಕ್ಷ ಪ್ರಭಾಕರ ಶೆಟ್ಟಿ, ಮಂಜಲ್‌ಪಾದೆ ಶ್ರೀ ವಿಷ್ಣುಮೂರ್ತಿ ದೇಗುಲ ವ್ಯವಸ್ಥಾಪನ ಸಮಿತಿ ಅಧ್ಯಕ್ಷ ಎಂ. ಕೃಷ್ಣಶ್ಯಾಮ್, ಶಂಕರ ಯಾನೆ ಕೋಚ ಪೂಜಾರಿ, ಪ್ರದೀಪ್ ಶೆಟ್ಟಿ ಬಿಜಾಂತಾಡಿಗುತ್ತು, ಪ್ರೇಮಾ ಜಿ. ಶೆಟ್ಟಿ, ಚಿನ್ನಯ ಸಾಲಿಯಾನ್, ಸುಧಾಕರ ಆಚಾರ್ಯ, ಸಂಜೀವ ಪೂಜಾರಿ ಗುರು ಮಂದಿರ, ಈಶ್ವರ ಮಂಗಳ ಶ್ರೀ ಸದಾಶಿವ ದೇವಸ್ಥಾನ ವ್ಯವಸ್ಥಾಪನ ಸಮಿತಿ ಅಧ್ಯಕ್ಷ ಗಿರೀಶ್ ಕುಮಾರ್ ಪೆರ್ವ, ಗ್ರಾ.ಪಂ. ಮಾಜಿ ಅಧ್ಯಕ್ಷರಾದ ವಿಶ್ವನಾಥ ಬೆಳ್ಚಡ, ಸಂಜೀವ ಪೂಜಾರಿ ಕುಚ್ಚಿ ಗುಡ್ಡೆ ಭಾಗವಹಿಸಿದ್ದರು.

ಸಮಾರೋಪ ಸಮಾರಂಭದಲ್ಲಿ ಆಡಳಿತ ಸಮಿತಿ ಅಧ್ಯಕ್ಷ ಯಶವಂತ ಪೂಜಾರಿ ದೇರಾಜೆಗುತ್ತು ಅಧ್ಯಕ್ಷತೆಯಲ್ಲಿ ನಡೆಯಿತು. ಸಜೀಪ ಮಾಗಣೆ ತಂತ್ರಿ ಎಂ.ಸುಬ್ರಹ್ಮಣ್ಯ ಭಟ್, ಬೋಳಿಯಾರು ಬ್ರಹ್ಮಶ್ರೀ ನಾರಾಯಣ ಗುರು ಮಂದಿರದ ಅಧ್ಯಕ್ಷ ಗಣೇಶ್ ಚೇಳೂರು, ಸ್ಥಳೀಯ ಪ್ರಮುಖರಾದ ರಮೇಶ ಅಣ್ಣಪಾಡಿ, ದೇವದಾಸ ಅನ್ನಪಾಡಿ, ಸುರೇಶ್ ಪೂಜಾರಿ, ಸುರೇಶ್ ಬಂಗೇರ, ಲಿಂಗಪ್ಪ ದೋಟ, ಪ್ರಶಾಂತ್ ಪೂಜಾರಿ, ಪ್ರಮೋದ್ ಸಾನದ ಮನೆ, ಪ್ರಶಾಂತ್ ಕುಮಾರ್ ಇದ್ದರು.

ಕಿನ್ನಿಗೋಳಿ ಪಟ್ಟಣ ಪಂಚಾಯತ್ ಪಿಎಂ ಸ್ವನಿಧಿ ಲೋಕ ಕಲ್ಯಾಣ ಮೇಳ



ಕಿನ್ನಿಗೋಳಿ: ಕಿನ್ನಿಗೋಳಿ ಪಟ್ಟಣ ಪಂಚಾಯತ್‌ನಲ್ಲಿ ಕೇಂದ್ರ ಸರ್ಕಾರದ ಮಹತ್ವಾಕಾಂಕ್ಷೆಯ ಪಿಎಂ ಸ್ವನಿಧಿ ಯೋಜನೆ 6 ವರ್ಷಗಳ ಸಂಭ್ರಮಾಚರಣೆಯ ಅಂಗವಾಗಿ ಪಿಎಂ ಸ್ವನಿಧಿ ಲೋಕ ಕಲ್ಯಾಣ ಮೇಳ ಪಟ್ಟಣ ಪಂಚಾಯತ್ ಅಧ್ಯಕ್ಷ ಗುರುರಾಜ್ ಮಲ್ಲಿಗೆಂಯಗಡಿ ಅಧ್ಯಕ್ಷತೆಯಲ್ಲಿ ನಡೆಯಿತು.

ಈ ವೇಳೆ ಮಾತನಾಡಿದ ಅವರು, ಬೀದಿ ಬದಿ ವ್ಯಾಪಾರಸ್ಥರ ಆರ್ಥಿಕ ಸಬಲೀಕರಣಕ್ಕಾಗಿ ಕೇಂದ್ರ ಸರ್ಕಾರ ಜಾರಿಗೊಳಿಸಿರುವ ಪಿಎಂ ಸ್ವನಿಧಿ ಯೋಜನೆಯನ್ನು ಯೋಜನೆಯನ್ನು 2030ರವರೆಗೆ ವಿಸ್ತರಿಸಿರುವುದರಿಂದ ಬೀದಿ ಬದಿ ಮತ್ತು ಸಣ್ಣ ವ್ಯಾಪಾರಿಗಳು ಇದರ ಸದುಪಯೋಗ ಪಡೆದುಕೊಳ್ಳುವಂತೆ ಕರೆ ನೀಡಿದರು.

ನಗರ ಅಭಿಯಾನ ವ್ಯವಸ್ಥಾಪಕ ಅಚ್ಯುತ ನಾಯ್ಕ್ ಮೂಡುಬಗೆ ಮಾತನಾಡಿ, ಪಿ.ಎಂ ಸ್ವನಿಧಿ ಯೋಜನೆಯ ಉದ್ದೇಶ, ಅನುಷ್ಠಾನ, ಡಿಜಿಟಲ್ ವಹಿವಾಟಿನ ಪ್ರೋತ್ಸಾಹ ಹಾಗೂ ಅರ್ಜಿ ಸಲ್ಲಿಕೆ ಪ್ರಕ್ರಿಯೆ ಕುರಿತು ಸಮಗ್ರ ಮಾಹಿತಿ ನೀಡಿದರು.

ನಗರ ಅಭಿಯಾನ ವ್ಯವಸ್ಥಾಪಕ ಐರಿನ್ ರೆಬೆಲ್ಲೋ ಸ್ವನಿಧಿ ಸಮೃದ್ಧಿ ಕಾರ್ಯಕ್ರಮದಡಿ ಬೀದಿ ಬದಿ ವ್ಯಾಪಾರಸ್ಥರ ಸಾಮಾಜಿಕ ಮತ್ತು ಆರ್ಥಿಕ ಸಮೀಕ್ಷೆ ನಡೆಸಿ, ಸಮೀಕ್ಷೆಯಲ್ಲಿ ಗುರುತಿಸಲಾದ ಕುಟುಂಬದ ಸದಸ್ಯರಿಗೆ 8 ಸಾಮಾಜಿಕ ಭದ್ರತಾ ಯೋಜನೆಗಳ ಸೌಲಭ್ಯ, ಮಹಿಳಾ ಸ್ವಸಹಾಯ ಸಂಘಗಳ ರಚನೆ, ಸ್ವಯಂ ಉದ್ಯೋಗ ಮತ್ತು ಆರ್ಥಿಕ ಅಭಿವೃದ್ಧಿಗೆ ದೊರೆಯುವ ಅವಕಾಶಗಳ ಬಗ್ಗೆ ಮಾಹಿತಿ ನೀಡಿದರು.

ಉಪಾಧ್ಯಕ್ಷೆ ಪದ್ಮಲತಾ ರಾವ್, ಸದಸ್ಯರಾದ ಲೋಕಯ್ಯ ಸಾಲ್ಯಾನ್, ಶೈಲೇಶ್, ಅಂಚನ್, ಮತ್ತು ಪ್ರಣೇಕ್, ಸಿಬ್ಬಂದಿ ಪುಷ್ಪಾ, ಕಮಲಾ ಇದ್ದರು.

ವಿವೇಕಾನಂದ ಪಿಯು ಕಾಲೇಜು ವಿಪತ್ತು ನಿರ್ವಹಣೆಯ ಜಾಗೃತಿ



ಪುತ್ತೂರು: ನಗರದ ವಿವೇಕಾನಂದ ಪದವಿ ಪೂರ್ವ ಕಾಲೇಜಿನ ಆವರಣದಲ್ಲಿರುವ ಕೇಶವ ಸಂಕಲ್ಪ ಸಭಾಂಗಣದಲ್ಲಿ ಬೆಂಗಳೂರಿನ 10ಬಿಎನ್ ನ್ಯಾಶನಲ್ ಡಿಸಾಸ್ಟರ್ ರೆಸ್ಪಾನ್ಸ್ ಫೋರ್ಸ್(ಎನ್‌ಡಿಆರ್ ಎಫ್) ವತಿಯಿಂದ ವಿದ್ಯಾರ್ಥಿಗಳಲ್ಲಿ ಸುರಕ್ಷತೆ, ತುರ್ತು ಪರಿಸ್ಥಿತಿಯಲ್ಲಿ ಜವಾಬ್ದಾರಿಯುತ ನಡೆ ಹಾಗೂ ವಿಪತ್ತು ನಿರ್ವಹಣೆಯ ಅರಿವು ಮೂಡಿಸುವ ಉದ್ದೇಶದಿಂದ 'ಸುರಕ್ಷತೆ ಹಾಗೂ ವಿಪತ್ತು ನಿರ್ವಹಣಾ' ಜಾಗೃತಿ ಕಾರ್ಯಾಗಾರ ಹಮ್ಮಿಕೊಳ್ಳಲಾಯಿತು.

ಕಾರ್ಯಾಗಾರದಲ್ಲಿ ಉಪಸ್ಥಿತರಿದ್ದ ದ.ಕ. ಜಿಲ್ಲೆಯ ವಿಪತ್ತು ನಿರ್ವಹಣಾ ಉಸ್ತುವಾರಿ ಅಧಿಕಾರಿಗಳಾದ ಶಾಂತಿಲಾಲ್ ಜಟಿಯ, ಎನ್‌ಡಿಆರ್ ಎಫ್ ತಂಡದ ಕಾರ್ಯ ಚಟುವಟಿಕೆ, ದೇಶ ಸೇವೆ ಹಾಗೂ ಜೀವ ರಕ್ಷಣೆಯಲ್ಲಿ ಅವರ ಕೊಡುಗೆಗಳು, ವಿಪತ್ತುಗಳ ವಿಧ, ಅವುಗಳ ಪರಿಣಾಮ ಹಾಗೂ ಮುನ್ನೆಚ್ಚರಿಕಾ ಕ್ರಮಗಳ ಮಾಹಿತಿ ವಿದ್ಯಾರ್ಥಿಗಳಿಗೆ ನೀಡಿದರು.

ಎನ್‌ಡಿಆರ್‌ಎಫ್‌ನ ಸಹಾಯಕ ಸಬ್ ಇನ್‌ಸ್ಪೆಕ್ಟರ್ ಸುಭಾಷ್ ಶಿಂಧೆ ನೇತೃತ್ವದಲ್ಲಿ ವಿಪತ್ತು ನಿರ್ವಹಣೆ ಹಾಗೂ ರಕ್ಷಣಾ ಕಾರ್ಯಾಚರಣೆಗೆ ಸಂಬಂಧಿಸಿದ ಅಣಕು ಪ್ರದರ್ಶನ ನಡೆಸಲಾಯಿತು. ಗಾಯಾಳುಗಳಿಗೆ ಪ್ರಥಮ ಚಿಕಿತ್ಸೆ ಸುರಕ್ಷಿತ ಸ್ಥಳಾಂತರ ಕ್ರಮ, ಕಟ್ಟಡ ಕುಸಿತ, ಇತರ ತುರ್ತು ಸಂದರ್ಭ ಹೇಗೆ ಪ್ರತಿಕ್ರಿಯಿಸಬೇಕು ಎಂಬುದನ್ನು ಪ್ರಾಯೋಗಿಕವಾಗಿ ಪ್ರದರ್ಶಿಸಲಾಯಿತು. ತುರ್ತು ಸಹಾಯವಾಣಿ ಸೇವೆಗಳ ಬಳಕೆ ಕುರಿತು ತಿಳಿಸಲಾಯಿತು. ಎನ್ ಡಿಆರ್‌ಎಫ್ ತಂಡದ ರಕ್ಷಕರಾದ ಸೆಲ್ವಕುಮಾರ್, ಬಾಲಕೃಷ್ಣ ಹಾಗೂ ವಿ. ಶ್ರೀನಿವಾಸಲು ಅಣಕು ಪ್ರದರ್ಶನದಲ್ಲಿ ಸಹಕರಿಸಿದರು. ಶೈಕ್ಷಣಿಕ ಸಂಯೋಜಕ ಶ್ರೀವತ್ಸ ಎನ್. ಇದ್ದರು. ಉಪನ್ಯಾಸಕಿ ಮಮತಾ ಶೆಟ್ಟಿ ನಿರ್ವಹಿಸಿದರು.

ಪಟ್ಟೆ ಶ್ರೀಕೃಷ್ಣ ವಿದ್ಯಾ ಸಂಸ್ಥೆಯಲ್ಲಿ ಶೈಕ್ಷಣಿಕ ಮೌಲ್ಯ ಸಂವರ್ಧನ ಕಾರ್ಯಾಗಾರ



ಬಡಗನ್ನೂರು: ಪಟ್ಟೆ ಶ್ರೀಕೃಷ್ಣ ವಿದ್ಯಾ ಸಂಸ್ಥೆಯಲ್ಲಿ ಶೈಕ್ಷಣಿಕ ಮೌಲ್ಯ ಸಂವರ್ಧನ ಕಾರ್ಯಾಗಾರ ನಡೆಯಿತು.

ಪಟ್ಟೆ ವಿದ್ಯಾ ಸಂಸ್ಥೆಗಳ ಅಧ್ಯಕ್ಷ ಗೋಪಾಲಕೃಷ್ಣ ಭಟ್ ದೀಪ ಬೆಳಗಿಸುವ ಮೂಲಕ ಕಾರ್ಯಕ್ರಮವನ್ನು ಉದ್ಘಾಟಿಸಿ, ಜ್ಞಾನದ ವಿಷಯಗಳು ವ್ಯಕ್ತಿಯಿಂದ ವ್ಯಕ್ತಿಗೆ ಹಂಚುವುದರಿಂದ ವಿದ್ಯಾರ್ಥಿಗಳ ಜ್ಞಾನ ಅರಳುತ್ತದೆ. ಶಿಕ್ಷಕರಾದವರು ಸಂಸ್ಕಾರ ಶಿಸ್ತನ್ನು ಮೈಗೂಡಿಸಿಕೊಂಡು ಸಂಸ್ಕೃತ ಸಮಾಜ ನಿರ್ಮಾಣ ಮಾಡಬೇಕೆಂದು ಹೇಳಿದರು.

ಈ ಸಂದರ್ಭ ಮಾತನಾಡಿದ ಶ್ರೀಕೃಷ್ಣ ವಿದ್ಯಾ ಸಂಸ್ಥೆಗಳ ಸದಸ್ಯ ಗಣರಾಜ ಕುಂಬ್ಳೆ, ನಮ್ಮ ಶಿಕ್ಷಣದಲ್ಲಿ ಶೈಕ್ಷಣಿಕ ಮೌಲ್ಯ ಹೆಚ್ಚಾಗಬೇಕು. ಮಾನವ ಸಂಪನ್ಮೂಲ ಸಮರ್ಪಕ ಬಳಕೆಯಾದರೆ ಎಲ್ಲಾ ಸಂಪನ್ಮೂಲಗಳು ಸರಿಯಾದಂತೆ, ಕಲಿಕೆ ಎಂಬುದು ನಿರಂತರ ಅದು ನಿಂತ ನೀರಾಗಬಾರದು ಎಂದು ಹೇಳಿದರು.

ಸಂಪನ್ಮೂಲ ವ್ಯಕ್ತಿಗಳಾಗಿದ್ದ ಸುಳ್ಯ ಪ್ರತಿಭಾ ವಿದ್ಯಾಲಯ ಪ್ರಾಂಶುಪಾಲ ವೆಂಕಟರಾಮ ಭಟ್ ಸುಳ್ಯ, ಬೆಳಲು ಪ್ರೌಢ ಶಾಲಾ ನಿವೃತ್ತ ಮುಖ್ಯ ಗುರು ರಾಮಕೃಷ್ಣ ಭಟ್ಟ ಚೂಂತಾರು, ಸುಳ್ಯ ಸರಕಾರಿ ಪ್ರೌಢ ಶಾಲೆಯ ಮುಖ್ಯ ಗುರು ಪ್ರಕಾಶ್ ಮೂಡಿತ್ತಾಯ ವಿಷಯ ಸಂಪನ್ಮೂಲಕರಾಗಿ ಶಿಕ್ಷಕರಿಗೆ ತರಬೇತಿಯನ್ನು ನೀಡಿದರು.

ಪ್ರೌಢ ಶಾಲಾ ಮುಖ್ಯ ಗುರು ಸುಮನ ಸ್ವಾಗತಿಸಿ, ಶಿಕ್ಷಕಿ ಭಾರತಿ ವಂದಿಸಿದರು. ಸಹ ಶಿಕ್ಷಕಿ ಭವಿತಾ ಕಾರ್ಯಕ್ರಮ ನಿರ್ವಹಿಸಿದರು.

ವಿದ್ಯಾಮಾತಾದಲ್ಲಿ ಪೊಲೀಸ್ ಕಾನ್‌ಸ್ಟೇಬಲ್ ನೇಮಕಾತಿ ತರಬೇತಿ



ಪುತ್ತೂರು: ಸ್ಪರ್ಧಾತ್ಮಕ ಪರೀಕ್ಷೆಗಳ ಪ್ರತಿಷ್ಠಿತ ತರಬೇತಿ ಸಂಸ್ಥೆಯಾಗಿರುವ ವಿದ್ಯಾಮಾತಾ ಅಕಾಡೆಮಿಯಲ್ಲಿ ಪೊಲೀಸ್ ಕಾನ್‌ಸ್ಟೆಬಲ್ ನೇಮಕಾತಿಗಳಿಗೆ ತರಬೇತಿ ಪ್ರಾರಂಭವಾಗಿದೆ.

ತರಬೇತಿಯನ್ನು ಪುತ್ತೂರು ಉಪವಿಭಾಗ ಡಿವೈಎಸ್‌ಪಿ ಪ್ರಮೋದ್ ಕುಮಾರ್ ಬಿ. ಉದ್ಘಾಟಿಸಿ, ಕರಾವಳಿ ಭಾಗದಲ್ಲಿ ಸರಕಾರಿ ಹುದ್ದೆಗಳಿಗೆ ಪ್ರಯತ್ನಪಡುವವರ ಸಂಖ್ಯೆ ಕಡಿಮೆ ಇದ್ದು, ವಿದ್ಯಾಮಾತಾ ಅಕಾಡೆಮಿ ಇಂತಹ ಸಂದರ್ಭದಲ್ಲಿ ಜಾಗೃತಿಯನ್ನು ಮೂಡಿಸಿಕೊಂಡು ತರಬೇತಿ ನೀಡುವುದರ ಮೂಲಕ ಸರ್ಕಾರಿ ಹುದ್ದೆಗಳಿಗೆ ಕರಾವಳಿ ಭಾಗದಿಂದ ಕೂಡ ಹೋಗಬಹುದು ಎಂದು ನಿರೂಪಿಸಿದ್ದಾರೆ. ಪೊಲೀಸ್ ಇಲಾಖೆಯು ಕೂಡ ಸ್ಥಳೀಯ ಅಭ್ಯರ್ಥಿಗಳೇ ಆಯ್ಕೆಯಾಗಬೇಕು ಎಂದು ಪ್ರಯತ್ನ ಪಡುತ್ತಿದೆ. ಸರಕಾರ ಸುಮಾರು 70 ಸಾವಿರ ಹುದ್ದೆಗಳಿಗೆ ನೇಮಕಾತಿ ಪ್ರಕ್ರಿಯೆ ಪ್ರಾರಂಭಿಸಿದ್ದು, ನೇಮಕಾತಿಗಳ ಹಬ್ಬವೇ ನಡೆಯಲಿದೆ. ಈ ನಿಟ್ಟಿನಲ್ಲಿ ವಿದ್ಯಾರ್ಥಿಗಳು ಎಚ್ಚೆತ್ತುಕೊಳ್ಳಬೇಕಿದೆ ಎಂದರು.

ಐಎಎಸ್, ಕೆಎಎಸ್ ಪರೀಕ್ಷೆಗಳ ತರಬೇತು ದಾರ ಚಿಕ್ಕಬಳ್ಳಾಪುರ ಜಿಲ್ಲೆಯಿಂದ ಆಗಮಿಸಿದ ವಿದ್ಯಾಮಾತಾದ ಗೌರವ ತರಬೇತು ದಾರ ರಘುನಾಥ್, ನಾನು ರಾಜ್ಯದಾದ್ಯಂತ ಹತ್ತು ಹಲವಾರು ತರಬೇತಿ ಸಂಸ್ಥೆಗಳಲ್ಲಿ ಕೆಲಸ ಮಾಡಿದ್ದು, ವಿದ್ಯಾಮಾತಾ ಅಕಾಡೆಮಿಯಲ್ಲಿ ಎಲ್ಲಿಯೂ ಇಲ್ಲದ ಶಿಸ್ತು, ಡಿಜಿಟಲ್ ತರಬೇತಿ ವ್ಯವಸ್ಥೆ, ಗ್ರಂಥಾಲಯ ಇದೆ. ಇದನ್ನು ಈ ಭಾಗದ ಯುವ ಸಮುದಾಯ ಉಪಯೋಗಿಸಿಕೊಳ್ಳಬೇಕು ಎಂದರು.

ವಿದ್ಯಾಮಾತಾ ಅಕಾಡೆಮಿ ಹಿತೈಷಿ ಮನೋಹರ್ ರೈ, ನಿರ್ದೇಶಕಿ ರಮ್ಯಾ ಭಾಗ್ಯೇಶ್ ರೈ ಇದ್ದರು. ಆಡಳಿತ ನಿರ್ದೇಶಕ ಭಾಗ್ಯೇಶ್ ರೈ ಪ್ರಸ್ತಾವಿಸಿ ಸ್ವಾಗತಿಸಿದರು.

ಹಿಮಾಲಯ ಬೇಬಿಕೇರ್: 50 ಸಾವಿರ ದಾದಿಯರನ್ನು ಗೌರವಿಸುವ ಯೋಜನೆ



ಮಂಗಳೂರು: ಭಾರತದ ಅತ್ಯಂತ ವಿಶ್ವಾಸಾರ್ಹ ಶಿಶು ರಕ್ಷಣಾ ಉತ್ಪನ್ನ ಬ್ರ್ಯಾಂಡ್‌ಗಳಲ್ಲಿ ಒಂದಾದ ಹಿಮಾಲಯ ಬೇಬಿಕೇರ್ ದಾದಿಯರನ್ನು ಗೌರವಿಸುವ ನಿಟ್ಟಿನಲ್ಲಿ ದೇಶಾದ್ಯಂತ ಬೃಹತ್ ಅಭಿಯಾನ ಹಮ್ಮಿಕೊಂಡಿದೆ. ಸಂಸ್ಥೆಯು ಈ ಅಭಿಯಾನದ ಭಾಗವಾಗಿ ಭಾರತದ ಆರೋಗ್ಯ ವಲಯಕ್ಕೆ ನಿರಂತರ ಸೇವೆ ಸಲ್ಲಿಸುತ್ತಿರುವ ಸುಮಾರು 50,000 ದಾದಿಯರನ್ನು ಗುರುತಿಸಿ, ಗೌರವಿಸುವ ಯೋಜನೆ ಹಾಕಿಕೊಂಡಿದ್ದು, ಇತ್ತೀಚೆಗೆ ನಡೆದ ಕಾರ್ಯಕ್ರಮದಲ್ಲಿ 15 ಮಂದಿಯನ್ನು ಗೌರವಿಸಲಾಯಿತು.

ರಾಷ್ಟ್ರಪತಿ ದ್ರೌಪದಿ ಮುರ್ಮು ಅವರಿಂದ ಪ್ರದಾನ ಮಾಡಲಾದ ರಾಷ್ಟ್ರೀಯ ಫ್ಲಾರೆನ್ಸ್ ನೈಟಿಂಗೇಲ್ ಪ್ರಶಸ್ತಿ 2026 ಸಮಾರಂಭದಲ್ಲಿ ಭಾಗವಹಿಸಲು ಟ್ರೇನ್ಡ್ ನರ್ಸಸ್ ಅಸೋಸಿಯೇಷನ್ ಆಫ್ ಇಂಡಿಯಾ ಆಮಂತ್ರಣದ ಮೇರೆಗೆ ಹಿಮಾಲಯ ಬೇಬಿಕೇರ್ ಸಂಸ್ಥೆ ಪಾಲ್ಗೊಂಡಿತ್ತು. ಈ ಸಂದರ್ಭದಲ್ಲಿ, ಶುಶ್ರೂಷಾ ರಂಗದಲ್ಲಿ ಅತ್ಯುತ್ತಮ ಸೇವೆ ಸಲ್ಲಿಸಿದ ಹಾಗೂ ಭಾರತದ ಆರೋಗ್ಯ ಕ್ಷೇತ್ರಕ್ಕೆ ಅಮೂಲ್ಯ ಕೊಡುಗೆ ನೀಡಿದ 15 ಸಾಧಕ ದಾದಿಯರನ್ನು ಸಂಸ್ಥೆಯು ಪ್ರತ್ಯೇಕವಾಗಿ ಗೌರವಿಸಿ ಸನ್ಮಾನಿಸಿತು. ಕಾರ್ಯಕ್ರಮದಲ್ಲಿ ಸಂಸ್ಥೆಯ ನಿರ್ದೇಶಕ ಚಕ್ರವರ್ತಿ ಎನ್.ವಿ ಮತ್ತಿತರರು ಉಪಸ್ಥಿತರಿದ್ದರು.

ಸುಳ್ಯ ಪೊಲೀಸ್ ಇಲಾಖೆಯಿಂದ ಕೇರ್ಪಳ ದೇಗುಲದಲ್ಲಿ ಸಾರ್ವಜನಿಕ ಜನಸಂಪರ್ಕ ಸಭೆ

ಗಡಿ ಪ್ರದೇಶದಲ್ಲಿ ಮಾದಕ ವಸ್ತು ಹಾವಳಿ, ಕ್ರಮಕ್ಕೆ ಆಗ್ರಹ

ಸುಳ್ಯ: ಕೇರ್ಪಳ ಶ್ರೀ ದುರ್ಗಾಪರಮೇಶ್ವರಿ ಸಭಾಭವನದಲ್ಲಿ ನಡೆದ ಪೊಲೀಸ್ ಇಲಾಖೆಯ ಸಾರ್ವಜನಿಕ ಜನಸಂಪರ್ಕ ಸಭೆಯಲ್ಲಿ ಚರ್ಚೆಗೆ ಗ್ರಾಸವಾಯಿತು.



ದ.ಕ. ಜಿಲ್ಲಾ ಹೆಚ್ಚುವರಿ ಪೊಲೀಸ್ ಅಧೀಕ್ಷಕ ಅನಿಲ್ ಕುಮಾರ್ ಭೂಮರೆಡ್ಡಿ ಅಧ್ಯಕ್ಷತೆಯಲ್ಲಿ ನಡೆದ ಸಾರ್ವಜನಿ ಸಾರ್ವಜನಿಕ ಜನ ಸಂಪರ್ಕ ಸಭೆಯಲ್ಲಿ ತಾಲೂಕಿನ ವಿವಿಧ ಸಮಸ್ಯೆಗಳು ಹಾಗೂ ಸಾರ್ವಜನಿಕರ ಪ್ರಶ್ನೆಗಳಿಗೆ ಅನಿಲ್ ಕುಮಾರ್ ಭೂಮರೆಡ್ಡಿ ಉತ್ತರಿಸಿ ಸೂಕ್ತ ಕ್ರಮದ ಭರವಸೆ ನೀಡಿದರು. ಗಡಿಭಾಗದಲ್ಲಿ ಮತ್ತು ನಗರದಲ್ಲಿ ಮಾದಕ ವಸ್ತುಗಳ ಹಾವಳಿ ಇರುವ ಬಗ್ಗೆ ಇಲಾಖೆಯ ಗಮನಕ್ಕೆ ತಂದ ಸಾರ್ವಜನಿಕರು ಕಠಿಣ ಕ್ರಮಕ್ಕೆ ಒತ್ತಾಯಿಸಿದರು. ನಗರದ ಫುಟ್ ಪಾತ್ ಅತಿಕ್ರಮಣ, ಅವಧಿ ಮೀರಿದ ಬ್ಯಾನರ್‌ಗಳ ತೆರವು, ಆಲೆಟ್ಟಿ–ಬಡ್ಡಡ್ಕ ರಸ್ತೆಯಲ್ಲಿ ಭಾರೀ ವಾಹನಗಳ ಸಂಚಾರಗಳನ್ನು ನಿಯಂತ್ರಿಸಬೇಕು, ಸಂಚಾರಿ ಪೊಲೀಸ್ ಠಾಣೆ ಸ್ಥಾಪನೆ ಹಾಗೂ ಗಡಿ ದಾಟುವ ಆಟೋರಿಕ್ಷಾಗಳಿಗೆ ದಂಡ ವಿಧಿಸುವ ಕ್ರಮದ ಬಗ್ಗೆಯೂ ಸಾರ್ವಜನಿಕರು ಸಭೆಯ ಗಮನಕ್ಕೆ ತಂದರು. ಎಲ್ಲಾ ವಿಷಯಗಳನ್ನು ಪರಿಶೀಲಿಸಿ ಪೊಲೀಸ್ ಇಲಾಖೆ ಸೂಕ್ತ ಕ್ರಮ ಕೈಗೊಳ್ಳುವುದಾಗಿ ಹೆಚ್ಚುವರಿ ಪೊಲೀಸ್ ಅಧೀಕ್ಷಕರು ಸಭೆಗೆ ತಿಳಿಸಿದರು. ಯಾವುದೇ ದೂರು ದಾಖಲಾದ ತಕ್ಷಣ ಏಕಪಕ್ಷೀಯ ಕ್ರಮಕ್ಕೆ ಅವಕಾಶವಿಲ್ಲ, ಎಲ್ಲರಿಗೂ ಕಾನೂನಿನಲ್ಲಿ ಸಮಾನ ಅವಕಾಶವಿದ್ದು ಸಮಗ್ರ ಪರಿಶೀಲನೆ ನಡೆಸಿದ ಬಳಿಕ ಕ್ರಮ ಜರುಗಿಸಲಾಗುತ್ತದೆ ಎಂದು ಅವರು ತಿಳಿಸಿದರು.

ಸಭೆಯಲ್ಲಿ ನಿವೃತ್ತ ಪ್ರಾಂಶುಪಾಲ ದಾಮೋದರ ಗೌಡ, ಸುರೇಶ್ ಕಣೆಮರಡ್ಕ, ಪದ್ಮಯ್ಯ ಗೌಡ, ರಾಜೇಶ್, ನಾರಾಯಣ ಎಸ್.ಎಂ. ಶಾಂತಿನಗರ, ಕೌಶಲ್, ವಿನೋದ್, ಮಾಧವ ಗೌಡ, ಸುದರ್ಶನ ಪಾತಿಕಲ್ಲು, ಚಿದಾನಂದ, ರಾಧಾಕೃಷ್ಣ ಬೈತ್ತಡ್ಕ, ರಶೀದ್ ಜಟ್ಟಿಪಳ್ಳ, ರಾಧಾಕೃಷ್ಣ ಪರಿವಾರಕಾನ, ಡಿ.ಎಂ. ಶಾರೀಕ್, ಸರಸ್ವತಿ ಬೊಳಿಯಮಜಲು ಮತ್ತಿತರರ ಮಾತನಾಡಿದರು.

ಸುಳ್ಯ ವೃತ್ತ ನಿರೀಕ್ಷಕ ತಿಮ್ಮಪ್ಪ ನಾಯ್ಕ್, ಠಾಣಾಧಿಕಾರಿ ಸಂತೋಷ್ ಕುಮಾರ್ ಬಿ.ಪಿ., ಪ್ರೊಬೆಷನರಿ ಎಸ್‌ಐ ಬಿ.ಜಿ. ಕೃಷ್ಣ ಇದ್ದರು.

ನಿಟ್ಟೆ ಉಷಾ ನರ್ಸಿಂಗ್ ವಿಜ್ಞಾನ ಸಂಸ್ಥೆ ವಿದ್ಯಾರ್ಥಿಗಳ ಭೇಟಿ

ಚೆಶೈರ್ ಹೋಮ್‌ನಲ್ಲಿ ವಿಸ್ತರಣಾ ಚಟುವಟಿಕೆ



ಉಳ್ಳಾಲ: ನಿಟ್ಟೆ ಉಷಾ ನರ್ಸಿಂಗ್ ವಿಜ್ಞಾನ ಸಂಸ್ಥೆಯ ವೈದ್ಯಕೀಯ–ಶಸ್ತ್ರಚಿಕಿತ್ಸಾ ನರ್ಸಿಂಗ್ ವಿಭಾಗದ ಕ್ರೈಟೀರಿಯಾ–7 ಸಹಯೋಗದಲ್ಲಿ ಸೋಮವಾರ ಮಂಗಳೂರಿನ ಕಂಕನಾಡಿಯ ಚೆಶೈರ್ ಹೋಮ್‌ನಲ್ಲಿ 'ಸಾಮರ್ಥ್ಯಕ್ಕೆ ಅಡ್ಡಿಯಿಲ್ಲ; ಆರೋಗ್ಯ, ಒಳಗೊಳ್ಳುವಿಕೆ ಮತ್ತು ಯೋಗಕ್ಷೇಮದ ಉತ್ತೇಜನ' ಎಂಬ ವಿಷಯದಡಿ ವಿಸ್ತರಣಾ ಚಟುವಟಿಕೆ ನಡೆಯಿತು.

ವೀರೇಶ್ ಕಡೇಮನಿ, ಹರೀಶ್ ದೇಯನ್ನವರ ಮಾರ್ಗದರ್ಶನದಲ್ಲಿ ನಡೆದ ಕಾರ್ಯಕ್ರಮದಲ್ಲಿ 14 ನಿವಾಸಿಗಳು, 15 ವಿದ್ಯಾರ್ಥಿಗಳು ಮತ್ತು 2 ಅಧ್ಯಾಪಕರು ಭಾಗವಹಿಸಿದರು. ಕಾರ್ಯಕ್ರಮವು ನಿವಾಸಿಗಳಲ್ಲಿ ಸಂತೋಷ, ಆತ್ಮವಿಶ್ವಾಸ ಮತ್ತು ಸಾಮಾಜಿಕ ಒಳಗೊಳ್ಳುವಿಕೆಯನ್ನು ಉತ್ತೇಜಿಸಿತು.

ಸುತ್ತ ಮುತ್ತ

ರೋಟರಿಯಿಂದ ರೂ.3.5 ಲಕ್ಷ ವೆಚ್ಚದ ಯೋಜನೆ ಹಸ್ತಾಂತರ

ಸುಬ್ರಹ್ಮಣ್ಯ: ಸುಳ್ಯ ತಾಲೂಕು ಬೆಳ್ಳಾರೆ ನಿವಾಸಿ ವಿಜಯ್ ಎಂಬವರು ಬೆನ್ನು ಮೂಳೆ ಮುರಿತಕ್ಕೊಳಗಾಗಿ ಸಂಕಷ್ಟದಲ್ಲಿದ್ದು, ಅವರಿಗೆ ತ್ರಿವಳಿ ರೋಟರಿ ಕ್ಲಬ್‌ಗಳ ವತಿಯಿಂದ ಬಿಳಿನೆಲೆ ಕೈಕಂಬದ ನರ್ಸರಿ ಬಳಿ ನಾಟಿಕೋಳಿ ಫಾರಂ ಕಟ್ಟಡ ನಿರ್ಮಿಸಿಕೊಡಲಾಗಿದೆ. ರೋಟರಿಯ ಮಾನವೀಯ ಮಾದರಿ ಯೋಜನೆಯನ್ನು ಗುರುವಾರ ಹಸ್ತಾಂತರಿಸಲಾಯಿತು.

ರೂ.3.5 ಲಕ್ಷದ ಯೋಜನೆ

ರೋಟರಿ ಕ್ಲಬ್ ಮಡಿಕೇರಿ ಮಿಸ್ಟಿ ಹಿಲ್ಸ್, ರೋಟರಿ ಕ್ಲಬ್ ಬೆಳ್ಳಾರೆ, ಹಾಗೂ ರೋಟರಿ ಕ್ಲಬ್ ಸುಬ್ರಹ್ಮಣ್ಯ, ಸ್ವಾಮಿ ವಿವೇಕಾನಂದ ಯೂತ್ ಮೂಮೆಂಟ್ ಇವುಗಳ ಜಂಟಿ ಆಶ್ರಯದಲ್ಲಿ ಸುಮಾರು ರೂ.3.5 ಲಕ್ಷಕ್ಕೂ ಅಧಿಕ ವೆಚ್ಚದಲ್ಲಿ ಕೋಳಿ ಫಾರಂ ಕಟ್ಟಡವನ್ನು ನಿರ್ಮಿಸಿ ಕೋಳಿ ಸಾಕಣೆಗೆ ಅನುಕೂಲ ಮಾಡಿ ಕೊಡಲಾಗಿದೆ. ಸಂಕಷ್ಟದಲ್ಲಿದ್ದ ವಿಜಯ್ ಅವರ ಕೋರಿಕೆ ಮೇರೆಗೆ ಮೂರು ರೋಟರಿ ಕ್ಲಬ್ ಗಳು ಹಾಗೂ ಸ್ವಾಮಿ ವಿವೇಕಾನಂದ ಯೂತ್ ಮೂಮೆಂಟ್ ಸಹಕಾರ ನೀಡಿತು. ರೋಟರಿ ಕ್ಲಬ್ ಮಡಿಕೇರಿ ಮಿಸ್ಟರಿ ಹಿಲ್ಸ್‌ನ ಅಧ್ಯಕ್ಷ ರತ್ನಾಕರ ರೈ, ನಿಯೋಜಿತ ಅಧ್ಯಕ್ಷ ರಾಜೇಶ್, ಸ್ವಾಮಿ ವಿವೇಕಾನಂದ ಯೂತ್ ಮೂಮೆಂಟ್ ಕಾರ್ಯದರ್ಶಿ ಡಾ.ಪ್ರಶಾಂತ್.ಸಿ.ಆರ್, ಕಾರ್ಯಕ್ರಮ ವ್ಯವಸ್ಥಾಪಕ ಅಂಕಾಚಾರಿ, ಸುಬ್ರಹ್ಮಣ್ಯ ರೋಟರಿ ಕ್ಲಬ್ ಅಧ್ಯಕ್ಷ ಜಯಪ್ರಕಾಶ್ ಆರ್., ನಿಯೋಜಿತ ಅಧ್ಯಕ್ಷ ರೋಹಿತ್ ಬಿ.ಬಿ., ವಲಯ ಸೇನಾನಿ ಚಂದ್ರಶೇಖರ ನಾಯರ್, ಬೆಳ್ಳಾರೆ ರೋಟರಿ ಕ್ಲಬ್ ನಿಯೋಜಿತ ಅಧ್ಯಕ್ಷ ಆರಿಫ್ ಬಿ.ಎಂ. ಮತ್ತಿತರರು ಇದ್ದರು. ಯತೀಶ್ ಸ್ವಾಗತಿಸಿ, ವಂದಿಸಿದರು.

ಮಾದಕ ವಸ್ತು ವಿರೋಧಿ ದಿನ

ಸವಣೂರು: ಸವಣೂರು ಪ.ಪೂ. ಕಾಲೇಜಿನಲ್ಲಿ ಶನಿವಾರ ವಿವಿಧ ಸಂಘಟನೆಗಳ ಸಹಕಾರದೊಂದಿಗೆ ನಡೆದ ಅಂತರಾಷ್ಟ್ರೀಯ ಮಾದಕ ವಸ್ತು ವಿರೋಧಿ ದಿನಾಚರಣೆ ಕಾರ್ಯಕ್ರಮ ನಡೆಯಿತು. ಪುತ್ತೂರು 5ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯದ ನ್ಯಾಯಾಧೀಶರು ಮತ್ತು ಪುತ್ತೂರು ತಾಲೂಕು ಕಾನೂನು ಸೇವೆಗಳ ಸಮಿತಿಯ ಅಧ್ಯಕ್ಷ ನ್ಯಾಯಾಧೀಶ ಸದಾನಂದ ನಾಗಪ್ಪ ನಾಯ್ಕ ಅವರು ಕಾರ್ಯಕ್ರಮ ಉದ್ಘಾಟಿಸಿ, ಮಾತನಾಡಿದರು. ಪುತ್ತೂರು ವಕೀಲರ ಸಂಘದ ಅಧ್ಯಕ್ಷ ಜಿ. ಜಗನ್ನಾಥ ರೈ ಭಾಗವಹಿಸಿ, ಮಾತನಾಡಿದರು. ಅಖಿಲ ಕರ್ನಾಟಕ ಜನಜಾಗೃತಿ ವೇದಿಕೆ ಕಡಬದ ನಿಕಟ ಪೂರ್ವ ಅಧ್ಯಕ್ಷ ಮಹೇಶ್ ಕೆ. ಸವಣೂರು ಅಧ್ಯಕ್ಷತೆ ವಹಿಸಿದ್ದರು. ಕಡಬ ತಾಲೂಕು ಜನಜಾಗೃತಿ ವೇದಿಕೆಯ ಸದಸ್ಯ ರಾಕೇಶ್ ರೈ ಕೆಡೆಂಜಿ ಶುಭಾಶಂಸನೆಗೈದರು. ಸಂಪನ್ಮೂಲ ವ್ಯಕ್ತಿ ನೆಲ್ಯಾಡಿ ಸಂತ ಜಾರ್ಜ್ ಪಿಯು ಕಾಲೇಜಿನ ಇತಿಹಾಸ ಉಪನ್ಯಾಸಕ ವಿಶ್ವನಾಥ ಶೆಟ್ಟಿ ಮಾಹಿತಿಗಳನ್ನು ನೀಡಿದರು. ಸವಣೂರು ಕಾಲೇಜಿನ ಕಾರ್ಯಾಧ್ಯಕ್ಷ ಗಿರಿಶಂಕರ ಸುಲಾಯ, ಪದವಿ ಪೂರ್ವ ಕಾಲೇಜಿನ ಪ್ರಾಂಶುಪಾಲೆ ಪದ್ಮಾವತಿ, ಸವಣೂರು ಯುವಕ ಮಂಡಲದ ಅಧ್ಯಕ್ಷ ಚೇತನ್ ಕುಮಾರ್ ಕೋಡಿಬೈಲು ಇದ್ದರು. ಸವಣೂರು ಪ್ರೌಢ ಶಾಲಾ ವಿಭಾಗದ ಮುಖ್ಯ ಗುರು ಶ್ರೀಲತಾ ಸ್ವಾಗತಿಸಿ, ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಸವಣೂರು ವಲಯದ ಮೇಲ್ವಿಚಾರಕಿ ಹೇಮಲತಾ ವಂದಿಸಿ, ಸವಣೂರು ಪ್ರೌಢ ಶಾಲಾ ವಿಭಾಗದ ಶಿಕ್ಷಕರಾದ ಕಿಶನ್ ಬಿ.ವಿ. ನಿರ್ವಹಿಸಿದರು. ಕಾನೂನು ಸೇವೆಗಳ ಸಮಿತಿಯ ಸಿಬ್ಬಂದಿ ಜ್ಯೋತಿ, ಸೇವಾ ಪ್ರತಿನಿಧಿಗಳಾದ ಅಮಿತಾ, ಮೀನಾಕ್ಷಿ ಮತ್ತಿತರರು ಸಹಕರಿಸಿದರು. ನ್ಯಾಯಾಧೀಶ ಸದಾನಂದ ನಾಗಪ್ಪ ನಾಯ್ಕ ಅವರು ಕಾಲೇಜಿನ ಗ್ರಂಥಾಲಯಕ್ಕೆ ಕಾನೂನು ಸೇವೆಗಳ ಪ್ರಾಧಿಕಾರದಿಂದ ಪ್ರಕಟಗೊಂಡ ಕಾನೂನು ಪುಸ್ತಕಗಳನ್ನು ಪ್ರಾಂಶುಪಾಲೆ ಪದ್ಮಾವತಿ ಅವರಿಗೆ ಹಸ್ತಾಂತರಿಸಿದರು.

ಪದ್ಮನೂರು ಶಾಲೆ ವಿದ್ಯಾರ್ಥಿಗಳಿಗೆ ಬ್ಯಾಗ್

ಕಿನ್ನಿಗೋಳಿ: ಪದ್ಮನೂರು ದಕ್ಷಿಣ ಕನ್ನಡ ಜಿಲ್ಲಾ ಪಂಚಾಯತ್ ಹಿರಿಯ ಪ್ರಾಥಮಿಕ ಶಾಲೆಯ ವಿದ್ಯಾರ್ಥಿಗಳಿಗೆ ಉದ್ಯಮಿ ಪ್ರಥ್ವಿರಾಜ ಆಚಾರ್ಯ ಅವರ ವತಿಯಿಂದ ಶಾಲೆಗೆ ಕುಡಿಯುವ ನೀರು ಶುದ್ಧೀಕರಣ ಯಂತ್ರ, ವಿದ್ಯಾರ್ಥಿಗಳಿಗೆ ಬ್ಯಾಗ್ ವಿತರಿಸಲಾಯಿತು. ಕಾರ್ಯಕ್ರಮದಲ್ಲಿ ಶಾಲೆಯ ವತಿಯಿಂದ ಪಿಯುಸಿ ಪರೀಕ್ಷೆಯಲ್ಲಿ ರಾಜ್ಯಕ್ಕೆ 7ನೇ ರಾಂಕ್ ಪಡೆದ ಅನ್ವ್ಯ ಆಚಾರ್ಯರನ್ನು ಸನ್ಮಾನಿಸಲಾಯಿತು. ಅನಿತಾ ಪ್ರಥ್ವಿರಾಜ್ ಆಚಾರ್ಯ, ಅನ್ವಯ್, ಜೋಸೆಫ್ ಕ್ವಾಡ್ರಸ್, ಹೆರಿಕ್ ಪಾಯಸ್, ಸುರೇಶ್ ಪದ್ಮನ್ನೂರು, ಜಗದೀಶ್ ಆಚಾರ್ಯ, ಪ್ರಕಾಶ್ ಡಿಸೋಜ, ಎಸ್.ಡಿ.ಎಂ.ಸಿ. ಅಧ್ಯಕ್ಷ ಶೇಖರ ಪೂಜಾರಿ, ಪವಿತ್ರ ಮತ್ತಿತರರು ಉಪಸ್ಥಿತರಿದ್ದರು. ಶಾಲಾ ಮುಖ್ಯೋಪಧ್ಯಯನಿ ಐರಿನ್ ಡಿಸೋಜ ಸ್ವಾಗತಿಸಿ, ಶಿಕ್ಷಕಿ ಆಶಾಲತಾ ವಂದಿಸಿದರು.ಶಿಕ್ಷಕಿ ಪ್ರಜ್ವಲ್ ನಿರೂಪಿಸಿದರು.

ಯಕ್ಷಗಾನ ಕಲಾರಂಗದಿಂದ ನೂರನೇ ಮನೆ ಹಸ್ತಾಂತರ | ಶ್ರೀ ವಿಶ್ವವಲ್ಲಭತೀರ್ಥ ಶ್ರೀಪಾದರ ಶ್ಲಾಘನೆ

ದಾನಿಗಳು, ಕಾರ್ಯಕರ್ತರ ನಿಸ್ವಾರ್ಥ ಸೇವೆ ಶ್ಲಾಘನೀಯ

ಉಡುಪಿ: ಪ್ರತಿಯೊಬ್ಬ ಸಾಮಾನ್ಯ ಮನುಷ್ಯನಿಗೂ ಜೀವನದಲ್ಲಿ ತನ್ನದೇ ಆದ ಒಂದು ಸುಂದರ ಮನೆ ಕಟ್ಟಿಕೊಳ್ಳುವುದು ಅತ್ಯಂತ ದೊಡ್ಡ ಕನಸಾಗಿರುತ್ತದೆ. ಇಂದಿನ ದುಬಾರಿ ದಿನಗಳಲ್ಲಿ ಸ್ವಂತಕ್ಕೊಂದು ಸೂಡು ನಿರ್ಮಿಸಿಕೊಳ್ಳುವುದೇ ದುಸ್ತರವಾಗಿರುವಾಗ, ಸಮಾಜದ ಹಿಂದುಳಿದ ಹಾಗೂ ಸೂರಿಲ್ಲದ ನೂರು ಕುಟುಂಬಗಳಿಗೆ ಉಚಿತವಾಗಿ ಮನೆ ನಿರ್ಮಿಸಿಕೊಟ್ಟಿರುವುದು ಯಕ್ಷಗಾನ ಕಲಾರಂಗ ಸಂಸ್ಥೆಯ ಒಂದು ಐತಿಹಾಸಿಕ ಹಾಗೂ ಅಗಾಧ ಸಾಧನೆಯಾಗಿದೆ ಎಂದು ಸೋದೆ ಮಠಾಧೀಶ ಶ್ರೀ ವಿಶ್ವವಲ್ಲಭತೀರ್ಥ ಶ್ರೀಪಾದರು ಬಣ್ಣಿಸಿದರು.

ಉಡುಪಿ ಯಕ್ಷಗಾನ ಕಲಾರಂಗ ಸಂಸ್ಥೆಯು ನಿರ್ಮಿಸಿದ 100ನೇ ಮನೆಯ ಹಸ್ತಾಂತರದ ಅಂಗವಾಗಿ ಭಾನುವಾರ ಸಂಸ್ಥೆಯ ಐವೈಸಿ ಸಭಾ ಭವನದಲ್ಲಿ ಆಯೋಜಿಸಲಾಗಿದ್ದ 'ಸೂರು ನೂರರ ಸಡಗರ' ವಿಶೇಷ ಕಾರ್ಯಕ್ರಮದಲ್ಲಿ ಅವರು ಆಶೀರ್ವಚನ ನೀಡಿದರು.

ಶಿಕ್ಷಣದೊಂದಿಗೆ ಸಂಸ್ಕಾರ ನೀಡುವ ಕಾರ್ಯ

ಯಕ್ಷಗಾನ ಕಲಾರಂಗ ಕೇವಲ ಕಲೆ ಮತ್ತು ಕಲಾವಿದರ



ಪೋಷಣೆಗೆ ಸೀಮಿತವಾಗದೆ, ತನ್ನ 'ವಿದ್ಯಾಪೋಷಕ' ಯೋಜನೆಯ ಮೂಲಕ ಬಡ ವಿದ್ಯಾರ್ಥಿಗಳಿಗೆ ಆಸರೆಯಾಗಿದೆ. ಶೈಕ್ಷಣಿಕ ನೆರವಿನ ಜೊತೆಗೆ ಮಕ್ಕಳಿಗೆ ಉತ್ತಮ ಸಂಸ್ಕಾರ ಕಲಿಸುವ ಅದ್ಭುತ ಕೆಲಸವನ್ನು ಸಂಸ್ಥೆ ಮಾಡುತ್ತಿದೆ. ದಾನಿಗಳ ಉದಾರತೆ ಮತ್ತು ನಿಷ್ಠಾವಂತ ಕಾರ್ಯಕರ್ತರ ನಿಸ್ವಾರ್ಥ ಸೇವೆಯಿಂದಾಗಿ ಈ 100 ಮನೆಗಳ ನಿರ್ಮಾಣದ ಮಹತ್ಕಾರ್ಯ ಸಾಧ್ಯವಾಗಿದೆ ಎಂದ ಶ್ರೀಗಳು, ಕಷ್ಟದ ಕಾಲದಲ್ಲಿ ನೆರವಾದ ಸಂಸ್ಥೆಯನ್ನು ತಾವು ಜೀವನದಲ್ಲಿ ಉನ್ನತ ಸ್ಥಾನಕ್ಕೇರಿದಾಗ ಮರೆಯದೆ, ಮರಳಿ ಸಮಾಜಕ್ಕೆ ಕೊಡುಗೆ ನೀಡುವ ಉಪಕೃತ ಭಾವನೆಯನ್ನು ಫಲಾನುಭವಿಗಳು ಬೆಳೆಸಿಕೊಳ್ಳಬೇಕು ಎಂದು ಕಿವಿಮಾತು ಹೇಳಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಮಣಿಪಾಲ ಮಾಹೆ ಸಹಕುಲಾಧಿಪತಿ ಡಾ. ಎಚ್. ಎಸ್. ಬಲ್ಲಾಳ್ ಮಾತನಾಡಿ, ಅನ್ಯರ ಬದುಕಿಗೆ ಬೆಳಕಾಗುವುದೇ ನೈಜ ಜೀವನ. ಆರ್ಥಿಕವಾಗಿ ಹಿಂದುಳಿದ ವಿದ್ಯಾರ್ಥಿಗಳಿಗೆ ಆಸರೆಯಾಗುವ ಈ ಯೋಜನೆಗೆ ಮಾಹೆ ಸಂಸ್ಥೆಯು ಮುಂದೆಯೂ ಸಂಪೂರ್ಣ ಸಹಕಾರ ನೀಡಲಿದೆ ಎಂದರು. 'ಸೂರು ನೂರರ' ವಿಶೇಷ ಸ್ಮರಣ ಸಂಪುಟವನ್ನು ಅನಾವರಣಗೊಳಿಸಿದ ಕರ್ನಾಟಕ ಬ್ಯಾಂಕ್ ಎಂ.ಡಿ ಮತ್ತು ಸಿಇಓ ಎಂ. ರಾಘವೇಂದ್ರ ಭಟ್ ಅವರು, 2047ರ ವೇಳೆಗೆ ದೇಶದ ಎಲ್ಲರಿಗೂ ಮನೆ ಮತ್ತು ವಿಮೆ ಸಿಗಬೇಕೆಂಬ ಪ್ರಧಾನಿಯವರ ಆಶಯ ಈಡೇರಲಿ ಎಂದು ಹಾರೈಸಿದರು.

ಅತಿಥಿಗಳಾಗಿ ಆಗಮಿಸಿದ್ದ ಕೋಟ ಗೀತಾನಂದ ಫೌಂಡೇಶನ್‌ನ ಆನಂದ್ ಸಿ. ಕುಂದರ್, ಶಾಸಕರಾದ ಗುರ್ಮೆ ಸುರೇಶ್ ಶೆಟ್ಟಿ, ಯಶಪಾಲ್ ಸುವರ್ಣ, ಕಿರಣ್ ಕುಮಾರ್ ಕೊಡ್ಗಿ, ಗುರುರಾಜ್ ಗಂಟಿಹೊಳೆ, ಯಕ್ಷಗಾನ ಅಕಾಡೆಮಿ ಅಧ್ಯಕ್ಷ ಡಾ. ತಲ್ಲೂರು ಶಿವರಾಮ ಶೆಟ್ಟಿ ಹಾಗೂ ಸಂಸ್ಥೆಯ ಮಾಜಿ ಅಧ್ಯಕ್ಷ ಗಣೇಶ್ ರಾವ್ ಕಲಾರಂಗದ ಅಭೂತಪೂರ್ವ ಕೊಡುಗೆಯನ್ನು ಶ್ಲಾಘಿಸಿದರು. ಮನೆ ನಿರ್ಮಾಣಕ್ಕೆ ಸಹಕರಿಸಿದ ಪ್ರಾಯೋಜಕರು ಹಾಗೂ ಶ್ರಮಿಸಿದ ಕಾರ್ಮಿಕರನ್ನು ಗೌರವಿಸಲಾಯಿತು ಮತ್ತು ವಿದ್ಯಾರ್ಥಿಗಳಿಗೆ ಕಸಿ ಮಾವಿನ ಸಸಿಗಳನ್ನು ವಿತರಿಸಲಾಯಿತು. ಯಕ್ಷಗಾನ ಕಲಾರಂಗದ ಅಧ್ಯಕ್ಷ ಎಂ. ಗಂಗಾಧರ ರಾವ್ ಸ್ವಾಗತಿಸಿ, ಕಾರ್ಯದರ್ಶಿ ಮುರಲಿ ಕಡೆಕಾರ್ ವಂದಿಸಿದರು. ಜೊತೆ ಕಾರ್ಯದರ್ಶಿ ನಾರಾಯಣ ಎಂ. ಹೆಗಡೆ ಹಾಗೂ ವಿದ್ಯಾ ಪ್ರಸಾದ್ ಕಾರ್ಯಕ್ರಮಕ್ಕೆ ಸಹಕರಿಸಿದರು.

ಫಲಾನುಭವಿಗಳಿಂದಲೇ 100ನೇ ಮನೆ ನಿರ್ಮಾಣ!

ಹೆಬ್ರಿ ತಾಲೂಕಿನ ಶಿವಪುರ ಗ್ರಾಮದ ಕುಲ್ಕುಂದದಲ್ಲಿ ದ್ವಿತೀಯ ಪಿಯುಸಿ ವಿದ್ಯಾರ್ಥಿನಿ ಸಿಂಚನಾ ಎಂಬಾಕೆಗೆ 100ನೇ ಮನೆಯನ್ನು ನಿರ್ಮಿಸಿಕೊಡಲಾಗಿದೆ. ವಿಶೇಷವೆಂದರೆ, ಈ ಹಿಂದೆ ಇದೇ ವಿದ್ಯಾಪೋಷಕ್ ಯೋಜನೆಯಡಿ ಮನೆ ನಿರ್ಮಿಸಿಕೊಂಡಿದ್ದ 100 ಫಲಾನುಭವಿಗಳ ಕುಟುಂಬಗಳೇ ಒಟ್ಟಾಗಿ ಸೇರಿ, ತಮಗೆ ನೆರವಾದ ಸಂಸ್ಥೆಯ ಮೇಲಿನ ಕೃತಜ್ಞತೆಯಾಗಿ 7 ಲ.ರೂ. ವೆಚ್ಚದಲ್ಲಿ ಈ ನೂರನೇ ಮನೆ ನಿರ್ಮಿಸಿಕೊಟ್ಟಿರುವುದು ಈ ಸಡಗರದ ಸಾರ್ಥಕತೆ ಹೆಚ್ಚಿಸಿದೆ. ಈ ಮನೆಯನ್ನು ಪರ್ಯಾಯ ಶೀರೂರು ಮಠದ ದಿವಾನ ಡಾ. ಉದಯ ಕುಮಾರ್ ಸರಳತ್ತಾಯ ಭಾನುವಾರ ಉದ್ಘಾಟಿಸಿದರು.

'ಕಲಾಭಿನಂದನೆ'ಕಾರ್ಯಕ್ರಮ | ಕಲಾವಿದ ದಿನೇಶ್ ಶೆಟ್ಟಿ ಅಭಿಪ್ರಾಯ

ಕಲಾವಿದರನ್ನು ನಮ್ಮ ಪ್ರೋತ್ಸಾಹಿಸುವುದು ಕರ್ತವ್ಯ

ಬಂಟ್ವಾಳ: ಕಲೆ ಎಂಬುದು ಕೇವಲ ಮನರಂಜನೆಯ ಸಾಧನವಲ್ಲ, ಅದು ಸಮಾಜದ ಸಂಸ್ಕೃತಿ, ಸಂಪ್ರದಾಯ ಮತ್ತು ಮೌಲ್ಯಗಳನ್ನು ಮುಂದಿನ ಪೀಳಿಗೆಗೆ ತಲುಪಿಸುವ ಪವಿತ್ರ ಮಾಧ್ಯಮ. ಕಲಾವಿದರ ಸಾಧನೆಯ ಹಿಂದೆ ಅಪಾರ ಪರಿಶ್ರಮ, ತ್ಯಾಗ ಮತ್ತು ನಿರಂತರ ಅಭ್ಯಾಸ ಇರುತ್ತದೆ. ಕಲಾಸಾಧಕರನ್ನು ಸಮಾಜ ಗುರುತಿಸಿ ಗೌರವಿಸಿದಾಗ ಮತ್ತಷ್ಟು ಸಾಧಿಸುವ ಉತ್ಸಾಹ ಹೆಚ್ಚುತ್ತದೆ. ಕಲೆಯ ತಳಹದಿಯಲ್ಲಿ ಈ ಸಮಾಜ ಮತ್ತಷ್ಟು ಶ್ರೀಮಂತವಾಗುತ್ತದೆ ಎಂದು ಹಿರಿಯ ಯಕ್ಷಗಾನ ಕಲಾವಿದ, ಸಮಾಜಿಕ ಚಿಂತಕ ದಿನೇಶ್ ಶೆಟ್ಟಿ ಕಾವಳಕಟ್ಟೆ ಅಭಿಪ್ರಾಯಪಟ್ಟರು.

ಬಂಟ್ವಾಳ ತಾಲೂಕು ಬಂಟರ ಸಂಘದ ವತಿಯಿಂದ ಬಂಟರ ಸಂಘ ಕಾವಳಕಟ್ಟೆ ವಲಯದ ಅಧ್ಯಕ್ಷ ಮೋಹನ್ ಶೆಟ್ಟಿ ನರ್ವಲ್ಡಡ್ಡ ಅವರ ನಿವಾಸದಲ್ಲಿ ನಡೆದ ತಾಲೂಕು ಮಟ್ಟದ ಸಾಂಸ್ಕೃತಿಕ ಸ್ಪರ್ಧೆಯಲ್ಲಿ ಭಾಗವಹಿಸಿದ ಕಾವಳಕಟ್ಟೆ ವಲಯದ ಕಲಾವಿದರನ್ನು ಅಭಿನಂದಿಸಿ ಅವರು ಮಾತನಾಡಿದರು.

ಕಲಾವಿದರನ್ನು ಗೌರವಿಸುವ ಸಮಾಜ ಎಂದಿಗೂ ತನ್ನ ಸಂಸ್ಕೃತಿ ಮತ್ತು ಪರಂಪರೆಯನ್ನು ಕಳೆದುಕೊಳ್ಳುವುದಿಲ್ಲ, ಯುವಜನರು ಕಲೆ ಮತ್ತು ಸಂಸ್ಕೃತಿಯತ್ತ ಸೆಳೆಯುವ ಕೆಲಸವನ್ನು ಸಂಘ-ಸಂಸ್ಥೆಗಳು



ಮಾಡಬೇಕಾಗಿದೆ. ಬಂಟರ ಸಂಘ ಕಾವಳಕಟ್ಟೆ ವಲಯವು ಕೈಗೊಂಡಿರುವ ಈ ಕಾರ್ಯ ಇತರ ಸಂಘ-ಸಂಸ್ಥೆಗಳಿಗೂ ಮಾದರಿಯಾಗಿದೆ ಎಂದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದ ಮೋಹನ್ ಶೆಟ್ಟಿ ನರ್ವಲ್ಡಡ್ಡ ಮಾತನಾಡಿ, ಪ್ರತಿಭೆಯನ್ನು ಗುರುತಿಸಿ ಪ್ರೋತ್ಸಾಹಿಸುವ ಸಂಘಗಳು ಸಮಾಜಕ್ಕೆ ದಾರಿದೀಪವಾಗುತ್ತವೆ. ಯುವ ಪ್ರತಿಭೆಗಳಿಗೆ ಪ್ರೋತ್ಸಾಹ ನೀಡುವುದು ನಮ್ಮೆಲ್ಲರ ಕರ್ತವ್ಯವಾಗಿದೆ ಎಂದರು.

ಸಂಘದ ಕಾರ್ಯದರ್ಶಿ ಉದಯ ಕುಮಾರ್ ಶೆಟ್ಟಿ ಸಂಘದ ಲೆಕ್ಕಪತ್ರವನ್ನು ಮಂಡಿಸಿದರು. ಸಾಂಸ್ಕೃತಿಕ ನೃತ್ಯ ಸ್ಪರ್ಧೆಯಲ್ಲಿ ಭಾಗವಹಿಸಿದ ನಿಧಿಶಾ ಅನಿಸಿಕೆ ವ್ಯಕ್ತಪಡಿಸಿದರು. ಕಾವಳಕಟ್ಟೆ ವಲಯದ ಗೌರವಾಧ್ಯಕ್ಷ ಜಗನ್ನಾಥ ಶೆಟ್ಟಿ ಕೆದ್ದಳಿಕೆ, ಗೌರವ ಸಲಹೆಗಾರ ಪ್ರಮೋದ್ ಕುಮಾರ್ ರೈ ಕಾಡಬೆಟ್ಟು, ಉಪಾಧ್ಯಕ್ಷರಾದ ಪ್ರದೀಪ್ ಕುಮಾರ್ ಶೆಟ್ಟಿ ಬಿಯಂತಬೆಟ್ಟು, ಕೋಶಾಧಿಕಾರಿ ಚಂದ್ರಶೇಖರ ಶೆಟ್ಟಿ ಪಣೆಕಲ, ಯುವ ವಿಭಾಗದ ಅಧ್ಯಕ್ಷರಾದ ಕಿಶೋರ್ ರೈ ಕಾಡಬೆಟ್ಟು ಸಂಘದ ಪದಾಧಿಕಾರಿಗಳು ಇದ್ದರು. ಮಾನ್ವಿ ಪ್ರಾರ್ಥಿಸಿದರು. ಪುನೀತ್ ಶೆಟ್ಟಿ ಕೈಮಾರು ಸ್ವಾಗತಿಸಿ, ಉದಯ ಕುಮಾರ್ ಶೆಟ್ಟಿ ವಂದಿಸಿದರು.

ಕಲಾವಿದರಿಗೆ ಸನ್ಮಾನ

ತಾಲೂಕು ಮಟ್ಟದ ಸಾಂಸ್ಕೃತಿಕ ಸ್ಪರ್ಧೆಯಲ್ಲಿ ಕಾವಳಕಟ್ಟೆ ವಲಯದ ನೃತ್ಯ ತಂಡವನ್ನು ಅತ್ಯುತ್ತಮ ರೀತಿಯಲ್ಲಿ ಸಂಯೋಜಿಸಿದ ಮಂಗಳೂರಿನ ಸೀಝ್ಲಿಂಗ್ ಡ್ಯಾನ್ಸ್ ಅಕಾಡೆಮಿಯ ಶುಭಕಿರಣ ಮಣಿ ಹಾಗೂ ಅವರ ತಂಡವನ್ನು ವಿಶೇಷವಾಗಿ ಅಭಿನಂದಿಸಲಾಯಿತು. ಬಳಿಕ ಸ್ಪರ್ಧೆಯಲ್ಲಿ ಭಾಗವಹಿಸಿದ ಎಲ್ಲಾ ಕಲಾವಿದರ ಸಾಧನೆಯನ್ನು ಪ್ರಶಂಸಿಸಿ ಗೌರವಿಸಲಾಯಿತು.

ವಿದ್ಯುತ್ ಕಂಬಗಳನ್ನು ಸೇರಿಸಿ ರಸ್ತೆಗೆ ಕಾಂಕ್ರೀಟ್ ಹಾಕಿದ ಘಟನೆ

ಸುಳ್ಯ ಪಟ್ಟಣ ಪಂಚಾಯತ್‌ನಿಂದ ವ್ಯಕ್ತಿಗೆ ನೋಟೀಸ್

ಸುಳ್ಯ: ಸುಳ್ಯ ಪಟ್ಟಣ ಪಂಚಾಯತ್ ವ್ಯಾಪ್ತಿಯ ಸರಕಾರಿ ಜ್ಯೂನಿಯರ್ ಕಾಲೇಜ್ ಬಳಿ ಸಾರ್ವಜನಿಕ ತಾಲೂಕು ಆಸ್ಪತ್ರೆ ಸಂಪರ್ಕಿಸುವ ರಸ್ತೆ ಮಧ್ಯದಲ್ಲಿ ವಿದ್ಯುತ್ ಕಂಬಗಳು ಇರುವಂತೆಯೇ ಮಂಗಳೂರಿನ ವ್ಯಕ್ತಿಯೋರ್ವರು ರಸ್ತೆ ಕಾಂಕ್ರೀಟೀಕರಣ ಮಾಡಿರುವ ಪ್ರಕರಣ ಸಾರ್ವಜನಿಕರ ವ್ಯಾಪಕ ಆಕ್ರೋಶಕ್ಕೆ ಕಾರಣವಾಗಿದೆ. ಇದರ ವಿಡಿಯೋ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡಿ ವ್ಯಾಪಕ ಟೀಕೆಗಳೂ ವ್ಯಕ್ತವಾಗಿತ್ತು. ಈ ಹಿನ್ನಲೆಯಲ್ಲಿ ಶಾಸಕಿ ಭಾಗೀರಥಿ ಮುರುಳ್ಯ ಸೋಮವಾರ ಭೇಟಿ ನೀಡಿ ಪರಿಶೀಲನೆ ನಡೆಸಿದರು.





ಕ್ರಮದ ಎಚ್ಚರಿಕೆ

ಸೋಮವಾರ ಸಂಜೆ ವೇಳೆಗೆ ಸ್ಥಳಕ್ಕೆ ಭೇಟಿ ಪರಿಶೀಲನೆ ನಡೆಸಿ ಮಾಧ್ಯಮ ಪ್ರತಿನಿಧಿಗಳ ಜೊತೆ ಮಾತನಾಡಿದ ಭಾಗೀರಥಿ ಮುರುಳ್ಯ, ಇದು ಯಾವುದೇ ಸರಕಾರಿ ಅನುದಾನದಿಂದ ನಿರ್ಮಾಣವಾಗಿಲ್ಲ, ಖಾಸಗಿ ವ್ಯಕ್ತಿಗಳು ಲೇಔಟ್ ಮಾಡುವ ಸಂದರ್ಭದಲ್ಲಿ ಸರಕಾರಿ ರಸ್ತೆಯನ್ನು ನಿರ್ಲಕ್ಷ್ಯದಿಂದ ಕಾಂಕ್ರೀಟೀಕರಣ ಮಾಡಿದ್ದಾರೆ. ಈ ಬಗ್ಗೆ ಈಗಾಗಲೇ ಪಟ್ಟಣ ಪಂಚಾಯತ್ ಆಡಳಿತಾಧಿಕಾರಿ, ಪಟ್ಟಣ ಪಂಚಾಯತ್ ಮುಖ್ಯಾಧಿಕಾರಿ ಹಾಗೂ ಮೆಸ್ಕಾಂ ಇಲಾಖೆಗೆ ಸೂಚನೆ ನೀಡಲಾಗಿದ್ದು ಖಾಸಗಿ ವ್ಯಕ್ತಿಗಳ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳುವಂತೆ ಸೂಚನೆ ನೀಡಲಾಗಿದೆ. ಮಾತ್ರವಲ್ಲದೆ ವಿದ್ಯುತ್ ಕಂಬಗಳನ್ನು ತಕ್ಷಣವೇ ತೆರವುಗೊಳಿಸುವಂತೆ ಸೂಚನೆ ನೀಡಲಾಗಿದೆ ಎಂದು ತಿಳಿಸಿದ್ದಾರೆ.

ತಾಲೂಕು ಪಂಚಾಯತ್ ಕೆಡಿಪಿ ಸದಸ್ಯ ಧರ್ಮಪಾಲ ಕೊಯಿಂಗಾಜೆ ಕೂಡ ಘಟನೆಯನ್ನು ಖಂಡಿಸಿದ್ದಾರೆ.

ಸುಳ್ಯ ತಾಲೂಕಿನ ಆಡಳಿತ ಸೋಮವಾರ ನಡೆದ ತಾಲೂಕು ಗ್ಯಾರಂಟಿ ಅನುಷ್ಠಾನ ಸಮಿತಿ ಸಭೆಯಲ್ಲೂ ಈ ವಿಚಾರ ಭಾರೀ ಚರ್ಚೆಗೆ ಗ್ರಾಸವಾಗಿತ್ತು. ಮೆಸ್ಕಾಂ ವತಿಯಿಂದ ಆಗಮಿಸಿದ ಅಧಿಕಾರಿ ಹಾರಿಕೆಯ ಉತ್ತರಕ್ಕೆ ಜಿಲ್ಲಾ ಗ್ಯಾರಂಟಿ ಅಧ್ಯಕ್ಷರು ಆಕ್ರೋಶ ವ್ಯಕ್ತಪಡಿಸಿ ಪಟ್ಟಣ ಪಂಚಾಯತ್ ಹಾಗೂ ಮೆಸ್ಕಾಂ ಇಲಾಖೆಗೂ ನೋಟಿಸ್ ನೀಡಲು ಸೂಚಿಸಿದ ಘಟನೆ ನಡೆದಿತ್ತು.

ರಸ್ತೆಗೆ ಸಾರ್ವಜನಿಕರಿಂದ ಫ್ಲೆಕ್ಸ್!

ರಸ್ತೆಯಲ್ಲಿರುವ ವಿದ್ಯುತ್ ಕಂಬಗಳಿಗೆ ಸಾರ್ವಜನಿಕರು ಎಚ್ಚರಿಕೆ ಬೋರ್ಡ್‌ಗಳನ್ನು ಅಳವಡಿಸಿದ್ದು, ಜೊತೆಗೆ 'ಸ್ಮಾರ್ಟ್ ಸಿಟಿ ಸುಳ್ಯ' ಎಂಬಿತ್ಯಾದಿ ನಾಮಫಲಕಗಳನ್ನು ಅಳವಡಿಸಿದ್ದಾರೆ. ಇದು ತಾಲೂಕು ಹಾಗೂ ಪಟ್ಟಣ ಆಡಳಿತವನ್ನು ಅಣುಕಿಸುತ್ತಿದೆ.

ನೋಟಿಸ್ ಜಾರಿ

ರಸ್ತೆಯಲ್ಲಿನ ಕಂಬವನ್ನು ಬಳಸಿ ಕಾಂಕ್ರೀಟೀಕರಣ ನಡೆಸಿ ಆಕ್ರೋಶಕ್ಕೆ ಕಾರಣವಾದ ಸ್ಥಳಕ್ಕೆ ಭೇಟಿ ನೀಡಿ ಅಧಿಕಾರಿಗಳನ್ನು ತರಾಟೆಗೆತ್ತಿಕೊಳ್ಳುತ್ತಿದ್ದಂತೆ ಎಚ್ಚೆತ್ತ ಪಟ್ಟಣ ಪಂಚಾಯತ್ ಸಂಬಂಧಿಸಿದ ವ್ಯಕ್ತಿಗೆ ಕ್ಷಣ ಮಾತ್ರದಲ್ಲಿ ನೋಟಿಸ್ ಜಾರಿ ಮಾಡಲಾಗಿದ್ದು ತೆರವಿಗೆ ಸೂಚನೆ ನೀಡಲಾಗಿದೆ.

ಮೂರುಕಾವೇರಿ ಮಹಾಮ್ಮಾಯಿ ದೇವಸ್ಥಾನದಲ್ಲಿ ನೇತ್ರ ತಪಾಸಣಾ ಶಿಬಿರ



ಕಿನ್ನಿಗೋಳಿ: ಒಡಿಯೂರು ಶ್ರೀ ಗ್ರಾಮ ವಿಕಾಸ ಯೋಜನೆ ವತಿಯಿಂದ ಹವಾರು ಸಮಾಜಮುಖಿ ಕಾರ್ಯಗಳು ನಡೆಯುತ್ತಿದ್ದು, ಜನರಿಂದ ಉತ್ತಮ ಸ್ಪಂದನೆ ದೊರೆಯುತಿದೆ, ಒಡಿಯೂರು ಶ್ರೀಗಳ ವಿಶೇಷಕಾಳಜಿಯಿಂದಇಂತಹಕಾರ್ಯಕ್ರಮ ಸಾಧ್ಯವಾಗಿದೆ, ಉಚಿತ ವೈದ್ಯಕೀಯ ಶಿಬಿರದ ಪ್ರಯೋಜನವನ್ನು ಅಗತ್ಯವಿದ್ದವರು ಎಲ್ಲರೂ ಪಡಕೊಳ್ಳಿ ಎಂದು ಒಡಿಯೂರು ಕ್ಷೇತ್ರದ ಸಂಸ್ಕಾರೋತ್ಸವ ಸಮಿತಿಯ ಕಾರ್ಯಾಧ್ಯಕ್ಷ ಅಜಿತ್ ಹೇಳಿದರು.

ಅವರು ಒಡಿಯೂರು ಶ್ರೀ ಗ್ರಾಮ ವಿಕಾಸ ಯೋಜನೆ ಚಾರಿಟೇಬಲ್ ಟ್ರಸ್ಟ್, ರೋಟರಿ ಕ್ಲಬ್ ಕಿನ್ನಿಗೋಳಿ, ಲಯನ್ಸ್ ಕ್ಲಬ್ ಕಲ್ಲಮುಂಡ್ಕೂರು ನಿಡ್ಡೋಡಿ, ಮೂರುಕಾವೇರಿ ಮಹಾಮ್ಮಾಯಿ ಆಡಳಿತ ಸಮಿತಿ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೊಸೈಟಿ (ಅಂಧತ್ವ ವಿಭಾಗ) ಡಾ. ಪಿ. ದಯಾನಂದ ಪೈ -ಪಿ. ಸತೀಶ್ ಪೈ ಚಾರಿಟೇಬಲ್ ಎಸ್ಸಿಲೋ ವಿಷನ್ ಫೌಂಡೇಶನ್ ಬೆಂಗಳೂರು ಪ್ರಸಾದ್ ನೇತ್ರಾಲಯ ಸೂಪರ್ ಸ್ಪೆಷಾಲಿಟಿ ಕಣ್ಣಿನ ಆಸ್ಪತ್ರೆ, ನೇತ್ರ ಜ್ಯೋತಿ ಚಾರಿಟೇಬಲ್ ಟ್ರಸ್ಟ್ ಇದರ ಜಂಟಿ ಸಹಯೋಗದಲ್ಲಿ ಒಡಿಯೂರು ಶ್ರೀಗಳ ಜನ್ಮದಿನೋತ್ಸವದ ಪ್ರಯುಕ್ತ ಮೂರುಕಾವೇರಿ ಮಹಾಮ್ಮಾಯಿ ದೇವಸ್ಥಾನದಲ್ಲಿ ನಡೆದ ಉಚಿತ ನೇತ್ರ ತಪಾಸಣಾ ಮತ್ತು ಉಚಿತ ಕನ್ನಡಕ ವಿತರಣಾ ಶಿಬಿರದಲ್ಲಿ ಮಾತನಾಡಿದರು.

ಸಂದೀಪ್ ಶೆಟ್ಟಿ, ಗಣೇಶ್ ಅತ್ತಾವರ, ಸುಮಿತ್ರ, ಪ್ರವೀಣ್ ಸಾಲಿಯಾನ್, ಪ್ರಸಾದ್ ನೇತ್ರಾಲಯ ಇದರ ವೈದ್ಯ ಡಾ. ಶಿಲ್ಪಾ, ಅಭಿಲಾಷ್, ಪಟ್ಟಣ ಪಂಚಾಯತ್ ಸದಸ್ಯ ಚಂದ್ರ ರಾಣ್ಯ, ರಾಣ್ಯ ಸಮಾಜದಮೋಹನ್ ರಾಣ್ಯ ಇದ್ದರು. ಒಡಿಯೂರು ಗ್ರಾಮ ವಿಕಾಸ ಸಮಿತಿಯ ಸಂಯೋಜಕಿ ಶುಭಲತಾ ಶೆಟ್ಟಿ ನಿರೂಪಿಸಿದರು, ಸೇವಾ ದೀಕ್ಷಿತೆ ಸುರೇಖ ವಂದಿಸಿದರು.

ಒಡಿಯೂರು ಶ್ರೀಗಳಿಂದ ತುಳು ನಾಟಕ ಸ್ಪರ್ಧಾ ಸಪ್ತಾಹದ ಲಾಂಛನ ಬಿಡುಗಡೆ



ಮಂಗಳೂರು: ರಂಗಭೂಮಿ ಕಲೆಯಿಂದ ಸಂಗೀತ, ಭಾಷೆ ಮತ್ತು ಸಾಹಿತ್ಯ ಕ್ಷೇತ್ರಕ್ಕೆ ಪ್ರೋತ್ಸಾಹದೊಂದಿಗೆ ಕಲಾವಿದರಿಗೆ ವಿಪುಲ ಅವಕಾಶ ಲಭಿಸುತ್ತದೆ. ದೇಶದ ಸಂಸ್ಕೃತಿ ಮತ್ತು ಮೌಲ್ಯವರ್ಧನೆಗೆ ನಾಟಕ ಮಾಧ್ಯಮವು ಸಹಕಾರಿಯಾಗಿದೆ.ಕೃಷ್ಣಾಪುರ ರಂಗಪರ್ಬ 2026 ಕಾರ್ಯಕ್ರಮವು ಸಮಾಜದಲ್ಲಿ ಸತ್ ಪರಿವರ್ತನೆಗೆ ದಾರಿ ಮಾಡಿಕೊಡಲಿ ಎಂದು ಒಡಿಯೂರು ಶ್ರೀ ಗುರುದೇವದತ್ತ ಸಂಸ್ಥಾನದ ಶ್ರೀ ಗುರುದೇವಾನಂದ ಸ್ವಾಮೀಜಿ ನುಡಿದರು.

ಅವರು ಸಾರ್ವಜನಿಕ ಶ್ರೀ ಗಣೇಶೋತ್ಸವ ಸಮಿತಿ ಆಶ್ರಯದಲ್ಲಿ ಸೆಪ್ಟೆಂಬರ್ 06 ರಿಂದ 12ರ ವರೆಗೆ ಕೃಷ್ಣಾಪುರದಲ್ಲಿ ನಡೆಯಲಿರುವ ಅಂತರ್ ರಾಜ್ಯ ಮಟ್ಟದ ತುಳು ನಾಟಕ ಸ್ಪರ್ಧಾ ಸಪ್ತಾಹದ ಲಾಂಛನವನ್ನು ಭಾನುವಾರ ಒಡಿಯೂರು ಕ್ಷೇತ್ರದಲ್ಲಿ ಬಿಡುಗಡೆಗೊಳಿಸಿ ಆಶೀರ್ವಚನವಿತ್ತರು.

ಸಮಿತಿಯ ಕಾರ್ಯ ಚಟುವಟಿಕೆಗಳ ಮೂಲಕ ಅಂತರಂಗ ಮತ್ತು ಬಹಿರಂಗವೆಂಬ ಎರಡೂ ಮುಖಗಳು ದೇವರಿಗೆ ಸಮರ್ಪಣೆಗೊಳ್ಳಲಿ ಎಂದು ಹಾರೈಸಿದರು. ಸಮಿತಿಯ ಅಧ್ಯಕ್ಷ ತಿಲಕ್ ರಾಜ್ ಕೃಷ್ಣಾಪುರ ಕಾರ್ಯ ಯೋಜನೆಯನ್ನು ವಿವರಿಸಿದರು. ಪದಾಧಿಕಾರಿಗಳಾದ ಅಶೋಕ್ ಕೃಷ್ಣಾಪುರ, ಪಿ. ಸುಧಾಕರ ಕಾಮತ್, ಪಿ. ಉಪೇಂದ್ರ ಆಚಾರ್ಯ, ವಿಠ್ಠಲ ಶೆಟ್ಟಿ, ಲಕ್ಷ್ಮೀ ಶೇಖರ್ ದೇವಾಡಿಗ, ಸುಧಾ ಆಚಾರ್ಯ, ರಾಕೇಶ್ ಕೋಟ್ಯಾನ್, ಸತೀಶ್ ಸಾಲ್ಯಾನ್, ವಿಶ್ವನಾಥ ಬಿ. ಮೂಲ್ಯ, ಸೌಮ್ಯ ಸುಧೀರ್, ರೋಷನ್ ಶೆಟ್ಟಿ, ಕಮಲಾ ನಾಯಕ್, ರೇಣುಕಾ ತಿಲಕ್ ರಾಜ್, ಗಿರೀಶ್ ಕುಲಾಲ್, ಶರತ್ ಬೊಳ್ಳಾಜೆ, ವಿಶ್ವನಾಥ ಆಚಾರ್ಯ, ಗಣೇಶ ಶೆಟ್ಟಿಗಾರ್, ಗಿರೀಶ್ ಶೆಟ್ಟಿ ಉಪಸ್ಥಿತರಿದ್ದರು.



ಅಗ್ನಿವೀರ್‌ಗೆ ಆಯ್ಕೆಯಾದ ಉಪ್ಪಿನಂಗಡಿ ಕೊಪ್ಪಳದ ಪ್ರದೀಪ್ ಎ.ಕೆ. ಅವರ ಮನೆಗೆ ಭೇಟಿ ನೀಡಿದ ಪುತ್ತಿಲ ಪರಿವಾರ ಸೇವಾ ಟ್ರಸ್ಟ್‌ನ ಸಂಚಾಲಕ ಅರುಣ್ ಕುಮಾರ್ ಪುತ್ತಿಲ ಅವರು ಪ್ರದೀಪ್ ಅವರನ್ನು ಸನ್ಮಾನಿಸಿದರು. ಟ್ರಸ್ಟ್‌ನ ಅಧ್ಯಕ್ಷ ಶ್ರೀರಾಮ ಭಟ್ ಪಾತಾಳ, ಪ್ರಮುಖರಾದ ಹರಿಪ್ರಸಾದ್ ಶೆಟ್ಟಿ ಬೊಳ್ಳಾವು, ನವೀನ್ ಕುಮಾರ್ ಕಲ್ಯಾಟೆ, ವಿಜಯ ಶಿಲ್ಪಿ ಕುಕ್ಕುಜೆ, ಬಾಲಕೃಷ್ಣ ಬಾರ್ಲ, ರಮೇಶ ಬಂಡಾರಿ, ಉದಿತ್ ಕುಮಾರ್ ರಂಗಾಜೆ, ರವಿ ನೆಡ್ಚಿಲ್, ಧರ್ಮಪ್ಪ ನಾಯ್ಕ, ತಾರಾನಾಥ ಕೊಪ್ಪಳ, ಮೋಕ್ಷಿತ್ ಕೊಪ್ಪಳ, ದೀಕ್ಷಿತ್ ಕೊಪ್ಪಳ, ನಾರಾಯಣ ಕೊಪ್ಪಳ, ವಿನೋದ ಕೊಪ್ಪಳ, ರಮೇಶ ನೈಕುಳಿ, ಶ್ರೀನಿವಾಸ ಬೊಳ್ಳಾವು ಉಪಸ್ಥಿತರಿದ್ದರು.



ಭಾರತೀಯ ಸೇನೆಗೆ ಅಗ್ನಿವೀರ್ ಆಗಿ ಆಯ್ಕೆಯಾದ ಸೂರಂಬೈಲ್ ನಿವಾಸಿ ಪ್ರವೀಣ್ ಮತ್ತು ಗೀತಾ ದಂಪತಿ ಪುತ್ರ ವಿಜೇತ್ ಕುಮಾರ್ ರೈ ಅವರಿಗೆ ಕಾಂಗ್ರೆಸ್ ಪಕ್ಷದ ವತಿಯಿಂದ ಅವರ ನಿವಾಸದಲ್ಲಿ ಗೌರವಿಸಲಾಯಿತು. ಪುತ್ತೂರು ಬ್ಲಾಕ್ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಕೃಷ್ಣಪ್ರಸಾದ್ ಆಳ್ವ, ಪ್ರಮುಖರಾದ ಎಸ್. ಅಬೂಬಕ್ಕರ್, ಪಾಣಾಜೆ ವಲಯ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಸದಾನಂದ ಭರಣ್ಯ, ಹಿರಿಯರಾದ ವಿಶ್ವನಾಥ್ ರೈ ಕಡಮಾಜೆ, ಪಿ.ಜಿ.ಶಂಕರನಾರಾಯಣ ಭಟ್, ಮೈಮುನಾತುಲ್ ಮೆಹರಾ, ವಿಮಲಾ, ನಾರಾಯಣ ನಾಯಕ್, ಮೆಸ್ಕಾಂ ಸದಸ್ಯ ಬಾಬು ರೈ ಕೋಟೆ , ವಿಮಲಾ ಮೊದಲಾದವರು ಉಪಸ್ಥಿತರಿದ್ದರು.

ಆಟೋ ರಿಕ್ಷಾ ಚಾಲಕರು ಹಾಗೂ ಮಾಲಕರ ಸಂಘದ ನಿಯೋಗದಿಂದ ಶಾಸಕ ರಾಜೇಶ್ ನ್ಯಾಕ್‌ಗೆ ಮನವಿ ಸಲ್ಲಿಕೆ, ಕ್ರಮದ ಭರವಸೆ

ಬಿ.ಸಿ.ರೋಡ್‌ನ ಬಸ್ ನಿಲ್ದಾಣ ಬಳಿಯಲ್ಲಿ ಆಟೋ ರಿಕ್ಷಾಗಳಿಗೆ ಸೂಕ್ತ ಪಾರ್ಕಿಂಗ್ ವ್ಯವಸ್ಥೆ ಕಲ್ಪಿಸಿ

ಬಂಟ್ವಾಳ: ಬಿ.ಸಿ.ರೋಡ್‌ನ ಬಸ್ ನಿಲ್ದಾಣದ ಪಕ್ಕದಲ್ಲಿ ಆಟೋ ರಿಕ್ಷಾಗಳಿಗೆ ಸೂಕ್ತ ಪಾರ್ಕಿಂಗ್ ವ್ಯವಸ್ಥೆ ಕಲ್ಪಿಸುವಂತೆ ಆಗ್ರಹಿಸಿ ಆಟೋ ರಿಕ್ಷಾ ಚಾಲಕರು ಹಾಗೂ ಮಾಲಕರ ಸಂಘದ ನಿಯೋಗವು ಬಂಟ್ವಾಳ ಶಾಸಕ ರಾಜೇಶ್ ನ್ಯಾಕ್ ಅವರನ್ನು ಸೋಮವಾರ ಬಿ.ಸಿ.ರೋಡಿನ ಅವರ ಕಚೇರಿಯಲ್ಲಿ ಭೇಟಿಯಾಗಿ ಮನವಿ ಸಲ್ಲಿಸಿತು.

ಪ್ರಸ್ತುತ ಬಿ.ಸಿ.ರೋಡ್ ಬಸ್ ನಿಲ್ದಾಣದ ಬಳಿ ಎರಡು ಆಟೋ ರಿಕ್ಷಾ ಪಾರ್ಕಿಂಗ್ ಸ್ಥಳಗಳಿದ್ದು, ದಿನದಿಂದ ದಿನಕ್ಕೆ ಪ್ರಯಾಣಿಕರ ಸಂಖ್ಯೆ ಹೆಚ್ಚುತ್ತಿರುವ ಹಿನ್ನೆಲೆಯಲ್ಲಿ ಈ ವ್ಯವಸ್ಥೆ ಸಾಕಾಗುತ್ತಿಲ್ಲ ಎಂದು ಆಟೋ ಚಾಲಕರ ನಿಯೋಗ ಶಾಸಕರ ಗಮನಕ್ಕೆ ತಂದರು. ಬಸ್ ನಿಲ್ದಾಣಕ್ಕಾಗಮಿಸುವ ಸಾರ್ವಜನಿಕರು, ವಿದ್ಯಾರ್ಥಿಗಳು, ಹಿರಿಯ



ನಾಗರಿಕರು ಹಾಗೂ ಮಹಿಳೆಯರು ತಕ್ಷಣ ಆಟೋ ಸೇವೆ ಪಡೆಯಲು ತೊಂದರೆ ಅನುಭವಿಸುತ್ತಿದ್ದಾರೆ ಎಂದು ವಿವರಿಸಿದರು. ಹೆಚ್ಚುತ್ತಿರುವ ವಾಹನ ದಟ್ಟಣೆ ಹಾಗೂ ಪ್ರಯಾಣಿಕರ ಬೇಡಿಕೆಯನ್ನು ಪರಿಗಣಿಸಿ, ಈಗಿರುವ ಎರಡು ಪಾರ್ಕಿಂಗ್ ಸ್ಥಳಗಳ ಜೊತೆಗೆ ಇನ್ನೆರಡು ಆಟೋ ರಿಕ್ಷಾ ಪಾರ್ಕಿಂಗ್ ಸ್ಥಳಗಳನ್ನು ಗುರುತಿಸಿ ಮಂಜೂರು ಮಾಡಬೇಕು ಎಂದು ಆಟೋಚಾಲಕರ ಸಂಘದ ಅಧ್ಯಕ್ಷ ವಿಶ್ವನಾಥ ಚಂಡ್ತಿಮಾರ್ ನೇತೃತ್ವದ ನಿಯೋಗ ಮನವಿ ಸಲ್ಲಿಸಿತು. ಮನವಿಗೆ ಸ್ಪಂದಿಸಿದ ಶಾಸಕರು ರಾಜೇಶ್ ನಾಯ್ಕ್ ಅವರು ಸಮಸ್ಯೆಯನ್ನು ಗಂಭೀರವಾಗಿ ಪರಿಗಣಿಸಿ, ಸಂಬಂಧಪಟ್ಟ ಅಧಿಕಾರಿಗಳು ಹಾಗೂ ಸಾರಿಗೆ ಇಲಾಖೆಯೊಂದಿಗೆ ಶೀಘ್ರವೇ ಚರ್ಚಿಸಿ ಸಾರ್ವಜನಿಕರಿಗೂ, ಆಟೋ ಚಾಲಕರಿಗೂ ಅನುಕೂಲವಾಗುವ ರೀತಿಯಲ್ಲಿ ಸೂಕ್ತ ಪರಿಹಾರ ಕಂಡುಕೊಳ್ಳಲಾಗುವುದು, ಅಗತ್ಯವಿದ್ದಲ್ಲಿ ಸ್ಥಳ ಪರಿಶೀಲನೆ ನಡೆಸಿ ಹೆಚ್ಚುವರಿ ಆಟೋ ಪಾರ್ಕಿಂಗ್ ಸ್ಥಳಗಳನ್ನು ಮಂಜೂರು ಮಾಡುವ ಕುರಿತು ಕ್ರಮ ಕೈಗೊಳ್ಳಲಾಗುವುದು ಎಂದು ಭರವಸೆ ನೀಡಿದರು.

ನಿಯೋಗದಲ್ಲಿ ಆಟೋ ರಿಕ್ಷಾ ಚಾಲಕರು ಮತ್ತು ಮಾಲಕರ ಸಂಘದ ಪದಾಧಿಕಾರಿಗಳು, ಹಿರಿಯ ಚಾಲಕರು ಹಾಗೂ ಸಂಘದ ಸದಸ್ಯರು ಉಪಸ್ಥಿತರಿದ್ದು, ಶಾಸಕರಿಗೆ ಮಾಹಿತಿ ನೀಡಿದರು.

ಪ್ರತಿಭಟನೆ ನಡೆಸಿದ್ದರು

ರಾ.ಹೆ.ಯ ಬಿ.ಸಿ.ರೋಡಿನ ಖಾಸಗಿ ಬಸ್ ನಿಲ್ದಾಣ ಬಳಿ ಇತ್ತೀಚೆಗೆ ಪುರಸಭೆ ತೆರವುಗೊಳಿಸಿದ್ದ ಬಸ್ ಶೆಲ್ಟರ್ ಸ್ಥಳದಲ್ಲಿ ಸಂಚಾರಿ ಪೊಲೀಸರು ಆಟೋ ರಿಕ್ಷಾ ನಿಲುಗಡೆಗೆ ಅವಕಾಶ ಕೊಡದ ಹಿನ್ನಲೆಯಲ್ಲಿ ರಿಕ್ಷಾ ಚಾಲಕರು ಕಳೆದ ಗುರುವಾರ ಹಠಾತ್ ಪ್ರತಿಭಟನೆ ನಡೆಸಿದ್ದರು. ಬಳಿಕ ಬಸ್ ನಿಲ್ದಾಣದ ಪಕ್ಕದ ವಾಣಿಜ್ಯ ಸಂಕೀರ್ಣ ವೊಂದರ ಮುಂಭಾಗವಿದ್ದ ಬಸ್ ಶೆಲ್ಟರನ್ನು ಪುರಸಭೆ ಇತ್ತೀಚೆಗೆ ತೆರವುಗೊಳಿಸಿತ್ತು.

ಮಾಜಿ ಸಚಿವ ರಮಾನಾಥ ರೈಗೆ ಮನವಿ

ಬಂಟ್ವಾಳ: ಬಿ.ಸಿ. ರೋಡ್ ರಿಕ್ಷಾ ಚಾಲಕರ ನಿಲ್ದಾಣದ ಸಮಸ್ಯೆಗೆ ಸಂಬಂಧಿಸಿದಂತೆ ರಿಕ್ಷಾ ಚಾಲಕರ ನಿಯೋಗವೊಂದು ಮಾಜಿ ಸಚಿವರಾದ ಬಿ. ರಮಾನಾಥ ರೈ ಅವರ ನಿವಾಸಕ್ಕೆ ಭೇಟಿ ನೀಡಿ ಅಹವಾಲನ್ನು ಸಲ್ಲಿಸಿತು.

ರಿಕ್ಷಾ ಚಾಲಕರು ನಿಲ್ದಾಣದ ಕೊರತೆಯಿಂದ ಎದುರಾಗುತ್ತಿರುವ ತೊಂದರೆಗಳು, ಪ್ರಯಾಣಿಕರಿಗೆ ಉಂಟಾಗುತ್ತಿರುವ ಅಸೌಕರ್ಯ ಹಾಗೂ ತಮ್ಮ ಜೀವನೋಪಾಯದ ಮೇಲಿನ ಪರಿಣಾಮದ ಬಗ್ಗೆ ಮಾಜಿ ಸಚಿವರ ಗಮನಕ್ಕೆ ತಂದರು. ರಿಕ್ಷಾ ಚಾಲಕರ ಅಹವಾಲುಗಳನ್ನು ಆಲಿಸಿದ ಮಾಜಿ ಸಚಿವ ಬಿ. ರಮಾನಾಥ ರೈ ಅವರು ಸಮಸ್ಯೆಯ ಗಂಭೀರತೆಯನ್ನು ಅರಿತು, ಸಂಬಂಧಪಟ್ಟ ಅಧಿಕಾರಿಗಳು ಹಾಗೂ



ಸ್ಥಳೀಯಾಡಳಿತದೊಂದಿಗೆ ಚರ್ಚಿಸಿ ಶೀಘ್ರದಲ್ಲೇ ಸೂಕ್ತ ಪರಿಹಾರ ಕಂಡುಕೊಳ್ಳಲು ಅಗತ್ಯ ಕ್ರಮ ಕೈಗೊಳ್ಳುವುದಾಗಿ ಭರವಸೆ ನೀಡಿದರು

ಸುತ್ತ ಮುತ್ತ

ಚಿನ್ನ, ಬೆಳ್ಳಿ ಕೆಲಸಗಾರರ ಸಂಘದ ಅಧ್ಯಕ್ಷರ ಆಯ್ಕೆ



ಕುಂದಾಪುರ: ತಾಲೂಕು ಚಿನ್ನ ಬೆಳ್ಳಿ ಕೆಲಸಗಾರರ ಸಂಘ ಕುಂದಾಪುರ ಇದರ 2026– 27 ನೇ ಸಾಲಿಗೆ ಅಧ್ಯಕ್ಷರಾಗಿ ಕೃಷ್ಣ ಆಚಾರ್ಯ ಓಂಕಾರ್ ಕೋಟ ಆಯ್ಕೆಯಾಗಿದ್ದಾರೆ. ಪ್ರಧಾನ ಕಾರ್ಯದರ್ಶಿಯಾಗಿ ಶಶಿಧರ ಆಚಾರ್ಯ ಬಂಡಾಡಿ ಮತ್ತು ಖಜಾಂಚಿಯಾಗಿ ಗಣೇಶ ಆಚಾರ್ಯ ಮುಳ್ಳಿಕಟ್ಟೆ ಹಾಗೂ ಇತರ ಪದಾಧಿಕಾರಿಗಳು ಆಯ್ಕೆಯಾಗಿದ್ದಾರೆ.

ಜುಲೈ 26ರಂದು ಕ್ರೀಡೋತ್ಸವ

ಮಂಜೇಶ್ವರ: ಬಂಟರ ಸಂಘ ವರ್ಕಾಡಿ ವಲಯ ಕ್ರೀಡೋತ್ಸವ – 2026 ಕಾರ್ಯಕ್ರಮವು ಜುಲೈ 26ರಂದು ವರ್ಕಾಡಿ ಸಮೀಪದ ಪಾವಳ ಗದ್ದೆಯಲ್ಲಿ ವಿವಿಧ ಕ್ರೀಡಾ ಸ್ಪರ್ಧೆಗಳೊಂದಿಗೆ ಜರಗಲಿದೆ. ಈ ಸಂದರ್ಭದಲ್ಲಿ ಹಲವಾರು ಆಕರ್ಷಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ.

ಪತ್ರಿಕಾ ದಿನಾಚರಣೆ: ಎಂ.ಬಿ.ವಿನ್ಸೆಂಟ್'ರಿಗೆ ವಾರ್ಷಿಕ ದತ್ತಿ ಪ್ರಶಸ್ತಿ



ಕುಶಾಲನಗರ: ಕೊಡಗು ಪತ್ರಕರ್ತರ ಸಂಘದ ಕುಶಾಲನಗರ ತಾಲೂಕು ಘಟಕದಲ್ಲಿ ಹಿರಿಯ ಪತ್ರಕರ್ತರಿಗೆ ಪುಲಿಯಂಡ ರಾಮ್ ದೇವಯ್ಯ ಅವರು ಜ್ಞಾನಗಂಗಾ ಶಾಲೆಯ ಹೆಸರಿನಲ್ಲಿ ಸ್ಥಾಪಿಸಿರುವ ವಾರ್ಷಿಕ ದತ್ತಿ ಪ್ರಶಸ್ತಿಗೆ ಸುಂಟಿಕೊಪ್ಪದ ಪತ್ರಕರ್ತ ಎಂ.ಬಿ.ವಿನ್ಸೆಂಟ್ ಅವರು ಭಾಜನರಾಗಿದ್ದಾರೆ.

ಕುಶಾಲನಗರ ತಾಲೂಕು ಪತ್ರಕರ್ತರ ಸಂಘದಿಂದ, ಗುಡ್ಡೆಹೊಸೂರಿನ ಐಶ್ವರ್ಯ ಪಬ್ಲಿಕ್ ಶಾಲೆಯಲ್ಲಿ ಜು.4ರ ಪೂರ್ವಾಹ್ನ 11 ಗಂಟೆಗೆ ನಡೆಯುವ ಪತ್ರಿಕಾ ದಿನಾಚರಣೆ ಸಮಾರಂಭದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುತ್ತದೆ. ಪತ್ರಿಕಾ ದಿನಾಚರಣೆ ಕಾರ್ಯಕ್ರಮವನ್ನು ಐಶ್ವರ್ಯ ವಿದ್ಯಾಸಂಸ್ಥೆಯ ಅಧ್ಯಕ್ಷ ಪುಲಿಯಂಡ ರಾಮ್ ದೇವಯ್ಯ ಅವರು ಉದ್ಘಾಟಿಸಲಿದ್ದು, ಸಂಘದ ಅಧ್ಯಕ್ಷ ಬಿ.ಸಿ.ದಿನೇಶ್ ಅವರು ಅಧ್ಯಕ್ಷತೆ ವಹಿಸಲಿದ್ದಾರೆ. ಕೊಡಗು ಪತ್ರಕರ್ತರ ಸಂಘದ ಅಧ್ಯಕ್ಷ ಅನಿಲ್ ಎಚ್.ಟಿ. ಮುಖ್ಯ ಅತಿಥಿಯಾಗಿ ಭಾಗವಹಿಸಲಿದ್ದು, ಕೊಡಗು ಪತ್ರಿಕಾಭವನ ಟ್ರಸ್ಟ್‌ನ ಪ್ರಧಾನ ಕಾರ್ಯದರ್ಶಿ, 'ಸಂಯುಕ್ತ ಕರ್ನಾಟಕ' ಜಿಲ್ಲಾ ವರದಿಗಾರ ಎಸ್.ಜಿ.ಉಮೇಶ್ ಅವರು ದಿನದ ಮಹತ್ವದ ಕುರಿತು ಮಾತನಾಡಲಿದ್ದಾರೆ. ಗುಡ್ಡೆಹೊಸೂರು ಗ್ರಾಮ ಪಂಚಾಯತ್ ಅಭಿವೃದ್ಧಿ ಅಧಿಕಾರಿ ಎಂ.ಆರ್. ಸುಮೇಶ್, ಐಶ್ವರ್ಯ ಪಬ್ಲಿಕ್ ಶಾಲೆಯ ಪ್ರಾಂಶುಪಾಲ ಅಮ್ಮಾಟಂಡ ಎ. ಜೋಯಪ್ಪ ಸುಂಟಿಕೊಪ್ಪ ನಾಡ ಕಚೇರಿ ಕಂದಾಯ ಪರಿವೀಕ್ಷಕ ಎಂ.ಎಚ್.ಪ್ರಶಾಂತ್ ಅವರುಗಳು ಅತಿಥಿಗಳಾಗಿ ಪಾಲ್ಗೊಳ್ಳಲಿದ್ದಾರೆ ಎಂದು ಸಂಘದ ಪ್ರಕಟಣೆ ತಿಳಿಸಿದೆ.

ಸುಂಟಿಕೊಪ್ಪ ಲಯನ್ಸ್ ಸಂಸ್ಥೆಯ ನೂತನ ಅಧ್ಯಕ್ಷರ ಆಯ್ಕೆ





ಸುಂಟಿಕೊಪ್ಪ: ಸುಂಟಿಕೊಪ್ಪ ಲಯನ್ಸ್ ಸಂಸ್ಥೆಯ 2026–2027 ಸಾಲಿನ ನೂತನ ಅಧ್ಯಕ್ಷರಾಗಿ ಎಸ್. ಜಿ. ಶ್ರೀನಿವಾಸ್, ಪ್ರಧಾನ ಕಾರ್ಯದರ್ಶಿಯಾಗಿ ಗ್ಲೇನ್ ಮನೇಜಸ್ ಆಯ್ಕೆಗೊಳಿಸಲಾಯಿತು.

ಸಂಸ್ಥೆಯ ಕಚೇರಿಯಲ್ಲಿ ಚೆಟ್ಟಿಮಾಡ ರಕ್ಷಿತ್ ಅವರ ಅಧ್ಯಕ್ಷತೆಯಲ್ಲಿ ನಡೆದ ವಾರ್ಷಿಕ ಮಹಾಸಭೆಯಲ್ಲಿ ನೂತನ ಪದಾಧಿಕಾರಿಗಳನ್ನು ಆಯ್ಕೆ ಮಾಡಲಾಯಿತು. ಖಜಾಂಚಿಯಾಗಿ ಕೆ.ಪಿ. ಜಗನ್ನಾಥ್ ಆಯ್ಕೆಯಾದರು.

ನೂತನ ಪದಾಧಿಕಾರಿಗಳ ಹಾಗೂ ಆಡಳಿತ ಮಂಡಳಿಯ ಪದಗ್ರಹಣ ಸಮಾರಂಭ ಸಂಸ್ಥೆಯ ಅಧ್ಯಕ್ಷ ಚೆಟ್ಟಿಮಾಡ ರಕ್ಷಿತ್ ಇವರ ಅಧ್ಯಕ್ಷತೆಯಲ್ಲಿ ಜು. 1 ರಂದು ಸುಂಟಿಕೊಪ್ಪ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಸಭಾಂಗಣದಲ್ಲಿ ನಡೆಯಲಿದ್ದು ಆಡಳಿತ ಮಂಡಳಿ ನೂತನ ತಂಡಕ್ಕೆ ಅಧಿಕಾರ ಹಸ್ತಾಂತರಿಸಲಿದ್ದಾರೆ. ಈ ಸಮಾರಂಭಕ್ಕೆ ಲಯನ್ಸ್ ರಾಜ್ಯಪಾಲರಾದ ಗೋವರ್ಧನ್ ಶೆಟ್ಟಿ ಅವರು ಮುಖ್ಯ ಅತಿಥಿಯಾಗಿ ಭಾಗವಹಿಸಿ ನೂತನ ಪದಾಧಿಕಾರಿಗಳಿಗೆ ಪ್ರತಿಜ್ಞಾವಿಧಿ ಬೋಧಿಸಲಿದ್ದಾರೆ.

ಕೋಟೆ, ಅರಮನೆ,ಗದ್ದುಗೆ ಸಂರಕ್ಷಣೆಗೆ ಅನುದಾನ ಬಿಡುಗಡೆಗೊಳಿಸುವಂತೆ ಸಿಎಂ ಡಿಕೆಶಿಗೆ ಮನವಿ

ಮಡಿಕೇರಿಯ ಐತಿಹಾಸಿಕ ಸ್ಥಳಗಳ ಅಭಿವೃದ್ಧಿಗೆ ಬೇಕಿದೆ ಸಾಥ್

ಮಡಿಕೇರಿ: ನಗರದಲ್ಲಿರುವ ಐತಿಹಾಸಿಕ ಕೋಟೆ ಅರಮನೆ ಹಾಗೂ ಗದ್ದುಗೆಯನ್ನು ಸಂರಕ್ಷಿಸುವಂತೆ ಹಾಗೂ ಅಭಿವೃದ್ಧಿಗೊಳಿಸಲು ಸಹಕರಿಸುವಂತೆ ಕೊಡಗಿನವರಾದ ಕರ್ನಾಟಕ ರಾಜ್ಯ ಮಾಹಿತಿ ಹಕ್ಕು ಆಯೋಗದ ನಿವೃತ್ತ ಆಯುಕ್ತ ಜೆ.ಎಸ್. ವಿರೂಪಾಕ್ಷಯ್ಯ ಅವರು ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರನ್ನು ಒತ್ತಾಯಿಸಿದ್ದಾರೆ.

ಈ ಸಂಬಂಧ ಮುಖ್ಯಮಂತ್ರಿಯವರಿಗೆ ಪತ್ರ ಬರೆದಿರುವ ಅವರು, ಕೊಡಗನ್ನು ಆಳಿದ ರಾಜರು ನಿರ್ಮಿಸಿದ ಮಡಿಕೇರಿ ಅರಮನೆ, ಕೋಟೆ ಹಾಗೂ ರಾಜವಂಶಸ್ಥರ ಗದ್ದುಗೆಗಳು ಸೇರಿದಂತೆ ಐತಿಹಾಸಿಕ ಮತ್ತು ಸಾಂಸ್ಕೃತಿಕ ಮಹತ್ವವುಳ್ಳ ಸ್ಮಾರಕಗಳು ದುಸ್ಥಿತಿಯಲ್ಲಿವೆ. ಇವುಗಳ ಕಾಯಕಲ್ಪಕ್ಕೆ ಸೂಕ್ತ ಸ್ಪಂದನ ದೊರೆಯದ ಹಿನ್ನೆಲೆಯಲ್ಲಿ ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ದಾಖಲಿಸಲಾಗಿತ್ತು. ಅರ್ಜಿಯ ವಿಚಾರಣೆಯ ಸಂದರ್ಭದಲ್ಲಿ ಮಂಡಿಸಲಾದ ವಾದಗಳು, ದಾಖಲೆಗಳು ಹಾಗೂ ಐತಿಹಾಸಿಕ ನಿದರ್ಶನಗಳನ್ನು ಪರಿಗಣಿಸಿ, ಅಂದಿನ ಮುಖ್ಯ



ನ್ಯಾಯಮೂರ್ತಿ ಅಭಯ್ ಶ್ರೀನಿವಾಸ್ ಓಕ್ ಅವರ ಪೀಠವು ಕರ್ನಾಟಕ ಸರ್ಕಾರಕ್ಕೆ ಅಗತ್ಯ ಕ್ರಮ ಕೈಗೊಳ್ಳುವಂತೆ ನಿರ್ದೇಶನ ನೀಡಿತ್ತು. ಅದರನ್ವಯ, ಮಡಿಕೇರಿ ಅರಮನೆಯ ದುರಸ್ತಿ ಮತ್ತು ಸಂರಕ್ಷಣೆ ಕಾರ್ಯಕ್ಕಾಗಿ ಸುಮಾರು ರೂ. 10.50 ಕೋಟಿ ಅನುದಾನವನ್ನು ಬಿಡುಗಡೆ ಮಾಡಿ, ಕೇಂದ್ರ ಪುರಾತತ್ವ ಇಲಾಖೆಯ ಮೂಲಕ ಕಾರ್ಯ ಕೈಗೊಳ್ಳುವಂತೆ ಆದೇಶಿಸಲಾಗಿತ್ತು. ಈ ಅನುದಾನದ ಆಧಾರದ ಮೇಲೆ ಮಡಿಕೇರಿ ಅರಮನೆಯ ದುರಸ್ತಿ ಕಾರ್ಯ ಆರಂಭಗೊಂಡಿದ್ದರೂ, ಸುಮಾರು ನಾಲ್ಕು ವರ್ಷಗಳಾದ ನಂತರವೂ ಕಾಮಗಾರಿ ಸಂಪೂರ್ಣವಾಗಿ ಪೂರ್ಣಗೊಂಡಿಲ್ಲ ಎಂದು ತಮ್ಮ ಪತ್ರದಲ್ಲಿ ಬೇಸರ ವ್ಯಕ್ತಪಡಿಸಿದ್ದಾರೆ.

> **5 ಕೋಟಿ ಅನುದಾನ ಅನಿವಾರ್ಯ**
>
> ಅರಮನೆಯ ಸುತ್ತಲಿನ ಐತಿಹಾಸಿಕ ಕೋಟೆಯ ದುರಸ್ತಿ ಹಾಗೂ ಸಂರಕ್ಷಣೆ ಕಾರ್ಯ ಇನ್ನೂ ಪ್ರಾರಂಭವಾಗಿಲ್ಲ. ಈ ಕಾರ್ಯಗಳಿಗೆ ಅಂದಾಜು ರೂ. 3 ಕೋಟಿ ಹಾಗೂ ಅರಮನೆ ಸುತ್ತಮುತ್ತಲಿನ ರಸ್ತೆಗಳು ಸಂಪೂರ್ಣ ಹಾಳಾಗಿದ್ದು, ಅವುಗಳ ಅಭಿವೃದ್ಧಿ ಹಾಗೂ ದುರಸ್ತಿಗೂ ಅನುದಾನದ ಅಗತ್ಯವಿದೆ. ರೂ. 5 ಕೋಟಿ ಹೆಚ್ಚುವರಿ ಅನುದಾನದ ಅವಶ್ಯಕತೆ ಇದೆ.
>
> • ವಿರೂಪಾಕ್ಷಯ್ಯ

ಅಂದಿನ ರಾಜವಂಶಸ್ಥರ ಗದ್ದುಗೆಗಳ ಸಂರಕ್ಷಣೆಗಾಗಿ ಸುಮಾರು 19 ಎಕರೆ ಭೂಮಿಯನ್ನು ಮೀಸಲಿರಿಸಲಾಗಿದ್ದು, ಅದರಲ್ಲಿ ಸುಮಾರು 1.50 ಎಕರೆ ಭೂಮಿಯು ಅತಿಕ್ರಮಣಕ್ಕೊಳಗಾಗಿದೆ. ಈ ಅತಿಕ್ರಮಣವನ್ನು ತೆರವುಗೊಳಿಸಲು ಉಚ್ಚ ನ್ಯಾಯಾಲಯವು ನಿರ್ದೇಶನ ನೀಡಿದ್ದರೂ, ವಾಸ್ತವಾಂಶಗಳನ್ನು ಸಮರ್ಪಕವಾಗಿ ನ್ಯಾಯಾಲಯದ ಗಮನಕ್ಕೆ ತರದ ಕಾರಣ, ಕೆಲ ವ್ಯಕ್ತಿಗಳು ಏಕ ಸದಸ್ಯ ಪೀಠದಿಂದ ತಡೆಯಾಜ್ಞೆ ಪಡೆದಿದ್ದಾರೆ.

- ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್‌ಗೆ ಪತ್ರ ಬರೆದ ಜೆ.ಎಸ್. ವಿರೂಪಾಕ್ಷಯ್ಯ
- ಮಡಿಕೇರಿಯ ಐತಿಹಾಸಿಕ ಮತ್ತು ಸಾಂಸ್ಕೃತಿಕ ಮಹತ್ವವುಳ್ಳ ಸ್ಮಾರಕಗಳ ಕಾಯಕಲ್ಪಕ್ಕೆ ಸೂಕ್ತ ಸ್ಪಂದನೆ ಅಗತ್ಯ
- ನಾಲ್ಕು ವರ್ಷಗಳಿಂದ ಅರ್ಧಕ್ಕೆ ನಿಂತ ಕಾಮಗಾರಿ
- ಅತಿಕ್ರಮಣಕ್ಕೊಳಗಾಗಿದೆ ಸುಮಾರು 1.50 ಎಕರೆ ಭೂಮಿ
- ಮಡಿಕೇರಿ ಅರಮನೆ, ರಾಜವಂಶಸ್ಥರ ಗದ್ದುಗೆಗಳ ಸಂರಕ್ಷಣೆ, ಅಭಿವೃದ್ಧಿಗೆ ತುರ್ತು ಕ್ರಮ ಕೈಗೊಳ್ಳುವಂತೆ ಮನವಿ

ಸಂರಕ್ಷಣೆಗೆ ಎಲ್ಲರ ಸಹಕಾರ ಅಗತ್ಯ

ಪ್ರಸ್ತುತ ಈ ತಡೆಯಾಜ್ಞೆಯು ಅತಿಕ್ರಮಣಕಾರರಿಗೆ ಅನುಕೂಲಕರವಾಗಿದ್ದು, ಅದನ್ನು ತೆರವುಗೊಳಿಸಲು ಸರ್ಕಾರದ ಪರ ವಕೀಲರು ಅಗತ್ಯ ಕ್ರಮ ಕೈಗೊಂಡಿರುವುದು ಕಂಡುಬರುತ್ತಿಲ್ಲ. ಪರಿಣಾಮವಾಗಿ, ರಾಜವಂಶಸ್ಥರ ಗದ್ದುಗೆಗಳ ಸಂರಕ್ಷಣೆ ಸಮರ್ಪಕವಾಗಿ ನಡೆಯುತ್ತಿಲ್ಲ ಹಾಗೂ ಸಂಪ್ರದಾಯಬದ್ಧ ಪೂಜಾ ಕಾರ್ಯಗಳೂ ನಿರ್ವಹಣೆಯಾಗುತ್ತಿಲ್ಲ. ಈ ಹಿನ್ನೆಲೆ ಸಂಬಂಧಪಟ್ಟ ಎಲ್ಲಾ ಇಲಾಖೆಗಳ ಅಧಿಕಾರಿಗಳು, ಕೊಡಗು ಜಿಲ್ಲೆಯ ಜನಪ್ರತಿನಿಧಿಗಳು, ಸ್ಥಳೀಯ ಶಾಸಕರು ಹಾಗೂ ಲೋಕಸಭಾ ಸದಸ್ಯರನ್ನು ಒಳಗೊಂಡ ಸಭೆಯನ್ನು ನಡೆಸಿ ಮಡಿಕೇರಿ ಅರಮನೆ, ಕೋಟೆ ಹಾಗೂ ರಾಜವಂಶಸ್ಥರ ಗದ್ದುಗೆಗಳ ಸ್ಥಳ ಪರಿಶೀಲನೆ ನಡೆಸಿ, ಅವುಗಳ ಸಮಗ್ರ ಸಂರಕ್ಷಣೆ, ಅಭಿವೃದ್ಧಿ ಹಾಗೂ ಅತಿಕ್ರಮಣ ತೆರವುಗೊಳಿಸುವ ನಿಟ್ಟಿನಲ್ಲಿ ಅಗತ್ಯ ಮತ್ತು ತುರ್ತು ಕ್ರಮಗಳನ್ನು ಕೈಗೊಳ್ಳುವಂತೆ ಅವರು ಕೋರಿದ್ದಾರೆ.

ಶಿವಾಜಿ ದೇಶಪ್ರೇಮ, ಸಾಹಸ, ಬುದ್ಧಿವಂತಿಕೆ ಪ್ರೇರಣಾದಾಯಕ



ಬಂಟ್ವಾಳ: ಕಲ್ಲಡ್ಕ ಶ್ರೀರಾಮ ಹಿ.ಪ್ರಾ.ಶಾಲೆಯಲ್ಲಿ ಶಿವಾಜಿಯ ಪಟ್ಟಾಭಿಷೇಕ ದಿನವನ್ನು 'ಹಿಂದೂ ಸಾಮ್ರಾಜ್ಯೋತ್ಸವ' ದಿನ ಹಾಗೂ ಮೇ ಮತ್ತು ಜೂನ್ ತಿಂಗಳಲ್ಲಿ ಹುಟ್ಟಿದ ಮಕ್ಕಳ ಸಾಮೂಹಿಕ ಹುಟ್ಟುಹಬ್ಬ ಹಾಗೂ ಭಜನಾ ಕಾರ್ಯಕ್ರಮ ಆಚರಿಸಲಾಯಿತು.

ಶ್ರೀರಾಮ ಪ್ರೌಢ ಶಾಲೆಯ ನಿವೃತ್ತ ದೈಹಿಕ ಶಿಕ್ಷಣ ಶಿಕ್ಷಕ ರಾಧಾಕೃಷ್ಣ ಅಡ್ಯಂತಾಯ ಮಾತನಾಡಿ, ಶಿವಾಜಿಯ ಬಾಲ್ಯದ ಕಥೆ, ಶೌರ್ಯವನ್ನು ವಿವರಿಸಿ, 'ಶಿವಾಜಿ ಎಂದರೆ ಸ್ವಾಭಿಮಾನ, ಸ್ವಾವಲಂಬನೆ, ಶೌರ್ಯ, ಸ್ವಾತಂತ್ರ್ಯ, ತಂತ್ರಗಾರಿಕೆ. ರಾಷ್ಟ್ರಧರ್ಮಕ್ಕಾಗಿ, ಬದುಕಿದವನು. ಅವರ ದೇಶಪ್ರೇಮ, ಅಪ್ರತಿಮ ಸಾಹಸ, ಬುದ್ಧಿವಂತಿಕೆ, ಚಾಕಚಕ್ಯತೆ ನಮ್ಮೆಲರಿಗೆ ಪ್ರೇರಣಾದಾಯಕ. ನಾವು ಶಿವಾಜಿಯಂತೆ ರಾಷ್ಟ್ರಕ್ಕಾಗಿ ಬದುಕೋಣ' ಎಂದು ಮಕ್ಕಳಿಗೆ ಶುಭ ಹಾರೈಸಿದರು.

ಕಾರ್ಯಕ್ರಮದ ಮೊದಲಿಗೆ ಭಾರತ ಮಾತೆಗೆ ದೀಪ ಬೆಳಗಿಸಿ ನಂತರ ಶಿವಾಜಿ ಮಹಾರಾಜರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಲಾಯಿತು.

ಹುಟ್ಟುಹಬ್ಬ ಆಚರಿಸುವ ಮಕ್ಕಳಿಗೆ ಅಧ್ಯಾಪಕ ವೃಂದದವರು ಆರತಿ ಬೆಳಗಿ, ಅಕ್ಷತೆ ಹಾಕಿ, ತಿಲಕಧಾರಣೆ ಮಾಡಿ ಸಿಹಿ ನೀಡಿದರು. ಮಕ್ಕಳು ಭಾರತಮಾತೆಗೆ ಪುಷ್ಪಾರ್ಚನೆ ಮಾಡಿ ನಿಧಿ ಸಮರ್ಪಿಸಿದರು.

ನಂತರ 7ನೇ ತರಗತಿ ವಿದ್ಯಾರ್ಥಿಗಳಿಂದ ಭಜನಾ ಕಾರ್ಯಕ್ರಮ ನಡೆಯಿತು.

ವೇದಿಕೆಯಲ್ಲಿ ಶ್ರೀರಾಮ ಪ್ರಾಥಮಿಕ ಶಾಲಾಭಿವೃದ್ಧಿ ಸಮಿತಿ ಅಧ್ಯಕ್ಷರಾದ ಚಂದ್ರಶೇಖರ್ ಸಾಲಿಯಾನ್, ಶಾಲಾ ಮುಖ್ಯೋಪಾಧ್ಯಾಯರಾದ ರವಿರಾಜ್ ಕಣಂತೂರು, ಸಹಮುಖ್ಯೋಪಾಧ್ಯಾಯರಾದ ಸುಮಂತ್ ಆಳ್ವ ಎಂ. ಉಪಸ್ಥಿತರಿದ್ದರು.

ವಿದ್ಯಾರ್ಥಿಗಳಾದ ಸ್ಕಂದತೇಜ ಸ್ವಾಗತಿಸಿ, ಸನ್ನಿಧಿ ನಿರೂಪಿಸಿ, ಜಾಹ್ನವಿ ವಂದಿಸಿದರು.

ಬೋಳಾರದಲ್ಲಿ ಸ್ವಚ್ಛತಾ ಜಾಗೃತಿ ಅಭಿಯಾನ: ಎಲ್ಲೆಡೆ ಕ್ಲೀನ್ ಕ್ಲೀನ್!



ಮಂಗಳೂರು: ನಗರದ ಶ್ರೀ ಅಂಬಾ ಮಹೇಶ್ವರಿ ಸೇವಾ ಟ್ರಸ್ಟಿನ 'ಅವೇಕ್ ಕುಡ್ಲ' ಪರಿಕಲ್ಪನೆಯಡಿಯಲ್ಲಿ ವಿಜಯ ಗೇಮ್ಸ್ ಟೀಮ್ ಬೋಳಾರ ಹಾಗೂ ಕಾಸ್ಸಿಯಾ ಪ್ರೌಢ ಶಾಲೆಯ ಗೈಡ್ಸ್ ವಿಭಾಗದ ಸಹ ಯೋಗದಲ್ಲಿ ನಗರದ ಬೋಳಾರ ಪ್ರದೇಶದಲ್ಲಿ ಭಾನುವಾರ 'ಸ್ವಚ್ಛತಾ ಜಾಗೃತಿ ಅಭಿಯಾನ' ನಡೆಯಿತು.

ವಿಜಯ ಗೇಮ್ಸ್ ಟೀಮ್ ತಂಡದ ಅಧ್ಯಕ್ಷ ಮನೋಜ್ ಕೋಟ್ಯಾನ್ ಸಾರಥ್ಯದ ಸದಸ್ಯರ ತಂಡ ಬೋಳಾರ ರಸ್ತೆಯ ಸರ್ಕಾರಿ ಹಿ.ಪ್ರಾ ಶಾಲೆಯಿಂದ ಬೋಳಾರ ಕೆಡವಿನ ಬಾಗಿಲುವರೆಗಿನ ರಸ್ತೆಯ ಎರಡೂ ಬದಿಗಳ ಪ್ಲಾಸ್ಟಿಕ್ ಪೇಪರ್ ಸೇರಿದಂತೆ ಇನ್ನಿತರೆ ಕಸ-ಕಡ್ಡಿಗಳನ್ನು ತೆಗೆದು ಸ್ವಚ್ಛಗೊಳಿಸಿದರು. ತಂಡದ ಉಪಾಧ್ಯಕ್ಷರಾದ ದೀಪಕ್ ಸುವರ್ಣ, ಪ್ರವೀಣ್ ಅವರನ್ನೊಳಗೊಂಡ ಮತ್ತೊಂದು ತಂಡ ನೇತ್ರಾವತಿ ನದಿ ತಟದಲ್ಲಿ ಕಸವನ್ನು ಹೆಕ್ಕಿ ಸ್ವಚ್ಛಗೊಳಿಸಿದರು.

ಕಾಸ್ಸಿಯಾ ಪ್ರೌಢ ಶಾಲೆಯ ಗೈಡ್ಸ್ ಕ್ಯಾಪ್ಟನ್ ಪ್ರೀತಿ ಲೋಬೊ ಮತ್ತು ಅಂಗನವಾಡಿ ಕಾರ್ಯಕರ್ತೆ ಶೋಭಾ ಅವರ ನೇತೃತ್ವದಲ್ಲಿ ಶಾಲಾ ಗೈಡ್ಸ್ ವಿದ್ಯಾರ್ಥಿನಿಯರು ಬೋಳಾರ ರಸ್ತೆಯ ಅಂಗಡಿ-ಮುಂಗಟ್ಟುಗಳಿಗೆ ತೆರಳಿ ಕಡ್ಡಾಯವಾಗಿ ಕಸದ ಡಬ್ಬಿ ಇಡುವಂತೆ ಹಾಗೂ ಕಸವನ್ನು ವೈಜ್ಞಾನಿಕವಾಗಿ ವಿಂಗಡಿಸುವಂತೆ ಹಾಗೂ ಪಾಲಿಕೆಯ ವಾಹನಕ್ಕೆ ನೀಡುವಂತೆ ಜಾಗೃತಿ ಮೂಡಿಸಿದರು. ನಗರ ಪಾಲಿಕೆ ವತಿಯಿಂದ ರಸ್ತೆ ಬದಿಯಲ್ಲಿ ಬೆಳೆದಿದ್ದ ಹುಲ್ಲುಗಳನ್ನು ಕಟಾವು ಮಾಡಲಾಯಿತು.

ಸ್ವಚ್ಛತಾ ಅಭಿಯಾನದಲ್ಲಿ ಟ್ರಸ್ಟಿನ ಸದಸ್ಯರಾದ ರಾಮ ದೇವಾಡಿಗ, ಸರಿತಾ, ವಿಶ್ವಕರ್ಮ ಸಹಕಾರಿ ಬ್ಯಾಂಕ್‌ನ ಸಾರ್ವಜನಿಕ ಸಂಪರ್ಕಾಧಿಕಾರಿ ಚೇತನ್, ವಿಜಯ ಗೇಮ್ಸ್ ಟೀಮ್ ತಂಡದ ಹಿರಿಯ ಸದಸ್ಯರಾದ ಗಣೇಶ್, ಸುಧೀರ್ ಬೋಳಾರ್, ಟ್ರಸ್ಟಿನ ಕಾರ್ಯಕ್ರಮ ಸಂಯೋಜಕ ಪುನೀತ್ ಉಪಸ್ಥಿತರಿದ್ದರು. ಟ್ರಸ್ಟಿನ ಕಾರ್ಯ ದರ್ಶಿ ಉಮಾನಾಥ್ ಕೋಟೆಕಾರ್ ವಂದಿಸಿದರು.



ಪಲ್ಸ್ ಪೋಲಿಯೋ ಲಸಿಕಾ ಅಭಿಯಾನದ ಅಂಗವಾಗಿ ಕಾರ್ಕಳದ ತಾಲೂಕು ಸಾರ್ವಜನಿಕ ಆಸ್ಪತ್ರೆಯಲ್ಲಿ ಲಸಿಕಾ ಅಭಿಯಾನಕ್ಕೆ ಶಾಸಕ ವಿ. ಸುನಿಲ್ ಕುಮಾರ್ ಮಗುವಿಗೆ ಪೋಲಿಯೋ ಲಸಿಕೆಯ ಎರಡು ಹನಿ ನೀಡುವ ಮೂಲಕ ಚಾಲನೆ ನೀಡಿದರು. ಕಾರ್ಯಕ್ರಮದಲ್ಲಿ ಆರೋಗ್ಯ ಇಲಾಖೆಯ ಅಧಿಕಾರಿ ಗಳು, ವೈದ್ಯರು, ದಾದಿಯರು, ಆಶಾ ಕಾರ್ಯ ಕರ್ತೆಯರು ಹಾಗೂ ಆರೋಗ್ಯ ಸಿಬ್ಬಂದಿ ಉಪಸ್ಥಿತರಿದ್ದರು.



ಉಡುಪಿ ಜಿಲ್ಲಾಡಳಿತ, ಜಿ.ಪಂ., ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಕುಂದಾಪುರ ತಾಲೂಕು ಆರೋಗ್ಯ ಇಲಾಖೆ ಹಾಗೂ ವಿವಿಧ ಇಲಾಖೆಗಳ ಸಹಯೋಗದಲ್ಲಿ ಕುಂದಾಪುರ ಹಾಗೂ ಬೈಂದೂರು ತಾಲೂಕಿನಾದ್ಯಂತ ಭಾನುವಾರ ಪಲ್ಸ್ ಪೋಲಿಯೋ ಲಸಿಕೆ ಅಭಿಯಾನ ನಡೆಯಿತು. ಕುಂದಾಪುರ ಸರಕಾರಿ ಉಪ ವಿಭಾಗೀಯ ಆಸ್ಪತ್ರೆ ಹಾಗೂ ಬೈಂದೂರು ಸರಕಾರಿ ಆಸ್ಪತ್ರೆಯಲ್ಲಿ ಮಕ್ಕಳಿಗೆ ಪೋಲಿಯೋ ಲಸಿಕೆ ಹಾಕುವ ಮೂಲಕ ಕುಂದಾಪುರ ತಾಲೂಕು ಆರೋಗ್ಯಾಧಿಕಾರಿ ಡಾ. ಪ್ರೇಮಾನಂದ್ ಚಾಲನೆ ನೀಡಿದರು.

ಮಂಡೆಕೋಲು ಗ್ರಾಮದ ಅಭಿವೃದ್ಧಿ ಕೆಲಸಗಳಿಗೆ ಶಾಸಕಿ ಮುರುಳ್ಯ ಚಾಲನೆ



ಸುಳ್ಯ: ಸುಳ್ಯ ವಿಧಾನಸಭಾ ಕ್ಷೇತ್ರದ ಶಾಸಕಿ ಭಾಗೀರಥಿ ಮುರುಳ್ಯ ಮಂಡೆಕೋಲು ಗ್ರಾಮದಲ್ಲಿ ಅಭಿವೃದ್ಧಿಗೊಂಡ ರಸ್ತೆ ಹಾಗೂ ಶಾಲೆಯಲ್ಲಿ ಎಲ್‌ಕೆಜಿ ಪ್ರಾರಂಭ ಸೇರಿದಂತೆ ಇತರೆ ಕಾರ್ಯಕ್ರಮದಲ್ಲಿ ಸೋಮವಾರ ಭಾಗವಹಿಸಿ ಶುಭ ಹಾರೈಸಿದರು.

ಮಂಡೆಕೋಲು ಗ್ರಾಮದ ಬಾಯ್ಕೋಡಿ-ಚೇರ್ದಮೂಲೆ ಪರಿಶಿಷ್ಟ ಜಾತಿ ಕಾಲೋನಿ ಸಂಪರ್ಕ ರಸ್ತೆ 10 ರೂ. ಲಕ್ಷದಲ್ಲಿ ಅಭಿವೃದ್ಧಿಗೊಂಡಿದ್ದು, ಮಂಡೆಕೋಲು ಬೇಂಗತ್ತಮಲೆ ಪರಿಶಿಷ್ಟ ಪಂಗಡ ಕಾಲೋನಿ ರಸ್ತೆ ರೂ.5.5 ಲಕ್ಷ ಅನುದಾನದಲ್ಲಿ ನಿರ್ಮಾಣಗೊಂಡಿದ್ದು ಇದರ ಜೊತೆಗೆ ಮಂಡೆಕೋಲು ಸ. ಪ್ರಾ. ಶಾಲೆಯಲ್ಲಿ ಎಲ್‌ಕೆಜಿ ತರಗತಿಗಳನ್ನು ಉದ್ಘಾಟಿಸಲಾಯಿತು. ಬಳಿಕ ಪಕ್ಷದ ಹಿರಿಯ ಕಾರ್ಯಕರ್ತ ದೇವಪ್ಪ ನಾಯ್ಕ್ ಮನೆಗೆ ಭೇಟಿ ನೀಡಿದರು. ಗ್ರಾ. ಪಂ.ಮಾಜಿ ಅಧ್ಯಕ್ಷೆ ವಿನುತ ಪಾತಿ ಕಲ್ಲು, ತಾ.ಪಂ. ಮಾಜಿ ಸದಸ್ಯೆ ಮಮತ ಬೊಳುಗಲ್ಲು, ಮಾಜಿ ಸದಸ್ಯ ಅನಿಲ್ ತೊಟಪ್ಪಾಡಿ, ಬಿಜೆಪಿ ಮಂಡಲ ಪ್ರಮುಖ ರಾದ ಸುಬೋದ್ ಶೆಟ್ಟಿ ಮೆನಾಲ, ಜಯ ರಾಜ್ ಕುಕ್ಕೆಟ್ಟಿ, ಸುರೇಶ ಕಣೆಮಾರಡ್ಕ, ಶಿವಪ್ರಸಾದ್ ಉಗ್ರಾಣಿ ಮನೆ, ಉದಯ ಆಚಾರ್ ಉಪಸ್ಥಿತರಿದ್ದರು.

ಬಂಟ್ವಾಳ: ಚಿಕ್ಕ ಮೇಳಗಳ ಒಕ್ಕೂಟದಿಂದ ಪರವಾನಗಿ ಪತ್ರ, ಸಾಂತ್ವನ ನಿಧಿ ವಿತರಣೆ



ಬಂಟ್ವಾಳ: ತೆಂಕುತಿಟ್ಟು ಚಿಕ್ಕ ಮೇಳಗಳ ಒಕ್ಕೂಟ ಇದರ ವತಿಯಿಂದ 2026ರ ನವೀಕರಿಸಲಾದ ತಂಡಗಳಿಗೆ ಪರವಾನಿಗೆ ಪತ್ರ ಹಾಗೂ ಸಾಂತ್ವನ ನಿಧಿ ವಿತರಿಸಲಾಯಿತು.

ಸೋಮವಾರ ಬಿ.ಸಿ.ರೋಡಿನಲ್ಲಿ ಒಕ್ಕೂಟದ ಅಧ್ಯಕ್ಷ ಸರಪಾಡಿ ಅಶೋಕ್ ಶೆಟ್ಟಿ ಅವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಭಾಗವಹಿಸಿದ ತಂಡದ 45 ಮಂದಿ ಸಂಚಾಲಕರುಗಳು 2026ರ ನವೀಕರಿಸಲಾದ ತಂಡಗಳಿಗೆ ಪರವಾನಗಿ ಪತ್ರ ವಿತರಿಸಲಾಯಿತು. ಕಳೆದ ವರ್ಷ ಚಿಕ್ಕ ಮೇಳದ ತಿರುಗಾಟದಲ್ಲಿ ವಾಹನ ಅಪಘಾತದಲ್ಲಿ ನಿಧನರಾದ ಸತೀಶ ಆಚಾರ್ಯ ವೇಣೂರು ಅವರ ತಾಯಿ ವಿನೋದ ಅವರಿಗೆ ಸಾಂತ್ವನ ನಿಧಿ ಹಾಗೂ ಇತ್ತೀಚೆಗೆ ಅಪಘಾತಕ್ಕೊಳಪಟ್ಟ ಶ್ರೀನಿಧಿ ಭಟ್ ಕಟೀಲು ಅವರಿಗೂ ಸಾಂತ್ವನ ನಿಧಿ ವಿತರಿಸಲಾಯಿತು. ಉಪಾಧ್ಯಕ್ಷ ರಮೇಶ್ ಕುಲಶೇಖರ, ಪ್ರಧಾನ ಕಾರ್ಯದರ್ಶಿ ಕುಮಾರ್ ಮಾಲೆಮಾರ್, ಕೋಶಾಧಿಕಾರಿ ದಿವಾಕರ ದಾಸ್ ಕಾವಳಕಟ್ಟೆ ಇದ್ದರು.



ಮಣೂರು ರಾಮಪ್ರಸಾದ ಅಂಗವನಾಡಿ ಕೇಂದ್ರದಲ್ಲಿ ಕೋಟ ಸಮುದಾಯ ಆರೋಗ್ಯ ಕೇಂದ್ರ ಜಂಟಿಯಾಗಿ ಪಲ್ಸ್ ಪೋಲಿಯೋ ಲಸಿಕಾ ಕಾರ್ಯಕ್ರಮವನ್ನು ಆಯೋಜಿಸಿದೆ. ಕಾರ್ಯಕ್ರಮಕ್ಕೆ ಸ್ಥಳೀಯರಾದ ಡಾ.ವಿಶಾಖ ಚಾಲನೆ ನೀಡಿದರು. ಸಮುದಾಯ ಆರೋಗ್ಯ ಕೇಂದ್ರದ ಸಿಎಚ್ ಓ ಡಾ.ಮೊಹಮ್ಮದ್ ಅನಾಸ್ , ಆರೋಗ್ಯ ನಿರೀಕ್ಷಣಾಧಿಕಾರಿ ಹರೀಶ್ಚಂದ್ರ ನಾಯ್ಕ್, ಆರೋಗ್ಯ ಸುರಕ್ಷಾಧಿಕಾರಿ ಬೇಬಿ, ಅಂಗನವಾಡಿ ಕಾರ್ಯಕರ್ತೆ ಎಂ.ನಿರ್ಮಲ ಉರಾಳ ,ಆಶಾ ಕಾರ್ಯಕರ್ತೆಯರು ಉಪಸ್ಥಿತರಿದ್ದರು.



ಮುಲ್ಕಿ ಕಾರ್ನಾಡಿನ ಶ್ರೀರಾಮ ಸೇವಾ ಮಂಡಳಿ ಆಶ್ರಯದಲ್ಲಿ ಗಾಂಧಿ ಮೈದಾನದಲ್ಲಿ ವನಮಹೋತ್ಸವದ ಸಲುವಾಗಿ ಗಿಡ ನೆಡುವ ಕಾರ್ಯಕ್ರಮವು ಅಧ್ಯಕ್ಷರಾದ ಭಾಸ್ಕರ್ ಶೆಟ್ಟಿಗಾರ್ ಅವರ ಅಧ್ಯಕ್ಷತೆಯಲ್ಲಿ ನಡೆಯಿತು. ಬಂಟರ ಸಂಘದ ಅಧ್ಯಕ್ಷ ಅಶೋಕ್ ಕುಮಾರ್ ಶೆಟ್ಟಿ ಜಿಎಂ ಹರ್ಷ ರಾಜ್ ಶೆಟ್ಟಿ ಅಧ್ಯಕ್ಷರು ಲಯನ್ಸ್ ಕ್ಲಬ್ ಮುಲ್ಕಿ, ಕಲ್ಪತರು ತಡವಲಗ ಅಧ್ಯಕ್ಷ ಲಯನ್ಸ್ ಇನ್ವರ್ ಬಪ್ಪನಾಡು, ಶೈಲೇಶ್ ಶೆಟ್ಟಿ ಕಾರ್ನಾಡು ಹರಿಹರ ಯುವಕ ವೃಂದದ ಅಧ್ಯಕ್ಷ ಜಿ. ಸಿ. ಚಂದ್ರಶೇಖರ್ ಶೆಟ್ಟಿ ಕುಬೇವೂರು, ಮೋಯಿದ್ದಿನ್ ಭಾವ ಸಮಾಜ ಸೇವಕರು ಹಾಗೂ ಮಂಡಳಿಯ ಕಾರ್ಯದರ್ಶಿ ಸುನಿಲ್ ಕಾರ್ನಾಡ್ ಮತ್ತು ಕೋಶಾ ಧಿಕಾರಿ ಸುಕೇಶ್ ಮಾಡ ಹಾಗೂ ಸದಸ್ಯ ಮಾಧವ್ ಪೂಜಾರಿ ಕುಬೇವೂರ್ ಇದ್ದರು.

ನಾಳೆ ಹಿಲ್-ಸೈಡ್ ರೋಟರಿ ಪದಗ್ರಹಣ

ಮಂಗಳೂರು: ರೋಟರಿ ಕ್ಲಬ್ ಮಂಗಳೂರು ಹಿಲ್-ಸೈಡ್ ಸಂಸ್ಥೆಯ 2026-27ನೇ ಸಾಲಿನ ಅಧ್ಯಕ್ಷರಾಗಿ ದೀಪಾ ರಾವ್, ಕಾರ್ಯದರ್ಶಿಯಾಗಿ ಡಾ. ಚಾಂದಿನಿ ಶೆಟ್ಟಿ ಹಾಗೂ ಇತರ ಪದಾಧಿಕಾರಿಗಳ ಪದಗ್ರಹಣ ಸಮಾರಂಭವು ಜು. 1ರಂದು ಸಂಜೆ ಮಂಗಳೂರಿನ ನವಭಾರತ ವೃತ್ತದ ಓಶಿಯನ್ ಪರ್ಲ್ ಹೋಟೆಲ್‌ನ ಸಭಾಂಗಣದಲ್ಲಿ ನಡೆಯಲಿದೆ. ಖ್ಯಾತ ಫ್ಯಾಷನ್ ವಸ್ತ್ರವಿನ್ಯಾಸಕಿ ಹಾಗೂ ಉದ್ಯಮಿ ಅಲ್ಕಾ ಮನೋಜ್, ರೋಟರಿ ಸಹಾಯಕ ಗವರ್ನರ್ ಪ್ರವೀಣ್ ಚಂದ್ರ ಶರ್ಮ ಹಾಗೂ ವಲಯಾಧಿಕಾರಿ ರಾಜೇಶ್ ಶೆಟ್ಟಿ ಮುಖ್ಯ ಅತಿಥಿಗಳಾಗಿ ಭಾಗವಹಿಸಲಿದ್ದಾರೆ.



ವೀರಕೇಸರಿ ಫ್ರೆಂಡ್ಸ್ ಕ್ಲಬ್ ಬಾಳೆಮೂಲೆ ಇದರ ವತಿಯಿಂದ ಕಳೆದ ವರ್ಷದ ಎಸ್ ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಅತೀ ಹೆಚ್ಚು ಅಂಕ ಪಡೆದ ಕ್ಲಬ್‌ನ ಬಾಲ ಸದಸ್ಯರಾಗಿರುವ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡಿ ಗೌರವಿಸಲಾಯಿತು. ಈ ಸಂದರ್ಭ ವೀರಕೇಸರಿ ಫ್ರೆಂಡ್ಸ್ ಕ್ಲಬ್‌ನ ಅಧ್ಯಕ್ಷರು ಹಾಗೂ ಎಲ್ಲಾ ಸದಸ್ಯರು ಉಪಸ್ಥಿತರಿದ್ದರು.

ತುಂಬೆ ಕಾಲೇಜಿನಲ್ಲಿ ಸಂಸ್ಥಾಪಕರ ದಿನಾಚರಣೆ | ನೂತನ ವೆಬ್ ಸೈಟ್‌ಗೆ ಚಾಲನೆ

ಕಾಲಕ್ಕೆ ತಕ್ಕಂತೆ ನಾವು ಬದಲಾಗಬೇಕು: ಅಬ್ದುಲ್ ಸಲಾಂ

ಬಂಟ್ವಾಳ: ನಾವು ಕಾಲಕ್ಕೆ ತಕ್ಕಂತೆ ಅಪ್‌ಡೇಟ್ ಆಗಬೇಕಾಗಿದೆ. ಈ ನಿಟ್ಟಿನಲ್ಲಿ ನಮ್ಮ ಸಂಸ್ಥೆಯಲ್ಲಿ ನೂತನ ವೆಬ್ ಸೈಟ್ ಲೋಕಾರ್ಪಣೆಗೊಳಿಸುತ್ತಿರುವುದು ಸಂತೋಷದ ವಿಷಯ ಎಂದು ತುಂಬೆ ಮುಹಿಯುದ್ದೀನ್ ಎಜುಕೇಶನ್ ಟ್ರಸ್ಟ್‌ನ ಅಧ್ಯಕ್ಷ ಬಿ.ಅಬ್ದುಲ್ ಸಲಾಂ ಹೇಳಿದರು.

ತುಂಬೆ ಪ.ಪೂ.ಕಾಲೇಜಿನಲ್ಲಿ ಡಾ.ಬಿ. ಅಹ್ಮದ್ ಹಾಜಿ ಅವರ 93ನೇಯ ಹುಟ್ಟಿದ ಹಬ್ಬದ ಪ್ರಯುಕ್ತ ಏರ್ಪಡಿಸಿದ್ದ ಸಂಸ್ಥಾಪಕರ ದಿನಾಚರಣೆಯಲ್ಲಿ ತುಂಬೆ ಪದವಿ ಪೂರ್ವ ಕಾಲೇಜಿನ ಹಿರಿಯ ವಿದ್ಯಾರ್ಥಿ ಮಹಮ್ಮದ್ ಸ್ವಫೀರ್ ಅವರ ತಾಂತ್ರಿಕ ಪರಿಣತಿಯಿಂದ ನೂತನವಾಗಿ ಉನ್ನತೀಕರಿಸಲ್ಪಟ್ಟ ಕಾಲೇಜಿನ



ವೆಬ್‌ಸೈಟ್ ಲೋಕಾರ್ಪಣೆಗೊಳಿಸಿ ಮಾತನಾಡಿದರು. ಪಿಟಿಎ ಅಧ್ಯಕ್ಷ ನಿಸಾರ್ ಅಹಮದ್ ವಳವೂರು ಶುಭ ಹಾರೈಸಿದರು.

ಕನ್ನಡ ಉಪನ್ಯಾಸಕ ಅಬ್ದುಲ್ ರಹಮಾನ್ ಡಿ.ಬಿ.ಡಾ.ಅಹಮದ್ ಹಾಜಿ ಮುಹಿಯುದ್ದೀನ್ ಅವರ ಸಂಸ್ಮರಣಾ ಭಾಷಣಗೈದರು ಮುಹಿಯು ದ್ದೀನ್ ಎಜುಕೇಶನ್ ಟ್ರಸ್ಟ್‌ನ ಟ್ರಸ್ಟಿ ಬಿ.ಎಂ.ಅಶ್ರಫ್, ಕಾಲೇಜಿನ ನಿಕಟ ಪೂರ್ವ ಪ್ರಾಂಶುಪಾಲ ಕೆ.ಎನ್.ಗಂಗಾಧರ ಆಳ್ವ, ಬಿಎ ಐಟಿಐ ಪ್ರಾಂಶುಪಾಲ ನವೀನ್ ಕುಮಾರ್, ತುಂಬೆ ಕಾಲೇಜು ಪ್ರಾಂಶುಪಾಲ ವಿ.ಎಸ್.ಭಟ್, ಉಪ ಪ್ರಾಂಶುಪಾಲ ದಿನೇಶ ಶೆಟ್ಟಿ ಅಳಿಕೆ, ತುಂಬೆ ಆಂಗ್ಲ ಮಾಧ್ಯಮ ಶಾಲಾ ಮುಖ್ಯಸ್ಥೆ ಸೌಮ್ಯ, ರಕ್ಷಕ ಶಿಕ್ಷಕ ಸಂಘದ ಪದಾಧಿಕಾರಿಗಳಾದ ಮ್ಯಾಕ್ಸಿಂ ಕುವೆಲ್ಲೋ, ಗಫೂರ್,ಚಂಚಲಾಕ್ಷಿ,ಶಾಫಿ ಅಮ್ಮೆ ಮ್ಮಾರ್, ಶರೀಫ್ ತುಂಬೆ,ನಿಕಟಪೂರ್ವ ಮುಖ್ಯೋಪಾಧ್ಯಾಯ ಶ್ರೀನಿವಾಸ್ ಕೆ., ನಿವೃತ್ತ ಬೋಧಕರಾದ ರಾಜ ಎಸ್., ರಘುಪತಿ ಭಟ್, ನಿವೃತ್ತ ಬೋಧಕಿಯರಾದ ಶರ್ಮಿಳಾ ಎ., ಜಾನೆಟ್ ಪಸನ್ನ ಮತ್ತಿತರರು ಉಪಸ್ಥಿತರಿದ್ದರು.

ಕಚೇರಿ ಅಧೀಕ್ಷಕ ಅಬ್ದುಲ್ ಕಬೀರ್ ಸ್ವಾಗತಿಸಿ ಪ್ರಸ್ತಾವನೆಗೈದರು. ಯೋಗೀಶ್ ಬೊಳ್ಳಾರಿ ಮತ್ತು ಅಶೋಕ್ ಸಹಕರಿಸಿದರು. ಇತಿಹಾಸ ಉಪನ್ಯಾಸಕ ಶರತ್ ಆಳ್ವ ನಿರೂಪಿಸಿದರು. ಶಾಲಾ ಮುಖ್ಯಸ್ಥೆ ವಿದ್ಯಾ ಕೆ. ವಂದಿಸಿದರು.

ಮುಗ್ರೋಡಿ ಪ್ರದೇಶದಲ್ಲಿನ ಕಾಮಗಾರಿ ಪರಿಶೀಲಿಸಿದ ಶಾಸಕ ಭರತ್

ಕೆಲಸದಿಂದ ಜನರಿಗೆ ಸಮಸ್ಯೆಯಾಗದಿರಲಿ

ಮಂಗಳೂರು: ಪಚ್ಚನಾಡಿ ವಾರ್ಡ್‌ನ ಮುಗ್ರೋಡಿ ಪ್ರದೇಶದಲ್ಲಿ ಮಹಾನಗರ ಪಾಲಿಕೆ ವತಿಯಿಂದ ಮಳೆನೀರು ಹರಿದು ಹೋಗುವ ತೋಡು ನಿರ್ಮಾಣ ಕಾಮಗಾರಿ ಭರದಿಂದ ಸಾಗುತ್ತಿದೆ. ಕಾಮಗಾರಿ ಸ್ಥಳಕ್ಕೆ ಮಂಗಳೂರು ಉತ್ತರ ವಿಧಾನಸಭಾ ಕ್ಷೇತ್ರದ ಶಾಸಕ ಡಾ. ವೈ. ಭರತ್ ಶೆಟ್ಟಿ ಅವರು ಭೇಟಿ ನೀಡಿ ಪರಿಶೀಲನೆ ನಡೆಸಿದರು.

ಸ್ಥಳೀಯರ ಮನವಿಯನ್ನು ಆಲಿಸಿದ ಅವರು, ಸಾರ್ವಜನಿಕರಿಗೆ ಯಾವುದೇ ತೊಂದರೆಯಾಗದಂತೆ ವ್ಯವಸ್ಥಿತವಾಗಿ ಕಾಮಗಾರಿ ನಡೆಸುವಂತೆ ಅಧಿಕಾರಿಗಳಿಗೆ ಸೂಚನೆ ನೀಡಿದರು. ಮಳೆಗಾಲ ಇರುವುದರಿಂದ ಕಾಮಗಾರಿಯನ್ನು ತ್ವರಿತವಾಗಿ ಪೂರ್ಣಗೊಳಿಸುವಂತೆ ಗುತ್ತಿಗೆದಾರರಿಗೂ ನಿರ್ದೇಶನ ನೀಡಿದರು.



ನಿಕಟ ಪೂರ್ವ ಕಾರ್ಪೋರೇಟರ್ ಸಂಗೀತಾ ಆರ್. ನಾಯಕ್, ಮಂಡಲ ಪ್ರಧಾನ ಕಾರ್ಯದರ್ಶಿ ಸಂದೀಪ್ ಬೋಂದೆಲ್, ಸ್ಥಳೀಯರಾದ ರಾಮು ಮುಗ್ರೋಡಿ, ರವೀಂದ್ರ ನಾಯಕ್, ರಘು ಮೊಯಿಲಿ, ರಾಜೇಶ್, ಪಾಲಿಕೆ ಅಧಿಕಾರಿಗಳು ಸೇರಿದಂತೆ ಹಲವರು ಉಪಸ್ಥಿತರಿದ್ದರು.

ಮಂಜೇಶ್ವರ ರೈಲು ನಿಲ್ದಾಣದಲ್ಲಿ ಅಭಿವೃದ್ಧಿ ಯೋಜನೆ ಅನುಷ್ಠಾನಕ್ಕೆ ತಂದಿದ್ದರೂ ಸಮಸ್ಯೆ ಬಗೆಹರಿದಿಲ್ಲ

ಸುಸಜ್ಜಿತ ಕಟ್ಟಡವಿದ್ದರೂ ಪ್ರಯಾಣಿಕರಿಗಿಲ್ಲ ಅಗತ್ಯ ಸೌಲಭ್ಯ

ಮಂಜೇಶ್ವರ: ಕಾಸರಗೋಡು ಜಿಲ್ಲೆಯ ಪ್ರಮುಖ ನಿಲ್ದಾಣಗಳಲ್ಲಿ ಒಂದು ಹಾಗೂ ಕೇರಳ ರಾಜ್ಯದ ಕೊನೆಯ ರೈಲು ನಿಲ್ದಾಣವಾದ ಮಂಜೇಶ್ವರ ರೈಲು ನಿಲ್ದಾಣದಲ್ಲಿ ಅಭಿವೃದ್ಧಿ ಚಟುವಟಿಕೆಗಳನ್ನು ಅನುಷ್ಠಾನಕ್ಕೆ ತಂದಿದ್ದರೂ ಅಗತ್ಯದ ಮೂಲಭೂತ ಸೌಲಭ್ಯಗಳಿಲ್ಲದೆ ಪ್ರಯಾಣಿಕರು ಸಮಸ್ಯೆ ಅನುಭವಿಸುವಂತಾಗಿದೆ.

ರೈಲ್ವೆ ವಲಯವು ಅಭಿವೃದ್ಧಿ ಪಥದಲ್ಲಿ ಸಾಗುತ್ತಿದ್ದರೂ ಮಂಜೇಶ್ವರ ರೈಲು ನಿಲ್ದಾಣದಲ್ಲಿ ಅಗತ್ಯದ ಪ್ರಗತಿ ಕಾರ್ಯಗಳು ನಡೆಯದೆ ಸೊರಗಿ ಹೋಗಿದೆ. ಹೆಚ್ಚಿನ ಎಲ್ಲಾ ರೈಲು ನಿಲ್ದಾಣಗಳ ಚಿತ್ರಣ ಬದಲಾಗಿ ನೂತನ ರೈಲು ನಿಲ್ದಾಣ ಅನುಷ್ಠಾನಕ್ಕೆ ಬಂದಿದೆ. ಆದರೆ ಹೆಚ್ಚು ಪ್ರಯಾಣಿಕರಿರುವ ಮಂಜೇಶ್ವರ ರೈಲು ನಿಲ್ದಾಣದಲ್ಲಿ ಒಂದೆಡೆ ಆವಶ್ಯಕ ಸವಲತ್ತುಗಳನ್ನು ಒದಗಿಸದೆ ಇನ್ನೊಂದೆಡೆ ಅಗತ್ಯದ ರೈಲುಗಳು ನಿಲುಗಡೆಗೊಳ್ಳದೆ ಭಾರೀ ತೊಂದರೆ ಎದುರಿಸುವಂತಾಗಿದೆ.

ಫ್ಲಾಟ್‌ಫಾರ್ಮ್‌ಗೆ ಮೇಲ್ಚಾವಣಿ ಇಲ್ಲ

ಪ್ಲಾಟ್‌ಫಾರ್ಮ್‌ನ ಉದ್ದ ಹೆಚ್ಚಳ, ನವೀಕರಣ, ಪಾರ್ಕಿಂಗ್ ವ್ಯವಸ್ಥೆ ಆಧುನೀಕರಣ, ಪರಶುರಾಮ್



ಎಕ್ಸ್‌ಪ್ರೆಸ್‌ಗೆ ನಿಲುಗಡೆ ಮಂಜೂರುಗೊಂಡಿರುವುದು ಕೆಲವು ತಿಂಗಳಗಳಲ್ಲಿ ನಡೆದ ಸಣ್ಣಪುಟ್ಟ ಪ್ರಗತಿ ಯೋಜನೆಗಳಾಗಿವೆ. ಮಂಜೇಶ್ವರ ರೈಲು ನಿಲ್ದಾಣದ ನವೀಕರಣದ ಭಾಗವಾಗಿ ಇಕ್ಕೆಲಗಳಲ್ಲಿ ಪ್ಲಾಟ್ ಫಾರ್ಮ್‌ನ ಎತ್ತರವನ್ನು ಹೆಚ್ಚಿಸಲಾಗಿದೆ. ಉತ್ತರ ಭಾಗಕ್ಕೆ 70 ಮೀಟರ್‌ನಷ್ಟು ಉದ್ದ ಒದಗಿಸಲಾಗಿದೆ. ಆದರೆ ಪ್ಲಾಟ್ ಫಾರ್ಮ್‌ಗೆ ಸಮಾನಾಂತರವಾಗಿ ಮೇಲ್ಚಾವಣಿ ಇಲ್ಲದಿರುವುದು ಪ್ರಯಾಣಿಕರಿಗೆ ಸಂಕಷ್ಟವನ್ನುಂಟು ಮಾಡುತ್ತಿದೆ. ಪ್ರಸ್ತುತ ರೈಲು ನಿಲ್ದಾಣ ಕಚೇರಿಯ ಮುಂಭಾಗದಲ್ಲಿ ಮಾತ್ರವೇ ಮೇಲ್ಚಾವಣಿ ಇರುವ ಆಸನಗಳಿವೆ. ಉತ್ತರ ಭಾಗದಲ್ಲಿ ಇಕ್ಕೆಲಗಳಲ್ಲಿರುವ ಪ್ಲಾಟ್ ಫಾರ್ಮ್‌ಗಳಲ್ಲಿ ನಾಮಮಾತ್ರಕ್ಕೂ ಮೇಲ್ಚಾವಣಿ ಇಲ್ಲದಿರುವುದು ವಿಪರ್ಯಾಸವಾಗಿದೆ. ಪ್ಲಾಟ್ ಫಾರ್ಮ್ ಇಲ್ಲದಿರುವುದರಿಂದ ಮಳೆಗಾಲದಲ್ಲಿ ಹಾಗೂ ಬೇಸಿಗೆಯಲ್ಲಿ ಜನರು ಅಪಾರ ಸಮಸ್ಯೆ ಅನುಭವಿಸುತ್ತಿದ್ದಾರೆ.

ಜಾರಿ ಬೀಳುತ್ತಿದ್ದಾರೆ ಪಯಾಣಿಕರು

ಅಭಿವೃದ್ಧಿಯ ಅಂಗವಾಗಿ ನಿರ್ಮಿಸಿದ ನೂತನ ಪ್ಲಾಟ್ ಫಾರ್ಮ್‌ನ ನೆಲದಲ್ಲಿ ಹಾವಸೆ ಬೆಳೆದು ಕಳೆದ ಮಳೆಗಾಲದಲ್ಲಿ ಹಲವಾರು ಮಂದಿ ಪ್ರಯಾಣಿಕರು ಜಾರಿ ಬಿದ್ದು ಗಾಯಗೊಂಡ ಘಟನೆಗಳು ನಡೆದಿದ್ದವು. ತಿಂಗಳ ಹಿಂದೆ ಡಿಆರ್‌ಎಂ ಅಧಿಕಾರಿಗಳು ರೈಲು ನಿಲ್ದಾಣಕ್ಕೆ ಭೇಟಿ ನೀಡಿದಾಗ ಈ ವಿಚಾರದ ಕುರಿತು ಜನಪ್ರತಿನಿಧಿಗಳು, ಸಾರ್ವಜನಿಕರು, ಪ್ಯಾಸೆಂಜರ್ಸ್ ಅಸೋಸಿಯೇಶನ್‌ನ ಸದಸ್ಯರು ಗಮನಕ್ಕೆ ತಂದಿದ್ದರು. ಮೇಲ್ಚಾವಣಿ ಅಳವಡಿಸುವ ವಿಚಾರದಲ್ಲಿ ಗಂಭೀರ ಪ್ರಯತ್ನಗಳನ್ನು ಹಮ್ಮಿಕೊಳ್ಳುವುದಾಗಿ ಡಿಆರ್‌ಎಂ ಭರವಸೆ ನೀಡಿದ್ದರು.

ಟಿಕೆಟ್ ಕೌಂಟರ್ ಮತ್ತು ಪ್ರಯಾಣಿಕರ ವಿಶ್ರಾಂತಿಗಾಗಿ ನಿರ್ಮಿಸಿದ ನೂತನ ಕಟ್ಟಡವು ಒಂದು ವರ್ಷದಿಂದ ಅನಾಥವಾಗಿತ್ತು. ಇತ್ತೀಚೆಗೆ ಈ ಕಟ್ಟಡಕ್ಕೆ ಟಿಕೆಟ್ ಕೌಂಟರ್‌ನ್ನು ಸ್ಥಳಾಂತರಿಸಲಾಗಿದೆ. ಇದರ ಒಂದು ಭಾಗವು ಪ್ರಯಾಣಿಕರಿಗಾಗಿರುವ ವಿಶ್ರಾಂತಿ ಕೊಠಡಿಯಾಗಿದ್ದರೂ ಅದಕ್ಕಿರುವ ಮೂಲಭೂತ ಸೌಕರ್ಯಗಳನ್ನು ವ್ಯವಸ್ಥೆಗೊಳಿಸಿಲ್ಲ. ರೈಲು ನಿಲ್ದಾಣ ಕಚೇರಿಯ ನವೀಕರಣ ಕಾರ್ಯವು ವಿಳಂಬಗೊಳ್ಳುತ್ತಿದೆ.

ಮಳೆಗಾಲದಲ್ಲಿ ಸೋರುತ್ತಿದೆ ಕಟ್ಟಡ

ಪ್ರಸ್ತುತ ಕಚೇರಿ ಕೊಠಡಿಯು ಮಳೆಗಾಲದಲ್ಲಿ ಸೋರುತ್ತಿದ್ದು, ಈ ಹಿನ್ನೆಲೆಯಲ್ಲಿ ಪ್ಲಾಸ್ಟಿಕ್ ಶೀಟ್‌ಗಳನ್ನು ಅಳವಡಿಸಲಾಗಿದೆ. ಉತ್ತರ ಭಾಗಕ್ಕೆ 6 ರೈಲುಗಳು ಮತ್ತು ದಕ್ಷಿಣ ಭಾಗಕ್ಕೆ 8 ರೈಲುಗಳಿಗೆ ಮಾತ್ರ ಮಂಜೇಶ್ವರದಲ್ಲಿ ನಿಲುಗಡೆ ವ್ಯವಸ್ಥೆಯಿದೆ. ರಾಷ್ಟ್ರಕವಿ ಮಂಜೇಶ್ವರ ಗೋವಿಂದ ಪೈ ಸ್ಮಾರಕ ಸರಕಾರಿ ಕಾಲೇಜು, ಕಣ್ಣೂರು ವಿಶ್ವವಿದ್ಯಾಲಯ ಕಾನೂನು ಅಧ್ಯಯನ ಕೇಂದ್ರ ಮಂಜೇಶ್ವರ ಕ್ಯಾಂಪಸ್, ವಿವಿಧ ಸರಕಾರಿ ಕಚೇರಿಗಳು, ಶಾಲೆಗಳು, ಕಾಲೇಜುಗಳು ಮುಂತಾದ ಕಡೆಗಳಿಗೆ ತೆರಳುವ ನೂರಾರು ಮಂದಿ ವಿದ್ಯಾರ್ಥಿಗಳು, ನೌಕರರು, ಸಾರ್ವಜನಿಕರು ಆಶ್ರಯಿಸುವ ರೈಲು ನಿಲ್ದಾಣ ಇದಾಗಿದೆ.

ಕೆಲವೇ ರೈಲು ನಿಲುಗಡೆ

ಹೆಚ್ಚಿನ ರೈಲುಗಳಿಗೆ ಮಂಜೇಶ್ವರದಲ್ಲಿ ನಿಲುಗಡೆ ಇಲ್ಲದೆ ಪ್ರಯಾಣಿಕರು ಬವಣೆ ಪಡುವಂತಾಗಿದೆ. ಈ ಹಿನ್ನೆಲೆಯಲ್ಲಿ ಪ್ರಯಾಣ ಸಮಸ್ಯೆಯನ್ನು ಪರಿಹರಿಸಲು ಮಾವೇಲಿ ಎಕ್ಸ್‌ಪ್ರೆಸ್, ಮಂಗಳ - ಲಕ್ಷದ್ವೀಪ, ನೇತ್ರಾವತಿ, ಮಂಗಳೂರು ಸೆಂಟ್ರಲ್ ಮೈಲ್, ಬೆಂಗಳೂರು - ಕೋಝಿಕೋಡು ರೈಲು ಮುಂತಾದ ಹೆಚ್ಚುವರಿ ರೈಲುಗಳಿಗೆ ಮಂಜೇಶ್ವರದಲ್ಲಿ ನಿಲುಗಡೆ ಮಂಜೂರುಗೊಳಿಸಲು ಪ್ರಯಾಣಿಕರು, ಸಾರ್ವಜನಿಕರು ಒತ್ತಾಯಿಸಿದ್ದಾರೆ.

ಸುತ್ತ ಮುತ್ತ



ಕಾಸರಗೋಡು ಜಿಲ್ಲಾ ಕನ್ನಡ ಕಾರ್ಯನಿರತ ಪತ್ರಕರ್ತರ ಸಂಘದ ವತಿಯಿಂದ ಕುಡಾಲುಮೇರ್ಕಳದ ಸುಬ್ಬಯಕಟ್ಟೆಯಲ್ಲಿ ಜರಗಿದ ಸಮಾರಂಭದಲ್ಲಿ ಜೀವಮಾನ ಸಾಧನೆಗಾಗಿ ಹಿರಿಯ ಪತ್ರಕರ್ತ ಸುಬ್ಬಣ್ಣ ಶೆಟ್ಟಿ ಕುಟ್ಟಿಕ್ಕಾಡು ಅವರನ್ನು ಸನ್ಮಾನಿಸಲಾಯಿತು.

ನಾಳೆ ಕನ್ನಡ ಪತ್ರಿಕಾ ದಿನಾಚರಣೆ, ಪ್ರಶಸ್ತಿ ಪ್ರದಾನ

ಕಾಸರಗೋಡು: ಜಿಲ್ಲಾ ಕನ್ನಡ ಪತ್ರಕ ರ್ತರ ಕ್ಷೇಮಾಭಿವೃದ್ಧಿ ಸಂಘ ಮತ್ತು ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘ ಕಾಸರಗೋಡು ಜಿಲ್ಲಾ ಘಟಕದ ಜಂಟಿ ಆಶ್ರಯದಲ್ಲಿ ನಾಯ್ಕಾಪು ಲಿಟಲ್ ಲಿಲ್ಲಿ ಆಂಗ್ಲ ಮಾಧ್ಯಮ ಶಾಲೆಯಲ್ಲಿ ಜು. 1ರಂದು ಬೆಳಗ್ಗೆ 9.30ರಿಂದ ಕನ್ನಡ ಪತ್ರಿಕಾ ದಿನಾಚರಣೆ ಮತ್ತು ಪತ್ರಿಕಾ ದಿನ ಪ್ರಶಸ್ತಿ ಪ್ರದಾನ ಕಾರ್ಯಕ್ರಮ ನಡೆಯಲಿದೆ. ಕನ್ನಡ ಸಾಹಿತ್ಯ ಪರಿಷತ್‌ನ ಕೇರಳ ಗಡಿನಾಡ ಘಟಕದ ಅಧ್ಯಕ್ಷ ಡಾ.ಜಯ ಪ್ರಕಾಶ್ ನಾರಾಯಣ ತೊಟ್ಟೆತ್ತೋಡಿ ಕಾರ್ಯಕ್ರಮವನ್ನು ಉದ್ಘಾಟಿಸುವರು. ಕಾಸರಗೋಡು ಜಿಲ್ಲಾ ಕನ್ನಡ ಪತ್ರಕರ್ತರ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷ ರವಿ ನಾಯ್ಕಾಪು ಅಧ್ಯಕ್ಷತೆ ವಹಿಸುವರು. ಪತ್ರಿಕಾ ವಿತರಕ ಶ್ಯಾಮಪ್ರಸಾದ್ ಎನ್. ನೀರ್ಚಾಲು ಅವರಿಗೆ



ಪತ್ರಿಕಾ ದಿನ ಪ್ರಶಸ್ತಿ ಪ್ರದಾನ ಮಾಡಲಾಗುವುದು. ಜಿ.ಪಂ. ಸದಸ್ಯ ಸೋಮಶೇಖರ ಜೆ.ಎಸ್. ಪ್ರಶಸ್ತಿ ಪ್ರದಾನ ಮಾಡುವರು. ಹಿರಿಯ ಕವಿ, ಶಿಕ್ಷಣ ತಜ್ಞ ವಿ.ಬಿ.ಕುಳಮರ್ವ ಪತ್ರಿಕಾ ದಿನದ ಸಂದೇಶ ನೀಡುವರು. ಕರ್ನಾಟಕ ಗಡಿಪ್ರದೇಶ ಅಭಿವೃದ್ಧಿ ಪ್ರಾಧಿಕಾರದ ಸದಸ್ಯ ಎ.ಆರ್. ಸುಬ್ಬಯ್ಯ ಕಟ್ಟೆ, ಕೆಯುಡಬ್ಲ್ಯೂಜೆ ಕರ್ನಾಟಕ ರಾಜ್ಯ ಕಾರ್ಯಕಾರಿ ಸಮಿತಿ ಸದಸ್ಯ ರಾಧಾಕೃಷ್ಣ ಕೆ. ಉಳಿಯತ್ತಡ್ಕ, ಲಿಟಲ್ ಲಿಲ್ಲಿ ಶಾಲೆ ಅಧ್ಯಕ್ಷೆ ಸರಸ್ವತಿ ಎ., ನಿವೃತ್ತ ಪ್ರಾಂಶುಪಾಲ ಪ್ರೊ.ಎ.ಶ್ರೀನಾಥ್ ಪ್ರಾಸ್ತಾವಿಕವಾಗಿ ಮಾತನಾಡುವರು. ಬ್ಲಾಕ್ ಪಂಚಾಯತ್ ಸದಸ್ಯ ಪೃಥ್ವಿರಾಜ್ ಶೆಟ್ಟಿ, ಸಂಘದ ಕಾರ್ಯದರ್ಶಿ ಗಂಗಾಧರ ತೆಕ್ಕೆಮೂಲೆ, ಉಪಾಧ್ಯಕ್ಷ ಪುರುಷೋತ್ತಮ ಪೆರ್ಲ, ಕೆಯುಡಬ್ಲ್ಯೂಜೆ ಜಿಲ್ಲಾ ಘಟಕದ ಕೋಶಾಧಿಕಾರಿ ಅಜಿತ್ ಸ್ವರ್ಗ, ಪತ್ರಕರ್ತರ ಕ್ಷೇಮಾಭಿವೃದ್ಧಿ ಸಂಘದ ಕೋಶಾಧಿಕಾರಿ ಶ್ರೀಕಾಂತ್ ನೆಟ್ಟಣಿಗೆ ಉಪಸ್ಥಿತರಿರುವರು.

ಇಂದು ಕುಂಜತ್ತೂರು ರೈಲ್ವೆ ಗೇಟ್ ಮುಚ್ಚುಗಡೆ

ಕಾಸರಗೋಡು: ತುರ್ತು ನಿರ್ವಹಣೆಗಾಗಿ ಜೂ.30ರಂದು ಬೆಳಗ್ಗೆ 8 ರಿಂದ ಸಂಜೆ 6ರ ವರೆಗೆ ಕುಂಜತ್ತೂರು ರೈಲ್ವೆ ಯಾರ್ಡ್ ಲೆವೆಲ್ ಕ್ರಾಸಿಂಗ್ ಸಂಖ್ಯೆ 292ನ್ನು ಮುಚ್ಚಲಾಗುವುದು ಎಂದು ಮಂಗಳೂರು ದಕ್ಷಿಣ ರೈಲ್ವೆ ಪಿಜಿಟಿ ವಿಭಾಗದ ಸಹಾಯಕ ವಿಭಾಗೀಯ ಇಂಜಿನಿಯರ್ ತಿಳಿಸಿದ್ದಾರೆ. ವಾಹನಗಳು ಮಂಜೇಶ್ವರ ಗೇಟ್ ಮೂಲಕ ಸಾಗಬೇಕು ಎಂದು ತಿಳಿಸಲಾಗಿದೆ.

ಉಪನ್ಯಾಸಕರ ನೇಮಕಾತಿ

ಕಾಸರಗೋಡು: ತೃಕ್ಕರೀಪುರ ಸರಕಾರಿ ಪಾಲಿಟೆಕ್ನಿಕ್ ಕಾಲೇಜಿನಲ್ಲಿ ಕಂಪ್ಯೂಟರ್ ಇಂಜಿನಿಯರಿಂಗ್ ಶಾಖೆಯಲ್ಲಿ ಉಪನ್ಯಾಸಕರ ಹುದ್ದೆಗೆ ಉಪನ್ಯಾಸಕರ ನೇಮಕಾತಿಗಾಗಿ ಜುಲೈ 1 ರಂದು ಬೆಳಗ್ಗೆ 10 ಗಂಟೆಗೆ ಸಂದರ್ಶನ ನಡೆಯಲಿದೆ. ಕಂಪ್ಯೂಟರ್ ಇಂಜಿನಿಯರಿಂಗ್‌ನಲ್ಲಿ ಬಿ.ಟೆಕ್ ಪ್ರಥಮ ದರ್ಜೆ ವಿದ್ಯಾರ್ಹತೆಯಾಗಿದೆ. ಹೆಚ್ಚಿನ ಮಾಹಿತಿಗಾಗಿ 0467 2211400, 9496690222 ಕರೆ ಮಾಡಬಹುದು.

ನಾಳೆ ಮಂಜೇಶ್ವರ ರೈಲ್ವೆ ಗೇಟ್ ಮುಚ್ಚುಗಡೆ

ಕಾಸರಗೋಡು: ಜುಲೈ 1 ರಂದು ಬೆಳಗ್ಗೆ 8 ರಿಂದ ಜುಲೈ 3 ರಂದು ಸಂಜೆ 6ರ ವರೆಗೆ ತುರ್ತು ನಿರ್ವಹಣೆಗಾಗಿ ಲೆವೆಲ್ ಕ್ರಾಸಿಂಗ್ ಸಂಖ್ಯೆ 291 (ಟಿ) ಮಂಜೇಶ್ವರ ರೈಲ್ವೆ ಯಾರ್ಡ್‌ನ್ನು ಮುಚ್ಚಲಾಗುವುದು. ವಾಹನಗಳು ಕಣ್ವತೀರ್ಥ ಗೇಟ್ ಮತ್ತು ಹೊಸಂಗಡಿ ಗೇಟ್, ದಕ್ಷಿಣ ರೈಲ್ವೆ ಪಿಜಿಟಿ ವಿಭಾಗ, ಮಂಗಳೂರು ಮೂಲಕ ಸಂಚರಿಸಬೇಕು ಎಂದು ಸಹಾಯಕ ವಿಭಾಗೀಯ ಇಂಜಿನಿಯರ್ ತಿಳಿಸಿದ್ದಾರೆ.

ಕುಲಾಲ ಸಂಘದಿಂದ ಮೂಲ ಕಟ್ಟ್ ಕಟ್ಟಲೆಯ ತುಲಿಪು

ಗುರಿಕಾರರು, ತರವಾಡು ಮನೆಗಳ ಸದಸ್ಯರ ಸಭೆ

ಮಂಜೇಶ್ವರ: ತುಳುನಾಡಿನ ಅಳಿಯ ಕಟ್ಟು ಸಂತತಿಯ ಕುಲಾಲ, ಮೂಲ್ಯ ಸಮುದಾಯದ ಅಳಿದು ಹೋಗುತ್ತಿರುವ ಮೂಲ ಕಟ್ಟ್‌ಕಟ್ಟಲೆಯ ತುಲಿವು ಎಂಬ ವಿಶೇಷ ಕಾರ್ಯಕ್ರಮವು ಕಾಸರಗೋಡು ಜಿಲ್ಲಾ ಕುಲಾಲ ಭವನ ಮಂಜೇಶ್ವರ ತೂಮಿನಾಡಿನಲ್ಲಿ ಭಾನುವಾರ ಜರಗಿತು.

ಕುಲಾಲ ಶ್ರೀ ಸಾಹಿತ್ಯ ಕಲಾ ಸಂಪದ ದೇರಳಕಟ್ಟೆ ಇದರ ಮಹೇಶ್ ಕುಲಾಲ್ ಆರ್ತಿಮೂಲೆ ಅವರ ಸಾರಥ್ಯದಲ್ಲಿ ಅಳಿಯಕಟ್ಟು ಸಂತತಿಯ ಅಳಿದು ಹೋಗುತ್ತಿರುವ ಮೂಲ ಕಟ್ಟ್ ಕಟ್ಟಲೆಯ ತುಲಿಪು ಕಾರ್ಯಕ್ರಮ ನಡೆಯಿತು.

ತುಳುನಾಡಿನಾಡಿನಲ್ಲಿ ಮೊತ್ತಮೊದಲ ಬಾರಿಗೆ ಕುಲಾಲ ಸಮುದಾಯದಲ್ಲಿ ಈ ಮಹತ್ಕಾರ್ಯ ನಡೆದಿರುವುದು ವಿಶೇಷವಾಗಿದೆ. ತುಳುನಾಡಿನಲ್ಲಿ ಭೂತಾಳ ಪಾಂಡ್ಯನ ಅಳಿಯಕಟ್ಟಿನ ಪ್ರಕಾರ 42 ಜಾತಿಗಳು ಮತ್ತು ಏಳು ಗೋತ್ರಗಳನ್ನು ವಿಭಜಿಸಿ 18 ಬಳಿಗಳು ಹಾಗೂ ಐದು ಗೋತ್ರವಿಲ್ಲದ ಬಳಿಗಳನ್ನು ಭೂತಾಳ ಪಾಂಡ್ಯನು ಪ್ರಥಮ ಬಾರಿಗೆ ರಚಿಸಿದ್ದನು. ತನ್ನ ಆಳ್ವಿಕೆಯ 273 ವರ್ಷಗಳ ನಂತರ ಎರಡನೇ ಭೂತಾಳ ಪಾಂಡ್ಯನು ಬಂದು ಮತ್ತೆ 37 ಬಳಿಗಳನ್ನು ಮಾಡಿದನು. ಆದ್ದರಿಂದ ಅಳಿಯಕಟ್ಟಿನ 42 ಜಾತಿಗಳಿಗೆ 60 ಬಳಿಗಳಿವೆ. ಈ ಅಳಿಯಕಟ್ಟು



ಸಂಪ್ರದಾಯದಲ್ಲಿ ಮದುವೆಯ ಸಂದರ್ಭದಲ್ಲಿ ಸಪ್ತಪದಿ ತುಳಿಯುವುದು ಮತ್ತು ಮರಣದ ಸಂದರ್ಭದಲ್ಲಿ ಪಿಂಡಪ್ರದಾನ ಮಾಡುವ ವಾಡಿಕೆ ಇಲ್ಲ, ಇಂತಹ ಸಂದರ್ಭ ಅಳಿಯಕಟ್ಟು ಸಂತತಿಯ ಆಚಾರ ವಿಚಾರಗಳು ಬಹಳಷ್ಟು ತಪ್ಪುದಾರಿಗೆ ಹೋಗುತ್ತಿದೆ. ಪೂರ್ವಕಾಲದಿಂದ ಅದೆಷ್ಟೋ ಹಿರಿಯರು, ಗುರಿಕಾರರು ಮತ್ತು ಮೂಲಸ್ಥಾನ ತರವಾಡುಗಳ ಪ್ರಮುಖರು ಇವುಗಳನ್ನು ಉಳಿಸುವ ಪ್ರಯತ್ನ ಮಾಡಿದ್ದರು. ಅಂತಹ ವಿಚಾರಗಳು ಈವರೆಗೆ ಯಾವುದೇ ಲಿಖಿತ ರೂಪದಲ್ಲಿ ಇಲ್ಲದಿರುವುದರಿಂದ ಈಗಿನ ಪೀಳಿಗೆಗಳಿಗೆ ಮತ್ತು ಮುಂದಿನ ಪೀಳಿಗೆಗಳಿಗೆ ಇಂತಹ ವಿಚಾರಗಳನ್ನು ತಿಳಿಯಲು ಹಾಗೂ ಪೂರ್ವಕಾಲದ ಆಚಾರ ವಿಚಾರಗಳನ್ನು ಮುನ್ನಡೆಸಿಕೊಂಡು ಹೋಗಲು ಅನಾನುಕೂಲವಾಗುತ್ತದೆ.

ಆದನ್ನು ಮನಗಂಡ ಮಹೇಶ್ ಕುಲಾಲ್ ಆರ್ತಿಮೂಲೆ ಕಾಸರಗೋಡು ಜಿಲ್ಲೆಯ ಎಲ್ಲಾ ಹಿರಿಯರನ್ನು, ಗುರಿಕಾರರನ್ನು, ತರವಾಡು ಮನೆ ಮುಖ್ಯಸ್ಥರನ್ನು ಮತ್ತು ನಾಗಮೂಲ ಸ್ಥಾನಗಳ ಪ್ರಮುಖರನ್ನು ಒಟ್ಟುಗೂಡಿಸುವ ಮೂಲಕ ಈ ತುಲಿಪ್ ಕಾರ್ಯಕ್ರಮವನ್ನು ನಡೆಸಲಾಯಿತು.

ಮುಂದಿನ ದಿನಗಳಲ್ಲಿ ಹಲವು ವಿಚಾರಗಳು ದಾಖಲೀಕರಣವಾಗಿರಬೇಕೆಂಬ ನಿಟ್ಟಿನಲ್ಲಿ ವಿಡಿಯೋ ರೆಕಾರ್ಡ್ ಮಾಡಲಾಯಿತು. ಅವುಗಳನ್ನು ಕುಲಾಲ ಶ್ರೀ ಡಿಜಿಟಲ್ ಮೀಡಿಯಾ ಎಂಬ ಯೂ ಟ್ಯೂಬ್ ಚಾನೆಲ್‌ನಲ್ಲಿ ಪ್ರಸಾರಗೊಳಿಸಲಾಗಿದೆ. ಕಾಸರಗೋಡು ಜಿಲ್ಲಾ ಕುಲಾಲ ಸಂಘದ ಅಧ್ಯಕ್ಷ ವಕೀಲ ರವೀಂದ್ರ ಮುನ್ನಿಪ್ಪಾಡಿ, ಗೋಪಾಲ ಸಾಲಿಯನ್ ಕಣ್ವತೀರ್ಥ ಮತ್ತಿತರರು ಪಾಲ್ಗೊಂಡಿದ್ದರು.

ಅನಂತಪುರ ಕ್ಷೇತ್ರ ಬ್ರಹ್ಮಕಲಶೋತ್ಸವ ದಿನಾಂಕ ಘೋಷಣೆ

ದೇಗುಲ ಅಭಿವೃದ್ಧಿ ಭಕ್ತರ ಹೊಣೆ: ಎಡನೀರು ಶ್ರೀ

ಕುಂಬಳೆ: ಪ್ರತೀ ಊರಿನ ದೇವಸ್ಥಾನಗಳನ್ನು ಅಭಿವೃದ್ಧಿಪಡಿಸುವ ಕಾರ್ಯ ಭಕ್ತರದ್ದಾಗಿದೆ. ಈ ಮೂಲಕ ನಾಡಿನ ಅಭಿವೃದ್ಧಿ ಸಾಧ್ಯವಾಗುತ್ತದೆ. ದೇವಾಲಯಗಳು ಮತ್ತು ವಿದ್ಯಾಲಯ ಸುಸ್ಥಿತಿಯಲ್ಲಿದ್ದರೆ ಆ ಊರು ಸುಭಿಕ್ಷೆಯಿಂದ ಕೂಡಿರುತ್ತದೆ ಎಂದು ಎಡನೀರು ಮಠಾಧೀಶ ಶ್ರೀ ಸಚ್ಚಿದಾನಂದ ಭಾರತೀ ಸ್ವಾಮೀಜಿ ಹೇಳಿದ್ದಾರೆ.

ಕುಂಬಳೆ ಸಮೀಪದ ಸರೋವರ ಕ್ಷೇತ್ರವೆಂದೇ ಪ್ರಸಿದ್ಧಿ ಹೊಂದಿರುವ ಅನಂತಪುರ ಶ್ರೀ ಅನಂತಪದ್ಮನಾಭ ಸ್ವಾಮೀ ಕ್ಷೇತ್ರದಲ್ಲಿ ಭಾನುವಾರ ನಡೆದ ಭಕ್ತರ ಸಮಾಲೋಚನಾ ಮಹಾಸಭೆಯಲ್ಲಿ 2027ನೇ ಫೆ.23ರಿಂದ 28ರ ತನಕ ಶ್ರೀ ದೇವರ ಬ್ರಹ್ಮಕಲಶೋತ್ಸವ ನೆರವೇರಲಿದೆ ಎಂದು ದಿನಾಂಕ ಘೋಷಿಸಿ ಬಳಿಕ ಅವರು ಆಶೀರ್ವಚನ ನೀಡಿದರು.

ನಮ್ಮ ದೇಗುಲಗಳು ಹಿಂದು ಸನಾತನ ಧರ್ಮದ ಅಸ್ಮಿತೆಯನ್ನು ಕಾಪಾಡುವ ಧಾರ್ಮಿಕ ಶ್ರದ್ಧಾಕೇಂದ್ರಗಳಾಗಿವೆ. ದೇವಾಲಯಗಳ ಜೀರ್ಣೋದ್ಧಾರ ಹಾಗೂ ಬ್ರಹ್ಮಕಲಶೋತ್ಸವ ಸಹಿತ ವಿವಿಧ ವಿಧಿ ವಿಧಾನಗಳನ್ನು ಸಮಯೋಚಿತವಾಗಿ ನಡೆಸುವುದು ಭಕ್ತರ ಜವಾಬ್ದಾರಿಯೂ ಆಗಿದೆ ಎಂದು ಎಡನೀರು ಶ್ರೀ ನುಡಿದರು.

ಒಡಿಯೂರು ಶ್ರೀ ಗುರುದೇವಾನಂದ ಸ್ವಾಮೀಜಿ ಆಶೀರ್ವಚನ ನೀಡಿ,



ಇದೊಂದು ಧರ್ಮ ಮತ್ತು ಸಂಸ್ಕೃತಿಯನ್ನು ಬಲಪಡಿಸುವ ಪ್ರಕ್ರಿಯೆಯಾಗಿದೆ. ಹಿಂದು ಧರ್ಮ ಯಾವಾಗ ಆರಂಭವಾಯಿತು ಮತ್ತು ಯಾವಾಗ ಕೊನೆಗೊಳ್ಳುತ್ತದೆ ಎಂಬುದಕ್ಕೆ ದಿನಾಂಕಗಳಿಲ್ಲ, ಅದು ಸನಾತನ ಧರ್ಮವಾಗಿದೆ ಎಂದು ಹೇಳಿದರು.

ಕಾಸರಗೋಡು ಜಿ.ಪಂ. ಸದಸ್ಯರಾದ ಎಂ.ಪಿ. ರಾಮಪ್ಪ ಮಂಜೇಶ್ವರ, ಸೋಮಶೇಖರ ಜೆ.ಎಸ್., ಜೀರ್ಣೋದ್ಧಾರ ಸಮಿತಿಯ ಗೌರವಾಧ್ಯಕ್ಷ ಶ್ರೀಕೃಷ್ಣಯ್ಯ ಅನಂತಪುರ, ಅಧ್ಯಕ್ಷ ಬಿ.ವಸಂತ ಪೈ ಬದಿಯಡ್ಕ, ಉದ್ಯಮಿ, ಕೊಡುಗೈದಾನಿ ಕೆ.ಕೆ. ಶೆಟ್ಟಿ ಕುತ್ತಿಕ್ಕಾರು, ಉದ್ಯಮಿ ಮಧುಸೂದನ್ ಆಯರ್, ಮಾತೃ ಸಮಿತಿ ಗೌರವಾಧ್ಯಕ್ಷೆ ಜಯಶ್ರೀ, ಶ್ರೀ ಕ್ಷೇತ್ರದ ಮೆನೇಜಿಂಗ್ ಟ್ರಸ್ಟಿ ಕುಶಾಲಪ್ಪ ಪೂಜಾರಿ, ಜೀರ್ಣೋದ್ಧಾರ ಸಮಿತಿ ಕಾರ್ಯಾಧ್ಯಕ್ಷ ಮಾಧವ ಕಾರಂತ, ಪುತ್ತಿಗೆ ಗ್ರಾ.ಪಂ. ಸದಸ್ಯ ಸತೀಶ್ ಪೆರ್ಣೆ, ಬ್ಲಾಕ್ ಪಂಚಾಯತ್ ಸದಸ್ಯ ಪೃಥ್ವಿರಾಜ್ ಶೆಟ್ಟಿ ಕುಂಬಳೆ ಗ್ರಾ.ಪಂ. ಸದಸ್ಯರಾದ ಮಂಜುನಾಥ ಆಳ್ವ ಮಡ್ವ, ಸುಖೇಶ್ ಭಂಡಾರಿ, ಅಜಿತ್‌ಕುಮಾರ್ ಇದ್ದರು.

ಬ್ರಹ್ಮಕಲಶೋತ್ಸವ ಸಮಿತಿ ಪ್ರಧಾನ ಕಾರ್ಯದರ್ಶಿ ಮಹಾಲಿಂಗೇಶ್ವರ ಭಟ್ ಎಂ.ವಿ. ಸ್ವಾಗತಿಸಿ, ರಾಮಚಂದ್ರ ಭಟ್ ಅನಂತಪುರ ವಂದಿಸಿದರು. ಸತ್ಯಶಂಕರ ಅನಂತಪುರ ನಿರೂಪಿಸಿದರು. ವಿಜಯಾ ಭಟ್, ಶುಭಾ ದೇವಸ್ಯ ಪ್ರಾರ್ಥನೆ ಹಾಡಿದರು.

ವಿಶೇಷ ಆಕರ್ಷಣೆಯಾಗಿ ತೆಪ್ಪೋತ್ಸವ ಅನಂತಪುರ ಶ್ರೀ ಕ್ಷೇತ್ರದಲ್ಲಿ ಸರಿಸುಮಾರು 27 ವರ್ಷಗಳ ಬಳಿಕ ವಿಶೇಷ ಆಕರ್ಷಣೆಯಾಗಿ ತೆಪ್ಪೋತ್ಸವ ನಡೆಯಲಿದೆ. ಬ್ರಹ್ಮಕಲಶೋತ್ಸವದ ಕೊನೆಯ ದಿನವಾದ ಫೆಬ್ರವರಿ 28ರಂದು ರಾತ್ರಿ ತೆಪ್ಪೋತ್ಸವ ಮತ್ತು ವಾರ್ಷಿಕ ಜಾತ್ರೆಯನ್ನು ಹಮ್ಮಿಕೊಳ್ಳಲಾಗಿದೆ.

ಬಿಎಂಎಸ್ ಚೆಂಗಳ ಪಂಚಾಯತ್ ಸಮ್ಮೇಳನ



ಕಾಸರಗೋಡು: ಕೇರಳದಲ್ಲಿ ಸತತವಾಗಿ ಅಧಿಕಾರಕ್ಕೆ ಬರುತ್ತಿರುವ ಎಡ ಮತ್ತು ಐಕ್ಯರಂಗ ಸರಕಾರಗಳು ಕಾರ್ಮಿಕರ ಬಗ್ಗೆ ತೋರುತ್ತಿರುವ ನಿರ್ಲಕ್ಷ್ಯ ಧೋರಣೆಯನ್ನು ಕೈಬಿಡಬೇಕು ಮತ್ತು ಕಲ್ಯಾಣ ನಿಧಿಯ ಸದಸ್ಯರಾಗಿರುವ ಕಾರ್ಮಿಕರಿಗೆ ಪಿಂಚಣಿ ಹಾಗೂ ಇತರ ಸವಲತ್ತುಗಳನ್ನು ಸಕಾಲದಲ್ಲಿ ಒದಗಿಸಲು ಕೇರಳ ಸರಕಾರವು ಕೂಡಲೇ ಕ್ರಮಗಳನ್ನು ತೆಗೆದುಕೊಳ್ಳಬೇಕು ಎಂದು ಎನ್‌ಜಿಒ ಸಂಘ (ಬಿಎಂಎಸ್) ಕಾಸರಗೋಡು ಜಿಲ್ಲಾ ಉಪಾಧ್ಯಕ್ಷ ರಾಜೇಶ್ ನೆಕ್ರಾಜೆ ಒತ್ತಾಯಿಸಿದ್ದಾರೆ.

ಭಾರತೀಯ ಮಜ್ದೂರ್ ಸಂಘ (ಬಿಎಂಎಸ್)ದ ಚೆಂಗಳ ಪಂ.ಸಮ್ಮೇಳನವನ್ನು ಉದ್ಘಾಟಿಸಿ ಅವರು ಮಾತನಾಡಿದರು. ಬಿಎಂಎಸ್ ಚೆಂಗಳ ಪಂಚಾಯತ್ ಸಮಿತಿಯ ಅಧ್ಯಕ್ಷೆ ಚಿತ್ರಕಲಾ ಮಾವಿನಕಟ್ಟೆ ಅಧ್ಯಕ್ಷತೆ ವಹಿಸಿದ್ದರು.

ಭಾರತೀಯ ಮಜ್ದೂರ್ ಸಂಘದ ಕಾಸರಗೋಡು ಪ್ರಾದೇಶಿಕ ಸಮಿತಿ ಕಾರ್ಯದರ್ಶಿ ಬಾಬುಮೋನ್ ಚೆಂಗಳ ಹಾಗೂ ಕಟ್ಟಡ ನಿರ್ಮಾಣ ಕಾರ್ಮಿಕರ ಸಂಘ (ಬಿಎಂಎಸ್)ದ ಜಿಲ್ಲಾ ಉಪಾಧ್ಯಕ್ಷ ಭರತನ್ ಕೆ.ಕೆ.ಪುರಂ ಶುಭಹಾರೈಸಿದರು. ಬಿಎಂಎಸ್ ಜಿಲ್ಲಾ ಕಾರ್ಯದರ್ಶಿ ಕೆ.ವಿ.ಬಾಬು ಮಾತನಾಡಿ, ಮುಂದಿನ ಮೂರು ವರ್ಷಗಳ ಅವಧಿಗೆ ಪಂಚಾಯತ್ ಸಮಿತಿಯ ನೂತನ ಪದಾಧಿಕಾರಿಗಳ ಆಯ್ಕೆ ಪ್ರಕ್ರಿಯೆಯನ್ನು ನಿರ್ವಹಿಸಿದರು.

ಅಧ್ಯಕ್ಷರಾಗಿ ಪ್ರಜಿತ್ ಮಾಳಂಗೈ, ಉಪಾಧ್ಯಕ್ಷರಾಗಿ ಯಶೋಧಾ ಚೂರಿವಳ್ಳ, ಚಿತ್ರಕಲಾ ಮಾವಿನಕಟ್ಟೆ, ನಂದೇಶ್ ಪುಂಡೂರು, ಕಾರ್ಯದರ್ಶಿ ಅವಿನಾಶ್ ಮಾವಿನಕಟ್ಟೆ, ಜೊತೆ ಕಾರ್ಯದರ್ಶಿಗಳಾಗಿ ರಂಜಿತ್ ಚೆರ್ಕಳ, ಅನಿತಾ ಚೂರಿವಳ್ಳ, ಭರತನ್ ಕೆ.ಕೆ.ಪುರಂ, ಕೋಶಾಧಿಕಾರಿಯಾಗಿ ಗಿರೀಶ್ ಪುಂಡೂರು ಹಾಗೂ 7 ಮಂದಿ ಸದಸ್ಯರ ಸಮಿತಿಯನ್ನು ರಚಿಸಲಾಯಿತು. ಕಾರ್ಯಕ್ರಮದಲ್ಲಿ ಸಾಮಾಜಿಕ, ಸಾಂಸ್ಕೃತಿಕ, ಕಲಾತ್ಮಕ, ಕ್ರೀಡೆ ಮತ್ತು ಶಿಕ್ಷಣ ಕ್ಷೇತ್ರಗಳಲ್ಲಿ ಪ್ರತಿಭೆಯನ್ನು ಪ್ರದರ್ಶಿಸಿದ ವ್ಯಕ್ತಿಗಳು ಮತ್ತು ವಿದ್ಯಾರ್ಥಿಗಳನ್ನು ಸನ್ಮಾನಿಸಲಾಯಿತು. ಭಾರತೀಯ ಮಜ್ದೂರ್ ಸಂಘ (ಬಿಎಂಎಸ್)ದ ಚೆಂಗಳ ಪಂಚಾಯತ್ ಸಮಿತಿಯ ಕಾರ್ಯದರ್ಶಿ ರಂಜಿತ್ ಚೆರ್ಕಳ ಸ್ವಾಗತಿಸಿ, ಪ್ರದೀಪ್ ಪುಂಡೂರು ವಂದಿಸಿದರು.

ಸಿರಿಬಾಗಿಲು ಪ್ರತಿಷ್ಠಾನ: ಉಚಿತ ಆಯುರ್ವೇದ ವೈದ್ಯಕೀಯ ಶಿಬಿರ



ಕಾಸರಗೋಡು: ಸಿರಿಬಾಗಿಲು ವೆಂಕಪ್ಪಯ್ಯ ಸಾಂಸ್ಕೃತಿಕ ಪ್ರತಿಷ್ಠಾನದ ಶ್ರೀ ಕೇಶವಾನಂದ ಭಾರತೀ ಸ್ಮೃತಿ ಮಂದಿರದಲ್ಲಿ ಶ್ರೀ ಸತ್ಯಸಾಯಿ ಸೇವಾ ಸಮಿತಿ ಪೆರ್ಲ ಇದರ ಪ್ರಾಯೋಜಕತ್ವದಲ್ಲಿ ಭಾನುವಾರ ಉಚಿತ ಆಯುರ್ವೇದ ವೈದ್ಯಕೀಯ ಶಿಬಿರ ನಡೆಯಿತು.

ಶಿಬಿರವನ್ನು ಪುಳ್ಕೂರು ಶ್ರೀ ಮಹಾದೇವ ದೇವಸ್ಥಾನದ ಅರ್ಚಕರಾದ ಪ್ರಭಾಕರ ಕಾರಂತ ಹಾಗೂ ಉಡುವ ಶಂಕರನಾರಾಯಣ ಹೇರಳ ಅವರು ದೀಪಪ್ರಜ್ವಲನೆಯ ಮೂಲಕ ಉದ್ಘಾಟಿಸಿದರು. ಶಿಬಿರದ ವೈದ್ಯರಾದ ಡಾ.ಕೃಷ್ಣ ಮೋಹನ ಪೆರ್ಲ, ಡಾ.ಸತ್ಯನಾರಾಯಣ ಅವರು ರೋಗಿಗಳನ್ನು ಪರೀಕ್ಷಿಸಿದರು. ವೆಂಕಟೇಶ ಶೆಣೈ ಕುಂಬಳೆ, ವೆಂಕಟಕೃಷ್ಣ ಭಟ್, ಸತ್ಯನಾರಾಯಣ ಹೆಗಡೆ, ಕಿಶೋರ್ ಹೇರಳ ಉಡುವ ಶಿಬಿರದಲ್ಲಿ ಸಹಕರಿಸಿದರು.

ವಿವಿಧ ರೋಗಗಳ ತಪಾಸಣೆಯ ಜೊತೆಗೆ ರೋಗಿಗಳಿಗೆ ಔಷಧಿಯನ್ನು ಉಚಿತವಾಗಿ ನೀಡಲಾಯಿತು. ಶ್ರೀ ಗೋಪಾಲಕೃಷ್ಣ ಫಾರ್ಮಸಿ ಕುಂಬಳೆ, ಡಾ.ರವಿನಾರಾಯಣ, ಸಂಜೀವಿನಿ ಕ್ಲಿನಿಕ್ ನೆಹರೂ ನಗರ ಪುತ್ತೂರು, ಶ್ರೀ ಸದ್ಗುರು ಡಿಸ್ಟ್ರಿಬ್ಯೂಟರ್ಸ್ ಸುಮತಿ ಕಾಂಪ್ಲೆಕ್ಸ್ ಕಬಕ, ಸಿ.ಕೇಮ್ ಫಾರ್ಮಸಿ ಬೆಂಗಳೂರು ಮುಂತಾದ ಸಂಸ್ಥೆಗಳು ಉಚಿತವಾಗಿ ಔಷಧಗಳನ್ನು ವಿತರಿಸಿದವು. 80ಕ್ಕೂ ಹೆಚ್ಚು ಜನರು ಶಿಬಿರದಲ್ಲಿ ಭಾಗವಹಿಸಿ ಪ್ರಯೋಜನ ಪಡೆದರು. ಪ್ರತಿಷ್ಠಾನದ ಅಧ್ಯಕ್ಷ , ಭಾಗವತ ರಾಮಕೃಷ್ಣ ಮಯ್ಯ ಸಿರಿಬಾಗಿಲು ಮತ್ತು ಸುಮಿತ್ರಾ ಮಯ್ಯ ಸಹಕಾರ ನೀಡಿದರು.



ಕುಂಬಳೆ ಕಿದೂರು ಶ್ರೀ ಮಹಾದೇವ ಶಾಸ್ತಾರ ಬಾಲಗೋಕುಲದ ವತಿಯಿಂದ ಪ್ರಗತಿಪರ ಕೃಷಿಕ ಕಿದೂರು ಶಾಂತಾರಾಮ ರೈ ಅವರ ಭತ್ತದ ಬಯಲಿಗೆ ಪ್ರವಾಸ ಕೈಗೊಳ್ಳಲಾಯಿತು. ಕೃಷಿಯ ಕುರಿತು ಹಲವು ಮಾಹಿತಿಗಳನ್ನು ಪ್ರಾತ್ಯಕ್ಷಿಕೆಯ ಮೂಲಕ ಶಾಂತಾರಾಮ ರೈ ಅವರು ನೀಡಿದರು. ಇದೇ ವೇಳೆ ಕಿದೂರು ಬಾಲಗೋಕುಲ ಸಮಿತಿ ವತಿಯಿಂದ ಗಿಡವನ್ನು ನೀಡಿ ಗೌರವಿಸಲಾಯಿತು.



ಸ್ಪಂದನ ಟ್ರಸ್ಟ್ ಕೋಳ್ಯೂರು ಮಂಜೇಶ್ವರ ಇದರ 118ನೇ ಮಾಸಿಕ ಸೇವಾ ಯೋಜನೆಯನ್ನು ದಕ್ಷಿಣ ಕನ್ನಡ ಜಿಲ್ಲೆಯ ಕೊಣಾಜೆ ಪಂಚಾಯತ್ ವ್ಯಾಪ್ತಿಯ ಹರಿಪ್ರಸಾದ್ (45) ಪರಂಡೆ ಕೊಣಾಜೆ ಅವರ ಮನೆಗೆ ಭಾನುವಾರ ತೆರಳಿ ಚೆಕ್ ಮುಖಾಂತರ ಹಸ್ತಾಂತರಿಸಲಾಯಿತು. ಈ ಸಂದರ್ಭ ಲೋಕೇಶ ಬಿ. ಕೋಳ್ಯೂರು, ಸಂದೀಪ್ ಕೋಡಿ ಸೇನ್ಯ, ರಂಜಿತ್ ನೋಂಡ ಸೇನ್ಯ ಉಪಸ್ಥಿತರಿದ್ದರು.

ಭಾರತೀಯ ಮಜ್ದೂರ್ ಸಂಘದ ಕುಂಬಳೆ ಪಂಚಾಯತ್ ಮಟ್ಟದ ಸಮಾವೇಶ

ನೇಪಾಳದಲ್ಲಿ ಚಿನ್ನದ ಪದಕ ಗೆದ್ದ ಯುವತಿಗೆ ಸನ್ಮಾನ

ಕುಂಬಳೆ: ಭಾರತೀಯ ಮಜ್ದೂರ್ ಸಂಘ (ಬಿಎಂಎಸ್)ದ ಕುಂಬಳೆ ಪಂಚಾಯತ್ ಸಮಿತಿ ನೇತೃತ್ವದಲ್ಲಿ ಕುಂಬಳೆ ಶ್ರೀ ಜಯ ಮಾರುತಿ ವ್ಯಾಯಾಮ ಶಾಲೆಯಲ್ಲಿ ಪಂಚಾಯತ್ ಮಟ್ಟದ ಸಮ್ಮೇಳನವನ್ನು ಹಮ್ಮಿಕೊಳ್ಳಲಾಯಿತು. ಸಮ್ಮೇಳನವನ್ನು ಎನ್‌ಜಿಒ ಸಂಘದ ಕಾಸರಗೋಡು ಜಿಲ್ಲಾಧ್ಯಕ್ಷ ರಂಜಿತ್ ಉದ್ಘಾಟಿಸಿದರು. ಬಿಎಂಎಸ್ ಪಂಚಾಯತ್ ಸಮಿತಿಯ ಅಧ್ಯಕ್ಷ ಶಿವಾನಂದ ರಾವ್ ಕಂಚಿಕಟ್ಟೆ ಅಧ್ಯಕ್ಷತೆ ವಹಿಸಿದ್ದರು.

ಬಿಎಂಎಸ್ ಜಿಲ್ಲಾ ಜೊತೆ ಕಾರ್ಯದರ್ಶಿ ಪಿ.ದಿನೇಶ್ ಬಂಬ್ರಾಣ, ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಮಂಡಲ ಕಾರ್ಯವಾಹ ಜಿತೇಶ್ ನಾಯ್ಕಾಪು, ಪರಿವಾರ ಸಂಘಟನೆ



ಪ್ರಮುಖರಾದ ರವೀಂದ್ರನ್ ಕುಂಬಳೆ ಶುಭಾಶಂಸನೆಗೈದರು.

ಸಮಾರೂಪ ಭಾಷಣವನ್ನು ಅಂಗನವಾಡಿ ಸಂಘಟನೆಯ ರಾಜ್ಯಾಧ್ಯಕ್ಷೆ ಶೋಭಾ ಎನ್. ನಾಯ್ಕಾಪು ನೆರವೇರಿಸಿದರು. ಭೋಜರಾಜ ಬೆಜಪ್ಪೆ ವರದಿ ಮಂಡಿಸಿದರು. ನೇಪಾಳದಲ್ಲಿ ನಡೆದ ಅಂತಾರಾಷ್ಟ್ರೀಯ ಸಾಫ್ಟ್ ಬೇಸ್ ಬಾಲ್ ಪಂದ್ಯಾಟದಲ್ಲಿ ಚಾಂಪಿಯನ್ ಆಗಿ ಹೊರ ಹೊಮ್ಮಿ ಚಿನ್ನದ ಪದಕ ಗೆದ್ದ ಭಾರತ ತಂಡದ ಆಟಗಾರ್ತಿ ದೀಪ್ತಿ ಬಂಬ್ರಾಣ ಅವರನ್ನು ಸನ್ಮಾನಿಸಲಾಯಿತು.

ಕುಂಬಳೆ ಗ್ರಾ.ಪಂ. ಸದಸ್ಯರಾದ ಕೆ.ರಮೇಶ್ ಭಟ್, ಕಾಂಚಾರ, ಅಜಿತ್ ಕುಮಾರ್ ಹಾಗೂ ಪರಿವಾರ ಸಂಘಟನೆ ಪ್ರಮುಖರಾದ ರಾಧಾಕೃಷ್ಣ ರೈ ಮಡ್ವ ಕೆ.ಸುಜಿತ್ ರೈ, ಶಿವಪ್ರಸಾದ್ ರೈ ಮಡ್ವ ಕೆ. ವಿನೋದನ್ ಕಡಪ್ಪುರ, ರಾಜೇಶ್ ರೈ ಉಜಾರು ಮುಂತಾದವರು ಭಾಗವಹಿಸಿದ್ದರು.

ಸಭೆಯಲ್ಲಿ ನೂತನ ಸಮಿತಿಯನ್ನು ರೂಪಿಸಲಾಯಿತು. ಅಧ್ಯಕ್ಷರಾಗಿ ಶಿವಾನಂದ ರಾವ್ ಕಂಚಿಕಟ್ಟೆ, ಉಪಾಧ್ಯಕ್ಷರಾಗಿ ಕೃಷ್ಣ ಮಾವಿನಕಟ್ಟೆ, ಭೋಜರಾಜ ಬೆಜಪ್ಪೆ, ವೀಣಾ ಜನಾರ್ದನನ್, ವಾಸುದೇವ ಪಿ.ಕೆ., ಸಂತೋಷ್ ನಾಯ್ಕಾಪು, ಕಾರ್ಯದರ್ಶಿಯಾಗಿ ರವಿರಾಜ್ ಕುಂಟಂ ಗೇರಡ್ಕ, ಜೊತೆ ಕಾರ್ಯದರ್ಶಿಗಳಾಗಿ ದೀಕ್ಷಿತ್ ನಾಯ್ಕಾಪು, ವರದರಾಜ್ ಬಂಬ್ರಾಣ, ವಿಶಾಲಾಕ್ಷಿ ನಾರಾಯಣಮಂಗಲ, ಶ್ಯಾಮಲಾ ಬಂಬ್ರಾಣ, ಕೃಷ್ಣ ಪಿ.ಕೆ., ಕೋಶಾಧಿಕಾರಿ ಯಾಗಿ ದಿವಾಕರ ರೈ ಉಜಾರು ಹಾಗೂ ಸಮಿತಿ ಸದಸ್ಯರನ್ನು ಆರಿಸಲಾಯಿತು. ದಿವಾಕರ ರೈ ಉಜಾರು ಸ್ವಾಗತಿಸಿ. ಐತ್ತಪ್ಪ ನಾರಾಯಣಮಂಗಲ ಧನ್ಯವಾದವಿತ್ತರು.

ಪಳ್ಳತ್ತಡ್ಕ ವಲಯದ ದಾಖಲೆ | ಲೋಕಕಲ್ಯಾಣಕ್ಕೆ ಧಾರ್ಮಿಕ ಕಾರ್ಯ

ಪಳ್ಳತ್ತಡ್ಕದಲ್ಲಿ 300ನೇ ಪ್ರತಿರುದ್ರ ಸಂಪನ್ನ

ಬದಿಯಡ್ಕ: ಶ್ರೀ ರಾಮಚಂದ್ರಾಪುರ ಮಠದ ಮುಳ್ಳೇರಿಯ ಹವ್ಯಕ ಮಂಡಲದ ಪಳ್ಳತ್ತಡ್ಕ ವಲಯದ ನೇತೃತ್ವದಲ್ಲಿ ಐತಿಹಾಸಿಕ ಮೈಲಿಗಲ್ಲಾದ 300ನೇ ಪ್ರತಿರುದ್ರ ಕಾರ್ಯಕ್ರಮವು ಪಳ್ಳತ್ತಡ್ಕದ ಶ್ರೀ ಮುದ್ದು ಮಂದಿರದಲ್ಲಿ ಅತ್ಯಂತ ಶ್ರದ್ಧಾಭಕ್ತಿ ಮತ್ತು ಸಡಗರದಿಂದ ಶನಿವಾರ ಜರಗಿತು.

430ಕ್ಕೂ ಹೆಚ್ಚು ಮಂದಿ ರುದ್ರ ಪಠಣ ಮಾಡಿದರು. ನಾಡಿನ ಹೆಸರಾಂತ ವೈದಿಕ ಮನೆತನದ ಪುರೋಹಿತರು ಪಾಲ್ಗೊಂಡಿದ್ದರು. ಶ್ರೀ ಮಠದ ಅಭಿನಂದನಾ ಪತ್ರವನ್ನು ಮಹಾಮಂಡಲ ಅಧ್ಯಕ್ಷ ಹರಿಪ್ರಸಾದ ಪೆರಿಯಪ್ಪು ಪಳ್ಳತ್ತಡ್ಕ ವಲಯದ ಪದಾಧಿಕಾರಿಗಳಿಗೆ ನೀಡಿದರು. ಶ್ರೀ ಮಠದ



ಶ್ರುತಿಸಾಗರ ಬಿರುದಾಂಕಿತ ವೇದಬ್ರಹ್ಮ ಪಳ್ಳತ್ತಡ್ಕ ಶಂಕರನಾರಾಯಣ ಘನಪಾಠಿಗಳು ವೇದ ಹಾಗೂ ರುದ್ರ ಪಠಣದ ಮಹತ್ವವನ್ನು ತಿಳಿಸಿದರು. ಮಂಗಳೂರು, ಉಪ್ಪಿನಂಗಡಿ, ಮುಳ್ಳೇರಿಯ ಮಂಡಲಗಳಿಂದ ಶಿಷ್ಯಭಕ್ತರು ಭಾಗವಹಿಸಿದ್ದರು. ಬೆಳಗ್ಗೆ 12 ತೆಂಗಿನಕಾಯಿ ಗಣಪತಿ ಹೋಮ, ಅಷ್ಟಾವಧಾನ ಸೇವೆಯೊಂದಿಗೆ ರಾತ್ರಿ ಶಿವಪೂಜೆ ನಡೆಯಿತು. ಶ್ರೀಗಳ ಅನುಗ್ರಹ ಆಶೀರ್ವಚನವನ್ನು ಪರದೆಯಲ್ಲಿ ಪ್ರದರ್ಶಿಸಲಾಯಿತು.

ಸುತ್ತಮುತ್ತ

ನಿಂತಿದ್ದ ಲಾರಿಗೆ ಬೈಕ್ ಡಿಕ್ಕಿ; ಸವಾರರಿಬ್ಬರಿಗೆ ಗಂಭೀರ ಗಾಯ

ಉಡುಪಿ: ರಾಷ್ಟ್ರೀಯ ಹೆದ್ದಾರಿ 66ರ ಶಿರೂರು ಗ್ರಾಮದ ಶಂಕದಗುಂಡಿ ಸೇತುವೆ ಬಳಿ ಸುರಕ್ಷತಾ ಕ್ರಮಗಳನ್ನು ಕೈಗೊಳ್ಳದೆ ನಿಲ್ಲಿಸಲಾಗಿದ್ದ ಲಾರಿಗೆ ಬೈಕೊಂದು ಹಿಂಬದಿಯಿಂದ ಡಿಕ್ಕಿ ಹೊಡೆದ ಪರಿಣಾಮ ಇಬ್ಬರು ಯುವಕರು ಗಂಭೀರವಾಗಿ ಗಾಯಗೊಂಡು ಮಣಿಪಾಲ ಆಸ್ಪತ್ರೆಗೆ ದಾಖಲಾದ ಘಟನೆ ಜೂ.28ರಂದು ನಡೆದಿದೆ. ಭಟ್ಕಳದಿಂದ ಬೈಂದೂರು ಕಡೆಗೆ ಹೋಗುವ ರಸ್ತೆಯ ಬದಿಯಲ್ಲಿ ಲಾರಿ ಚಾಲಕ ಸುನೀಲ್ ಎಂಬಾತ ಯಾವುದೇ ಇಂಡಿಕೇಟರ್ ಹಾಕದೆ ಬೇಜವಾಬ್ದಾರಿಯಿಂದ ವಾಹನ ನಿಲ್ಲಿಸಿದ್ದ ಎನ್ನಲಾಗಿದೆ. ಇದೇ ವೇಳೆ ಭಟ್ಕಳ ಕಡೆಯಿಂದ ಅತಿವೇಗವಾಗಿ ಬಂದ ಬೈಕ್ ಸವಾರ ಮೊಹಮ್ಮದ ಶಾಕೀಬ್, ಲಾರಿಯ ಹಿಂಬದಿಯ ಬಂಪರ್‌ಗೆ ನೇರವಾಗಿ ಡಿಕ್ಕಿ ಹೊಡೆದಿದ್ದಾನೆ. ಅಪಘಾತದ ರಭಸಕ್ಕೆ ಬೈಕ್ ಸವಾರ ಶಾಕೀಬ್ ತಲೆ ಹಾಗೂ ಮುಖಕ್ಕೆ ತೀವ್ರ ಗಾಯವಾಗಿದೆ. ಸಹಸವಾರ ನವಾಜ್ ಎಂಬಾತನ ಕಾಲಿಗೆ ಗಾಯವಾಗಿದೆ. ಗಾಯಾಳುಗಳನ್ನು ಮಣಿಪಾಲ ಕೆಎಂಸಿ ಆಸ್ಪತ್ರೆಯಲ್ಲಿ ದಾಖಲಿಸಲಾಗಿದೆ. ಶಿರೂರಿನ ಮಹಮ್ಮದ್ ಮಿದ್ಲಾರ್ಝ್ ಬಾವು ನೀಡಿದ ದೂರಿನಂತೆ ಬೈಂದೂರು ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಪಿಕಪ್ ಡಿಕ್ಕಿ: ಬೈಕ್ ಸವಾರನಿಗೆ ಗಾಯ

ಉಡುಪಿ: ಸಾಸ್ತಾನ ಕಡೆಯಿಂದ ಬರುತ್ತಿದ್ದ ಬೈಕ್‌ಗೆ ಬೊಲೆರೊ ಪಿಕಪ್ ವಾಹನವೊಂದು ಅತಿವೇಗವಾಗಿ ಬಂದು ಡಿಕ್ಕಿ ಹೊಡೆದ ಪರಿಣಾಮ ಬೈಕ್ ಸವಾರ ಗಂಭೀರವಾಗಿ ಗಾಯಗೊಂಡ ಘಟನೆ ಐರೋಡಿ ಗ್ರಾಮದ ಮಾಬುಕಳ ಜಂಕ್ಷನ್ ಬಳಿ ಜೂನ್ 29ರಂದು ಸಂಭವಿಸಿದೆ. ಬೈಕ್ ಸವಾರ ಭಾಸ್ಕರ ಪೂಜಾರಿ ಅವರು ಬೆಳಿಗ್ಗೆ 10.30ರ ಸುಮಾರಿಗೆ ಮಾಬುಕಳ ಜಂಕ್ಷನ್‌ನ ಯು–ಟರ್ನ್ ಬಳಿ ಹೆದ್ದಾರಿ 66ರ ಉಡುಪಿ–ಕುಂದಾಪುರ ರಸ್ತೆಯನ್ನು ದಾಟಿ ರಸ್ತೆ ಅಂಚಿನಲ್ಲಿ ನಿಂತಿದ್ದರು. ಈ ವೇಳೆ ಉಡುಪಿ ಕಡೆಯಿಂದ ಕುಂದಾಪುರ ಕಡೆಗೆ ಅತಿವೇಗ ಹಾಗೂ ಅಜಾಗರೂಕತೆಯಿಂದ ಬಂದ ಬೊಲೆರೊ ಪಿಕಪ್ ಚಾಲಕ ಮಹಮ್ಮದ್ ಶಫಿ, ತನ್ನ ವಾಹನವನ್ನು ತೀರಾ ಎಡಭಾಗಕ್ಕೆ ಚಲಾಯಿಸಿ ಭಾಸ್ಕರ ಪೂಜಾರಿ ಅವರ ಬೈಕ್‌ಗೆ ಜೋರಾಗಿ ಡಿಕ್ಕಿ ಹೊಡೆದಿದ್ದಾನೆ. ಡಿಕ್ಕಿಯ ರಭಸಕ್ಕೆ ರಸ್ತೆಗೆ ಬಿದ್ದ ಭಾಸ್ಕರ ಅವರ ತಲೆ ಹಾಗೂ ಬೆನ್ನಿಗೆ ಗಂಭೀರ ರಕ್ತಗಾಯಗಳಾಗಿದ್ದು, ಅವರು ಪ್ರಜ್ಞೆ ಕಳೆದುಕೊಂಡಿದ್ದರು. ತಕ್ಷಣ ಅವರನ್ನು ಬ್ರಹ್ಮಾವರದ ಖಾಸಗಿ ಆಸ್ಪತ್ರೆಗೆ ದಾಖಲಿಸಿ, ಬಳಿಕ ಹೆಚ್ಚಿನ ಚಿಕಿತ್ಸೆಗಾಗಿ ಮಣಿಪಾಲ ಕೆಎಂಸಿ ಆಸ್ಪತ್ರೆಗೆ ದಾಖಲಿಸಲಾಗಿದೆ. ಕೋಟ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಕೃಷಿಕ ನೇಣಿಗೆ ಶರಣು

ಉಡುಪಿ: ಪತ್ನಿ ಹೂಡಿದ್ದ ಕಾನೂನು ಪ್ರಕರಣದಿಂದ ತೀವ್ರ ಮಾನಸಿಕ ಖಿನ್ನತೆಗೊಳಗಾಗಿದ್ದ ಕೃಷಿಕರೊಬ್ಬರು ಹೆಂಡತಿಯ ಮನೆಯ ತೋಟದಲ್ಲೇ ಗೇರು ಮರಕ್ಕೆ ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡ ಘಟನೆ ಶಂಕರನಾರಾಯಣ ಪೊಲೀಸ್ ಠಾಣಾ ವ್ಯಾಪ್ತಿಯ ಆಜ್ರಿ ಗ್ರಾಮದಲ್ಲಿ ನಡೆದಿದೆ.

ಆಜ್ರಿ ಗ್ರಾಮದ ಹೊಳಂದೂರು ಹೆಬ್ಬಾಗಿಲು ನಿವಾಸಿ ಸಂತೋಷ್ ಶೆಟ್ಟಿ (47) ಆತ್ಮಹತ್ಯೆ ಮಾಡಿಕೊಂಡ ದುರ್ದೈವಿ. ಕೃಷಿ ಕೆಲಸ ಮಾಡಿಕೊಂಡಿದ್ದ ಇವರಿಗೆ 13 ವರ್ಷಗಳ ಹಿಂದೆ ಮದುವೆಯಾಗಿದ್ದು, ದಂಪತಿ ನಡುವೆ ಸದಾ ಜಗಳ ನಡೆಯುತ್ತಿತ್ತು ಎನ್ನಲಾಗಿದೆ. 2025ರಲ್ಲಿ ಪತ್ನಿ ಸುಜಾತಾ ಅವರು ಸಂತೋಷ್ ವಿರುದ್ಧ ಪೊಲೀಸ್ ಪ್ರಕರಣ ದಾಖಲಿಸಿದ್ದರು. ಇದರಿಂದ ತೀವ್ರ ಮನನೊಂದಿದ್ದ ಸಂತೋಷ್ ವಿಪರೀತ ಮದ್ಯಪಾನದ ಚಟ ಬೆಳೆಸಿಕೊಂಡಿದ್ದರಲ್ಲದೇ, ಜೀವನದಲ್ಲಿ ಜಿಗುಪ್ಸೆಗೊಂಡು ತಾನು ಸಾಯುವುದಾಗಿ ಆಪ್ತರಲ್ಲಿ ಹೇಳಿಕೊಳ್ಳುತ್ತಿದ್ದರು. ಜೂ.28ರಂದು ಹೆಂಡತಿಯ ಮನೆಯ ಆವರಣದಲ್ಲಿ ಸಂತೋಷ್ ಶೆಟ್ಟಿ ಗೇರು ಮರಕ್ಕೆ ನೈಲಾನ್ ಹಗ್ಗದಿಂದ ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಶಂಕರನಾರಾಯಣ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಲಾಗಿದೆ.

ಮೊದಲನೇ ಪುಟದಿಂದ

ಕೊಚ್ಚಿಹೋದ ರಸ್ತೆ

ಏ.16ಕ್ಕೆ ಕಾಮಗಾರಿ ಆರಂಭವಾಯಿತು. ಇದೀಗ ನೂತನ ಸೇತುವೆಯ ಕಾಮಗಾರಿ ಬಹುತೇಕ ಪೂರ್ಣಗೊಂಡಿದೆ.ಕ್ಯೂರಿಂಗ್ ಅವಧಿ ಬಾಕಿ ಇದ್ದು ಮುಂದಿನ 15 ರಿಂದ 20 ದಿನಗಳಲ್ಲಿ ಹೊಸ ಸೇತುವೆ ವಾಹನ ಸಂಚಾರಕ್ಕೆ ತೆರೆದುಕೊಳ್ಳುವ ಸಾಧ್ಯತೆ ಇದೆ. ಸದ್ಯ ನೂರಾರು ಕುಟುಂಬಗಳು ಸುತ್ತು ಬಳಸಿನ ರಸ್ತೆ ಬಳಸುವುದು ಅನಿವಾರ್ಯವಾಗಿದೆ

ಬದಲಿ ರಸ್ತೆ

ಉಜಿರೆ ಕಡೆ ಸಂಚರಿಸುವವರು ಪಡ್ಪು, ಸುರ್ಯ ಮೂಲಕ 10 ಕಿ.ಮೀ. ಸುತ್ತಿ ಬಳಸಿ, ಬೆಳ್ತಂಗಡಿ ಕಡೆ ಸಂಚರಿಸುವವರು ಕೇಳ್ತಾಜೆ ಅಥವಾ ಇಂದಬೆಟ್ಟು ಮೂಲಕ ಸುಮಾರು 25 ಕಿ.ಮೀ. ಸುತ್ತಿ ಬಳಸಿ ಮುಂಡಾಜೆ ಕಡೆ ಸಂಚರಿಸುವವರು ಬೊಳ್ಳೂರು ಬೈಲು ಮೂಲಕ 15ಕಿ.ಮೀ. ಹೆಚ್ಚುವರಿಯಾಗಿ ಸುತ್ತಿ ಪ್ರಯಾಣಿಸಬೇಕಾಗಿದೆ.

ನದಿ ಮಡಿಲು ಖಾಲಿ

ಇದರಿಂದಾಗಿ ಅಂತರ್ಜಲ ಮಟ್ಟವೂ ಹೆಚ್ಚಾಗಿಲ್ಲ. ಒಂದು ಕಾಲದಲ್ಲಿ ಜೂನ್ ತಿಂಗಳಲ್ಲೇ ಮಳೆಯ ಅಬ್ಬರಕ್ಕೆ ನೇತ್ರಾವತಿ ನದಿ ಅಪಾಯದ ಮಟ್ಟದ ಹಂತದಲ್ಲಿ ಹರಿಯುತಿತ್ತು. ತಗ್ಗು ಪ್ರದೇಶಗಳು ಜಲಾವೃತವಾಗುತಿತ್ತು. ಆದರೆ ಈ ವರ್ಷ ಇದು ವರೆಗೆ ನದಿಯಲ್ಲಿ ಪೂರ್ಣ ಪ್ರಮಾಣದ ನೀರಿನ ಹರಿವೇ ಶುರುವಾಗಿಲ್ಲ ಕೆಲವೇ ದಿನಗಳ ಹಿಂದೆ ವಾಯುಭಾರಕುಸಿತದ ಪರಿಣಾಮ ಬಿರುಸಿನ ಮಳೆ ಹೊರತುಪಡಿಸಿ ಮುಂಗಾರು ತನ್ನ ನೈಜ ಸ್ವರೂಪ ಇನ್ನೂ ತೋರಿಸಿಲ್ಲ. ರೈತರು ಉತ್ತಮ ಮಳೆ ನಿರೀಕ್ಷೆಯಲ್ಲೇ ದಿನ ಕಳೆಯುತ್ತಿದ್ದಾರೆ. ಯಥೇಚ್ಚವಾಗಿ ಮಳೆ ಸುರಿದು ಭೂಮಿಯ ದಾಹ ನೀಗಿದಾಗ ಮಾತ್ರ ಜಿಲ್ಲೆಯ ಜನರ ನೀರಿನ ಆತಂಕವೂ ದೂರವಾಗಬಹುದು.

ಆತ್ರಾಡಿಯಲ್ಲಿ 17 ಜಿಲ್ಲೆಗಳ ಸ್ಕೌಟ್ಸ್-ಗೈಡ್ಸ್, ರೋವರ್ಸ್-ರೇಂಜರ್ಸ್ ವಿದ್ಯಾರ್ಥಿಗಳ ಸಮಾಗಮ

ಶಿಸ್ತಿನ ಜೀವನಕ್ಕೆ ವಿದ್ಯಾರ್ಥಿ ಸಂಘಟನೆಗಳು ಅತ್ಯಗತ್ಯ: ಸಿಂಧ್ಯಾ

ಕುಂದಾಪುರ: ಸ್ಕೌಟ್ಸ್ ಮತ್ತು ಗೈಡ್ಸ್ ವತಿಯಿಂದ ವಿಜಯ ಮಕ್ಕಳ ಕೂಟ ಆಂಗ್ಲ ಮಾಧ್ಯಮ ಶಾಲೆ ಆತ್ರಾಡಿ–ವಂಡ್ಸೆ ಇವರ ಸಹಯೋಗದಲ್ಲಿ ರಾಜ್ಯದ 17 ಜಿಲ್ಲೆಗಳಿಂದ ಆಗಮಿಸಿದ ಸ್ಕೌಟ್ಸ್ ಮತ್ತು ಗೈಡ್ಸ್ ಹಾಗೂ ರೋವರ್ಸ್ ಮತ್ತು ರೇಂಜರ್ಸ್ ವಿದ್ಯಾರ್ಥಿಗಳಿಗಾಗಿ ಮೂರು ದಿನಗಳ 'ಏಕತಾ ಸಾಮಾಜಿಕ ಸಾಮರಸ್ಯ' 2026–27 ಶಿಬಿರ ಆತ್ರಾಡಿಯ ವಿಜಯ ಮಕ್ಕಳ ಕೂಟ ಆಂಗ್ಲ ಮಾಧ್ಯಮ ಶಾಲೆಯಲ್ಲಿ ನಡೆಯಿತು.

ಕಾರ್ಯಕ್ರಮವನ್ನು ಮಾಜಿ ಸಚಿವ, ಸ್ಕೌಟ್ಸ್ ಮತ್ತು ಗೈಡ್ಸ್ ರಾಜ್ಯ ಮುಖ್ಯ ಆಯುಕ್ತ ಡಾ. ಪಿ. ಜಿ. ಆರ್. ಸಿಂಧ್ಯಾ ಉದ್ಘಾಟಿಸಿ, ಶಾಲಾ ದಿನಗಳಲ್ಲಿ ಮಕ್ಕಳ ಭವಿಷ್ಯ ಹಾಗೂ ಶಿಸ್ತಿನ ಜೀವನಕ್ಕೆ ಸ್ಕೌಟ್ಸ್ ಮತ್ತು ಗೈಡ್ಸ್ ಹಾಗೂ ರೋವರ್ಸ್ ಮತ್ತು ರೇಂಜರ್ಸ್ ಸಹಕಾರಿಯಾಗಲಿದೆ ಎಂದು ಹೇಳಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಉಡುಪಿ ಜಿಲ್ಲಾ ಸ್ಕೌಟ್ಸ್ ಮತ್ತು ಗೈಡ್ಸ್ ಆಯುಕ್ತ ಇಂದ್ರಾಳಿ ಜಯಕರ್ ಶೆಟ್ಟಿ ವಹಿಸಿ, ಕಾರ್ಯಕ್ರಮಕ್ಕೆ ಶುಭ ಕೋರಿದರು.

ಸಂಪನ್ಮೂಲ ವ್ಯಕ್ತಿಗಳಾಗಿ ಕರ್ನಾಟಕ ಮುಸ್ಲಿಂ ಬಾಂಧವ್ಯ ಕಾರ್ಯವೇದಿಕೆ ಸಂಸ್ಥಾಪಕರಾದ ಮುಸ್ತಾಕ್ ಹೆನ್ನಾಬೈಲು, ಸಾಹಿತಿಗಳು ಹಾಗೂ ಹಾಗೂ ಕನ್ನಡ ಸಾಹಿತ್ಯ ಪರಿಷತ್ ಕಾರ್ಕಳ ತಾಲೂಕು ಘಟಕದ ಅಧ್ಯಕ್ಷ ಪ್ರಭಾಕರ್ ಶೆಟ್ಟಿ ಕೊಂಡಳ್ಳಿ, ಕುಂದಾಪುರ ನಗರ ಯೋಜನಾ ಪ್ರಾಧಿಕಾರದ ಅಧ್ಯಕ್ಷ ವಿನೋದ್ ಕ್ರಾಸ್ತ ಅವರು ವಿದ್ಯಾರ್ಥಿಗಳಿಗೆ ಸಾಮಾಜಿಕ ಸಾಮರಸ್ಯ ಹಾಗೂ ಏಕತಾ ವಿಚಾರಗಳನ್ನು ವಿವಿಧ ದೃಷ್ಟಾಂತಗಳ ಮೂಲಕ ಉಪನ್ಯಾಸ ನೀಡಿದರು.



ವಿಜಯ ಮಕ್ಕಳ ಕೂಟ ಶಾಲಾ ಅಭಿವೃದ್ಧಿ ಸಮಿತಿಯ ಅಧ್ಯಕ್ಷ ಬಿ. ಎನ್. ಶೆಟ್ಟಿ, ಉದ್ಯಮಿ ಶಂಕರ್ ಹೆಗ್ಡೆ ಹೊಳ್ಮಗೆ, ಬೈಂದೂರು ಕ್ಷೇತ್ರ ಶಿಕ್ಷಣಾಧಿಕಾರಿ ನಾಗೇಶ್ ನಾಯ್ಕ್, ಬೈಂದೂರು, ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಜಿಲ್ಲಾ ಸಂಸ್ಥೆ ಉಡುಪಿ ಇದರ ಉಪಾಧ್ಯಕ್ಷ ಮಹಮ್ಮದ್ ಮೌಲ್, ರಾಜ್ಯ ಸಂಘಟನಾ ಆಯುಕ್ತ ಪ್ರಭಾಕರ್ ಭಟ್, ಎ.ಎಸ್.ಓ.ಸಿ ಸುಮನ್ ಶೇಖರ್, ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಜಿಲ್ಲಾ ಸಂಸ್ಥೆ ಉಡುಪಿ ಇದರ ಕಾರ್ಯದರ್ಶಿ ಆನಂದ ಅಡಿಗ ಉಪಸ್ಥಿತರಿದ್ದರು.

ವಿಜಯ ಮಕ್ಕಳ ಕೂಟ ಸಂಸ್ಥೆಯ ಸಂಚಾಲಕ ಸುಭಾಶ್ಚಂದ್ರ ಶೆಟ್ಟಿ ಸ್ವಾಗತಿಸಿದರು. ಶಾಲಾ ಮುಖ್ಯೋಪಾಧ್ಯಾಯನಿ ದೀಪಿಕಾ ಸುಭಾಸ್ ಶೆಟ್ಟಿ ಕಾರ್ಯಕ್ರಮ ನಿರ್ವಹಿಸಿದರು.

> ವಿದ್ಯಾರ್ಥಿಗಳಿಗೆ ಶಾಲಾ ಜೀವನದಲ್ಲಿಯೇ ಮೌಲ್ಯಯುತ ಶಿಕ್ಷಣ ನೀಡಿದಾಗ ಅವರು ಮುಂದಿನ ಭವಿಷ್ಯ ಉತ್ತಮವಾಗಿ ರೂಪುಗೊಳ್ಳುತ್ತದೆ. ಈ ನಿಟ್ಟಿನಲ್ಲಿ ಶಾಲಾ ಸಂಘಟನೆಗಳು, ಚಟುವಟಿಕೆಗಳು ಕಲಿಕೆಗೆ ಪೂರಕ. ಇದರಿಂದ ಶೈಕ್ಷಣಿಕ ಚಟುವಟಿಕೆಗೆ ಅಡ್ಡಿಯಾಗದು.
>
> ● ಡಾ. ಪಿ.ಜಿ.ಆರ್. ಸಿಂಧ್ಯಾ, ಮಾಜಿ ಸಚಿವ, ಸ್ಕೌಟ್ಸ್ ಮತ್ತು ಗೈಡ್ಸ್ ರಾಜ್ಯ ಮುಖ್ಯ ಆಯುಕ್ತ

ಈ ಕಾರ್ಯ ಚಟುವಟಿಕೆಯ ಪ್ರಯುಕ್ತ ಸಂಪನ್ಮೂಲ ವ್ಯಕ್ತಿಗಳಿಂದ ಉಪನ್ಯಾಸಕ ಮಾಲಿಕೆ ನಡೆಯಿತು. ಬಳಿಕ ಸ್ಥಳೀಯ ಧಾರ್ಮಿಕ ಹಾಗೂ ಶ್ರದ್ಧಾ ಕೇಂದ್ರಗಳಾದ ಗುಲ್ವಾಡಿ ಮಸೀದಿ, ಮಾರಣಕಟ್ಟೆ ಶ್ರೀ ಬ್ರಹ್ಮಲಿಂಗೇಶ್ವರ ದೇವಸ್ಥಾನ ಹಾಗೂ ಜಡ್ಕಲ್ ಜಾರ್ಜ್ ಚರ್ಚ್‌ಗೆ ಮತ್ತು ಕೊಲ್ಲೂರು ಮೂಕಾಂಬಿಕ ದೇವಸ್ಥಾನಕ್ಕೆ ವಿದ್ಯಾರ್ಥಿಗಳು ಭೇಟಿ ನೀಡಿ, ದೇವಳದ ಬಗ್ಗೆ ಮಾಹಿತಿ ಪಡೆದುಕೊಂಡರು.

ವಿಶೇಷ ಜಾಥಾ ಆಯೋಜನೆ

ವಂಡ್ಸೆ ಪೇಟೆಯಲ್ಲಿ ಭಿತ್ತಿ ಚಿತ್ರ ಹಾಗೂ ಘೋಷಣೆಗಳ ಮೂಲಕ ಸಾರ್ವಜನಿಕರಿಗೆ ಅರಿವು ಮೂಡಿಸುವ ಉದ್ದೇಶದಿಂದ ಸಾಮಾಜಿಕ ಸಾಮರಸ್ಯ ಮತ್ತು ಸ್ವಸ್ಥ ಸಮಾಜಕ್ಕಾಗಿ ಮಾದಕ ವಸ್ತುಗಳಿಂದ ಮುಕ್ತ ಸಮಾಜಕ್ಕಾಗಿ ಜಾಥಾವನ್ನು ಆಯೋಜಿಸಲಾಯಿತು. ವಿವಿಧ ಜಿಲ್ಲೆಗಳ ವಿದ್ಯಾರ್ಥಿಗಳಿಂದ ಏಕತಾ ಸಾಮಾಜಿಕ ಸಾಮರಸ್ಯಕ್ಕೆ ಕುರಿತಂತೆ ಸಮಾಲೋಚನ ಚರ್ಚೆ ವಿಚಾರಗೋಷ್ಠಿಗಳು ನಡೆಯಿತು.

ಸಂಘದ ಸದಸ್ಯರಿಗೆ ಸೇವಾ ಶುಲ್ಕವಿಲ್ಲದೇ ಸಾಲ ಸೌಲಭ್ಯ: ಚಿತ್ತರಂಜನ್ ಬೋಳಾರ್



ಪಡುಬಿದ್ರಿ: ಆತ್ಮಶಕ್ತಿ ವಿವಿಧೋದ್ದೇಶ ಸಹಕಾರಿ ಸಂಘ ಪಡುಬಿದ್ರಿ ಶಾಖೆಯ 4ನೇ ವಾರ್ಷಿಕೋತ್ಸವ ಹಾಗೂ ಗ್ರಾಹಕರ ಸಭೆಯು ಸಂಘದ ಅಧ್ಯಕ್ಷ ಸಹಕಾರ ರತ್ನ ಚಿತ್ತರಂಜನ್ ಬೋಳಾರ್ ಅಧ್ಯಕ್ಷತೆಯಲ್ಲಿ ಪಡುಬಿದ್ರಿ ಶಾಖೆಯಲ್ಲಿ ಜರುಗಿತು.

ಸಂಘದ ಸದಸ್ಯ ಶೀನ ಪೂಜಾರಿ ಕಾರ್ಯಕ್ರಮ ಉದ್ಘಾಟಿಸಿದರು. ಅಧ್ಯಕ್ಷತೆ ವಹಿಸಿದ್ದ ಸಂಘದ ಅಧ್ಯಕ್ಷ ಚಿತ್ತರಂಜನ್ ಬೋಳಾರ್ ಮಾತನಾಡಿ, ಗ್ರಾಹಕರ ಪ್ರೋತ್ಸಾಹದಿಂದ ಸಂಘವು ಉತ್ತಮ ಪ್ರಗತಿಯನ್ನು ಹೊಂದಲು ಸಾಧ್ಯವಾಗಿದೆ. ಸಂಘವು ಕೇವಲ ಬ್ಯಾಂಕಿಂಗ್ ಮಾತ್ರವಲ್ಲದೆ, ವಿವಿಧ ಸಾಮಾಜಿಕ ಕಾರ್ಯಗಳಲ್ಲಿ ತೊಡಗಿಸಿಕೊಂಡಿದೆ. ಮುಂಬರುವ ಸಂಘದ ಮಹಾಸಭೆಯಲ್ಲಿ ವ್ಯಾಸಂಗ ಮಾಡುತ್ತಿರುವ ಸದಸ್ಯರ ಮಕ್ಕಳಿಗೆ ವಿದ್ಯಾರ್ಥಿ ವೇತನ ಹಾಗೂ ಪ್ರತಿಭಾ ಪುರಸ್ಕಾರವನ್ನು ನೀಡಿ ಗೌರವಿಸಲಾಗುವುದು. ಇದರ ಸದುಪಯೋಗವನ್ನು ಪಡೆಯುವಂತೆ ವಿನಂತಿಸಿದರು. ಪಡುಬಿದ್ರಿ ಶಾಖೆಯ ಚತುರ್ಥ ವಾರ್ಷಿಕೋತ್ಸವ ಪ್ರಯುಕ್ತ 500 ದಿನಗಳ ಠೇವಣಿಗಳಿಗೆ ವಿಶೇಷ ಬಡ್ಡಿದರ ಶೇ. 10 ಹಾಗೂ 1000 ದಿನಗಳ ಠೇವಣಿಗಳಿಗೆ ವಿಶೇಷ ಬಡ್ಡಿ ದರ ಶೇ. 10.50ವನ್ನು ನೀಡಲಾಗುತ್ತಿದ್ದು, ಚಿನ್ನಾಭರಣ ಸಾಲಗಳಿಗೆ ಪ್ರತಿ ಗ್ರಾಂ ಗೆ ಗರಿಷ್ಠ ಮೌಲ್ಯ ರೂ. 12,000 ರೂ.ರವರೆಗೆ ಯಾವುದೇ ಸೇವಾ ಶುಲ್ಕವಿಲ್ಲದೆ ಸಾಲವನ್ನು ಸದಸ್ಯರಿಗೆ ನೀಡಲಾಗುವುದು ಎಂದರು. ಸಂಘದ ಸದಸ್ಯ ಸುನಿಲ್ ಕುಮಾರ್, ಗ್ರಾಹಕ ಶಶಿಕಾಂತ್ ಪಡುಬಿದ್ರಿ, ಸಂಘದ ಉಪಾಧ್ಯಕ್ಷ ನೇಮಿರಾಜ್ ಪಿ., ನಿರ್ದೇಶಕ ಬಿ.ಪಿ ದಿವಾಕರ್, ಉಮಾವತಿ, ಸಿಇಒ ಸೌಮ್ಯ ವಿಜಯ್ ಇದ್ದರು. ಹಿರಿಯ ಶಾಖಾಧಿಕಾರಿ ಸ್ವಾತಿ ನಿರೂಪಿಸಿದರು. ಸಂಘದ ಸಿಬ್ಬಂದಿ ಲೋಶಿತಾ ವಂದಿಸಿದರು.

ನಿಟ್ಟೆ: ಪ್ರಥಮ ವರ್ಷದ ಬಿಟೆಕ್ ವಿದ್ಯಾರ್ಥಿಗಳ ಪ್ರವೇಶಾತಿ ಕಾರ್ಯಕ್ರಮ



ನಿಟ್ಟೆ: ನಿಟ್ಟೆ ಮಹಾಲಿಂಗ ಅಡ್ಯಂತಾಯ ಸ್ಮಾರಕ ತಾಂತ್ರಿಕ ಮಹಾವಿದ್ಯಾಲಯದ ಬಿ.ಟೆಕ್ ಕೋರ್ಸ್‌ಗಳಿಗೆ 2026ನೇ ಸಾಲಿನಲ್ಲಿ ಪ್ರವೇಶಾತಿ ಪಡೆದ ನೂತನ ಬ್ಯಾಚ್‌ನ ಉದ್ಘಾಟನಾ ಕಾರ್ಯಕ್ರಮವು ಜೂ.29ರಂದು ನಿಟ್ಟೆ ಮಹಾವಿದ್ಯಾಲಯದ ನೂತನ ಸಭಾಂಗಣದಲ್ಲಿ ಜರುಗಿತು.

ನಿಟ್ಟೆ ಪರಿಗಣಿತ ವಿಶ್ವವಿದ್ಯಾಲಯದ ಪ್ರೋ–ಚಾನ್ಸಲರ್ ಡಾ. ಶಾಂತರಾಮ್ ಶೆಟ್ಟಿ ವಿದ್ಯಾರ್ಥಿಗಳನ್ನು ಹಾಗೂ ಪೋಷಕರನ್ನು ಉದ್ದೇಶಿಸಿ, ಇಂದಿನ ದಿನಗಳಲ್ಲಿ ಅಗತ್ಯತೆಗೆ ತಕ್ಕಂತೆ ವಿದ್ಯಾರ್ಥಿಗಳು ಕೌಶಲ್ಯತೆ ಬೆಳೆಸಿ ಕೊಂಡು ಉದ್ಯೋಗಾ ವಕಾಶ ಹೆಚ್ಚಿಸಿಕೊಳ್ಳಬೇಕು. ವಿದ್ಯಾರ್ಥಿ ಜೀವನದಲ್ಲಿ ವ್ಯಸನಗಳಿಗೆ ದಾಸರಾಗದಂತೆ ಎಚ್ಚರ ವಹಿಸುವುದು ಬಹಳ ಮುಖ್ಯ ಎಂದು ಅವರು ಹೇಳಿದರು.

ನಿಟ್ಟೆ ಪರಿಗಣಿತ ವಿಶ್ವವಿದ್ಯಾಲಯದ ವೈಸ್–ಚಾನ್ಸಲರ್ ಡಾ.ಎಂ.ಎಸ್.ಮೂಡಿತ್ತಾಯ ಸಭೆಯನ್ನುದ್ದೇಶಿಸಿ ಮಾತನಾಡಿದರು. ನಿಟ್ಟೆ ಪರಿಗಣಿತ ವಿಶ್ವವಿದ್ಯಾಲಯದ ತಾಂತ್ರಿಕ ಶಿಕ್ಷಣ ವಿಭಾಗದ ಉಪಾಧ್ಯಕ್ಷ ಪ್ರೋ.ಡಾ. ಗೋಪಾಲ್ ಮುಗೇರಾಯ, ನಿಟ್ಟೆ ಪರಿಗಣಿತ ವಿಶ್ವವಿದ್ಯಾಲಯದ ಕುಲಸಚಿವ ಡಾ. ಹರ್ಷ ಹಾಲಹಳ್ಳಿ ಹಾಗೂ ಪರೀಕ್ಷಾ ನಿಯಂತ್ರಕ ಡಾ. ಪ್ರಸಾದ್ ಬಿ. ಶೆಟ್ಟಿ ಇದ್ದರು. ಮಹಾವಿದ್ಯಾಲಯದ ಪ್ರಾಂಶುಪಾಲ ಡಾ.ನಿರಂಜನ್ ಎನ್ ಚಿಪ್ಳೂಣ್ಕರ್ ಸ್ವಾಗತಿಸಿ, ಸಂಯೋಜಕ ಡಾ. ಜಾಯ್ ಮಾರ್ಟಿಸ್ ವಂದಿಸಿದರು. ಎಂಸಿಎ ವಿಭಾಗದ ಸಹಪ್ರಾಧ್ಯಾಪಕಿ ಪ್ರೇಮಿತಾ ಕಾಮತ್ ನಿರೂಪಿಸಿದರು. ಇದೇ ಸಂದರ್ಭ ಮಹಾವಿದ್ಯಾಲಯದ ವಾರ್ಷಿಕ ಮ್ಯಾಗಜಿನ್ 'ನಿದರ್ಶನ್ 2026' ಬಿಡುಗಡೆಗೊಳಿಸಲಾಯಿತು. ಬಳಿಕ ನಿಟ್ಟೆ ತಾಂತ್ರಿಕ ಕಾಲೇಜಿನ ಪ್ರಾಂಶುಪಾಲ ಡಾ. ನಿರಂಜನ್ ಎನ್. ಚಿಪ್ಳೂಣ್ಕರ್ ಕಾಲೇಜಿನ ನೀತಿಗಳ ಬಗೆಗೆ ವಿವರಿಸಿದರು.

ನಾಡಿಗೆ ಉತ್ತಮ ಮಳೆಗಾಗಿ ಬನ್ನಂಜೆ ದೇವಳದಲ್ಲಿ ಬಿಜೆಪಿಯಿಂದ ಪ್ರಾರ್ಥನೆ



ಉಡುಪಿ: ನಗರ ಬಿಜೆಪಿ ವತಿಯಿಂದ ಶಾಸಕ ಯಶ್‌ಪಾಲ್ ಸುವರ್ಣ ನೇತೃತ್ವದಲ್ಲಿ ನಾಡಿನಾದ್ಯಂತ ಉತ್ತಮ ಮಳೆ, ಸಮೃದ್ಧ ಬೆಳೆ ಹಾಗೂ ಲೋಕ ಕಲ್ಯಾಣದ ಸಂಕಲ್ಪದೊಂದಿಗೆ ಬನ್ನಂಜೆ ಶ್ರೀ ಮಹಾಲಿಂಗೇಶ್ವರ ದೇವರ ಸನ್ನಿಧಾನದಲ್ಲಿ ದೇವರಿಗೆ ಸೀಯಾಳ ಅಭಿಷೇಕ ಸೋಮವಾರ ನೆರವೇರಿತು.

ಈ ಸಂದರ್ಭ ಮಾತನಾಡಿದ ಶಾಸಕ ಯಶ್‌ಪಾಲ್ ಸುವರ್ಣ ಕರಾವಳಿ ಜಿಲ್ಲೆ ಸಹಿತ ರಾಜ್ಯದಾದ್ಯಂತ ವಾಡಿಕೆಗಿಂತ ಮಳೆ ಪ್ರಮಾಣ ಕಡಿಮೆಯಾದ ಹಿನ್ನಲೆಯಲ್ಲಿ ಬನ್ನಂಜೆ ಮಹಾಲಿಂಗೇಶ್ವರ ದೇವರಿಗೆ ಸೀಯಾಳ ಅಭಿಷೇಕ ನಡೆಸುವ ಸಂಕಲ್ಪ ಮಾಡಲಾಗಿದೆ ಎಂದರು.

ಉಡುಪಿ ನಗರ ಬಿಜೆಪಿ ಅಧ್ಯಕ್ಷ ದಿನೇಶ್ ಅಮೀನ್, ನಗರಸಭೆ ಮಾಜಿ ಅಧ್ಯಕ್ಷ ಪ್ರಭಾಕರ ಪೂಜಾರಿ, ಮಾಜಿ ಸದಸ್ಯ ಅಶೋಕ್ ನಾಯ್ಕ್, ಸವಿತಾ ಹರೀಶ್ ರಾಮ್, ರಶ್ಮಿ ಸಿ. ಭಟ್, ಅನಿಟ ಡಿಸೋಜ, ಟಿ. ಜಿ. ಹೆಗ್ಡೆ, ಮಂಡಲದ ಪ್ರಧಾನ ಕಾರ್ಯದರ್ಶಿ ಜಗದೀಶ್ ಆಚಾರ್ಯ ಕಪ್ಪೆಟ್ಟು, ರಶ್ಮಿತಾ ಬಾಲಕೃಷ್ಣ ಶೆಟ್ಟಿ, ಡೆನಿಸ್ ಮಸ್ಕರೇನ್ಹಸ್, ಕಿಶೋರ್ ಕುಮಾರ್, ಆನಂದ ಮಠದಬೆಟ್ಟು, ಶಂಕರ ಕುಲಾಲ್, ನೀತಾ ಪ್ರಭು, ಶ್ರೀವತ್ಸ, ಅರುಣ್ ಮಲ್ಯೆ, ಹಿಂದೂ ಯುವ ಸೇನೆಯ ಜಿಲ್ಲಾಧ್ಯಕ್ಷ ಅಜಿತ್ ಕೊಡವೂರು, ಗುರುರಾಜ್ ಭಂಡಾರಿ, ಗೋಪಾಲ ಪೂಜಾರಿ, ಸಂತೋಷ್ ಆಚಾರ್ಯ, ನಿತ್ಯಾನಂದ ಕಾಮತ್, ಸುರೇಶ್ ಆಚಾರ್ಯ, ವಿರಾಜ್, ಭೂಷಣ್, ನಿಖಿಲ್ ಮಡಿವಾಳ, ಸುಜಲ ಸುವರ್ಣ, ದೀಪಾ ಪೈ, ಸುಲತ, ಸುಗುಣ ನಾಯ್ಕ್, ಸುಜಾತ ಶೆಟ್ಟಿ, ಪ್ರಜ್ಞ ಶೆಟ್ಟಿ, ಪೂರ್ಣಿಮ ಶೆಟ್ಟಿ ಮೊದಲಾದವರು ಉಪಸ್ಥಿತರಿದ್ದರು.

ಅಧರ್ಮದಿಂದ ಗಳಿಸುವ ಸಕಲ ಸಂಪತ್ತು ಅಶಾಶ್ವತ: ಡಾ. ವಿನಾಯಕ



ಕಾರ್ಕಳ: ಮಹಾಭಾರತದ ಒಟ್ಟು ಸಾರವೇ ಧರ್ಮ. ಮಹಾಭಾರತದಲ್ಲಿ ಎಲ್ಲಾ ಪಾತ್ರಗಳೂ ನಾಯಕರಂತೆ ವಿಜೃಂಭಿಸಿ ಧರ್ಮರಾಯ ಮಾತ್ರ ಮೂಲೆ ಗುಂಪಾಗುವಂತಾದರೂ ವ್ಯಾಸರು ಮಾತ್ರ ಆತನನ್ನು ರಾಜನನ್ನಾಗಿ ಇಟ್ಟುಕೊಂಡು ಧರ್ಮರಾಜನಾಗಿ ನೋಡಿಕೊಂಡರು. ಮಹಾಭಾರತದ ಒಟ್ಟು ಸಾರವಾಗಿ ನಾವು ನೋಡುವುದು ಧರ್ಮವನ್ನೇ ಆಗಿದೆ ಎಂಬುದಾಗಿ ವಿದ್ವಾಂಸ ಡಾ. ವಿನಾಯಕ ಭಟ್ ಗಾಳಿಮನೆ ಹೇಳಿದರು.

ಕನ್ನಡ ಸಂಘ ಕಾಂತಾವರ, ಅಲ್ಲಮಪ್ರಭು ಪೀಠಕಾಂತಾವರಮತ್ತುಅಖಿಲಭಾರತೀಯ ಸಾಹಿತ್ಯ ಪರಿಷದ್ ಕಾರ್ಕಳ ತಾಲೂಕು ಘಟಕದ ಸಹಭಾಗಿತ್ವದಲ್ಲಿ 2026ರ ವರ್ಷ ಪೂರ್ತಿ ಪ್ರತೀ ತಿಂಗಳು ನಡೆಯುತ್ತಿರುವ 'ಮಹಾಭಾರತ ಭಾವದೀಪ' ಎಂಬ ಉಪನ್ಯಾಸಮಾಲೆಯ ಷಷ್ಠ ಸೋಪಾನದಲ್ಲಿ ಅವರು 'ಧರ್ಮನಂದನ' ಎಂಬ ಕುರಿತಾಗಿ ಶನಿವಾರದಂದು ಕಾರ್ಕಳದ ಪ್ರಕಾಶ್ ಹೊಟೇಲ್‌ನ 'ಸಂಭ್ರಮ' ಸಭಾಂಗಣದಲ್ಲಿ ನಡೆದ ಉಪನ್ಯಾಸ ಕಾರ್ಯಕ್ರಮದಲ್ಲಿ ಮಾತನಾಡಿದರು.

ಅಧರ್ಮದಿಂದ ಗಳಿಸುವ ಸಕಲ ಸಂಪತ್ತು, ಕೀರ್ತಿ ಪ್ರತಿಷ್ಠೆಗಳು ಅಶಾಶ್ವತ. ಧರ್ಮ ಮಾರ್ಗದಿಂದ ಗಳಿಸುವಂಥದ್ದು ಅಶಾಶ್ವತ. ಧರ್ಮರಾಯ ಕ್ಲಿಷ್ಟ ಸಂದರ್ಭದಲ್ಲಿಯೂ ಧರ್ಮ ಪ್ರಜ್ಞೆ ಬಿಡದೆ ಅದನ್ನೇ ಬದುಕಾಗಿಸಿಕೊಂಡು ಪಾಂಡವರ ಏಕಸೂತ್ರತೆಯನ್ನು ಕಾಪಾಡಿದ ಎಂದರು.

ಡಾ.ನಾ. ಮೊಗಸಾಲೆ, ನಿತ್ಯಾನಂದ ಪೈ, ಮಿತ್ರಪ್ರಭಾ ಹೆಗ್ಡೆ, ಏರ್‌ವೈಸ್ ಮಾರ್ಷಲ್ ರಮೇಶ್ ಕಾರ್ಣಿಕ್, ಅಲ್ಲಮಪ್ರಭು ಪೀಠದ ಪ್ರಧಾನ ನಿರ್ದೇಶಕ ತೆ.ವಿಜಯ ಕುಮಾರ್ ಇದ್ದರು. ಶಾರ್ವರಿ ಪ್ರಾರ್ಥಿಸಿ ಡಾ. ಮಾಲತಿ ಜಿ. ಪೈ. ನಿರೂಪಿಸಿ, ಸದಾನಂದ ನಾರಾವಿ ಸ್ವಾಗತಿಸಿದರು. ಸುಲೋಚನಾ ಬಿ.ವಿ. ವಂದಿಸಿದರು.

ಕಾಂಗ್ರೆಸ್ ವಿರುದ್ಧ ಶಾಸಕರ ಆರೋಪ ಅರ್ಥಹೀನ: ಉದಯಕುಮಾರ್ ಸ್ಪಷ್ಟನೆ

ಕಾರ್ಕಳ: ಹಿಂದುತ್ವ ಮತ್ತು ಅಭಿವೃದ್ಧಿಯ ಹೆಸರಿನಲ್ಲಿ ಗೆಲುವು ಸಾಧಿಸಿದ ಶಾಸಕ ವಿ. ಸುನೀಲ್ ಕುಮಾರ್ ಅವರು ಇದೀಗ ಕಾಂಗ್ರೆಸ್ ವಿರುದ್ಧ ಇಲ್ಲಸಲ್ಲದ ಆರೋಪ ಮಾಡುತ್ತಿದ್ದಾರೆ. ಹೆಬ್ರಿಯ ಸುಚಿತ್ ಶೆಟ್ಟಿ ಪ್ರಕರಣವನ್ನು ರಾಜಕೀಯ ಅಸ್ತ್ರವನ್ನಾಗಿ ಮಾಡಿಕೊಂಡು ಪ್ರಾಮಾಣಿಕ ರಾಜಕಾರಣಿ ಗೋಪಾಲ್ ಭಂಡಾರಿ ಅವರ ವಿರುದ್ಧ ಅಪಪ್ರಚಾರ ನಡೆಸಿರುವುದು ಅವರಿಗೆ ಶೋಭೆ ತರುವುದಿಲ್ಲ. ಪರಶುರಾಮ ಥೀಮ್ ಪಾರ್ಕ್, ಎಣ್ಣೆಹೊಳೆ ಯೋಜನೆ ಸೇರಿದಂತೆ ಹಲವು ಯೋಜನೆಗಳಲ್ಲಿ ಜಾರಿಯಲ್ಲಿ ಆದ ಲೋಪವನ್ನು ಮರೆಮಾಚಲು ಈಗ ಕಾಂಗ್ರೆಸ್ ವಿರುದ್ಧ ಆರೋಪ ಮಾಡಲಾಗುತ್ತಿದೆ ಎಂದು ಕಾಂಗ್ರೆಸ್ ಮುಖಂಡ ಉದಯಕುಮಾರ್ ಶೆಟ್ಟಿ ಆರೋಪಿಸಿದರು.

ಸೋಮವಾರ ನಡೆದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಮುಂದಿನ ಚುನಾವಣೆಯಲ್ಲಿ ಸೋಲುವ ಭಯ ಅವರನ್ನು ಕಾಡುತ್ತಿದೆ. ಶಾಸಕರು ತಮ್ಮನ್ನು ತಾವು ಅಭಿವೃದ್ಧಿಯ ಹರಿಕಾರ ಎಂದು ಹೇಳಿಕೊಳ್ಳುತ್ತಿದ್ದರೂ, ಒಳ್ಳೆಯ ಕೆಲಸಗಳೆಲ್ಲ ತಮ್ಮದು, ವೈಫಲ್ಯಗಳೆಲ್ಲ ಕಾಂಗ್ರೆಸ್ ಸರ್ಕಾರದ್ದು ಎನ್ನುವುದು ಅವರ ರಾಜಕೀಯ ಧೋರಣೆಯಾಗಿದೆ ಎಂದು ಟೀಕಿಸಿದರು. ಸಂಸದರ ಅನುದಾನದಲ್ಲಿ ನಡೆದ ಕಾಮಗಾರಿಗಳಿಗೂ ತಮ್ಮದೇ ಚಿತ್ರ ಹಾಕಿಸಿಕೊಂಡು ಶ್ರೇಯಸ್ಸು ಪಡೆಯುವ ಪ್ರಯತ್ನ ಮಾಡಿದ್ದಾರೆ ಎಂದು ಆರೋಪಿಸಿದರು.

ಪರಶುರಾಮ ಥೀಮ್ ಪಾರ್ಕ್ ಕುರಿತು ಮಾತನಾಡಿದ ಅವರು, ಆರಂಭದಲ್ಲಿ ಈ ಯೋಜನೆಯನ್ನು ಗೌರವಿಸಿ ಸ್ವಾಗತಿಸಿದ್ದೆವು. ಆದರೆ ನಂತರ ನಡೆದ ಬೆಳವಣಿಗೆಗಳು ಜನರ ಧಾರ್ಮಿಕ ಭಾವನೆಗಳಿಗೆ ಧಕ್ಕೆ ತರುವಂತಿದ್ದವು. ನಕಲಿ ಪ್ರತಿಮೆ ಸ್ಥಾಪಿಸಿ ಜನರನ್ನು ದಾರಿ ತಪ್ಪಿಸಲಾಗಿದೆ ಎಂಬ ಅನುಮಾನ ಮೂಡಿದ ಕಾರಣ ಅದನ್ನು ಬೆಂಬಲಿಸಲು ಸಾಧ್ಯವಾಗಲಿಲ್ಲ ಎಂದು ಹೇಳಿದರು. ಮಾರಿಗುಡಿ ದೇವಸ್ಥಾನದ ವಿಚಾರದಲ್ಲಿ ಕಾಂಗ್ರೆಸ್ ರಾಜಕೀಯ ಮಾಡುವುದಿಲ್ಲ ಎಂದು ಹೇಳಿದರು.

ಸುನೀಲ್ ಕುಮಾರ್ ಅವರ ಅವಧಿಯಲ್ಲಿ ಜವಳಿ ಪಾರ್ಕ್, ಎಣ್ಣೆಹೊಳೆ ಏತ ನೀರಾವರಿ ಯೋಜನೆ, ಒಳಚರಂಡಿ ಕಾಮಗಾರಿ, ಬಹುಗ್ರಾಮ ಕುಡಿಯುವ ನೀರಿನ ಯೋಜನೆ, ಪರಶುರಾಮ ಥೀಮ್ ಪಾರ್ಕ್, ಈಜುಕೊಳ, ನರ್ಸಿಂಗ್ ಕಾಲೇಜಿನ ಮೂಲಸೌಕರ್ಯ, ಪ್ರಾಧಿಕಾರ ಸಮಸ್ಯೆ ಸೇರಿದಂತೆ ಹಲವು ಯೋಜನೆಗಳು ವಿಫಲಗೊಂಡಿವೆಎಂದುಉದಯಕುಮಾರ್ ಶೆಟ್ಟಿ ದೂರಿದರು. ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಶುಭದ ರಾವ್, ಪಕ್ಷದ ಪ್ರದೀಪ್ ಬೇಲಾಡಿ, ಸಂತೋಷ್ ದೇವಾಡಿಗ, ಸುರೇಶ್ ಚೇತನಹಳ್ಳಿ ಉಪಸ್ಥಿತರಿದ್ದರು.



ಚುನಾವಣಾ ಆಯೋಗದ ವಿಶೇಷ ಸಮಗ್ರ ಪರಿಷ್ಕರಣೆ ಪ್ರಕ್ರಿಯೆ ಕುರಿತಾಗಿ ಕಾಪು ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಘಟ ನಾಯಕ ರೊಂದಿಗೆ ಕಾಪು ಮಂಡಲ ಬಿಜೆಪಿ ಕಚೇರಿಯಲ್ಲಿ ಶಾಸಕರಾದ ಗುರ್ಮೆ ಸುರೇಶ್ ಶೆಟ್ಟಿ ಅವರು ಸೋಮವಾರ ಸಂಜೆ ಸಭೆ ನಡೆಸಿ ಚರ್ಚಿಸಿದರು. ಈ ಸಂದರ್ಭ ಕಾಪು ಮಂಡಲ ಬಿಜೆಪಿ ಅಧ್ಯಕ್ಷ ಜಿತೇಂದ್ರ ಶೆಟ್ಟಿ, ಜಿಲ್ಲಾ ಬಿಜೆಪಿ ಪ್ರಧಾನ ಕಾರ್ಯದರ್ಶಿ ಶ್ರೀಕಾಂತ್ ನಾಯಕ್, ಬಿ.ಎಲ್.ಎ – 1 ಸಂದೀಪ್, ಕಾಪು ಮಂಡಲ ಬಿಜೆಪಿ ಪ್ರಧಾನ ಕಾರ್ಯದರ್ಶಿಗಳಾದ ಗೋಪಾಲಕೃಷ್ಣ ರಾವ್, ಶರಣ್ ಕುಮಾರ್ ಮಟ್ಟು ಸಹಿತ ಮೊದಲಾದವರು ಉಪಸ್ಥಿತರಿದ್ದರು.



ಬಂಟಕಲ್ಲು ತಾಂತ್ರಿಕ ಮಹಾ ವಿದ್ಯಾಲಯದ ವಿದ್ಯುನ್ಮಾನ ಮತ್ತು ಸಂವಹನ ವಿಭಾಗದ ವಿದ್ಯಾರ್ಥಿಗಳಾದ ಅರ್ಜುನ್ ಶೆಣೈ, ಮಧು ಸೂದನ್ ಎಸ್., ಪ್ರೀತಂ ವಿ. ಅಮಿನ್ ಮತ್ತು ರಾಹುಲ್ ರಘುನಾಥ ಶೆಟ್ಟಿಗಾರ್ ಅವರು ವಿಭಾಗದ ಪ್ರಾಧ್ಯಾಪಕರಾದ ಡಾ. ಪುನೀತ್ ಬೇಕಲ್ ಅವರ ಮಾರ್ಗದರ್ಶನದಲ್ಲಿ ಶ್ರವಣ ಮತ್ತು ವಾಕ್ ದೋಷ ಹೊಂದಿರುವ ಮಕ್ಕಳಿಗಾಗಿ 'ಮಿತ್ರ' ಎಂಬ ಜೆಸ್ಚರ್ ಗ್ಲೌಸ್ ಅನ್ನು ಅಭಿವೃದ್ಧಿಪಡಿಸಿದ್ದಾರೆ. ಇದು ಭಾರತೀಯ ಸೈನ್ ಲ್ಯಾಂಗ್ವೇಜ್ ಜೆಸ್ಚರನ್ನು ಗುರುತಿಸಿ ಪಠ್ಯ ಹಾಗೂ ಧ್ವನಿಯಾಗಿ ಪರಿವರ್ತಿಸುತ್ತದೆ. ಯೋಜನೆಗೆ ರಾಜ್ಯ ವಿಜ್ಞಾನ ಮತ್ತು ತಂತ್ರಜ್ಞಾನ ಮಂಡಳಿಯ ಅನುಮೋದನೆ ಸಿಕ್ಕಿದೆ.

ಕ್ಷೇತ್ರದ ವಿವಿಧೆಡೆ ಸಮೃದ್ಧ ಬೈಂದೂರು ಪರಿಕಲ್ಪನೆಯಡಿ ಅರುಣಾಚಲಂ ಟ್ರಸ್ಟ್ ಮೂಲಕ ಯೋಜನೆ ಜಾರಿ

ವಿನೂತನ ಆವಿಷ್ಕಾರದೊಂದಿಗೆ ಕಾಲುಸಂಕಗಳ ನಿರ್ಮಾಣ: ಶಾಸಕ ಗಂಟಿಹೊಳೆ

ಬೈಂದೂರು: ಕ್ಷೇತ್ರದ ವಿವಿಧ ಭಾಗದಲ್ಲಿ ಕಾಲುಸಂಕಗಳ ತುರ್ತು ಅಗತ್ಯವಿದೆ. ಸರ್ಕಾರದಿಂದ ಕಾಲುಸಂಕ ನಿರ್ಮಾಣ ಒಂದು ಭಾಗವಾದರೆ ಸಮೃದ್ಧ ಬೈಂದೂರು ಹಾಗೂ ಅರುಣಾಚಲಂ ಟ್ರಸ್ಟ್‌ನ ಒಡಂಬಡಿಕೆಯೊಂದಿಗೆ ಕೆಲವು ಕಡೆಗಳಲ್ಲಿ ಕಾಲುಸಂಕಗಳನ್ನು ವಿನೂತನ ಆವಿಷ್ಕಾರದೊಂದಿಗೆ ನಿರ್ಮಾಣ ಮಾಡಲಾಗುತ್ತದೆ ಎಂದು ಶಾಸಕ ಗುರುರಾಜ್ ಗಂಟಿಹೊಳೆ ಹೇಳಿದರು.

ಆಜ್ರಿ ಗ್ರಾ.ಪಂ. ವ್ಯಾಪ್ತಿಯ ಕ್ಯಾಕೋ ಡುವಿನಲ್ಲಿ ಸಮೃದ್ಧ ಬೈಂದೂರು ಪರಿಕಲ್ಪನೆಯ ಅರುಣಾಚಲಂ ಕಾಲುಸಂಕ ಯೋಜನೆಯಲ್ಲಿ ಬೆಂಗಳೂರಿನ ಸಮ್ಮತ ಫೌಂಡೇಶನ್ ಸಹಕಾರ ದೊಂದಿಗೆ ಇಂಡಸ್ 555 ಟಿಎಂಟಿ ಇವರ ಸಿಎಸ್‌ಆರ್ ನಿಧಿಯಿಂದ ನಿರ್ಮಾಣವಾದ ಕಾಲುಸಂಕವನ್ನು ಉದ್ಘಾಟಿಸಿ ಮಾತನಾಡಿದರು. ಆಜ್ರಿ ಗ್ರಾಮದ ಕ್ಯಾಕೋಡುವಿನಲ್ಲಿ ಸುಮಾರು ಮೂರು ದಶಕಗಳಿಂದ ಸುಸಜ್ಜಿತ ಕಾಲುಸಂಕದ ಬೇಡಿಕೆ ಈಗ ಪೂರ್ಣಗೊಂಡಿದೆ. ಅದೇ ರೀತಿ ಕ್ಷೇತ್ರದ ಜನತೆ ಕಾಲುಸಂಕ ಇಲ್ಲದೇ ಸಮಸ್ಯೆ ಆಗಬಾರದು ಎಂಬ ಸದುದ್ದೇಶದಿಂದ ಅರುಣಾಚಲಂ ಟ್ರಸ್ಟ್‌ನೊಂದಿಗೆ ಒಪ್ಪಂದ ಮಾಡಿಕೊಂಡು ತುರ್ತು ಅಗತ್ಯವಿರುವ ಕೆಲವೆಡೆ ನವೀನ ಆವಿಷ್ಕಾರದೊಂದಿಗೆ ಕಾಲುಸಂಕ ನಿರ್ಮಾಣ ಮಾಡಲಾಗುತ್ತಿದೆ ಎಂದರು.



> **ಅನುದಾನದ ಕೊರತೆ ಸಮಸ್ಯೆ ಇದೆ**
>
> ಬೈಂದೂರು ಕ್ಷೇತ್ರದ ಹಲವಾರು ಕಡೆಗಳಲ್ಲಿ ಮೂಲಸೌಲಭ್ಯದ ಕೊರತೆ ಇದೆ. ಹಳ್ಳಿ ಮತ್ತು ಪಟ್ಟಣಕ್ಕೆ ಸೂಕ್ತ ಸಂಪರ್ಕ ಕಲ್ಪಿಸಲು ಸೇತುವೆಗಳ ನಿರ್ಮಾಣ ಅವಶಕವಾಗಿದೆ. ವಿದ್ಯಾರ್ಥಿಗಳು ಪ್ರತಿವರ್ಷ ಮಳೆಗಾಲದಲ್ಲಿ ಕಾಲುಸಂಕಗಳನ್ನೇ ಅವಲಂಬಿಸಬೇಕಾಗಿದೆ. ಸೇತುವೆ, ಕಾಲುಸಂಕಗಳಿಗೆ ಅನುದಾನದ ಕೊರತೆ ಹಾಗೂ ಶೀಘ್ರ ಮಂಜೂರಾತಿ ಸಮಸ್ಯೆ ಇದೆ.
>
> ● ಗುರುರಾಜ ಗಂಟಿಹೊಳೆ, ಶಾಸಕ

ಇಂಡಸ್‌ಸಂಸ್ಥೆಯ ಮಾಲಕ ಶ್ರೀಕಾಂತ್, ಟಿಎಂಟಿ ಇಂಡಸ್ಟ್ರೀಸ್ ವ್ಯವಸ್ಥಾಪಕ ನಿರ್ದೇಶಕ ಎಸ್. ಎಸ್. ಶ್ರೀಕಾಂತ್, ಸಮ್ಮತ ಫೌಂಡೇಶನ್ ಸಂಸ್ಥಾಪಕ ಮುರುಳಿ, ಪ್ರಮುಖರಾದ ಬಾಲಚಂದ್ರ ಭಟ್, ಸುಭಾಷ್ ಶೆಟ್ಟಿ ಕೊಡ್ಲಾಡಿ, ಪ್ರದೀಪ್ ಹೆಗ್ಡೆ ಮೂರ್ತಿ ಶೆಟ್ಟಿ, ಪ್ರಾಣೇಶ್ ಯಡಿಯಾಳ್ ಇದ್ದರು. ವಿದ್ಯಾಧರ್ ಶೆಟ್ಟಿ ಕೊಡ್ಲಾಡಿ ಸ್ವಾಗತಿಸಿ, ಭಾಜಪ ಯುವಮೋರ್ಚಾ ಅಧ್ಯಕ್ಷ ವೇಣು ಗೋಪಾಲ್ ಶೆಟ್ಟಿ ಆಜ್ರಿ ವಂದಿಸಿದರು. ಸುದೀಪ್ ಶೆಟ್ಟಿ ನಿರೂಪಿಸಿದರು.